BROWEN BOOK ONLY

**TEXT PROBLEM WITHIN THE BOOK ONLY**

UNIVERSAL
LIBRARY
OU_200258
UNIVERSAL
LIBRARY

Call No. K 83 T84M Acc No K4807

OSMANIA UNIVERSITY LIBRARY

ಮೊದಲ ಹೆಜ್ಜೆ modala Hejje

Thriveni ತ್ರಿವೇಣಿ.

OUP—787—13-6-75—10,000.

OSMANIA UNIVERSITY LIBRARY

Call No. E.83/T64M Accession No. K.4807

Author

Title

This book should be returned on or before the date last marked below.

ತ್ರಿವೇಣಿ

★

ನವ್ಯ ಸಾಹಿತ್ಯ ಪ್ರಕಾಶನ
ರಾಮಸ್ವಾಮಿ ಸರ್ಕಲ್ : : ಮೈಸೂರು

೧೯೫೭ : ಎರಡು ಸಾವಿರ ಪ್ರತಿಗಳು.

ಎಲ್ಲ ಹಕ್ಕುಗಳೂ ಕಾದಿರಿಸಲ್ಪಟ್ಟಿವೆ.

ಮುಖ ಚಿತ್ರ:

ಮೂರ್ತಿ, ಧಾರವಾಡ

ಪಡಿಯಚ್ಚು :

ಪ್ರಸಾದ್ ಪ್ರೋಸೆಸ್ ಲಿ., ಮದರಾಸು

ಮುಖಚಿತ್ರ ಮತ್ತು ಪುಸ್ತಕದ ಮುದ್ರಣ :

ಶ್ರೀ ಸೀತಾರಾಘವ ಪ್ರೆಸ್, ರಾಮಸ್ವಾಮಿ ಸರ್ಕಲ್, ಮೈಸೂರು.

ಬೆಲೆ ಒಂದೂಕಾಲು ರೂಪಾಯಿ

# ಮೊದಲ ಮಾತು.

'ಮೊದಲ ಹೆಜ್ಜೆ,' ಕಾದಂಬರಿ ಕ್ಷೇತ್ರದಲ್ಲಿ ನನ್ನ ಏಳನೆಯ ಹೆಜ್ಜೆ.

ಈ ಕಾದಂಬರಿಯಲ್ಲಿ ಜೈಲಿನ ಜೀವನವನ್ನು ರೂಪಿಸಲು ಸಹಾಯ ಮಾಡಿದ ಮೈಸೂರು ಜೈಲಿನ ಸೂಪರಿಂಟೆಂಡೆಂಟರಾದ ಶ್ರೀ. ಸಿ. ಎಸ್. ಮಲ್ಲಯ್ಯನವರಿಗೆ, ಬೆಂಗಳೂರು ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರಾದ ಶ್ರೀ. ಎಂ. ಮಲ್ಲೇಶಯ್ಯನವರಿಗೆ ಮತ್ತು ಅಲ್ಲಿಯ ಜೈಲರಾದ ಶ್ರೀ. ವಿ. ಎಂ. ಕುರಪಾದ್ ಅವರಿಗೆ ನಾನು ಅತ್ಯಂತ ಕೃತಜ್ಞಳು.

ಪುಸ್ತಕವನ್ನು ಅಂದವಾಗಿ ಪ್ರಕಟಿಸಿರುವ ನವ್ಯಸಾಹಿತ್ಯ ಪ್ರಕಾಶನದ ಶ್ರೀ. ಪಿ. ಆರ್. ಸೀತಾರಾಂ ಅವರಿಗೆ ನನ್ನ ವಂದನೆಗಳು.

೧೧೫೨, ಚಾಮರಾಜಪುರಂ.
ಮೈಸೂರು.

ತ್ರಿವೇಣಿ.

# ಪ್ರಕಾಶಕರ ಮಾತು

ಶ್ರೀಮತಿ ತ್ರಿವೇಣಿಯವರ ಈ ಕಾದಂಬರಿ ನಮ್ಮ ಪ್ರಕಾಶನದ ಎಂಟನೆಯ ಪ್ರಕಟನೆಯಾಗಿ ಹೊರಬರುತ್ತಿದೆ.

. ಈ ಕೃತಿಯನ್ನು ನಮ್ಮ ಮೂಲಕ ಪ್ರಕಟಿಸಲು ಸಹಾಯಮಾಡಿದ ಎಲ್ಲರಿಗೂ ನಮ್ಮ ನೆನೆಕೆಗಳು ಸಲ್ಲುತ್ತದೆ. ಕಾರ್ಯಾಂತರದಿಂದ ಕೃತಿ ಹೊರಬರಲು ಸ್ವಲ್ಪ ನಿಧಾನವಾದರೂ ಆ ತಪ್ಪನ್ನು ಒಪ್ಪನ್ನಾಗಿ ಮಾಡಿ ಕೊಂಡು ಸಹಕರಿಸಿದ ಶ್ರೀಮತಿಯವರಿಗೆ ತುಂಬಾ ಋಣಿಗಳು. ಹಾಗೇ ಪ್ರೂಪುಗಳನ್ನು ತಿದ್ದುಕೊಟ್ಟ ಶ್ರೀ ಶಂಕರ್‌ರವರಿಗೂ, ಮುದ್ದಾಗಿ ಮುಖ ಚಿತ್ರ ಬರೆದು ಕೊಟ್ಟ ಧಾರವಾಡದ ಕಲಾವಿದರು ಶ್ರೀ ಮೂರ್ತಿಯವರಿಗೂ ನಾವು ಆಭಾರಿಗಳು

—ಪ್ರಕಾಶಕರು

# ಮೊದಲ ಹೆಜ್ಜೆ

# ಮೊದಲ ಹೆಜ್ಜೆ

## ೧

ನಾನು ಈ ಭೂಮಿಯಲ್ಲಿನ ಬೆಳಕು ಕಾಣುವುದಕ್ಕಿಂತ ಮುಂಚಿನಿಂದಲೂ ಯಾರಿಗೂ ಬೇಡದವಳಾಗಿದ್ದೆ. ಕಾರಣ ನನ್ನ ತಾಯಿ, ತಂದೆ ಸಂಸಾರ ಹೂಡಿ ಇನ್ನೂ ಒಂದು ವರ್ಷ ಸಹ ಆಗಿರಲಿಲ್ಲ. ಹೊಸಗಾಗಿ ಮದುವೆಯಾದ ದಂಪತಿಗಳು ಜೋಡಿ ಪಕ್ಷಿಗಳಂತೆ ಪ್ರಣಯ ಸರೋವರದಲ್ಲಿ ವಿಹರಿಸುತ್ತಿದ್ದಾಗ ನನ್ನ ಬರುವಿಕೆ ಅವರನ್ನು ಬೆಚ್ಚುವಂತೆ ಮಾಡಿತು. ಅಂದರೆ ಅವರಿಗೆ ಮಕ್ಕಳೇ ಬೇಕಿರಲಿಲ್ಲವೆಂತಲ್ಲ. ಪ್ರಣಯದ ಕಾವಿನ್ನೂ ಆರದಿರುವಾಗಲೇ ತಾಯ್ತನದ ಭಾರ ಹೊರುವುದು ನಮ್ಮ ತಾಯಿಗೆ ಬೇಕಾಗಿರಲಿಲ್ಲವಂತೆ. ಅವರೇ ಬಿತ್ತಿದ ಬೆಳೆ ಅವರಿಗೆ ಬೇಡವಾಗಿತ್ತು. ಅವರಿಗೆ ಬೇಕಿರಲಿ, ಬೇಡವಾಗಿರಲಿ ನಾನಂತೂ ಅವರ ಗರ್ಭ ಸರೋವರವನ್ನು ಪ್ರವೇಶಿಸಿದ್ದೆ.

ನಮ್ಮ ತಾಯಿ ತಂದೆ ಶ್ರೀಮಂತರಂತೂ ಖಂಡಿತ ಅಲ್ಲ. ಪ್ರೈಮರಿ ಸ್ಕೂಲಿನ ಉಪಾಧ್ಯಾಯನನ್ನು ಯಾವ ದಡ್ಡನೂ ಶ್ರೀಮಂತನೆಂದು ಅಪ್ಪಿತಪ್ಪಿಯಾದರೂ ಹೇಳುವುದಿಲ್ಲ. ನಮ್ಮ ತಾಯಿ ಆರು ಜನ ಹೆಣ್ಣುಮಕ್ಕಳ ನಡುವೆ ಹುಟ್ಟಿದವರು. ಆಕೆಯೇ ಎಲ್ಲರಿಗಿಂತ ಚಿಕ್ಕವರು. ಅವರಿಗಿಂತ ಹಿರಿಯವರಾದ ಐದು ಜನ ಹೆಣ್ಣುಮಕ್ಕಳ ಮದುವೆ ಮಾಡಿ ನಮ್ಮ ತಾತ ಸೋತುಹೋಗಿದ್ದರು. ಈ ಆರನೆಯುವಳನ್ನು ಯಾವನಾದರೂ ಸರಿ—ಕುಂಟನೋ, ಕುರುಡನೋ—ಗಂಡಾಗಿದ್ದರೆ ಸರಿ—ಅವನಿಗೆ ಗಂಟುಹಾಕಿ ಕನ್ಯಾಸೆರೆ ಬಿಡಿಸಿ ನಿಶ್ಚಿಂತರಾಗಿರಬೇಕು ಎಂದು ಯೋಚಿಸಿದ್ದರು.

ನಮ್ಮ ಐದು ಜನ ದೊಡ್ಡಮ್ಮಂದಿರೆಲ್ಲರೂ ನಮಗಿಂತ ಅನುಕೂಲವಾದ ಸ್ಥಿತಿಯಲ್ಲಿದ್ದಾರೆ. ಅಂದರೆ ಎರಡು ಹೊತ್ತಿನ ಊಟ ನೆಮ್ಮದಿಯಾಗಿ ಅವರಿಗೆ ಸಿಗುತ್ತದೆ. ಅವರೆಲ್ಲರ ಮದುವೆಯಾದಾಗ ನಮ್ಮ ತಾತನಿಗೆ ಮನೋಬಲ, ಧನಬಲವೆರಡೂ ಇದ್ದವು. ಗಂಡು ಹೆತ್ತ ಪುಣ್ಯಾತ್ಮರ

ಮನೆಬಾಗಿಲಿಗೆ ಅಲೆಯುವ ದೇಹಶಕ್ತಿಯಿತ್ತು. ತನ್ನ ಮಕ್ಕಳು ಅನುಕೂಲವಾಗಿರುವ ಕಡೆ ಸೇರಿ ಸುಖವಾಗಿರಬೇಕೆಂಬ ಆಸೆಯಿತ್ತು. ಇದ್ದ ಚೂರುಪಾರು ಆಸ್ತಿ ಹಣದಿಂದಾಗಿ ಮೂರು ಜನರ ಮದುವೆ ಸರಾಗವಾಗಿಯೇ ಆಯಿತು. ನಾಲ್ಕನೆಯವಳು, ಐದನೆಯವಳ ಮದುವೆಗಳು ಅಷ್ಟು ಸುಲಭವಾಗಿ ಆಗಲಿಲ್ಲ. ತಾತ ಅವರಿವರಲ್ಲಿ ಸಾಲ ಬೇಡಿ, ಕೈ ಕಾಲು ಕಟ್ಟಿ ಅಂತೂ ಹೇಗೋ ದಾಟಿಸಿದರು. ಅವರಿಬ್ಬರ ಮದುವೆಯಲ್ಲಿ ಮಾಡಿದ ಸಾಲವೇ ಇನ್ನೂ ತೀರಿರಲಿಲ್ಲ. ಆಗಲೇ ನಮ್ಮ ತಾಯಿ ಮದುವೆಗೆ ಸಿದ್ಧರಾಗಿ ನಿಂತರು. ನಮ್ಮ ತಾಯಿ ವಯಸ್ಸಾದ ತಂದೆಗೆ ಹುಟ್ಟಿದ ಮಗಳು. 'ಈ ಜನ್ಮ ಸಾಕಪ್ಪಾ, ಎಂದಿಗೆ ಕಣ್ಣು ಮುಚ್ಚಿಕೊಳ್ಳುತ್ತೇನೆ' ಎಂಬ ಭಾವನೆ ನಮ್ಮ ತಾತನಿಗೆ ಮನಸ್ಸಿನಲ್ಲಿ ಬಲವಾಗಿ ಬೇರೂರಿದ ನಂತರ ನಮ್ಮ ತಾಯಿ ವಧೂ ವೇಷ ತಾಳಿದರು.

ನಮ್ಮ ತಾಯಿ ದೊಡ್ಡವರಾದ ದಿನ ನಮ್ಮ ತಾತ ಎಲ್ಲರ ಮೇಲೂ ಹಾರಾಡಿ ರೇಗಾಡಿದರಂತೆ. ನನ್ನ ಹಿರಿಯ ದೊಡ್ಡಮ್ಮ ಸುಶೀಲಮ್ಮ ಮದುವೆಯಾದ ಎರಡು ವರ್ಷಕ್ಕೆ ದೊಡ್ಡವರಾಗಿದ್ದರು. ಆಗ ಮನೆಯಲ್ಲಿನ ಸಂಭ್ರಮ ಹೇಳತೀರದು. ನಮ್ಮ ದೊಡ್ಡಮ್ಮನಿಗೆ 'ವೀಣಾಪಾಣಿ'ಯ ವೇಷ ಹಾಕಿ ಊರನ್ನೆಲ್ಲಾ ಕರೆದು ಆರತಿ ಮಾಡಿದರಂತೆ. ಆ ಉತ್ಸವಕ್ಕಾಗಿ ಕರೆಸಿದ ಓಲಗದವರು ಆ ಸುತ್ತಿನಲ್ಲೆಲ್ಲಾ ಪ್ರಸಿದ್ಧರಾಗಿದ್ದವರಂತೆ.

ಅದೇ ನಮ್ಮ ತಾಯಿ ದೊಡ್ಡವರಾದಾಗ ನಮ್ಮ ತಾತ ಮಗಳನ್ನು ಹೊಡೆಯುವುದೊಂದು ಬಾಕಿಯಂತೆ.

'ಈ ಸುಬ್ಬೀಗೆ ಏನು ಆತುರವಾಗಿತ್ತು? ಇನ್ನೂ ಮದುವೆ ಸಹ ಆಗಿಲ್ಲ. ನನಗೆ ವಯಸ್ಸಾದ ಮೇಲೆ ಹಾಳಾದೋಳು ಹುಟ್ಟಿದಳು. ಹೋಗಲಿ ಗಂಡಾಗಿಯಾದರೂ ಹುಟ್ಟಬಾರದಾಗಿತ್ತೇ? ನಾನು ಸತ್ತರೆ ಬೆಂಕಿ ಹಾಕೋರು ಗತಿಯಿಲ್ಲ. ಚಿಕ್ಕ ಮಗುವಾಗಿದ್ದಾಗ ಲಿವರ್ ಖಾಯಿಲೆಯಾಗಿತ್ತಲ್ಲಾ ಆಗಲೇ ಸತ್ತುಹೋಗಿದ್ದರೆ ಚೆನ್ನಾಗಿತ್ತು' ಎಂದು ಬೈದರಂತೆ.

ಬಡತನದ ಬೇಗೆಯಿಂದ ಬಂದ ಬಿಸಿ ಮಾತುಗಳವು. ನಮ್ಮ ತಾಯಿ ಅವರ ಬೈಗಳನ್ನು ಕೇಳಿ ಅತ್ತು ಗೋಳಾಡಿದರಂತೆ. ಮೂರುದಿನ ಊಟ ಸಹ ಮಾಡಲಿಲ್ಲವಂತೆ. ಆಮೇಲೆ ನಮ್ಮಜ್ಜಿ ಗಂಡನಿಗೆ 'ಏನ

ನ್ಯಾಯ, ನಿಮ್ಮ ಮಾತು ಕೇಳಿ ಸುಬ್ಬಿ ಮೂರು ದಿನದಿಂದ ಅನ್ನ ನೀರು ಬಿಟ್ಟು ಅಳ್ತಾ ಕೂತಿದೆ. ನಮಗೆ ಅವಳನ್ನು ಸಾಕೋಕೆ ಯೋಗ್ಯತೆಯಿಲ್ಲದೆ ಹೀನಾಮಾನಾ ಅಂದರೆ ಆಗುತ್ತದೆಯೇ ? ಸುಶೀಲ ದೊಡ್ಡವಳಾದಾಗಲೂ ನೀವು ಹೀಗೆ ಆಡಿದಿರಾ ? ನಮ್ಮನೇಲಿ ಹುಟ್ಟಬೇಕೂಂತ ಸುಬ್ಬಿಯೇನು ಹಿಂದಿನ ಜನ್ಮದಲ್ಲಿ ಹರಕೆ ಹೊತ್ತಿದ್ದಳೆ ?' ಎಂದರಂತೆ.

ಆಗ ನಮ್ಮಜ್ಜ ಸುಬ್ಬಿಯನ್ನು ಸಮಾಧಾನ ಮಾಡಿದರಂತೆ. ಮೂರನೆಯ ದಿನ ರಾತ್ರಿ ಸುಬ್ಬಿಗೆ ಸ್ವಲ್ಪ ಅನ್ನ ತಿನ್ನಿಸಿ ನಂತರ ತಾವು ಊಟ ಮಾಡಿದರಂತೆ.

'ಹುಂ! ಬಡವರ ಮನೇಲಿ ಚಿಕ್ಕವರಾಗಿ ಹುಟ್ಟಲೇಬಾರದು. ಹುಟ್ಟಿದರೆ ಮೊದಲನೆಯವರಾಗಿ ಹುಟ್ಟಬೇಕು. ಕೊನೆಕೊನೆಗೆ ಹುಟ್ಟಿದ ಮಕ್ಕಳು ಯಾರಿಗೂ ಬೇಡ' ಎಂದುಕೊಂಡರಂತೆ ನಮ್ಮ ತಾತ.

ಆದರೆ ನಾನೇನೋ ಅವರ ಈ ಮಾತನ್ನು ಒಪ್ಪುವುದಿಲ್ಲ. ನಾನು ನನ್ನ ಸ್ವಂತ ಅನುಭವದಿಂದ ಈ ಮಾತನ್ನು ಹೇಳುತ್ತಿದೇನೆ. ನಾನು ಹುಟ್ಟಿರುವುದು ಬಡವರ ಮನೆಯಲ್ಲಿ. ನಾನೇನೂ ಕನಿಷ್ಟ ಪುತ್ರಿಯಲ್ಲ. ತಾಯಿ ತಂದೆಯ ಹಿರಿಯ ಪುತ್ರಿ. ಆದರೆ ನಾನು ನನ್ನ ದೊಡ್ಡಮ್ಮ ಸುಶೀಲಮ್ಮ ಪಟ್ಟ ಸುಖ ಪಡಲಿಲ್ಲ. ಸಂತೋಷ, ಆಸೆ ಎಂಬ ಮಾತುಗಳನ್ನೇ ನಾನು ತಿಳಿದಿಲ್ಲ.

ಸುಶೀಲಮ್ಮ ಹುಟ್ಟಿದ ಕಾಲಕ್ಕೂ, ನಾನು ಹುಟ್ಟಿದ ಕಾಲಕ್ಕೂ ತುಂಬಾ ವ್ಯತ್ಯಾಸವಿದೆ. ಸುಶೀಲಮ್ಮನಿಗೆ ನಮ್ಮ ತಾಯಿಗಿಂತಲೂ ವಯಸ್ಸಾದ ಮಗಳಿದ್ದಾಳೆ. ನಮ್ಮ ಅಜ್ಜಿ ಸುಶೀಲಮ್ಮನ ತಾಯಿಯಾಗುವುದರಲ್ಲಿದ್ದಾಗ ನಮ್ಮ ತಾತ ಅಂತರಿಕ್ಷದಲ್ಲೇ ನಡೆಯುತ್ತಿದ್ದರಂತೆ. ನಮ್ಮ ಅಜ್ಜಿಯನ್ನಂತೂ ಎಲ್ಲೂ ಇಡರಂತೆ. ಆಕೆ ಒಂದು ಗಳಿಗೆ ಸುಮ್ಮನೆ ಕುಳಿತರೆ 'ಹುಷಾರಾಗಿದೀಯೋ ಇಲ್ವೋ, ಯಾಕೆ ಸುಮ್ಮನೆ ಸಪ್ಪೆಯಾಗಿ ಕುಳಿತಿದೀಯಾ ?' ಎಂದು ಕೇಳುತ್ತಿದ್ದರಂತೆ.

ಆಕೆ ಒಂದು ಬಾರಿ ಕೆಮ್ಮಿದರೆ 'ಯಾಕೆ ಕೆಮ್ಮುತ್ತೀಯ ?' ಎಂದು ಪ್ರಶ್ನಿಸಿ ಆತಂಕಪಟ್ಟುಕೊಳ್ಳುತ್ತಿದ್ದರಂತೆ.

ಆಕೆ ಆಕಳಿಸಿದರೆ 'ಯಾಕೆ ಆಕಳಿಕೆ ? ಹುಷಾರಾಗಿದೀ ತಾನೆ?' ಎನ್ನುತ್ತಿದ್ದರಂತೆ.

ಹೀಗೆ ಕೂತಿದ್ದಕ್ಕೆ, ನಿಂತಿದ್ದಕ್ಕೆಲ್ಲಾ ಪ್ರಶ್ನೆಮಾಡಿ ಮಾಡಿ ನಮ್ಮ ಅಜ್ಜಿಗೆ ಬೇಸರ ಹಿಡಿಸಿಬಿಟ್ಟಿದ್ದರಂತೆ. ಕೊನೆಕೊನೆಗೆ ಅಜ್ಜಿ 'ನಿಮ್ಮದ್ಯಾಕೋ ಎಲ್ಲಾ ಅತಿಯಾಯಿತು' ಎಂದು ಗದರಿಸಿದನಂತರ ನಮ್ಮ ತಾತ ಸುಮ್ಮ ನಾಗುತ್ತಿದ್ದರಂತೆ.

ನನ್ನ ಜನ್ಮಕ್ಕೆ ಮುಂಚಿನ ಸ್ಥಿತಿಯೇ ಸಂಪೂರ್ಣ ಬೇರೆ. ಆಗ ನಮ್ಮ ತಾಯಿಗೆ ಹದಿನಾರು ಮಾತ್ರ ತುಂಬಿತ್ತು. ನಮ್ಮ ತಂದೆಗೆ ಇನ್ನೂ ಇಪ್ಪತ್ತೆರಡು ವರ್ಷದ ಪ್ರಾಯ. ಈಗ ಇಪ್ಪತ್ತೆರಡು ವರ್ಷದ ಹುಡುಗ ತಂದೆಯಾಗುವುದರಲ್ಲಿದಾನೆ ಎಂದು ಹೇಳಿದರೆ ಯಾರೂ ನಂಬುವುದಿಲ್ಲ. ಹುಡುಗನ ಮಾತೇಕೆ—ಇಪ್ಪತ್ತೆರಡು ವರ್ಷದ ಹುಡುಗಿಗೆ ಈಗಿನ ಕಾಲ ದಲ್ಲಿ ಮದುವೆ ಸಹಿತ ಆಗಿರುವುದಿಲ್ಲ.

ನಮ್ಮ ತಂದೆಗೆ ಕೆಲಸವಾಗಿ ಒಂದು ವರ್ಷವಾಗಿತ್ತು. ಪ್ರೈಮರೀ ಸ್ಕೂಲಿನ ಸಾಮಾನ್ಯ ಉಪಾಧ್ಯಾಯ ಎಂದ ಮೇಲೆ ವರಮಾನ ನಾನು ಹೇಳಬೇಕಾಗೇ ಇಲ್ಲ. ಒಂದೆರಡು ಕಡೆ ಮನೆಯ ಪಾಠಗಳನ್ನಿರಿಸಿಕೊಂಡಿ ದ್ದರಂತೆ.

ನಮ್ಮ ತಾಯಿಯೇನೋ ತಮ್ಮ ತಂದೆಯ ಮನೆಯಲ್ಲಿದ್ದುದಕ್ಕಿಂತ ಈ ಗಂಡನ ಮನೆಯಲ್ಲಿ ಹೆಚ್ಚು ಸುಖಿಯಾಗಿದ್ದರು. ತಂದೆಯ ಮನೆಯಲ್ಲಿ ಆಕೆ ಹದಿನೈದು ವರ್ಷಗಳನ್ನು ಕಳೆದಿದ್ದರು. ಆಕೆಗೆ ಹದಿಮೂರು ತುಂಬಿ ದಾಗಿನಿಂದ ಮದುವೆ ಮಾಡಲು ನಮ್ಮ ತಾತ ಪ್ರಯತ್ನಿಸುತ್ತಿದ್ದರು. ನಮ್ಮ ತಾಯಿಯೇನೂ ಸುರಸುಂದರಿಯಲ್ಲ. ನಮ್ಮ ತಾತ ಕುಬೇರನಲ್ಲ. ದಿನ ಬೆಳಗಾದರೆ ಮನೆಯಲ್ಲಿ ನಮ್ಮ ತಾಯಿಯ ಮದುವೆಯ ಮಾತು.

ಯಾವಾಗಲೋ ಒಂದು ಸಲ ವಿನೋದವಾಗಿ ಮಾತನಾಡುತಾ ಆಕೆ ನನ್ನೊಡನೆ ಹೇಳಿದ್ದರು

'ನಾನೇನಾದ್ರೂ ಸುಖ ಪಟ್ಟಿದ್ದರೆ ಇವರ ಕೈ ಹಿಡಿದ ಮೇಲೆ ಮಾತ್ರ. ಅಪ್ಪನ ಮನೇಲಂತೂ ನನಗೆ ಬೇಜಾರಾಗಿ ಹೋಗಿತ್ತು. ಆ ಮದುವೆ ಮಾತು ಕೇಳಿ ಕೇಳಿ. 'ಸುಬ್ಬೀಗಿನ್ನೂ ಮದುವೆ ಆಗಿಲ್ಲಾ, ದುಡ್ಡೆಲ್ಲಿಂದ

ತರಲಿ' ಅಂತ ಅಪ್ಪ ನನ್ನ ಬೈಯೋಕೆ, ಅವರ ಮಾತು ಕೇಳಿ ಅವ್ವ ಅಳೋಕೆ. ಅಪ್ಪನ ಸಿಡುಕು ಮುಖ, ಅವ್ವನ ಅಳುಮುಖ ನೋಡಿ ನೋಡಿ ನನಗೆ ಸಾಕಾಗಿ ಹೋಗಿತ್ತು. ಸಧ್ಯ ಇವರು ನನ್ನ ಭಾಗದ ದೇವರು. ನಾನು ಇನ್ನೊಂದೆರಡು ವರ್ಷ ಹಾಗೇ ಇರುತ್ತಿದ್ದರೆ ಭಾವಿಗೆ ಬಿದ್ದು ಸತ್ತೇ ಹೋಗ್ತಿದ್ದೆನೋ ಏನೋ ? '

ನಾನು ಯಾವ ಮಾತೂ ಆಡುತ್ತಿರಲಿಲ್ಲ.

ಆಕೆಗೆ 'ತನ್ನ ಮನೆ' ಎಂಬುದೊಂದಾದ ಮೇಲೆ ಎರಡು ಹೊತ್ತು ಊಟ ಮಾಡಿಕೊಂಡು ಶಾಂತ ಮನಸ್ಸಿನಿಂದ ಇರುತ್ತಿದ್ದಳು. ನನ್ನ ಮನೆ ಇದು, ನಾನು ಒಪ್ಪ ಓರಣ ಮಾಡಬೇಕು, ಕೈಲಿ ಸ್ವಲ್ಪ ಕಾಸು ಮಾಡಿಕೊಳ್ಳಬೇಕು—ಹೀಗೆ ಏನೇನೋ ಹಗಲುಗನಸು ಕಾಣುತ್ತಿದ್ದಳು.

ಆದುದರಿಂದಲೇ ನನ್ನ ಆಗಮನ ಅವರಿಗೆ ಅಷ್ಟು ಹಿತವಾಗಿ ತೋರಿರಲಿಲ್ಲ. ಇನ್ನು ಕೈಲಿ ಕಾಸು ಮಾಡಿಕೊಂಡ ಹಾಗೇ ಇದೆ ಎಂದಾಕೆ ತುಂಬಾ ನೊಂದುಕೊಂಡಳಂತೆ. ನಮ್ಮ ತಂದೆಗೂ ಆಗ ತುಂಬಾ ದುಃಖ ವಾಯಿತಂತೆ

'ನಿಲ್ಲೋಕೆ ಒಂದು ನೆಲೆಯಾದ ಮೇಲಾದರೂ ಆಗಿದ್ದರೆ ಚೆನ್ನಾಗಿತ್ತು' ಎಂದು ಅವರೂ ಬಿಸಿಯುಸಿರು ಹೊರಗೆ ಹಾಕಿ, ಕಾದ ಹೃದಯವನ್ನು ತಂಪು ಮಾಡಲು ಪ್ರಯತ್ನಿಸುತ್ತಿದ್ದರಂತೆ.

ಆಗಬಾರದ್ದು ಆಗಿಹೋಯಿತಲ್ಲಾ ಎಂದು ಅವರಿಬ್ಬರೂ ಕೈ ಕೈ ಹಿಸುಕಿಕೊಳ್ಳುತ್ತಿದ್ದಾಗಲೇ ನಾನು ಬೆಳಕನ್ನು ಕಂಡೆ.

ನಾನು ಹುಟ್ಟುವ ವೇಳೆಗೆ ನಮ್ಮ ಅಜ್ಜಿ ಸತ್ತುಹೋಗಿದ್ದರು. ಅದುದರಿಂದ ನಮ್ಮ ತಾಯಿಯ ಮೊದಲ ಬಾಣಂತನ ಸುಶೀಲಮ್ಮನ ಮನೆಯಲ್ಲಿ ನಡೆಯಿತು. ಸುಶೀಲಮ್ಮನಿಗೆ ತನ್ನ ತಂಗಿಯನ್ನು ಕಂಡರೆ ಪ್ರೀತಿಯೇನೂ ಇರಲಿಲ್ಲ. ಆಕೆಗೆ ತಾನು ಮದುವೆಯಾಗಿ ಗಂಡನ ಮನೆಗೆ ಹೋಗಿ ಎರಡು ಮಕ್ಕಳ ತಾಯಿಯಾದಮೇಲೆ ಹುಟ್ಟಿದ ಈ ತಂಗಿಯಲ್ಲಿ ವಿಶ್ವಾಸವೇನೂ ಇರಲಿಲ್ಲ. ಅವರಿಬ್ಬರೂ ಅಕ್ಕತಂಗಿಯರಾಗಿದ್ದರೂ ಎಂದೂ ಒಂದು ಮನೆಯಲ್ಲಿದ್ದವರಲ್ಲ. ಸುಶೀಲಮ್ಮ ಅಪರೂಪಕ್ಕೊಮ್ಮೆ ತಾಯಿಯ ಮನೆಗೆ ಬಂದಾಗ ತನಗಿಂತಲೂ ಬಹಳ ಚಿಕ್ಕವಳಾದ 'ಸುಬ್ಬಿ'ಯಲ್ಲಿ

ತಾತ್ಸಾರ. ಸಾಲದುದಕ್ಕೆ ತನ್ನ ತಾಯಿ ತಂದೆಗೆ ಮದುವೆಯ ಯೋಚನೆ ಹಿಡಿಸಿದ್ದ ಈ ಸುಬ್ಬಿಯೆಂದರೆ ಒಂದು ರೀತಿಯ ತಿರಸ್ಕಾರ. ತಂದೆಯ 'ಸುಬ್ಬಿ ಯಾಕಾದರೂ ಹುಟ್ಟಿದಳೋ' ಎಂಬ ಮಾತಿಗೆ ಅನುಮೋದನೆ, ಇವಳಿಂದಾಗಿ ಅಣ್ಣನಿಗೆ ತೊಂದರೆಯಾಗಿದೆ ಎಂಬ ಭಾವನೆ ಆಕೆಯ ಹೃದಯದಲ್ಲಿ ಭದ್ರವಾಗಿ ನಿಂತುಬಿಟ್ಟಿತ್ತು. ಅಜ್ಜನಿಗೂ ಸುಶೀಲಮ್ಮನಲ್ಲಿ ಎಲ್ಲರಿಗಿಂತಲೂ ವಿಶ್ವಾಸ ಹೆಚ್ಚು. ಅವರು ಹೆಂಡತಿ ತೀರಿಹೋದ ಮೇಲೆ ಸುಶೀಲಮ್ಮನ ಮನೆಯಲ್ಲಿ ಸಾಯುವವರೆವಿಗೂ ಇದ್ದರು. ತಮಗೆ ಬರುತ್ತಿದ್ದ ಹದಿನೈದು ರೂಪಾಯಿ ಪೆನ್‌ಷನ್ನನ್ನು ಮಗಳ ಕೈಗೆ ಹಾಕಿ ಮೊಮ್ಮಕ್ಕಳನ್ನು ಆಡಿಸುತ್ತಾ ಕಾಲ ಕಳೆಯುತ್ತಿದ್ದರಂತೆ. ಎಲ್ಲರಿಗಿಂತಲೂ ಬಡವನಾದ ಕಿರಿ ಅಳಿಯನಲ್ಲಿ ಅವರಿಗೆ ಸಹನೆಯೂ ಇರಲಿಲ್ಲ. ಆದರೆ ನಮ್ಮ ತಾಯಿಗೆ ತನ್ನ ಗಂಡನಲ್ಲಿ ಅಪಾರ ಭಕ್ತಿ, ಪ್ರೇಮವಿತ್ತು. ತಂದೆ ತನ್ನ ಗಂಡನನ್ನು ಔದಾಸೀನ್ಯದಿಂದ ನೋಡುತ್ತಾರೆ ಎಂದು ತಿಳಿದಿದ್ದ ಆಕೆ ತಂದೆಯನ್ನು ತನ್ನ ಮನೆಗೆ ಬರುವಂತೆ ಆಹ್ವಾನಿಸುತ್ತಲೂ ಇರಲಿಲ್ಲ. ಯಾವಾಗಲಾದರೂ ಒಂದು ಸಂಜೆ ಬಂದರೆ ಆಗ ಸುಶೀಲನ ಗುಣಗಾನ, ಅವರ ಮನೆಯ ಸಿರಿ ಹೇಳಿಕೊಂಡು ಹಿಗ್ಗುತ್ತಿದ್ದರಂತೆ.

'ಸುಶೀಲನ ಗಂಡ ಒಳ್ಳೆಯವನು. ಸುಶೀಲ ಚಿನ್ನದಂತಹವಳು; ಮೊನ್ನೆ ಸುಶೀಲ ಒಂದು ಸೀರೆ ತಗೊಂಡಳು. ರೇಷ್ಮೆ ಸೀರೆ.... ಸೊಗಸಾಗಿದೆ.

ಆಗ ನಮ್ಮ ತಾಯಿಗೆ ಅವರಿಗೆ ಕಾಫಿ ಕೊಡಬೇಕೆಂದು ಸಹ ಎನಿಸುತ್ತಿರಲಿಲ್ಲವಂತೆ. ಮುದುಕರಾದ ತಂದೆ ಅಲ್ಲಿಂದ ಇಲ್ಲಿಯವರೆಗೆ ಬಂದು ಅಳಿಯ, ಮಗಳನ್ನು ನೋಡಿಕೊಂಡು ಎರಡು ಮಾತನಾಡಿ ಹೋಗಬಾರದೆ? ಸುಶೀಲಕ್ಕನ ಮನೆ ವೈಭವ ಕಟ್ಟಿಕೊಂಡು ತನಗಾಗಬೇಕಾದ್ದೇನಿದೆ? ಅವಳಿಗೆ ಅನುಕೂಲ ಇದ್ದರೆ ಅವಳು ಅನುಭವಿಸುತ್ತಾಳೆ. ಕುದುರೆಗೆ ಬಾಲ ಉದ್ದ ಇದ್ದರೆ ತಾನು ಬೀಸಿಕೊಳ್ಳುತ್ತೆ. ನಮ್ಮ ಮನೆಗೆ ಬಂದಾಗ ಇನ್ನೊಬ್ಬರ ಮನೆಯ ಸಿರಿಯ ವರ್ಣನೆ ಯಾಕೆ ?

ನಮ್ಮ ತಂದೆ ಬಡವರು, ಸಾಕಷ್ಟು ಸಂಪಾದಿಸುತ್ತಿಲ್ಲ ಎಂದು ಸುಬ್ಬಿ ಎಂದೂ ಆಕ್ಷೇಪಣೆ ಮಾಡಿದವಳಲ್ಲ. ಅಥವಾ ತನ್ನನ್ನು ಸರಿಯಾದ ಕಡೆ ಕೊಡಲಿಲ್ಲ ಎಂದು ತಂದೆಯನ್ನು ದೂಷಿಸಿದವಳೂ ಅಲ್ಲ. ಸುಶೀಲಕ್ಕ

ನೆಮ್ಮದಿಯಾಗಿದ್ದಾಳೆ ಎಂದು ಅಸೂಯೆಪಟ್ಟವಳೂ ಅಲ್ಲ.

ಆದರೂ ತಂದೆ ಆಗಾಗ್ಗೆ ಬಂದು ಆಕೆಯ ಮನಸ್ಸನ್ನು ಕಲಕುತ್ತಿದ್ದರಂತೆ. 'ನಮ್ಮ ಮನೇಲಿ ನಮ್ಮ ಪಾಡಿಗೆ ನಾವಿರೋಕೂ ಇವರು ಬಿಡುವುದಿಲ್ಲ' ಎಂದಾಕೆ ಪೇಚಾಡಿಕೊಳ್ಳುತ್ತಿದ್ದಳಂತೆ.

ಒಂದು ದಿನ ಯಾವುದೋ ಕಾರಣಕ್ಕಾಗಿ ನಮ್ಮ ತಾಯಿಗೆ ಮನಸ್ಸಿಗೆ ಸ್ವಲ್ಪ ಅಸಮಾಧಾನವಾಗಿತ್ತು. ಆಗ

'ಸುಬ್ಬೀ....' ಎನ್ನುತ್ತಾ ತಾತ ಒಳಗೆ ಬಂದರು.

'ಬಾಪ್ಪ' ಎಂದು ಸುಬ್ಬಿ ಎದ್ದು ಚಾಪೆ ಹಾಸಿದಳು.

'ಎಲ್ಲಿ ಪುಟ್ಟಣ್ಣ?'—ನಮ್ಮ ತಂದೆಯನ್ನು ಪುಟ್ಟಣ್ಣ ಎಂದು ಅಡ್ಡ ಹೆಸರಿನಿಂದ ಕೂಗುತ್ತಿದ್ದರು.

'ಮನೆ ಪಾಠಕ್ಕೆ ಹೋಗಿದಾರೆ. ತಾಳಪ್ಪ ಕಾಫಿ ತರ್ತೀನಿ.'

'ಬೇಡಮ್ಮ. ಈಗ ತಾನೆ ಕಾಫಿ, ತಿಂಡಿ ಎಲ್ಲಾ ಮುಗಿಸಿಕೊಂಡು ಬಂದೆ. ಸುಶೀಲ ಮಾಡೋ ಕಾಫಿ, ತಿಂಡಿ ತಿನ್ನದಿದ್ದ ಮೇಲೆ ಜನ್ಮವೇ ವ್ಯರ್ಥ ಸುಬ್ಬಿ. ಕಾಫಿಯಂತೂ ನೆಪಕ್ಕೆ ಡಿಕಾಕ್ಷನ್ ಹಾಕಿರುತ್ತಾಳೆ. ಬರೀ ಹಾಲು. ಸೊಗಸಾಗಿ ಇಡ್ಲಿ ಮಾಡಿದ್ದಳು. ನಂಜಿಕೊಳ್ಳೋಕೆ ನಿಂಬೆ ಕಾಯಿ ಗಾತ್ರ ಬೆಣ್ಣೆ....'

ಸುಬ್ಬಿಯ ಸಹನೆಯ ಕಟ್ಟೆಯೊಡೆಯಿತು. ಮೊದಲೇ ಹೊಗೆಯಾಡುತ್ತಿದ್ದ ಮನಸ್ಸು ಭುಗಿಲೆಂದು ಹತ್ತಿಕೊಂಡಿತು.

'ಹೌದಪ್ಪ ಸುಶೀಲಕ್ಕ ಶ್ರೀಮಂತೆ. ನೀನೂ ಅವಳನ್ನು ಶ್ರೀಮಂತ ಅಳಿಯನಿಗೆ ಕೊಟ್ಟು ಮದುವೆ ಮಾಡಿದೆ. ನನ್ನ ಪ್ರೈಮರಿ ಸ್ಕೂಲಿನ್ನ ಮೇಷ್ಟರಿಗೆ ಕೊಡೋಕೆ ಬದಲಾಗಿ ಯಾರಾದರೂ ಅಮಲ್ದಾರರಿಗೆ ಕೊಟ್ಟಿದ್ದರೆ ನಾನೂ ನಿನಗೆ ಬೇಕಾದ ಹಾಗೆ ಉಪಚಾರ ಮಾಡುತ್ತಿದ್ದೆ'

ತಂದೆ ಅರೆಕ್ಷಣ ಮೂಕರಾಗಿ ನಿಂತರು. ಮಗಳು ತಂದೆಯನು ಎಂದೂ ಹೀಗೆ ಎದುರಿಸಿರಲಿಲ್ಲ. ಅವರು ಎದುರುಗಿದ್ದ ಕಾಫಿಯ ಕಡೆ. ತಿರುಗಿ ಸಹ ನೋಡದೆ ಹೊರಟುಹೋದರಂತೆ.

ತಂದೆ ಹೊರಟುಹೋದ ಮೇಲೆ ನಮ್ಮ ತಾಯಿ ಚೆನ್ನಾಗಿ ಅತ್ತರು. ಗಂಡ ಮನೆಗೆ ಬರುವ ವೇಳೆಗೆ ಎರಡು ಕಣ್ಣುಗಳೂ ಊದಿ ಜಾದಾಳವಾಗಿ

ತ್ತಂತೆ. ನಮ್ಮ ತಂದೆ ನಡೆದ ಕತೆಯನ್ನೆಲ್ಲಾ ಕೇಳಿ ನಗುತ್ತಾ

'ಸುಬ್ಬಿ ಇಷ್ಟಕ್ಕೆಲ್ಲಾ ಅಳ್ತಾರೆಯೇ ? ಮುದುಕರ ಮಾತು ಯಾವಾಗಲೂ ಮನಸ್ಸಿಗೆ ತಗೋಬಾರದು. ಅವರು ನಿನ್ನ ಹಳಿಯಬೇಕೂಂತ ಆ ಮಾತಾಡಿಲ್ಲ. ಏನೋ ಹಿರಿಮಗಳ ಗುಣಗಾನ ಮಾಡಿದ ಮಾತ್ರಕ್ಕೆ ನಿನ್ನ ತೆಗಳಿದರೂಂತ ಅರ್ಥವೇ' ಎಂದು ಸಮಾಧಾನ ಪಡಿಸಿದರಂತೆ.

ಆಮೇಲೆ ಒಂದು ತಿಂಗಳು ನಮ್ಮ ತಾತ ಸುಬ್ಬಿಯ ಮನೆಯ ಕಡೆ ಸುಳಿಯಲಿಲ್ಲ. ಆಮೇಲೊಂದು ದಿನ ಇದ್ದಕ್ಕಿದ್ದಂತೆಯೇ ಬಂದು ಎರಡು ಗಳಿಗೆ ಮಾತನಾಡಿ 'ಸುಬ್ಬಿ, ಆವತ್ತು ನಾನು ಮನೆಗೆ ಹೋದ ಮೇಲೆ ಎಲ್ಲಾ ನಿಧಾನವಾಗಿ ಆಲೋಚನೆ ಮಾಡಿದೆ. ನೀನು ಹೇಳಿದ್ದು ಸರಿ. ತಪ್ಪೆಲ್ಲಾ ನನ್ನದೇ' ಎಂದು ಒಪ್ಪಿಕೊಂಡರಂತೆ. ಅದಕ್ಕೆ ನಮ್ಮ ತಾಯಿ 'ಬಿಡಪ್ಪ ಮಾತು ಬರುತ್ತೆ ಹೋಗುತ್ತೆ. ಅದದ್ಯಾಕೆ ಯೋಚನೆ' ಎಂದರಂತೆ.

ನಮ್ಮ ತಾತ ಆ ದಿನ ಹಿಂತಿರುಗಿದವರು ಪುನಃ ಸುಬ್ಬಿಯ ಮನೆಗೆ ಬರಲಿಲ್ಲ. ಒಂದು ತಿಂಗಳು ಯಾವುದೋ ಖಾಯಿಲೆಯಿಂದ ನರಳಿ ಮೃತರಾದರಂತೆ.

ಅವರು ಸಾಯೋದಕ್ಕೆ ಮುಂಚೆ ಸುಶೀಲಮ್ಮನಿಗೆ ಹೇಳಿದ್ದರಂತೆ 'ಸುಬ್ಬಿ ಬಾಣಂತನಾನ ನೀನೇ ಖಂಡಿತ ಮಾಡು. ಅದೂ ಹುಡುಗಿ. ಯಾವುದೂ ಸರಿಯಾಗಿ ತಿಳಿಯೋಲ್ಲ. ಅವರಮ್ಮ ಇದ್ದಿದ್ದರೆ ಅವಳೇ ಮಾಡ್ತಿದ್ದಳು. ಅವಳಿಗೆ ಬದಲಾಗಿ ನೀನು ಖಂಡಿತ ಮಾಡು. ಅವಳು ತಾಯಿಯಾಗೋವರೆಗೆ ನಾನು ಇರ್ತೀನೋ ಇಲ್ವೋ ಗೊತ್ತಿಲ್ಲ. ತಬ್ಬಲಿ, ಬಡವಳೂಂತ ತಾತ್ಸಾರ ಮಾಡಬೇಡ' ಅಂತ.

ನಮ್ಮ ತಾತ ಸತ್ತ ಎರಡು ತಿಂಗಳಿಗೆ ನನ್ನ ಜನ್ಮವಾಯಿತು. ನಾನು ಹುಟ್ಟೋದಕ್ಕೆ ನಾಲ್ಕು ದಿನ ಮುಂಚಿತವಾಗಿ ಸುಶೀಲಮ್ಮ ನಮ್ಮ ಮನೆಗೆ ಬಂದು ಸುಬ್ಬಿಯನ್ನು ಕರೆದರಂತೆ. ಸುಶೀಲಕ್ಕ ಇಷ್ಟೊಂದು ದಯೆ ತೋರಿಸಬಲ್ಲಳೇ ಎಂದು ಸುಬ್ಬಿಗೆ ಆಶ್ಚರ್ಯವಾಯಿತು.

ಅಕ್ಕನಿಗೆ ಕಾಫಿ ತಿಂಡಿ ಕೊಟ್ಟು 'ನಿನಗ್ಯಾಕಕ್ಕ ತೊಂದರೆ. ಆಸ್ಪತ್ರೆಗೆ ಹೋದರಾಯಿತು' ಎಂದಿದ್ದಳಂತೆ ಸುಬ್ಬಿ.

ಆಗ ಸುಶೀಲಕ್ಕ ತನ್ನ ಮನಸ್ಸನ್ನು ಬಿಚ್ಚಿ ತೋರಿಸಿದಳಂತೆ.

'ನೋಡು ಸುಬ್ಬಿ, ಅಪ್ಪ ಸಾಯೋಕೆ ಮುಂಚೆ ಹೇಳಿದ್ದರು ಸುಬ್ಬೀಗೆ ಈ ಬಾಣಂತನಾನ ನೀನೇ ಮಾಡೂಂತ. ಅವರ ಮಾತನ್ನು ತೆಗೆದು ಹಾಕೋದು ನನಗೆ ಇಷ್ಟವಿಲ್ಲ. ಇದೊಂದು ಬಾಣಂತನಾನ ನಾನು ಮಾಡ್ತೀನಿ. ಮುಂದೆ ನಿನ್ನ ಪಾಡು. ಈಗ ಮಾತ್ರ ಬೇಡಾಂತ ಹೇಳ ಬೇಡ' ಎಂದರಂತೆ.

ಹಾಗಾದರೆ ಸುಶೀಲಕ್ಕ ತನ್ನ ಮೇಲಿನ ವಿಶ್ವಾಸದಿಂದ ಸಹಾಯ ಮಾಡಲು ಮುಂದೆ ಬಂದಿಲ್ಲ! ಮೃತನಾಗಿರುವ ತಂದೆಯ ಮಾತನ್ನು ಪೂರಯಿಸುವ ಉದ್ದೇಶ ಮಾತ್ರ!

ಸುಶೀಲಕ್ಕನ ಮಾತು ಕೇಳಿ ಸುಬ್ಬಿಗೆ ತನ್ನ ಅಸಹಾಯಕತೆ ನೆನೆದು ತುಂಬಾ ಅಳು ಬಂತಂತೆ. ಕೊನೆಗೆ ಬಡವರು ಬಿಂಕ ಮಾಡಿದರೆ ನಡೆಯೋ ದಿಲ್ಲ ಎಂದು ಯೋಚಿಸಿ ಒಪ್ಪಿಕೊಂಡಳಂತೆ.

ನಾನು ಹೆಣ್ಣಾಗಿ ಹುಟ್ಟುವುದು ನಮ್ಮ ತಾಯಿ ತಂದೆಗೆ ಬೇಕಿರಲಿಲ್ಲ. ಮೊದಲನೆಯದಾಗಿ ನನ್ನ ಜನ್ಮವೇ ಅವರಿಗೆ ಬೇಕಿರಲಿಲ್ಲ. ಕೊನೆಗೆ 'ಆದದ್ದಾಗಿ ಹೋಯಿತು. ಸಧ್ಯ, ದೇವರು ಕೃಪೆ ಮಾಡಿ ಮಗನ್ನ ಕೊಟ್ಟರೆ ಸಾಕು' ಎಂದು ಹರಕೆ ಹೊತ್ತರಂತೆ. ಗಂಡು ಹುಟ್ಟಿದರೆ ಗುರು ಗಳ ಹೆಸರು ಇಡುವುದಾಗಿ ಗಂಡ, ಹೆಂಡತಿ ಮನಸ್ಸಿನಲ್ಲಿಯೇ ಯೋಚಿಸಿ ಕೊಂಡಿದ್ದರಂತೆ.

ಸುಶೀಲಕ್ಕ ಸುಬ್ಬಿಯನ್ನು ಚೆನ್ನಾಗಿಯೇ ನೋಡಿಕೊಂಡರು. ನಮ್ಮ ತಂದೆ ಅಲ್ಲಿಗೆ ಹೋಗಲಿಲ್ಲ. ಸುಶೀಲಕ್ಕ ಒಂದು ಸಂಜೆ ಬಂದು ಸುಬ್ಬಿ ಯನ್ನು ಕರೆದುಕೊಂಡು ಹೋದರು. ಅವರು ಅಲ್ಲಿಗೆ ಕರೆದುಕೊಂಡು ಹೋದ ನಾಲ್ಕು ದಿನಗಳಿಗೇ ನಾನು ಹುಟ್ಟಿದೆ.

ಹುಟ್ಟಿದ ಮಗು ಹೆಣ್ಣೆಂದು ತಿಳಿದು ಸುಬ್ಬಿಗೆ 'ಷಾಕ್' ಆದಂತಾ ಯಿತು. ಆಕೆ ತನಗೆ ಗಂಡೇ ಆಗುವುದೆಂದು ಧೃಡವಾಗಿ ನಂಬಿದ್ದಳು- ಲಕ್ಷಣಗಳೂ ಹಾಗೆಯೇ ಇದ್ದವಂತೆ. ಮಗು ಹೆಣ್ಣಾಯಿತೆಂದು ಕೇಳಿ ಸುಬ್ಬಿಯ ದುಃಖಕ್ಕೆ ಪಾರವೇ ಇಲ್ಲ. ಹೊರಗಿದ್ದವರು ಆಕೆಯ ಅಳು ಕೇಳಿ 'ಮಗು ಸತ್ತು ಹೋಯಿತೋ ಏನೋ' ಎಂದು ಭಾವಿಸಿದ್ದರಂತೆ.

ನಮ್ಮ ತಂದೆಯೂ ವ್ಯಥೆಪಟ್ಟರೆಂದು ಪ್ರತ್ಯೇಕವಾಗಿ ಹೇಳಲೇಬೇಕಿಲ್ಲ.

ಹೆಣ್ಣಾಗಿ ಹುಟ್ಟಿದೆ ಎಂದು ಎಸೆಯೋಕ್ಕಾಗುತ್ತದೆಯೇ ? ನಿರ್ವಾಹ ವಿಲ್ಲದೆ ಅವರು ನನ್ನನ್ನು ಸಾಕಲೇಬೇಕಾಯಿತು.

ಹುಟ್ಟುವುದಕ್ಕೆ ಮುಂಚೆಯೇ ತಾತನ್ನ ತಿಂದುಕೊಂಡಿತು ಎಂಬ ಅಪಾದನೆ ಮಾತ್ರ ಕೊನೆಯವರೆವಿಗೂ ಸಿಡುಬಿನ ಕಲೆಯಂತೆ ನನಗೆ ಅಂಟಿ ಕೊಂಡಿತು.

ಸುಶೀಲಕ್ಕನ ಮನೆಯಲ್ಲಿ ಮೂರು ತಿಂಗಳಿನವರೆಗೆ ಬಾಣಂತನ ಚೆನ್ನಾಗಿ ನಡೆಯಿತು. ಪಥ್ಯ, ಲೇಹ, ಕಷಾಯ, ಹಾಲು, ತುಪ್ಪ, ಎಣ್ಣೆ ನೀರು ಇವುಗಳಲ್ಲಿ ಆಕೆ ಯಾವುದನ್ನೂ ಕಡಿಮೆ ಮಾಡದೇ ನಿರ್ವಂಚನೆ ಯಿಂದಲೇ ಮಾಡಿದಳು ಎಂದು ಸುಬ್ಬಿ ಇವತ್ತಿಗೂ ಆಗಾಗ್ಗೆ ಅಕ್ಕನ ಬಾಣಂತನವನ್ನು ಜ್ಞಾಪಿಸಿಕೊಳ್ಳುತ್ತಿರುವುದೂ ಉಂಟು.

ಅಕ್ಕನ ಆರೈಕೆಯಿಂದಾಗಿ ಸುಬ್ಬಿ ಮೈ ಕೈ ತುಂಬಿಕೊಂಡಳು. ಹಾಲಿಗೆ ಕೊರತೆಯಿರಲಿಲ್ಲವಾದುದರಿಂದ ನಾನೂ ಸಹ ಆರೋಗ್ಯವಾಗಿ ಮುಂಡು ದುಂಡಗೆ ಬೆಳೆದೆ.

ಮೂರು ತಿಂಗಳಿನ ನಂತರ ಸುಬ್ಬಿಯೇ ತನ್ನ ಮನೆಗೆ ಹೊರಡುವು ದಾಗಿ ಹೇಳಿದಳು. ಒಂದೇ ಊರಿನಲ್ಲಿದ್ದರೂ ತಂಗೀನ ಕರೆಸಿಕೊಂಡು ಬಾಣಂತನ ಮಾಡಲಿಲ್ಲ ಎಂಬ ಜನಾಪವಾದ ತಪ್ಪಿಸಿಕೊಂಡ ಸುಶೀಲಕ್ಕ ಸುಬ್ಬಿಯನ್ನು ಕಳಿಸಿಕೊಡಲು ಒಪ್ಪಿಕೊಂಡರು.

ಒಂದು ಒಳ್ಳೆಯ ದಿನದಲ್ಲಿ ಸುಬ್ಬಿಗೆ ಔತಣವಾಯಿತು. ಆ ದಿನ ಸುಶೀಲಕ್ಕ ದೊಡ್ಡ ಮನಸ್ಸು ಮಾಡಿ ನಮ್ಮ ತಂದೆಯನ್ನೂ ಊಟಕ್ಕೆ ಕರೆದಿದ್ದರಂತೆ ದೊಡ್ಡಮ್ಮನಿಂದ ನನಗೊಂದು ಬೆಳ್ಳಿಯ ಒಳಲೆ ಕಾಣಿಕೆ ಯಾಗಿ ಸಿಕ್ಕಿತು. ಜೊತೆಗೆ ಸುಶೀಲಮ್ಮನ ಮೊಮ್ಮಕ್ಕಳ ಹಳೆಯದಾದ, ಉಪಯೋಗವಿಲ್ಲದೆ ಮೂಲೆಯಲ್ಲಿ ಬಿದ್ದಿದ್ದ ಬಿದಿರಿನ ತೊಟ್ಟಿಲು, ಹಳೆಯ ದಟ್ಟಿಗಳು, ಪುಟ್ಟ ಅಂಗಿಗಳು, ಆಟದ ಸಾಮಾನುಗಳನ್ನೂ ಆಕೆ ಉದಾ ರವಾಗಿ ನನಗೆ ದಾನಮಾಡಿದರು.

ಆಗ ನಾನು ಅತ್ಯಂತ ಜ್ಞಾನಿಯಾಗಿದ್ದೆ. ಉಡುಗೊರೆ, ಒಳ್ಳೆಯ ಮಾತು, ಇವುಗಳಿಂದ ನನ್ನ ಮನಸ್ಸು ಉಬ್ಬುತ್ತಿರಲಿಲ್ಲ. ಬೈಗಳ, ತಿರ

ಸ್ಕಾರದಿಂದ ಹೃದಯ ಕುಗ್ಗುತ್ತಲೂ ಇರಲಿಲ್ಲ. ಆಗಿನ ನನ್ನ ಪ್ರಪಂಚ ತುಂಬಾ ಪುಟ್ಟದು. ಆಗ ನನಗೆ ಬೇಕಾದುದು ಸಮಯಕ್ಕೆ ಸರಿಯಾಗಿ ಹಾಲು, ಆಟವಾಡಿಸಲು ತಾಯಿ. ಇವೆರಡರ ಹೊರತು ಪ್ರಪಂಚವಿದೆ, ಬಹಳ ವಿಸ್ತಾರವಾಗಿದೆ ಎಂಬ ವಿಷಯವೇ ನನಗೆ ತಿಳಿದಿರಲಿಲ್ಲ.

ನಿಧಾನವಾಗಿ ಪ್ರಪಂಚದಲ್ಲಿರುವ ವಿಚಿತ್ರ ವಸ್ತುಗಳ ಪರಿಚಯ ನನಗಾಯಿತು.

ಆಗಿನ್ನೂ ನಾನು ಅಂಬೆಗಾಲಿಕ್ಕುವುದನ್ನು ಕಲಿತಿದ್ದೆ. ಸುಬ್ಬಿ ನನ್ನನ್ನು ಹಳೆಯ ದಟ್ಟಿಗಳ ಮೇಲೆ ಮಲಗಿಸಿ ಯಾವುದೋ ಕೆಲಸ ಮಾಡುತ್ತಿದ್ದಳು. ನಮ್ಮ ಮನೆಯೇನೂ ಮಹಲಲ್ಲವಲ್ಲ? ಅಜ್ಜಿಯೊಬ್ಬರ ಮನೆಯ ವಠಾರದ ಒಂದು ಮೂಲೆಯಲ್ಲಿದ್ದ ಮಣ್ಣಿನ ಮನೆಯಲ್ಲಿ ನಾವು ವಾಸಮಾಡುತ್ತಿದ್ದೆವು.

ನಾಲ್ಕು ಕಡೆ ಹುಳುಕು ಹುಳುಕಾಗಿ ಎದ್ದು ನಿಂತಿರುವ ಮಣ್ಣಿನ ಗೋಡೆಗಳು. ಅಲ್ಲಲ್ಲಿ ಒಂದು ಕೈ ತೂರಬಹುದಾದಷ್ಟು ಸ್ಥಳ. ಜನ ಅದಕ್ಕೇ 'ಕಿಟಕಿ' ಎಂದು ಹೆಸರಿಟ್ಟಿದ್ದರು. ವಿಸ್ತಾರವಾದ ಜಾಗವನ್ನು ಮಣ್ಣಿನ ಮೋಟುಗೋಡೆಯೊಂದರಿಂದ ಎರಡು ಭಾಗ ಮಾಡಿದ್ದರು. ಒಂದು ಭಾಗ ಅಡಿಗೆಯ ಮನೆ, ಬಚ್ಚಲು ಮನೆ. ಮತ್ತೊಂದು ಭಾಗ ಶಯನಗೃಹ. ಚಾಪೆಯೊಂದರ ಮೇಲೆ ಬಣ್ಣಗೆಟ್ಟಿದ್ದ ಎರಡು ಜಮಖಾನದ ಸುರುಳಿಗಳು ಒಳಗೆ ಬಂದೊಡನೆ ಕಾಣುತ್ತಿದ್ದವು. ಅದೇ ನಮ್ಮ ತಾಯಿ ತಂದೆಯ ಹಂಸತೂಲಿಕಾತಲ್ಪಗಳು. ಮತ್ತೊಂದು ಮೂಲೆಯಲ್ಲಿ ದುರ್ಬಲ ಗಳುವೊಂದರಿಂದ ನೇತುಬಿದ್ದಿದ್ದ ಒಣ್ಣಹೋಗಿದ್ದ ಬಿದಿರಿನ ತೊಟ್ಟಿಲು. ಹಾಸಿಗೆಯ ಸುರುಳಿಯ ಮೇಲೆ ಗೋಡೆ ಕಟ್ಟುವಾಗಲೇ ಮಣ್ಣಿನಿಂದ ನಿರ್ಮಿಸಿದ ಮೂರು ಸಾಲಿನ ಗೂಡು. ಆ ಗೂಡಿನ ತುಂಬಾ ಎಣ್ಣೆ ಸೀಸೆ, ಸೋಪಿನ ಪೆಟ್ಟಿಗೆ, ಬಾಚಣಿಗೆ ಏನೇನೋ ಇದ್ದವು. ಗಳುಗಳಿಂದ ನಿರ್ಮಿಸಿದ ಅಟ್ಟದ, ಮೇಲೆ ಕೆಲಸಕ್ಕೆ ಬಾರದ ಸಾಮಾನುಗಳನ್ನು ತುಂಬಿದ್ದರು. ಮತ್ತೊಂದು ಪುಟ್ಟ ಗೂಡಿನಲ್ಲಿ ಸೀಮೆ ಎಣ್ಣೆಯ ಬುಡ್ಡಿ. ಹೊಗೆಯಿಂದಾಗಿ ಗೂಡು ಕಪ್ಪಾಗಿತ್ತು.

ಮನೆಯ ಗೋಡೆಗಳು ಹುಟ್ಟಿದಾಗಿನಿಂದಲೂ ಸುಣ್ಣ ಕಂಡಿರಲಿಲ್ಲ. ಆ ವಠಾರದಲ್ಲಿದ್ದ ಯಾವ ಮನೆಯೂ ಸುಣ್ಣದ ಹೆಸರನ್ನೇ ಕೇಳಿರಲಿಲ್ಲ.

ಮುಂಭಾಗವಲ್ಲಿದ್ದ ಅಜ್ಜಿಯಮನೆ ಮಾತ್ರ ಸುಣ್ಣದಿಂದ ಶೋಭಿತವಾಗಿತ್ತು. ಉಳಿದವರ ಮನೆಗೆ ಅಜ್ಜಿ ಸುಣ್ಣ ಹಚ್ಚಿಸುವ ತೊಂದರೆಯನ್ನೇ ತೆಗೆದುಕೊಂಡಿರಲಿಲ್ಲ. ಯಾವಾಗಲೋ ಒಂದು ಬಾರಿ ನಮ್ಮ ತಂದೆ ಅಜ್ಜಿಗೆ 'ಹೇಗಿದ್ದರೂ ನಿಮ್ಮ ಮನೆಗೆ ಸುಣ್ಣ ಹಚ್ಚಿಸುತ್ತಿದ್ದೀರಲ್ಲಾ ಹಾಗೇ ಉಳಿದ ಸುಣ್ಣದಲ್ಲಿ ಹೊರಗಿನ ಗೋಡೆಗಳಿಗೆ ಮಾತ್ರ....' ಎಂದು ಹೇಳುವಷ್ಟರಲ್ಲಿ ಅಜ್ಜಿ

'ನೀವು ಕೊಡೋ ಎರಡೂವರೆ ರೂಪಾಯಿಗೆ ಸುಣ್ಣ ಬೇರೆ ಒಂದು ಕೇಡು. ನಿಮಗೆ ಈ ಮನೆ ಇಷ್ಟವಿಲ್ಲದಿದ್ದರೆ ಬೇರೆ ಮನೆಗೆ ಹೋಗಬಹುದು' ಎಂದರಂತೆ.

ಅಂದಿನಿಂದ ನಮ್ಮ ತಂದೆ ಮನೆಯ ವಿರುದ್ಧವಾಗಿ ಒಂದು ಮಾತನಾಡಿದವರಲ್ಲ. ಆ ವಠಾರದಲ್ಲಿದ್ದ ಐದು ಮನೆಗಳಿಗೂ ಜಿಂಕ್‌ಷೀಟಿನ ಬಾಗಿಲು. ಕಳ್ಳರನ್ನು ತಡೆಗಟ್ಟುವುದಕ್ಕಾಗಿ ಬಾಗಿಲನ್ನು ಇರಿಸಿದ್ದಂತೆ ತೋರಲಿಲ್ಲ. ಯಾಕೆಂದರೆ ಆ ವಠಾರದಲ್ಲಿದ್ದ ಮನೆಗಳಿಗೆ ಲಂಚ ಕೊಡ್ತೀನಿ ಎಂಬ ಆಸೆ ತೋರಿಸಿದರೂ ಯಾವ ಕಳ್ಳನೂ ಬರುತ್ತಿರಲಿಲ್ಲ. ಪ್ರತಿಯೊಂದು ಸಂಸಾರದಲ್ಲಿಯೂ ತಾಂಡವವಾಡುತ್ತಿದ್ದ ನಗ್ನ ಬಡತನವನ್ನು, ಖಾಸಗೀ ಕೆಲಸಗಳನ್ನು ಇತರರಿಂದ ಅಡಗಿಸುವುದಕ್ಕಾಗಿ ಮಾತ್ರ ಬಾಗಿಲನ್ನು ಇಟ್ಟಿದ್ದರು. ಸಾಲದುದಕ್ಕೆ ನಾಯಿ, ಕಾಗೆಗಳು ಒಳಗೆ ನುಗ್ಗಿ ಹಿಂಸೆ ಮಾಡುತ್ತಿದ್ದವು. ಆದರೆ ಬಾಗಿಲನ್ನು ಹಾಕಿಕೊಂಡರೆ ನಾಯಿಗೆ ಒಳಗೆ ಬರುವುದು ಅಸಾಧ್ಯವಾಗಿತ್ತು.

ನಮ್ಮ ಮನೆಯೇನೂ ಮಹಲಲ್ಲ ಎಂದು ನನಗೆ ಆಗ ತಿಳಿದಿರಲಿಲ್ಲ. ಸುಬ್ಬಿ ಒಲೆಯ ಮೇಲೆ ಅನ್ನದ ಪಾತ್ರೆಯಿಟ್ಟು ನಲ್ಲಿಯಲ್ಲಿ ಒಂದು ಕೊಡ ನೀರು ತರಲು ಹೊರಗೆ ಹೋದಳು.

ನಾನು ಚತುಷ್ಪಾದಿಯಾಗಿದ್ದಂತೆಯೇ ಉರಿಯುತ್ತಿದ್ದ ಬೆಂಕಿಯನ್ನು ನೋಡಿದೆ. ಕತ್ತಲು ಕವಿದಿದ್ದ ಅಡಿಗೆ ಮನೆಯಲ್ಲಿ ಉರಿಯುತ್ತಿದ್ದ ಕೆಂಪು ನಾಲಿಗೆ ನನಗೆ ತುಂಬಾ ಮನೋಹರವಾಗಿ ಕಂಡಿರಬೇಕು. ನಾನು ಕೇಕೆ ಹಾಕುತ್ತಾ ಬೆಂಕಿಯಿಂದ ಆಕರ್ಷಿತಳಾಗಿ ನಿಧಾನವಾಗಿ ಒಲೆಯ ಬಳಿಗೆ ಸರಿದೆ. ಪೂಜಾರಿಯ ಜುಟ್ಟಿನಂತೆ ಪಕಪಕನೆ ಕುಣಿದಾಡುತ್ತಿದ್ದ ಬೆಂಕಿಯನ್ನು ನನ್ನ ಹಿಡಿಯಲ್ಲಿ ಸೆರೆ ಹಾಕಲು ಕೈ ಚಾಚಿದೆ.

ಮರುಗಳಿಗೆಯೇ ಕಿಟಾರನೆ ಕಿರುಚಿಕೊಂಡೆ.

ಸುಬ್ಬಿ ಮಾಡುತ್ತಿದ್ದ ಕೆಲಸವನ್ನು ಬಿಟ್ಟು ಓಡಿಬಂದಳು. ಅವಳ ಹಿಂದೆಯೇ ಏನೋ ಅನಾಹುತವಾಗಿರಬೇಕೆಂದು ಊಹಿಸಿದ್ದ ವಠಾರದ ಜನರೆಲ್ಲಾ ಬಂದರು.

ಸುಬ್ಬಿ ಅಳುತ್ತಿದ್ದ ನನ್ನನ್ನು ಎತ್ತಿಕೊಂಡಳು. ಅಲ್ಲಿ ನಿಂತಿದ್ದ ಪ್ರತಿಯೊಬ್ಬರೂ ಬಗೆಬಗೆಯ ಸಲಹೆಗಳನ್ನು ಕೊಟ್ಟರು.

'ಜೇನುತುಪ್ಪ ಸುಣ್ಣ ಸವರಿಬಿಡ್ರೀ' ಎಂದೊಬ್ಬರು ಹೇಳಿದರು. ಪಾಪ! ನಮ್ಮ ಮನೆಯಲ್ಲಿ ಜೇನುತುಪ್ಪವಿಲ್ಲ ಎನ್ನುವ ವಿಷಯ ಅವರಿಗೇನು ಗೊತ್ತು ?

ಕೈ ಉರಿಯಿಂದಾಗಿ ನಾನು ಮೂರು ನಾಲ್ಕು ದಿನ ನಿದ್ದೆ ಮಾಡಲಿಲ್ಲ. ಸುಬ್ಬಿಗೂ ತುಂಬಾ ಹಿಂಸೆ ಕೊಟ್ಟೆ. ಕ್ರಮೇಣ ಗಾಯ ಮಾಗಿತು. ಬಲ ಮುಂಗೈ ಮೇಲೆ ಕಪ್ಪು ಕಲೆಯೊಂದು ಶಾಶ್ವತವಾಗಿ ಉಳಿಯಿತು.

ದೇವರು ಕೊಟ್ಟ ರೂಪವಂತೂ ಇರಲಿಲ್ಲ. ಮುಂಗೈ ಮೇಲೆ ಸುಟ್ಟ ಗಾಯದ ಕಲೆ, ನೆಂಟರಿಷ್ಟರು ಕೊಟ್ಟ 'ತಾತನ್ನ ತಿಂದವಳೆಂಬ' ಬಿರುದು ಮಾತ್ರ ಅಚ್ಚಳಿಯದೇ ನಿಂತವು.

ಅಂದಿನಿಂದ ನನಗೆ ಬೆಂಕಿಯೆಂದರೆ ಎಲ್ಲಿಲ್ಲದ ದಿಗಿಲು. ಅಡಿಗೆ ಮನೆಯಲ್ಲಿ ಒಲೆ ಉರಿಯುತ್ತಿದ್ದಾಗ ನಾನು ಅಪ್ಪಿತಪ್ಪಿಯಾದರೂ ಅಲ್ಲಿಗೆ ಹೋಗುತ್ತಿರಲಿಲ್ಲ. ಮೊದಮೊದಲು ಬೆಂಕಿಯನ್ನು ಕಂಡರೆ ಕಿಟಾರನೆ ಕಿರುಚಿಕೊಳ್ಳುತ್ತಿದ್ದೆ. ಆದರೆ ಹೆಣ್ಣಾಗಿ ಹುಟ್ಟಿದ ಮೇಲೆ ಎಷ್ಟು ದಿನ ಬೆಂಕಿಯಿಂದ ದೂರವಿರಲು ಸಾಧ್ಯ? ಬೆಂಕಿ, ನೀರಿನೊಡನೆ ಸರಸವಾಡುತ್ತಲೇ ಹೆಣ್ಣು ತನ್ನ ಜನ್ಮ ನೀಗಬೇಕಲ್ಲವೇ ?

ಬೆಂಕಿಯೆಂದರೆ ನನಗೆ ಎಷ್ಟು ಹೆದರಿಕೆಯಿತ್ತೋ ಮಣ್ಣು, ನೀರಿನಲ್ಲಿ ಆಡುವುದೆಂದರೆ ಅಷ್ಟೇ ಪ್ರೀತಿಯಿತ್ತು. ಸುಬ್ಬಿ ಬಟ್ಟೆಗಳನ್ನು ಒಗೆಯುವಾಗ ನಾನು ಬಕೀಟಿನ ಬಳಿಯೇ ನಿಂತು ನಲ್ಲಿಯಿಂದ ಸಿಡಿಯುವ ನೀರಿನ ಹನಿಗಳಲ್ಲಿ ಮುಖ, ಮೈ ಲಂಗ ತೋಯಿಸಿಕೊಳ್ಳುತ್ತಿದ್ದೆ. ತುಂಬಿದ ಬಕೀಟಿನೊಳಗೆ ನನ್ನ ಕೈಗಳನ್ನು ಮುಳುಗಿಸಿ ರಪರಪನೆ ಬಡಿದು ಬಟ್ಟೆಯನ್ನೆಲ್ಲಾ ಒದ್ದೆ ಮಾಡಿಕೊಳ್ಳುತ್ತಿದ್ದೆ. ಆಗ ನನಗಾಗುತ್ತಿದ್ದ ಆನಂದ ಅಷ್ಟಿಷ್ಟಲ್ಲ.

ಆಗ ಸುಬ್ಬಿ ಹಿಂತಿರುಗಿ ನನ್ನಾಟ ನೋಡಿ ಬೈಯುತ್ತಿದ್ದಳು.

'ಥೂ ಕತ್ತೆ, ಹಾಕಿದ ಲಂಗಾನೆಲ್ಲಾ ಒದ್ದೆ ಮಾಡ್ತೀಯ ? ಒಣಗಿದ ಬೇರೆ ಲಂಗ ನಾನೆಲ್ಲಿಂದ ತರಲಿ ?'

ನನ್ನ ಹತ್ತಿರ ಇರೋದೇ ಮೂರು ಲಂಗ ಎಂಬ ವಿಚಾರ ಆಗ ನನಗೇನು ಗೊತ್ತು ? ಅವುಗಳಲ್ಲಿ ಎರಡು ಅಗ್ಗದ ಬಟ್ಟೆಯಿಂದ ತಯಾರು ಮಾಡಿದ ಲಂಗಗಳು. ಮೂರನೆಯದನ್ನು ವಿಶೇಷ ದಿನಗಳಲ್ಲಿ ಮಾತ್ರ ಸುಬ್ಬಿ ಹಾಕುತ್ತಿದ್ದಳು. ಸುಶೀಲಮ್ಮ ಸುಬ್ಬಿಗೆ ಕೊಟ್ಟ ರವಿಕೆ ಕಣದಿಂದ ತಯಾರುಮಾಡಿದ ಲಂಗವದು. ದರ್ಜಿ ಆ ಲಂಗ ಹೊಲೆಯುವುದರಲ್ಲಿ ತನ್ನ ಜಾಣತನವನ್ನೆಲ್ಲಾ ಉಪಯೋಗಿಸಿರಬೇಕು. ಮಾಸಲು ಹಸಿರು ಕಣದ ಆ ಲಂಗ ಸುಬ್ಬಿ ನನಗೆ ಹಾಕಿದಾಗ ನಾನು ಕುಣಿದು ಕುಪ್ಪಳಿಸುತ್ತಿದ್ದೆ. ಯಾಕೆಂದರೆ ಎಲ್ಲಿಗಾದರೂ ಹೊರಗೆ ಹೊರಡುವಾಗ ಮಾತ್ರ ಆ ಲಂಗ ನನ್ನ ಮೈ ಮೇಲೆ ಬರುವುದೆಂಬ ವಿಷಯವನ್ನು ನಾನು ತಿಳಿದಿದ್ದೆ.

ನನ್ನ ಕಪ್ಪು ಮೈಗೆ ಮಾಸಲು ಹಸಿರುಬಣ್ಣ ಒಪ್ಪುತ್ತಿತ್ತೋ ಇಲ್ಲವೋ ಅದು ಬೇರೆ ಮಾತು. ಆದರೆ ಆ ಲಂಗ ನೋಡಿದೊಡನೆ ನನ್ನ ಹೃದಯ ಹಿಗ್ಗಿ ಹೂವಾಗುತ್ತಿತ್ತು.

ನನಗಿದ್ದ ಒಂದೇ ಒಂದು ಹೊಸ ಲಂಗ ಹಾಕಿಕೊಂಡಿದ್ದಾಗ ಮಣ್ಣಿನಲ್ಲಿ ಆಟವಾಡಬಾರದು ಎಂದು ನಾನು ತಿಳಿದಿರಲಿಲ್ಲ. ಆದರೆ ಸುಬ್ಬಿ ಒಂದು ದಿನ ಆ ಪಾಠ ಕಲಿಸಿಕೊಟ್ಟಳು.

ಹತ್ತಿರದಲ್ಲಿಯೇ ಇದ್ದ ಮತ್ತೊಂದು ವಠಾರದವರು ಅರಿಶಿನ-ಕುಂಕುಮಕ್ಕೆ ನಮ್ಮನ್ನು ಆಹ್ವಾನಿಸಿದ್ದರು.

ನಾನು ಹಸಿರು ಲಂಗದೊಡನೆ ಶೋಭಿಸುತ್ತಿದ್ದೆ. ನನ್ನನ್ನು ವಠಾರದ ಅಂಗಳದಲ್ಲಿ ಕೂರಿಸಿ ಸುಬ್ಬಿ ಯಾವುದೋ ಕೆಲಸ ಮಾಡಲು ಮತ್ತೆ ಮನೆಯೊಳಗೆ ಹೋದಳು. ನಾನು ನನ್ನ ಸುತ್ತಲೂ ಹರಡಿದ್ದ ಮಣ್ಣಿನ ಕಡೆ ನೋಡಿದೆ. ಆ ಮಣ್ಣಿನಲ್ಲಿ ನನ್ನ ಮನಸ್ಸನ್ನು ಸೆರೆ ಹಿಡಿಯುವ ಯಾವ ಗುಣವಿತ್ತೋ ?

ನಾನು ನನ್ನ ಹಿಡಿಯಲ್ಲಿ ಮಣ್ಣು ತೆಗೆದುಕೊಂಡು ಲಂಗದ ಮೇಲೆ

ಸುರಿದುಕೊಂಡೆ. ನೀರಿನೊಡನೆ ಆಟವಾಡುವಾಗ ಉಂಟಾದ ಆನಂದದ ಅನುಭವವೇ ಈಗಲೂ ಆಯಿತು. ನಾನು ನಗುತ್ತಾ ಎರಡು ಕೈಗಳಿಂದಲೂ ಮಣ್ಣನ್ನು ಗೋರಿ ತೆಗೆದುಕೊಂಡು ನನ್ನ ತಲೆಯ ಮೇಲೆ ಸುರಿದುಕೊಂಡೆ. ತಲೆ, ಮೈ ಮೇಲೆ ನಾಲ್ಕಾರು ಬಾರಿ ಮಣ್ಣಿನ ಸ್ನಾನವಾಗುವಷ್ಟರಲ್ಲಿ ಸುಬ್ಬಿ ಹೊರಗೆ ಬಂದಳು.

ಸುಬ್ಬಿಯನ್ನು ನೋಡುತ್ತಲೇ ಆಟಕ್ಕೆ ಮತ್ತಷ್ಟು ಉತ್ತೇಜನ ಸಿಕ್ಕಿದಂತಾಯಿತು. ನಾನು ನಗುತ್ತಾ ಮತ್ತೊಮ್ಮೆ ಮಣ್ಣು ತೆಗೆದುಕೊಂಡೆ.

'ಕತ್ತೇ, ಕೊಬ್ಬರಿ ಎಣ್ಣೆ ಹಾಕಿ ತಲೇನ ನಯವಾಗಿ ಬಾಚಿದ್ದೆ. ಎಲ್ಲಾ ಹಾಳಾಗಿ ಹೋಯಿತು' ಎಂದು ಚೀರುತ್ತಾ ಸುಬ್ಬಿ ನನ್ನ ಬಳಿಗೆ ನುಗ್ಗಿ ಬಂದಳು. ನನ್ನ ಬೆನ್ನ ಮೇಲೆ ಎರಡೇಟು ಹಾಕಿ, ಹಿಡಿಯಲ್ಲಿದ್ದ ಮಣ್ಣನ್ನು ಬಲವಂತದಿಂದ ಚೆಲ್ಲಿಸಿ ತಲೆಯ ಕೂದಲಿನಿಂದ ಧೂಳನ್ನು ಝಾಡಿಸಿದಳು.

ಅಷ್ಟು ಹೊತ್ತಿನಿಂದ ತಲೆಯ ಮೇಲೆ ಸುರಿದುಕೊಂಡಿದ್ದ ಮರಳು ಅನ್ಯಾಯವಾಯಿತಲ್ಲಾ ಎಂದು ನನಗೆ ಸಂಕಟವಾಯಿತು. ನಾನು ಮೈ, ಮುಖ ಪರಚಿಕೊಂಡು ಕಿರುಚಾಡಿದೆ. ಬೆನ್ನಿನ ಮೇಲೆ ಮತ್ತೆರಡು ಏಟುಗಳು ಬಿದ್ದವು.

ಹಾಗಾದರೆ ಸುಬ್ಬಿಯ ಕೈಗಳು ಬೆಳ್ಳಿಯ ಒಳಲೆಯಿಂದ ನನಗೆ ಹಾಲು ಕುಡಿಸುವುದಕ್ಕೆ ಮಾತ್ರ ಅಲ್ಲ ! ನಾನು ಚೇಷ್ಟೆ ಮಾಡಿದಾಗ ಅವು ನನ್ನನ್ನು ಹೊಡೆಯಲೂ ಬಲ್ಲವು !

ಏಟಿಗೆ ಹೆದರಿ ನಾನು ಸುಮ್ಮನಾದೆ. ಸುಬ್ಬಿ ನನ್ನ ಕೂದಲನ್ನು ಮತ್ತೊಮ್ಮೆ ಬಾಚಿ, ಲಂಗವನ್ನು ಒದರಿ ಕಣ್ಣು ಕೆನ್ನೆಯನ್ನು ಒರೆಸಿ ಎತ್ತಿಕೊಂಡಳು.

ಅಂದಿನಿಂದ ಏನಾದರೂ ಚೇಷ್ಟೆ ಮಾಡಬೇಕೆನಿಸಿದಾಗ ಸುಬ್ಬಿಯ ಕಡೆ ಕಳ್ಳನೋಟ ಬೀರುತ್ತಿದ್ದೆ. ನಾನು ನೀರಿನ ಬಳಿಗೆ ಬಂದೊಡನೆ ಸುಬ್ಬಿ ಎಡಗೈಯನ್ನು ಸೊಂಟದ ಮೇಲಿರಿಸಿ, ಬಲಗೈ ತೋರುಬೆರಳಿಂದ ನನ್ನನ್ನು ನಿರ್ದೇಶಿಸುತ್ತಾ 'ಬೇಡಾ ಬೇಡಾ' ಎಂದು ಎಚ್ಚರಿಕೆ ಕೊಡುತ್ತಿದ್ದಳು. ಆಗ ನನ್ನ ಕಾಲು ಅಲ್ಲೇ ತಡೆಯುತ್ತಿತ್ತು.

ನನಗೆ ಮರುತ್ತರ ಕೊಡಲು ಬರುತ್ತಿರಲಿಲ್ಲವಾದರೂ ಹಿರಿಯರು ಮಾತ ನಾಡಿದುದೆಲ್ಲಾ ಚೆನಾಗಿ ಅರ್ಥವಾಗುತ್ತಿತ್ತು. ಕೈಸನ್ನೆ, ಬಾಯಿ ಸನ್ನೆ ಯಿಂದಲೇ ನನಗೆ ಬೇಕಾದುದನ್ನು ಹಲವಾರು ಬಾರಿ ತೋರಿಸಿಯೂ ಇದ್ದೆ.

ನಾನು ಮೊದಲ ಬಾರಿ ಕೈ ಸನ್ನೆ ಮಾಡಿದಾಗ, ಎದ್ದು ನಿಂತು ನಡೆ ಯಲು ಯತ್ನಿಸಿದಾಗ ಸುಬ್ಬಿ, ಅಪ್ಪ ಪವಾಡವೊಂದನ್ನು ಕಂಡವರಂತೆ ಆಶ್ಚರ್ಯಪಟ್ಟು ಸಂತೋಷ ಹೊಂದಿದ್ದರು.

ನಾನು ಗೋಡೆ ಹಿಡಿದು ನಿಂತು ನಡೆಯಲು ಯತ್ನಿಸಿದಾಗ ಸುಬ್ಬಿ ಆನಂದಾತಿರೇಕದಿಂದ ಗಂಡನಿಗೆ 'ಬನ್ನೀಂದ್ರೆ ಇಲ್ಲಿ....ನಿಮ್ಮ ಮಗಳು ನಡೆಯೋದನ್ನ ನೋಡಿ ಬನ್ನಿ' ಎಂದು ಕೂಗಿದ್ದಳು.

ಅಪ್ಪನೂ ಆತುರದಿಂದ ಬಂದರು.

'ಎಲಾ ಲೌಡಿ! ಆಗ್ಲೇ ನಡೀತಾಳೆ! ಎಲ್ಲಿ ಇಲ್ಲಿ ಬಾ' ಎನ್ನುತ್ತಾ ಅಪ್ಪ ತೋಳುಗಳೆರಡನ್ನೂ ಚಾಚಿದರು. ಅವರಿಬ್ಬರೂ ನನ್ನ ನಡಿಗೆಯನ್ನು ನೋಡಲು ತವಕ ಪಡುತ್ತಿರುವರೆಂಬುದು ನನಗೆ ತಿಳಿಯಿತು. ನಾನು ಮತ್ತಷ್ಟು ಬಿಂಕದಿಂದ ಹೆಜ್ಜೆ ಹಾಕಿ, ಎಡವಿ ತೂರಾಡುತ್ತಾ ಅಪ್ಪನ ಬಳಿಗೆ ಬಂದು ಹೆಗಲ ಮೇಲೆ ಬಿದ್ದೆ.

ಈಗ ನನ್ನನ್ನು ಕರೆಯುವುದು ಅಮ್ಮನ ಸರದಿ.

'ಇಲ್ಲಿ ಬಾಮ್ಮ'

ಅವಳು ತೋಳು ನೀಡಿದ್ದಳು. ಆದರೆ ನಾನು 'ಊಂ' ಎನ್ನುತ್ತಾ ಮುಖವನ್ನು ಅಪ್ಪನ ಭುಜದ ಮೇಲೆ ಮರೆಸಿದೆ.

ಯಾಕೆಂದರೆ ಅಮ್ಮ ಯಾವಾಗಲೆಂದರೆ ಆಗ ಸಿಗುವ ಅಗ್ಗದ ವಸ್ತು ವಾಗಿದ್ದಳು ನನ್ನ ಪಾಲಿಗೆ. ಆದರೆ ಅಪ್ಪನ ಸಾನ್ನಿಧ್ಯ ನನಗೆ ಯಾವಾಗಲೂ ಅಪರೂಪ. ಅಮ್ಮ ಮನೆಯನ್ನು ಬಿಟ್ಟು ಹೊರಗೆ ಹೊರಡುತ್ತಿರಲಿಲ್ಲ. ಆದರೆ ಅಪ್ಪ ನನ್ನನ್ನು ಯಾವಾಗಲಾದರೂ ಎತ್ತಿಕೊಂಡು ಹೊರಗೆ ಹೋಗಿ ಸುತ್ತಲಿನ ಪ್ರಪಂಚದ ಪರಿಚಯ ಮಾಡಿಕೊಡುತ್ತಿದ್ದರು. ಅಪ್ಪನನ್ನೇ ಪಟ್ಟಾಗಿ ಹಿಡಿದರೆ ಒಂದು ಸುತ್ತು ಹೊರಗೆ ಹೋಗಬಹುದೆಂದು ನನ್ನ ಎಣಿಕೆ. ಆದರೆ ಅಪ್ಪ

'ಕರ್ಕೊ. ನಂಗಿನ್ನು ಸ್ಕೂಲಿಗೆ ಹೊತ್ತಾಗುತ್ತೆ' ಎಂದರು.

ಸುಬ್ಬಿ ಮತ್ತೊಮ್ಮೆ ನನ್ನ ಕರೆದಳು. ಆದರೆ ನಾನು ಅಪ್ಪನನ್ನೆ ಬಿಗಿಯಾಗಿ ಹಿಡಿದೆ. ಸುಬ್ಬಿ ಎದ್ದು ಹೋಗಿ ಅಡಿಗೆ ಮನೆಯ ಡಬ್ಬಿಯೊಂದರಿಂದ ಚೂರು ಬೆಲ್ಲವೊಂದನ್ನು ತಂದು ತೋರಿಸಿ

' ನನ್ನ ಹತ್ತಿರ ಬಂದರೆ ಕೊಡ್ತೀನಿ ' ಎಂದಳು.

ಬೆಲ್ಲದ ರುಚಿಯನ್ನು ಹಿಂದೊಮ್ಮೆ ನಾನು ಕಂಡಿದ್ದೆ. ಆದುದರಿಂದ ಅಪ್ಪನ್ನ ಬಿಟ್ಟು ಸುಬ್ಬಿಯ ಬಳಿಗೆ ಧಾವಿಸಿ ಬಂದೆ. ಸುಬ್ಬಿ ಬೆಲ್ಲವನ್ನು ನನ್ನ ಬಾಯೊಳಗೆ ತುರುಕಿ ಎರಡು ಡಬ್ಬಿಯ ಮುಚ್ಚಳವನ್ನು ನನ್ನ ಮುಂದೆ ಎಸೆದು ಅಡಿಗೆ ಮನೆಯೊಳಗೆ ಹೋದಳು. ನಾನು ಬೆಲ್ಲವನ್ನು ಚೀಪುತ್ತಾ ಡಬ್ಬಿಯ ಮುಚ್ಚಳವನ್ನು ಬಡಿಯುತ್ತಾ ಆಟವಾಡತೊಡಗಿದೆ.

ಡಬ್ಬಿಯ ಮುಚ್ಚಳಗಳು, ಒಡೆದ ಜಾಡಿಯೊಂದರ ಹಲವಾರು ಚೂರುಗಳು, ಕಲ್ಲು ಇವೇ ನನ್ನ ಆಟದ ಸಾಮಗ್ರಿಗಳಾಗಿದ್ದವು.

ನೆರೆಮನೆಯ — ಅಂದರೆ ಅಜ್ಜಿಯ ವಠಾರದಲ್ಲೇ ಇದ್ದ ಗುಂಡಮ್ಮನವರ ಮೊಮ್ಮಗಳು ಉಷಾ— ಅವಳೂ ನನ್ನ ಓರಗೆಯವಳೇ— ಒಂದು ದಿನ ನನ್ನ ಅಮೂಲ್ಯ ಆಟಿಕೆಗಳಿಗೆ ಕೈ ಹಾಕಿದಾಗ ನಾನೆಷ್ಟು ರಂಪ ಮಾಡಿದ್ದೆ ?— ಅಬ್ಬ !

ಉಷಾ ಬಂದು ಕಲ್ಲಿನಚೂರು ಎಳೆದುಕೊಂಡಾಗ ನಾನು ನನ್ನ ಗಂಟಲಿನ ನರವೇ ಹರಿದುಹೋಯಿತೇನೋ ಎನ್ನುವಷ್ಟು ಮಟ್ಟಿಗೆ ಕಿರುಚಿಕೊಂಡೆ.

ನನ್ನ ಚೀರಾಟ ಕೇಳಿ ಸುಬ್ಬಿ, ಉಷೆಯ ತಾಯಿ ಮಂಜುಳ ಇಬ್ಬರೂ ಓಡಿಬಂದರು.

ನನ್ನ ಕಣ್ಣಿನಲ್ಲಿ ಹನಿಯಿತ್ತು. ಉಷೆಯ ಕೈಲಿ ಕಲ್ಲಿತ್ತು.

ಸುಬ್ಬಿ, ಮಂಜುಳಾ ಒಬ್ಬರನ್ನೊಬ್ಬರು ನೋಡಿದರು ಒಂದು ಗಳಿಗೆ.

ಮರುಗಳಿಗೆ ಮಂಜುಳಾ ಬಾಗಿ ಉಷೆಯ ಬೆನ್ನ ಮೇಲೊಂದು ಬಾರಿ ಗುದ್ದಿ

" ಥೂ ನಾಯಿ, ಎಲ್ಲಾ ಬಿಟ್ಟು ಅವಳನ್ಯಾಕೆ ಹೊಡಿಯೋಕೆ ಹೋದೆ ? ಮನೇಲಿ ಸುಮ್ಮನೆ ಬಿದ್ದಿರಲಾರೆಯಾ ? ಅಪ್ಪನ ಮನೇಲಿ ಬಾಳ

ಲಾರದೇ ಇಲ್ಲಿ ಬಂದೆ. ಇಲ್ಲೂ........" ಎನ್ನುತ್ತಾ ಮತ್ತೆರಡು ಏಟು ಹಾಕಿದಳು.

ನಾನು, ಉಷಾ ಈಗ ಒಬ್ಬರನ್ನೊಬ್ಬರು ನೋಡಿಕೊಂಡೆವು.

ನಮಗಂತೂ ಅವರ ವರ್ತನೆ ವಿಪರೀತ ಆಶ್ಚರ್ಯಕರವಾಗಿ ತೋರಿತು. ಉಷಾ ನನ್ನ ಬಳಿಗೆ ಸಹ ಬಂದಿರಲಿಲ್ಲ. ಆದರೂ ಮಂಜುಳ ಹೊಡೆದಿದ್ದೇಕೆ?

ಕೊನೆಗೆ ಸುಬ್ಬಿಯೇ 'ಹೋಗಲಿ ಬಿಡು ಮಂಜು. ಏನೋ ಹುಡುಗರು ಆಡುವಾಗ ಹೊಡೆದಾಡತ್ವೆ. ಅದಕ್ಕೆಲ್ಲಾ ಹೊಡೆಯಬೇಕೆ?' ಎಂದಳು.

ನಾನು ಮಾತನಾಡುವವಳಂತೆ ಬಾಯಿ ತೆರೆದೆ. ಆದರೆ ನಾಲಿಗೆಯಿಂದ ಮಾತುಗಳು ಹೊರಡಲಿಲ್ಲ.

'ಮಮ್ ಮಮ್.........ಮಮ್.'

ಸುಬ್ಬಿ ಎಲ್ಲವನ್ನೂ ಮರೆತು ನನ್ನ ಮೊದಲು ಮಾತು ಕೇಳಿ ನನ್ನ ಕೆನ್ನೆಯ ಮೇಲೆ ಮುತ್ತಿನ ಮಳೆಗರೆದು

'ಮಾತು ಬೇರೆ ಆಡೋಕೆ ಹೊರಟಿದಾಳೆ! ಏನೆಂದೆ ಮರಿ? ಮಮ್ಮಾ ಮಾಡಬೇಕೆ?' ಎಂದಳು.

ಒಂದು ರೀತಿಯ ಸಂಕಟ, ಅಸಹಾಯಕತೆ ನನ್ನ ಮುಖದ ಮೇಲೆ ಮೂಡಿತು. ನಾನು ಹೇಳಬೇಕೆಂದಿರುವ ವಿಷಯವೇ ಬೇರೆ. ಉಷಾ, ನನ್ನ ಹೊಡೀಲಿಲ್ಲಾಂತ ನಾನು ಹೇಗೆ ಹೇಳಲಿ?

ಮತ್ತೆ 'ಮಮ್ ಮಮ್' ಎಂದು ಒತ್ತಿ ಹೇಳಿದೆ.

'ಅಮ್ಮಾ ಎನ್ನುತ್ತೀಯಾ ಘಟಿಂಗಿ.'

ನಾನು ನನ್ನ ಪ್ರಯತ್ನವನ್ನು ಬಿಟ್ಟುಕೊಟ್ಟು ಉಷೆಯ ಕಡೆ ಕನಿಕರದಿಂದ ನೋಡಿದೆ.

ನನ್ನ 'ಮಮ್' ಸುಬ್ಬಿಯನ್ನು ಸ್ವರ್ಗಲೋಕಕ್ಕೆ ಕರೆದೊಯ್ದಿತ್ತು.

ಉಷೆಯ ಉದ್ಧಟತನ ಮಂಜುಳೆಯ ನೆನಪಿನ ಗಾಯವೊಂದನ್ನು ಕೆದಕಿತ್ತು.

'ಹಿಟ್ಟಿಗೋಸ್ಕರ ಅಜ್ಜಿಮನೆಗೆ ಬಂದು ಸೇರಿಕೊಂಡಿದೀಯಾ? ಇನ್ನು

ಮೇಲೆ ಗಂಭೀರವಾಗಿ ಮನೆಯಲ್ಲೇ ಬಿದ್ದಿರು.'

ಬಿಸುಸುಯ್ಲಿನೊಡನೆ ಬಂದ ತಾಪದ ನುಡಿಗಳು ಸುಬ್ಬಿಯನ್ನು ಭೂಮಿಯ ಮೇಲೆ ಎಳೆದು ತಂದವು.

'ಯಾಕೆ ಮಂಜುಳಾ ಹೀಗಾಡ್ತಿ? ಪಾಪ! ಉಷಾಗೇನು ಗೊತ್ತು? ಮಕ್ಕಳ ವಿಚಾರಕ್ಕೆಲ್ಲಾ ನೀನಿಷ್ಟು ಬೇಜಾರುಪಟ್ಕೊಂಡರೆ ಹೇಗೆ?'

ಗಂಡನ ವರ್ತನೆಯಿಂದ ಬದುಕೇ ಬೇಡವಾಗಿ ತವರಿನ ಆಶ್ರಯ ಪಡೆದಿದ್ದ ಮಂಜುಳಾ ಗಳಗಳನೆ ಅತ್ತಳು.

'ಶ್.........ಮಂಜೂ........'

'ನನ್ನ ದುಃಖ ನನಗೆ' ತುಂಬಾ ಸೂಕ್ಷ್ಮಮತಿಯಾಗಿದ್ದ ಮಂಜುಳ ಬಿಕ್ಕುತ್ತಾ ನುಡಿದಳು.

'ಶ್.........ಎಲ್ಲರಿಗೂ ಗೊತ್ತಾಗತ್ತೆ. ನಮ್ಮ ಮನೆಗೆ ಬಾ. ಒಂದು ಗಳಿಗೆ ಕುಳಿತಿದ್ದು ಸಮಾಧಾನ ಮಾಡಿಕೊಂಡು ಹೋಗುವಂತೆ' ಎಂದು ಸುಬ್ಬಿ ಮಂಜುಳೆಯನ್ನು ಬಲವಂತದಿಂದ ಮನೆಗೆ ಕರೆದುಕೊಂಡು ಬಂದಳು.

ಒಂದು ಕಾಗದದ ಮೇಲೆ ಮಂಡಕ್ಕಿಪುರಿಯಿರಿಸಿ, ಒಂದು ಲೋಟದ ತುಂಬಾ ಕಾಫಿ ತುಂಬಿ ಮಂಜುವಿನ ಬಳಿ ಇರಿಸಿದಳು.

ಸುಬ್ಬಿಯ ಆತಿಥ್ಯ ನೋಡಿ ಮಂಜುಳ ಮತ್ತೂ ಅತ್ತಳು.

'ನೋಡಿ, ಇಷ್ಟುದ್ದ (ಗೇಣುದ್ದದ) ಹೊಟ್ಟೆ ಹೊರೆಯೋಕಾಗಿ ಎಷ್ಟು ಮಾತು ಕೇಳಬೇಕು, ಏನೇನು ಕೆಲಸ ಮಾಡಬೇಕು? ಮಾಡಬಾರದ ಕೆಲಸ ಮಾಡೂಂತ ಗಂಡನೇ ಪ್ರೇರೇಪಣೆ ಮಾಡಿದಾಗ ತವರು ಮನೆಗೆ ಓಡಿ ಬಂದೆ. ಈಗ ಇಲ್ಲಿ ಹಿಡಿಕೂಳಿಗೆ ಹೃದಯ ಹಿಂಡಿಸಿಕೊಳ್ಳಬೇಕು.'

ಗಂಡನನ್ನು ಬಿಟ್ಟು ತವರುಮನೆಗೆ ಬಂದು ಸೇರಿದ್ದಳು ಮಗಳು. ಸಿಲ್ಕಿನ ಕಾರ್ಖಾನೆಯಲ್ಲಿ ೨೫ ರೂಪಾಯಿಗೆ ದುಡಿಯುವ ವಿಧವೆ ತಾಯಿಗೆ ತಾನೇ ಹೆತ್ತ ಮಗಳೂ ಭಾರವೇ. ಬಳ್ಳಿಗೆ ಕಾಯಿ ಭಾರವಲ್ಲವೆಂಬ ಗಾದೆ ಯಾರು ಮಾಡಿದರೋ?

'ನಮ್ಮ ಯಜಮಾನರು ಹೋಟಲೊಂದರ ಮಾಣಿಯಾಗಿದ್ದಾರೆ. ಆ ಹೋಟಲಿನ ಮ್ಯಾನೇಜರರ ಹತ್ತಿರ ನೂರು ರೂಪಾಯಿ ಸಾಲ ಮಾಡಿ ದ್ದಾರೆ. ಅದನ್ನು ತೀರಿಸೋ ಶಕ್ತಿಯಿಲ್ಲದೇ ನನ್ನ ಅವನ ಹತ್ತಿರ ಹೋಗು

ಎಂದರು........'

ಸುಬ್ಬಿ ಬೆಚ್ಚಿ ಕೈಲಿ ಹಿಡಿದಿದ್ದ ಬಟ್ಟಲನ್ನು ಎತ್ತಿಹಾಕಿದಳು.

'ಆ್ಞ !'

'ಆ ವ್ಯಾನೇಜರಿಗೆ ರಾತ್ರಿ ಬರಹೇಳಿದೀನಿ ಎಂದರು. ನಾನು ಸಂಜೆಯೇ ಬೆಂಗಳೂರಿನ ರೈಲು ಹತ್ತಿ, ಅಲ್ಲಿಂದ ಮೈಸೂರಿಗೆ ನೇರವಾಗಿ ಬಂದೆ.'

'ಹೀಗೂ ಉಂಟೇ ?'

ನೂರು ರೂಪಾಯಿ ಸಾಲ ತೀರಿಸಲಾರದೇ ಗಂಡ ಹೆಂಡತಿಗೆ ಹಾದರ ಮಾಡಲು ಹೇಳಿದ್ದ. ಆದರೆ ಆ ಸಾಧ್ವಿ ಹೆದರಿ ತವರಿಗೆ ಓಡಿ ಬಂದಿದ್ದಳು. ಆ ತಾಯಿಯೋ ಇಪ್ಪತ್ತೈದು ರೂಪಾಯಿ ಸಂಪಾದಿಸುವ ಕಾರ್ಮಿಕಳು. ಮನೆಯಲ್ಲಿ ತಿನ್ನುವ ನಾಲ್ಕು ಬಾಯಿಗಳು. ಸಾಲದುದಕ್ಕೆ ಮಗಳು ವೊಮ್ಮಗುವಿನೊಡನೆ ಬಹುಶಃ ಜೀವನ ಪರ್ಯಂತ ತನ್ನಲ್ಲೇ ನೆಲಸಲು ಬಂದಿದ್ದಾಳೆ. ಹೊಟ್ಟೆಯ ಚೀರಾಟದಿಂದ ಕರ್ಕಶಿಯಾಗಿರುವ ಆ ತಾಯಿ ಖತಿಕೊಂಡು ತನ್ನ ಮಗಳಿಗೆ

'ಹೋಗೇ, ಗಂಡ ಹೇಳಿದ ಹಾಗೆ ಕೇಳ್ಕೊಂಡು ಅಲ್ಲೇ ಬಿದ್ದಿರು ಹೋಗು' ಎಂದು ಎಷ್ಟೋ ಬಾರಿ ಹೇಳಿದ್ದಾಳೆ.

ಹೆತ್ತ ತಾಯಿ, ಕೈ ಹಿಡಿದ ಗಂಡ ಅವರಿಬ್ಬರೂ ಅವಳಿಗೆ. ಎರಡೂ ಕಡೆಯಿಂದ ಅವಳ ಬದುಕನ್ನು ಭಾರವಾಗಿಸುತ್ತಾ ಅವರು ಬಂದಿದ್ದಾರೆ. ಬದುಕಿನ ಸಮುದ್ರದಲ್ಲಿ ಈಜ ಹೊರಟಿರುವ ಅವಳ ಕಾಲಿನ ಕಲ್ಲುಗಳು ಆ ಗಂಡ, ಆ ತಾಯಿ. ಸಾಲಲುದಕ್ಕೆ ಉಷೆಯೊಬ್ಬಳು ಕತ್ತಿನಲ್ಲಿರುವ ಭಾರಿ ಗುಂಡುಕಲ್ಲು. ಹಾಳಾದ್ದು ಅದೂ ಹೆಣ್ಣೇ. ಹೇಗೋ ಕಷ್ಟಪಟ್ಟು ಸಾಕಿದರೆ ಮುಂದೊಂದು ದಿನ ತನ್ನನ್ನು ನೋಡಿಕೊಂಡೀತೆಂಬ ಭರವಸೆಯೂ ಇಲ್ಲ ಮಂಜುಳೆಗೆ. ಇನ್ನವಳು ಹೇಗೆ ಈಜಿಯಾಳು ?

ಸಂಜೆ ಫ್ಯಾಕ್ಟರಿಯಿಂದ ಮನೆಗೆ ಬಂದ ತಾಯಿ ಮಗಳ ಮೇಲೆ ರೇಗಿದ್ದಳು. ಮಂಜುಳಾ ಬಂದು ಉಷೆಯ ಮೇಲೆ ಸಿಟ್ಟುಗೊಂಡು ಎರಡೇಟು ಬಿಗಿದಿದ್ದಳು.

ಕಣ್ಣೀರಿನ ನಡುವೆ ಕತೆ ಸಾಗಿತು. ಕಾಫಿ ಬಟ್ಟಲಿನಲ್ಲಿಯೇ ಅರಿ

ತಣ್ಣಗಾಯಿತು. ಪುರಿಯ ಕಾಳೊಂದನ್ನು ಇರುವೆಯೊಂದು ಕಚ್ಚಿಕೊಂಡು ಸಾಗುತ್ತಿತ್ತು—ತನ್ನ ಬದುಕಿಗಾಗಿ.

‘ನಿನ್ನ ಗಂಡನಿಗೆ ಒಂದಲ್ಲ ಒಂದು ದಿನ ಬುದ್ಧಿ ಬರತ್ತೆ. ಕಾಫಿಯೆಲ್ಲಾ ಆರಿಹೋಯಿತು. ತಾಳು ಬಿಸಿ ಮಾಡಿ ತರ್ತೀನಿ.’

‘ಏನೂ ಬೇಡಿ. ನನಗೆ ಬಿಸಿ, ಹಳಸಲು ಎಲ್ಲಾ ಒಂದೇ ಈಗ.’

‘ನನಗೇನೂ ಬಹುವಚನ ಬೇಕಾಗಿಲ್ಲ.’

‘ಎಷ್ಟಾಗಲಿ ನಂಗಿಂತ ನೀವು ದೊಡ್ಡೋರು.’

‘ಮಹಾ, ಆರು ತಿಂಗಳು ದೊಡ್ಡವಳು ತಾನೇ? ಅದೂ ಅಲ್ಲದೇ ಸ್ನೇಹಿತರಾದ ಮೇಲೆ ವಯಸ್ಸಿನ ಅಂತರ ಬೇಕಾಗಿಲ್ಲ.’

ಮಂಜುಳಾ ಮತ್ತೆ ಬಿಸಿಯಾಗಿ ಬಂದ ಕಾಫಿ ಕುಡಿದು ಉಷೆಯನ್ನು ಸೊಂಟದ ಮೇಲೆ ಕೂರಿಸಿಕೊಂಡು ತನ್ನ–ಅಲ್ಲ–ತಾಯಿಯ ಮನೆಗೆ ಹೊರಟುಹೋದಳು.

ರಾತ್ರಿ ನಾನು ತೊಟ್ಟಿಲಿನಲ್ಲಿ ಮಲಗಿದ್ದೆ. ತೊಟ್ಟಿಲಿಗೆ ಕಟ್ಟಿದ್ದ ಹಗ್ಗವನ್ನು ತೂಗಿಸುತ್ತಾ ಸುಬ್ಬಿ ಪಿಸುದನಿಯಲ್ಲಿ

‘ಏನನ್ಯಾಯ’ ಎಂದಳು.

‘ಪ್ರಪಂಚಾನೇ ಹಾಗೇ.’

‘ಒಳ್ಳೇ ಪ್ರಪಂಚ. ಹೆಂಡತೀನ ಕಂಡೋರ ಹತ್ತಿರ ಕಳಿಸೋಕೆ ಅವನಿಗೆ ನಾಚಿಗೆ ಆಗಲ್ಲವೇ? ‘ತನ್ನ ಹೆಂಡತೀಂತ’ ಪ್ರೀತಿ, ಅಭಿಮಾನ ಬೇಡವೇ?’

‘ಪ್ರೀತಿ, ಅಭಿಮಾನ ಎಲ್ಲಾ ಶ್ರೀಮಂತರಿಗೆ.’

‘ಶ್ರೀಮಂತರೆಲ್ಲಾ ಸದ್ಗೃಹಸ್ಥರೇನೋ?’ ಸುಬ್ಬಿಯ ದನಿಯಲ್ಲಿ ಅಣಕವಿತ್ತು—

‘ಕೆಲವರು ಒಳ್ಳೇ ಪದವೀಗೆ ಬಂದಿರೋದು ಹೇಗೆ ಅಂದ್ಕೊಂಡಿದೀಯಾ? ಹೆಂಡತೀರನ್ನ ಮೇಲಧಿಕಾರಿಗಳ ಹತ್ತಿರ ಕಳಿಸಿ ದೊಡ್ಡ ಕೆಲಸ ಸಂಪಾದಿಸುತ್ತಾರೆ. ದೊಡ್ಡಮನುಷ್ಯರು ಮಾಡಿದರೆ ಫ್ಯಾಷನ್ನು. ಬಡವರು ಮಾಡಿದರೆ ಹಾದರ.’

‘ಮರ್ಯಾದೆ ಇಲ್ಲದ ಮೇಲೆ ಅವರೆಂತಹ ದೊಡ್ಡ ಮನುಷ್ಯರು?’

ಸುಬ್ಬಿ ಸಿಡಿದು ನುಡಿದಳು.

'ನೀನ್ಯಾಕೆ ನನ್ನ ಮೇಲೆ ಹೀಗೆ ರೇಗ್ತಾ ಇದೀಯೆ?' ಅಪ್ಪ ನಕ್ಕು ಕೇಳಿದರು.

'ನಿಮ್ಮ ಮೇಲೆ ರೇಗ್ತಿಲ್ಲ. ಈ ಗಂಡಸು ಜಾತಿ ಇದೆಯಲ್ಲಾ....'

'ಈ ಹೆಂಗಸು ಜಾತಿ ಒಪ್ಪಿಕೊಳ್ಳುತ್ತಲ್ಲಾ ಅವರು ಹೇಳಿದ ಹಾಗೆ ಕೇಳೋಕೆ.'

'ಒಪ್ಪಿಕೊಳ್ಳದೇ ಹೋದ್ರೆ ಮಂಜುಳಾ ಹಾಗೆ ಆವರೆಲ್ಲಾ....' ಸುಬ್ಬಿ ಯಾಡುತ್ತಿದ್ದ ಮಾತು ತಟ್ಟನೆ ನಿಂತು ಹೋಯಿತು–ಅದರೊಂದಿಗೆ ಎರಡು ಕ್ಷಣ ತೊಟ್ಟಿಲು ತೂಗುವುದೂ.

ಆದರೆ ನಾನು ಸುಮ್ಮನಿರಬೇಕಲ್ಲ?

'ಊಂ.... ಊಂ....' ಎಂದು ರಾಗ ತೆಗೆದೆ.

'ಅಯ್ಯೋ ಇದಿನ್ನೂ ಮಲಗೇ ಇಲ್ಲ. ಬಿಡೀಂದ್ರೆ....' ಸುಬ್ಬಿಯ ದನಿಯಲ್ಲಿ ಅಪಾರ ಬೇಸರವಿತ್ತು.

ಮತ್ತೆ ತೊಟ್ಟಿಲು ತೂಗಿತು. ನಿದ್ರೆ ನನ್ನ ಕಣ್ಣುಗಳನ್ನು ಮುತ್ತಿಡು ತ್ತಿದ್ದಂತೇ ಮಿನುಗು ದೀಪ ಆರಿತು.

ಸುಬ್ಬಿಯ ಮಾತು ಅಸ್ಪಷ್ಟವಾಗಿ ಕಿವಿಯ ಮೇಲೆ ಬಿತ್ತು.

'ಇವತ್ತು ನಿಮ್ಮ ಮಗಳು 'ಅಮ್ಮ', 'ಮಮ್ಮ' ಎರಡು ಮಾತು ಕಲಿತಿದಾಳೆ.'

'ಹಾಗೇನು?'

ತೊಟ್ಟಿಲು ತೂಗುವಿಕೆ ನಿಧಾನವಾಗುತ್ತಾ ಬಂದಿತ್ತು.

'ಇನ್ನು ಮೇಲೆ ಅವಳಿಗೆ ತೊಟ್ಟಿಲು ಸಾಕಾಗೋದಿಲ್ಲಾಂದ್ರೆ. ನಮ್ಮ ಹತ್ತಿರಾನೇ ಮಲಗಿಸಿಕೊಳ್ಳೋದು ವಾಸಿ.'

'ಹಾಗಾದರೆ ತೊಟ್ಟಿಲು ದಂಡವಾಗುತ್ತಲ್ಲಾ? ತೊಟ್ಟಿಲಿನಲ್ಲಿ ಯಾರನ್ನ ಮಲಗಿಸೋದು? ....ಆಂ?'

'ಥತ್' ಎಂದಳು ಸುಬ್ಬಿ.

ಆದರೆ ಅದರಲ್ಲಿ ಕೋಪ ಮಾತ್ರ ಇರಲಿಲ್ಲ.

* * * * *

ನಾನೇನೋ ಅವರಿಗೆ ಹುಟ್ಟುವುದಕ್ಕೆ ಮುಂಚೆ ಬೇಡವಾಗಿದ್ದಿರಬಹುದು. ಆದರೆ ಕ್ರಮೇಣ ಅವರಿಬ್ಬರೂ ನನ್ನನ್ನು ಪ್ರೀತಿಸತೊಡಗಿದ್ದರು. ರುಚಿ ರುಚಿಯಾದ ತಿಂಡಿ, ರಂಗು ರಂಗಿನ ಬಟ್ಟೆ, ಭ್ರಾಂತಿ ಹುಟ್ಟಿಸುವ ಆಟದ ಸಾಮಾನುಗಳು ನನಗಿಲ್ಲದಿದ್ದಿರಬಹುದು. ಆದರೆ ರಾಗಿ ಹುರಿಟ್ಟು, ಚೂರು ಬೆಲ್ಲ. ನಾಲ್ಕು ಕಾಳು ಪುರಿ ನನ್ನ ಹೊಟ್ಟೆ ಹಸಿದಾಗ ಅಮೃತದಂತೆ ತೋರುತ್ತಿದ್ದವು. ನನ್ನಲ್ಲಿದ್ದ ಮಾಸಲು ಹಸುರಿನ ಲಂಗ ನನಗೆ ತುಂಬಾ ಪುಟ್ಟದಾಗಿ ಹೋಗಿತ್ತು. ನಾನು ಆ ಲಂಗವನ್ನು ಮೀರಿ ಬೆಳೆದಿದ್ದೆ.

ಅಜ್ಜಿಯ ಮೊಮ್ಮಗನ ಕೀಲಿನ ಮೋಟಾರಿನಲ್ಲಿ ನಾನೊಂದು ಬಾರಿ ಮೋಹಿತಳಾಗಿದ್ದೆ. ಚೀಚುವೂ ಅದನ್ನೆತ್ತಿಕೊಂಡು ಆಗಾಗ್ಗೆ ನನ್ನಲ್ಲಿಗೆ ಆಡಲು ಬರುತ್ತಿದ್ದ. ಅವನ ಅಕ್ಕ ಪಾತು ಕೀಲು ತಿರುಗಿಸಿದಾಗ ಪುಟ್ಟ ಕೆಂಪು ಮೋಟಾರು ವಠಾರದ ಅಂಗಳದಲ್ಲಿ ತಿರುಗಾಡುತ್ತಿತ್ತು. ಆಗ ನಾನು, ಚೀಚು, ಉಷಾ ಎಲ್ಲರೂ ಕೂಗಾಡುತ್ತಾ ಅದರ ಹಿಂದೆಯೇ ಓಡುತ್ತಿದ್ದೆವು. ಆದರೆ ಆದೊಂದು ದಿನ ಏನಾಯಿತೋ ಮೋಟಾರು ಎಷ್ಟು ಕೀಲು ಕೊಟ್ಟರೂ ಓಡಲಿಲ್ಲ. ಮತ್ತೆರಡು ದಿನಗಳಲ್ಲಿ ಮೋಟಾರಿನ ಚಕ್ರಗಳು ಬೇರೆ ಬೇರೆಯಾಗಿ ಕಳಚಿ ಬಂದವು. ಕೆಂಪು ಬಣ್ಣ ನಮ್ಮ ಮನೆಯ ಗೋಡೆಯ ಮಣ್ಣು ಉದುರುವಂತೆ ಉದುರಿ ಟಿನ್ನು ಕಾಣಿಸಿತು.

ಅಯ್ಯೋ ಇಷ್ಟೇನೇ ಇದರ ಬಾಳು! ಈ ಮೋಟಾರಿಗಿಂತ ಎದುರು ಮನೆ ಬಡಗಿ ಪಶುಪತಿ ನನಗೆ ಮಾಡಿಕೊಟ್ಟಿದ್ದ ಒರಟೊರಟಾದ ಮರದ ಕುದುರೆ ಎಷ್ಟೋ ವಾಸಿ. ಕುದುರೆಗೆ ನಾನು ಪ್ರತಿನಿತ್ಯ ಮೈ ತೊಳೆಸುತ್ತಿದ್ದೆ. ಆದರೆ ಅಮ್ಮ ಏನೂ ಅನ್ನುತ್ತಿರಲಿಲ್ಲ. ಚೀಚು ಒಂದು ದಿನ ತನ್ನ ಮೋಟಾರಿಗೂ ಮೈ ತೊಳೆಯಲು ನನ್ನೊಡಗೂಡಿದಾಗ ಅಜ್ಜಿ ಕೂಗಿದ್ದರು.

'ಚೀಚಾ, ಬೇಡಾ ಬಾ ಇಲ್ಲಿ. ಮಾಮಿ ನಾಲ್ಕು ರೂಪಾಯಿ ತೆತ್ತು ಮೋಟಾರು ತಂದಿದಾಳೆ. ನೀರಲ್ಲಿ ತೊಳೆದರೆ ಹಾಳಾಗಿ ಹೋಗುತ್ತೆ.'

ಪಶುಪತಿ ಮರದ ಕುದುರೆಯನ್ನು ನನಗೆ ಪುಕ್ಕಟೆಯಾಗಿ ಮಾಡಿಕೊಟ್ಟಿದ್ದ. ಅದನ್ನು ನಾನು ಎಲ್ಲೆಂದರೆ ಅಲ್ಲಿ ಬಿಸಾಡುತ್ತಿದ್ದೆ. ಆದರೆ ನಾಲ್ಕು ರೂಪಾಯಿನ ಮೋಟಾರು ಬಹು ಸೂಕ್ಷ್ಮ—ಶ್ರೀಮಂತರ ಮನೆಯ ಹುಡುಗಿಯರಂತೆ.

ಮತ್ತೊಂದು ದಿನ ಚೇಚು ಆಡುತ್ತಿದ್ದ ಮೋಟಾರನ್ನು ವಠಾರದ ಅಂಗಳದಲ್ಲೇ ಬಿಟ್ಟು ಮಲಗಲು ಹೊರಟು ಹೋಗಿದ್ದ. ರಾತ್ರಿ ಹತ್ತು ಗಂಟೆಯಲ್ಲಿ ಅಜ್ಜಿ ಮೋಟಾರನ್ನು ಜ್ಞಾಪಿಸಿಕೊಂಡು ಮೊಮ್ಮಗನನ್ನು ಶಪಿಸುತ್ತಾ ಅಂಗಳಕ್ಕೆ ಬಂದು ಹುಡುಕಾಡತೊಡಗಿದರು.

ಮಂಜುಳಾ ತಮ್ಮ ಮನೆ ಬಾಗಿಲಿನಲ್ಲಿ ನಿಂತು

'ನಾಳೆ ಬೆಳಿಗ್ಗೆ ನೋಡೋರಂತೆ. ಕತ್ತಲಾಯಿತು.' ಎಂದಾಗ ಅಜ್ಜಿ ರಾಗವಾಗಿ

'ಯಾರಾದರೂ ತಗೊಂಡು ಹೋಗಿಬಿಟ್ರೆ ಏನಮ್ಮಾ ಮಾಡೋದು? ನಾಲ್ಕು ರೂಪಾಯಿನ ಮೋಟಾರು' ಎಂದರು.

ತೆಂಗಿನ ಮರದ ಬುಡವೇ ನನ್ನ ಕುದುರೆಯ ಲಾಯ. ಆದರೂ ಅದಕ್ಕಿರಲಿಲ್ಲ ಯಾವುದೂ ಅಪಾಯ.

ನಾಲ್ಕು ರೂಪಾಯಿನ ಮೋಟಾರು ಒಂಟಿಯಾಗಿ ರಾತ್ರಿ ವಠಾರದ ಅಂಗಳದಲ್ಲಿರುವುದು ಸಾಧ್ಯವಿರಲಿಲ್ಲ—ಒಡವೆಗಳನ್ನು ಹೇರಿಕೊಂಡ ಮಗುವಿನಂತೆ.

ನನ್ನ ಕುದುರೆ ಬಿಸಿಲಿನಲ್ಲಿ ಬೇಯುತ್ತಿತ್ತು—ಮಳೆಯಲ್ಲಿ ನೆನೆಯುತ್ತಿತ್ತು—ನನ್ನ ಗೆಳೆಯ ಗೆಳತಿಯರ ಕೈಲಿ ನುಜ್ಜುಗುಜ್ಜಾಗುತ್ತಿತ್ತು.

ನಾನೀಗ ಸುಮಾರಾಗಿ ಮಾತನಾಡಲು ಕಲಿತಿದ್ದೆ. ಮಾತನಾಡುವುದನ್ನು ಕಲಿತಾಗ ನನಗೂ ಸಂಭ್ರಮ, ಮನೆಯವರಿಗೂ ಹಬ್ಬ. ನನ್ನ ಮಾತುಗಾರಿಕೆ ಕ್ರಮೇಣ ಹಳೆಯದಾಯಿತು. ಮಾತು ಕಲಿಯುವುದಕ್ಕೆ ಮುಂಚೆ ಹಿರಿಯರು ಮಾತನಾಡುವುದನ್ನು, ಬಾಯಿ ತಿರುಗಿಸುವುದನ್ನೇ ನೋಡಿ ನಾನೂ ಅನುಕರಿಸಲು ಯತ್ನಿಸುತ್ತಿದ್ದೆ. ಇತರರ ಮಾತು ನನ್ನ ಬಾಯಿಂದ ತೊದಲು ತೊದಲಾಗಿ ಹೊರಡುತ್ತಿತ್ತು. ನನ್ನ ತಾಯಿ ವಠಾರದಲ್ಲಿದ್ದವರಿಗೆಲ್ಲಾ 'ಸುಬ್ಬಿ' ಯಾಗಿದ್ದಳು. ಆದುದರಿಂದ ಆಕೆ ನನಗೂ ಸುಬ್ಬಿಯಾದಳು. ನಾನು ಎಂದೂ ಅವಳನ್ನು 'ಅಮ್ಮ' ಎಂದು ಕರೆಯಲಿಲ್ಲ. ಮಾತನಾಡುವುದು ಸುಮಾರಾಗಿ ಬಂದ ಮೇಲೆ ಸುತ್ತಮುತ್ತಲಿನ ಪದಾರ್ಥಗಳಲ್ಲಿ ನನ್ನ ಕುತೂಹಲ ಕೆರಳತೊಡಗಿತು. ನಾನು, ಉಷಾ ಹೊಸ ಹೊಸ ಸಂಶೋಧನೆ, ಸಾಹಸಕೃತ್ಯಗಳನ್ನು ಒಟ್ಟಾಗಿ ಮಾಡುತ್ತಿ

ದ್ದೆವು. ಚೀಚುವೂ ಆಗಾಗ್ಗೆ ನಮಗೆ ಸಹಾಯ ಮಾಡುತ್ತಿದ್ದ.

ಈ ಮಧ್ಯೆ ಸುಬ್ಬಿಗೆ ವಾಂತಿಯಾಗಲು ಪ್ರಾರಂಭವಾಯಿತು. ಪಠಾರದ ಬಚ್ಚಲಿನಲ್ಲಿ ಅವಳು ತಿಂದುದನ್ನೆಲ್ಲಾ ಬಗ್ಗಿಸಿ ಸಂಕಟ ಪಡುತ್ತಾ ನನಗೆ

'ಬೋಸಿಲಿಕೆ ನೀರು ತಗೊಂಡು ಬಾ' ಎಂದಳು. ನಾನು ನೀರು ತಂದು ಕೊಟ್ಟೆ. ಹತ್ತಿರದಲ್ಲಿಯೇ ನಿಂತಿದ್ದ ಅಜ್ಜಿ

'ಹೇವಾಗಿಲ್ಲ. ಏನಾದರೂ ಹೇಳಿದರೆ ಮಾಡುವ ಹಾಗಾದಳು' ಎಂದರು. ನಾನು ಕಣ್ಣು ಬಿಡುತ್ತಾ ಬಲಗೈ ಹೆಬ್ಬೆರಳು ಚೀಪತೊಡಗಿದೆ. ಅದನ್ನು ನೋಡಿ ಅಜ್ಜಿ ಹಿಂದೆ ಸರಿದು

'ಥೂ ತೆಗಿ ಕೈನ. ಒಂದೂವರೆ ವರ್ಷವಾದರೂ ಬೆರಳು ಚೀಪು ತ್ತೀಯಾ? ಎಂಜಲು, ಮಡಿ ಒಂದೂ ಇಲ್ಲ' ಎಂದರು.

ಅಜ್ಜಿಯ ದನಿಗೆ ಬೆದರಿ ನಾನು ಬಾಯಿಂದ ಬೆರಳು ತೆಗೆದು ನಿಂತೆ.

'ಆ ಬೋಸಿಲಿರೋ ನೀರಲ್ಲಿ ಕೈ ತೊಳೆದುಕೋ. ಎಂಜಲು ಇನ್ನು ಎಲ್ಲಾ ಕಡೆಯೂ ಬೆರೆಯುತ್ತೆ.'

ನನಗೆ ಎಂಜಲು ಮಡಿಯ ಶಿಕ್ಷಣ ಕೊಟ್ಟು ಅಜ್ಜಿ ಸುಬ್ಬಿಯ ಕಡೆ ತಿರುಗಿ 'ಎಷ್ಟು ತಿಂಗಳಾಯಿತು' ಎಂದು ಪ್ರಶ್ನಿಸಿದರು.

'ಮೂರಾಯಿತು.'

'ಈ ಸಲವಾದರೂ ದೇವರ ದಯದಿಂದ ಗಂಡಾದರೆ ಸಾಕು.'

ವಾಂತಿ ಮಾಡಿ ಬಳಲಿದ್ದ ಸುಬ್ಬಿಗೆ ಒಬ್ಬಳೇ ಒಳಗೆ ಹೋಗುವುದಾಗುಲಿಲ್ಲ. ಅಜ್ಜಿ ಮಡಿಯಲ್ಲಿದ್ದುದರಿಂದ ಮನುಷ್ಯ ಮಾತ್ರದವರನ್ನು ಮುಟ್ಟುವ ಹಾಗಿರಲಿಲ್ಲ. ಅವರು ಯಾವಾಗ ಮೈಲಿಗೆ ಮುಟ್ಟುತ್ತಿದ್ದರೋ ಆ ಬ್ರಹ್ಮನಿಗೇ ಗೊತ್ತು. ಆಟದ ಉತ್ಸಾಹದಲ್ಲಿ ನಾವು ಕುಣಿದಾಡುವಾಗ ಅಜ್ಜಿ

'ದೂರ—ದೂರ, ನಾನು ಮಡಿ' ಎಂದು ನಮ್ಮನ್ನು ಗದರುತ್ತಿದ್ದರು. ಹಿತ್ತಾಳೆಯ ಚೆಂಬೊಂದರಲ್ಲಿ ನೀರು ತುಂಬಿಕೊಂಡು ತಾವು ಹೆಜ್ಜೆಯಿಡಬಹುದಾದ ಕಡೆಗಳಲ್ಲೆಲ್ಲಾ ಮೊದಲು ನೀರು ಚಿಮುಕಿಸಿಕೊಂಡು ನಂತರ ಕಾಲಿಡುತ್ತಿದ್ದರು.

ಮಂಜುಳಾ ಅಜ್ಜಿಯ ಮಡಿಯನ್ನು ಹಾಸ್ಯ ಮಾಡುತ್ತಿದ್ದಳು. ಮಂಜುಳೆಯೆಂದರೆ ಅಜ್ಜಿಗೆ ಸ್ವಲ್ಪ ವಿಶ್ವಾಸ. ಆದುದರಿಂದ ಮಂಜುಳಾ ಅಜ್ಜಿಯನ್ನು ಎದುರಿಗೇ ಹಾಸ್ಯ ಮಾಡುತ್ತಿದ್ದಳು.

'ಅಲ್ಲ ಅಜ್ಜಿ, ನಲ್ಲೀಗೆ ಹುಳಿ ಹಾಕಿದರೆ ನೀರು ಮಡಿಯಾಯ್ತೋ, ನಲ್ಲಿ ಮಡಿಯಾಯ್ತೊ?'

'ಎರಡೂ ಮಡಿಯಾದ ಹಾಗೆ.'

'ನಲ್ಲಿ ಮಡಿಯಾಯಿತು. ನೀರು ಹೇಗೆ ಆಯಿತು? ನೀವು ಹುಳಿ ಹಾಕಿದ್ದು ನೀರಿಗೇನಲ್ಲ. ನಲ್ಲೀಗೆ ತಾನೇ? ಈ ಪೈಪಿಗೆ ನೀರು ತಿರುಗಿಸಿದವರು ಯಾವ ಜಾತಿಯೋ ಏನೋ?'

ಆಗ ಅಜ್ಜಿ ರೇಗುತ್ತಿದ್ದರು.

'ಮುದುಕೀನ ಯಾಕೆ ಗೋಳಾಡಿಸುತ್ತೀಯ? ನಾನು ಋಷಿ ಪಂಚಮಿ ಮಾಡಿದೀನಿ. ಆದ್ದರಿಂದ ಸ್ವಲ್ಪವೂ ಆ ವ್ರತ ಕೆಡಬಾರದು.'

ಆ ವಠಾರದ ತುಂಬಾ ಹೆಂಗಸರು, ಹುಡುಗಿಯರಿದ್ದುದರಿಂದ ತಿಂಗಳಲ್ಲಿ ಮೂವತ್ತು ದಿನವೂ ಮೂರು ದಿನದ ರಜದವರು ಯಾರಾದರೂ ಇರುತ್ತಿದ್ದರು. ಆಗ ಬೆಳಗಿನ ಹೊತ್ತು ಹಿಂಭಾಗದಲ್ಲಿದ್ದ ನಲ್ಲಿಯ ಬಳಿಗೆ ಅಜ್ಜಿ ಬರುವುದೆಂದರೆ ದೊಡ್ಡ ಸಂಭ್ರಮ. ಅಜ್ಜಿ ಮುಚ್ಚಿದ ಬಾಗಿಲಿನ ಹಿಂದೆ ನಿಂತು

'ಹೋದ್ಲೇನೇ ಅವಳು ಒಳಗೆ. ನಾನು ನಲ್ಲಿ ಹತ್ತಿರ ಇರುವವರೆಗೆ ಅವಳಿಗೆ ಒಳಗೇ ಇರೋಕೆ ಹೇಳು. ಕಿಟಕಿಬಾಗಿಲಿನಿಂದ ಇಣಕಬೇಡ ಎಂದು ಹೇಳು. ಗಟ್ಟಿಯಾಗಿ ಮಾತನಾಡಬಾರದು. ಅವಳ ಸದ್ದು ನನ್ನ ಕಿವಿ ಮೇಲೆ ಬಿದ್ದರೆ ಪುನಃ ಸ್ನಾನ ಮಾಡಬೇಕಾಗತ್ತೆ. ನಾನು ಸ್ನಾನ ಮಾಡಿ ಒಗೆದ ಮಡಿ ಸೀರೆ ಇಲ್ಲೇ ಕಟ್ಟಿರ್ತೀನಿ. ಅದನ್ನು ಒಳಗೆ ತಗೊಂಡು ಹೋಗೋವರೆಗೂ ಅವಳು ಹೊರಗೆ ಬರಲೇ ಬಾರದು' ಎನ್ನುತ್ತಿದ್ದರು.

ಮಂಜುಳಾ ಮಾತಿಗೆ ಮೊದಲುಮಾಡುತ್ತಿದ್ದಳು.

'ಮಾತನಾಡಿದರೆ ಏನಾಗತ್ತೆ? ಹೋಗಲಿ ನೀವು ಪರಸ್ಪರ ಒಬ್ಬರನ್ನೊಬ್ಬರು ನೋಡೋದು ಬೇಡ. ಆದರೆ ನಿಮ್ಮ ಸೀರೆ ಕಟ್ಟಿದ್ದರೂ ಅವಳ್ಯಾಕೆ ಹೊರಗೆ ಬರಬಾರದು? ಅವಳನ್ನ ಸೀರೆ ಕಡೆ ನೋಡಬೇಡ ಎಂದ

ರಾಯಿತು. ನಿಮ್ಮ ಸೀರೆಗೇನೂ ಕಣ್ಣಿಲ್ಲ ಅವಳನ್ನ ನೋಡೋಕೆ....'

'ನಿನ್ನ ಕೈಲಿ ಮಾತನಾಡೋರಿಗೆ ಬುದ್ಧಿ ಇಲ್ಲ.'

'ಹಾಗಲ್ಲ ಅಜ್ಜಿ. ನಾನೂ ಸ್ವಲ್ಪ ಈ ವಿಷಯಾನೆಲ್ಲಾ ಸರಿಯಾಗಿ ತಿಳಿದುಕೊಳ್ಳೋಣಾಂತ. ನಾಳೆ ನಾನು ಋಷಿಪಂಚಮಿ ಮಾಡಿದರೆ ಇನೆಲ್ಲಾ ಸರಿಯಾಗಿ ತಿಳ್ಕೋಬೇಕಲ್ಲ?'

'ನನಗೆ ಒಳಗೆ ಕೆಲಸ ಇದೆ. ಆಮೇಲೆ ಈ ವಿಷಯಾನ ನಿಧಾನ ವಾಗಿ ಚರ್ಚೆ ಮಾಡೋಣ' ಎನ್ನುತ್ತಿದ್ದರು ಅಜ್ಜಿ.

ಮನೆಯಲ್ಲಿ 'ಮುಸುರೆ' ಯ ಹಾವಳಿಯಂತೂ ಅಸಾಧ್ಯವಾಗಿತ್ತು. ಉಪ್ಪು ಬೆರೆತಿದ್ದ ಪ್ರತಿಯೊಂದೂ ಅವರ ದೃಷ್ಟಿಯಲ್ಲಿ ಮುಸುರೆ.

ಒಂದು ಸಲ ಅಜ್ಜಿಯ ಮನೆಯವರೆಲ್ಲಾ ಎಲ್ಲೋ ಹೋಗಿದ್ದರು. ಆಗ ದೂರದ ನೆಂಟನೊಬ್ಬ ಬಂದಿದ್ದನಂತೆ. ಅಜ್ಜಿ ಅವನಿಗೆ ಅವಲಕ್ಕಿ ಕೊಟ್ಟು ಉಪಚರಿಸಿದ್ದರು. ಅವನು ಅವಲಕ್ಕಿ ತಿಂದು ಎಲೆಯನ್ನು ಬಿಸಾಡಿ ಹೊರಟು ಹೋಗಿದ್ದ. ಮನೆಗೆ ಅಪರೂಪವಾಗಿ ಬಂದವನಿಗೆ 'ಗೋಮೆ ಇಟ್ಟು ಹೋಗು ಮನೆಯಲ್ಲಿ ಯಾರೂ ಇಲ್ಲ' ಎಂದು ಹೇಳು ವುದು ಹೇಗೆ? ಅವನು ಹೋದ ಮೇಲೆ ಅಜ್ಜಿಗೆ ಅವನು ತಿಂದ ಸ್ಥಳದ ಸುತ್ತಲೂ ನೀರಿನ ಪರಿವೇಶ ಕಟ್ಟುವುದೇ ಒಂದು ಕೆಲಸವಾಯಿತು. ಆ ನೀರು ಐದೈದು ನಿಮಿಷಕ್ಕೆ ಒಣಗಿ ಹೋಗುತ್ತಿತ್ತು. ಅಜ್ಜಿ ಪಕ್ಕದಲ್ಲೊಂದು ಥಾಲಿಯಿಟ್ಟುಕೊಂಡು ಮತ್ತೆ ಮತ್ತೆ ನೀರಿನಿಂದ ತಿಂದ ಜಾಗವನ್ನು ಗುರುತು ಮಾಡುತ್ತಿದ್ದರು. ತಾವು ಎದ್ದು ಹೊರಗೆ ಹೋಗಿ, ಗುರುತು ಮಾಡಿದ್ದ ನೀರು ಆರಿ ಹೋದರೆ ಆಮೇಲೆ ಆ ಸ್ಥಳ ಯಾವುದು ಎಂದು ಕಂಡು ಹಿಡಿಯುವುದು ಹೇಗೆ? ಅಜ್ಜಿ ಮಡಿಯಲ್ಲಿದ್ದುದರಿಂದ ಅವರು ಗೋಮೆಯಿಡುವ ಹಾಗಿಲ್ಲ. ಥಾಲಿಯಲ್ಲಿದ್ದ ನೀರೇನೋ ಮಡಿಯದೇ. ಆದರೆ ತಿಂದು ಹೋದವನು ಹಡಿ ಮೈಲಿಗೆಯಲ್ಲಿದ್ದನಲ್ಲ!

ಅಜ್ಜಿಗಂತೂ ಎದ್ದು ಎದ್ದು ನೀರಿನ ಪರಿವೇಶ ಕಟ್ಟಿ ಸೊಂಟವೆಲ್ಲಾ ನೋಯತೊಡಗಿತ್ತು.

ಅಷ್ಟರಲ್ಲಿ ಮಂಜುಳಾ ಅಜ್ಜಿಯ ಮನೆಗೆ ಹೋದಳು. ಅಜ್ಜಿ ಬೆಟ್ಟದ ಹೊರೆ ಕಡಿಮೆಯಾದಂತೆ

'ಸನ್ನ. • ಬಾಮ್ಮ ತಾಯಿ, ಬಾ. ನನ್ನ ಸೊಂಟವೆಲ್ಲಾ ಹಾಳಾಗಿ ಹೋಯಿತು....'

ಮಂಜುಳಾ ಗಾಬರಿಯಾಗಿ 'ಯಾಕಜ್ಜಿ. ಎಲ್ಲಾದರೂ ಬಿದ್ದು ಸೊಂಟಕ್ಕೆ ....'

'ಅದೇನಿಲ್ಲಮ್ಮ. ನೋಡು ಅಲ್ಲಿ ಸ್ವಲ್ಪ ಗೋಮೆಯಿಟ್ಟು ಬಿಡು.'

'ಎಲ್ಲಿ ಅಜ್ಜಿ ?'

'ಈಗ ತಾನೇ ಗುರುತು ಮಾಡಿದ್ದೆ. ಏನು ಹಾಳು ನೆಲವೋ. ಒಂದು ಥಾಲಿ ನೀರನ್ನು ನೆಲ ಹೀರಿಬಿಟ್ಟಿದೆ. ಅದೇ ಅಲ್ಲೆ........ಮುಸುರೆ ಯಾಗಿದೆ. ಗೋಮೆಯಿಟ್ಟು ಬಿಡು.'

ಮಂಜುಳಾಗೆ ಸನ್ನಿವೇಶ ಅರ್ಥವಾಯಿತು. ಅವಳು ಸೊಂಟದ ಮೇಲೆ ಕೈಯಿಟ್ಟು ನಗುತ್ತಾ

'ಅಜ್ಜಿ, ಗೋಮೆ ಇಡೋ ಉದ್ದೇಶ ಏನು?' ಎಂದಳು.

'ಚೂರು ಪಾರು ನೆಲದ ಮೇಲೆ ಬಿದ್ದಿರತ್ತೆ. ಇರುವೆ ಬರದೇ ಇರ ಲೀಂತ ಗೋಮೆ ಇಡಬೇಕು.'

'ಸರಿ. ಒಪ್ಕೊಂಡೆ. ಆದರೆ ಎಲ್ಲಿ ಎಂಜಲು, ಎಲ್ಲಿ ಮುಸುರೆ ಬಿದ್ದಿದೆ ಅನ್ನೋ ಗುರುತೇ ಇಲ್ಲಿಲ್ಲವಲ್ಲಾ ಆದ್ರೂ ಯಾಕೆ ಗೋಮೆ?'

ಅಜ್ಜಿಗೂ ಆ ಎಂಜಲು ಸ್ಥಳವನ್ನು ಕಾದು ಕಾದು ಸಾಕಾಗಿತ್ತು.

'ನಿನ್ನ ಕೈಲಾದರೆ ಗೋಮೆಯಿಡು. ಇಲ್ದೇ ಇದ್ರೆ ಹೋಗು. ನಾನು ಇನ್ಯಾರನ್ನಾದ್ರೂ ಕರೀತೇನೆ........'

ಮಂಜುಳ ಹೆಚ್ಚು ಮಾತನಾಡದೇ ನೀರು ತಂದು ಜಿಪುಣ ತನ್ನ ನಿಧಿ ಕಾಯುವಂತೆ ಅಜ್ಜಿ ಕಾದಿರಿಸಿದ್ದ ಆ ಸ್ಥಳವನ್ನು ನೀರಿನಿಂದ ಮಡಿ ಮಾಡಿ ದಳು.

ಮಾಡಿರಿಸಿದ್ದ ತಿಂಡಿಗಳನ್ನು ಬುಟ್ಟಿಗಳಲ್ಲಿ ತುಂಬಿ ಗೋಡೆಯ ಮೊಳೆ ಗೆ ನೇತುಹಾಕುವುದು ಅವರ ಮನೆಯ ಪದ್ಧತಿ.

ಒಂದು ದಿನ ಚಕ್ಕುಲಿ ಮಾಡಿ ಮೊಳೆಗೆ ತಗುಲಿ ಹಾಕಿದ್ದರು. ಮಾರ ನೆಯ ದಿನ ಕೋಡುಬಳೆ ಮಾಡಿ ಬುಟ್ಟಿಯಲ್ಲಿ ತುಂಬಿದ್ದರು. ಸೊಸೆ ಎಲ್ಲೋ ಹೊರಗೆ ಹೋಗಿದ್ದಳು. ಅಜ್ಜಿ ಹೊರಗೆ ಬಂದು

‘ ಸುಬ್ಬೀ ಕೊಂಚ ಬಾ’ ಎಂದರು.

ಸುಬ್ಬಿಯ ಹಿಂದೆ ಮಂಜುಳ, ನಾನು, ಉಷಾ ಎಲ್ಲರೂ ಹೋದೆವು.

‘ ಕೋಡುಬಳೆ ನೇತುಹಾಕಬೇಕಾಗಿತ್ತು. ಸ್ವಲ್ಪ ಮೊಳೆಗೆ ಗೋಮೆ ಇದ್ದೀಯಾ ? ’

‘ ಹಾಗಂದ್ರೆ ? ’ ಸುಬ್ಬಿ ಕಣ್ಣು ಬಿಟ್ಟಳು.

‘ ಅಂದರೆ ಮೊಳೆಯನ್ನು ಸೀರಿನಿಂದ ಸವರಿಬಿಡು ನಿನ್ನೆ ಆ ಮೊಳೆಗೆ ಚಕ್ಕುಲಿ ಬುಟ್ಟಿ ತಗುಲಿ ಹಾಕಿತ್ತು.’

ಚಕ್ಕುಲಿ, ಕೋಡುಬಳೆ ಎರಡೂ ಮುಸುರೆಯೇ. ಆದರೆ ಎರಡು ಮುಸುರೆ ಬೆರೆಯಬಾರದು.

ಸುಬ್ಬಿ ವಿಧೇಯಳಂತೆ ಮೊಳೆಯನ್ನು ತೊಳೆದು ಗಂಭೀರವಾಗಿ

‘ ಅಜ್ಜಿ, ಬುಟ್ಟಿ ಗೋಡೆಗೆ ಏಕವಾಗಿತ್ತಲ್ಲಾ, ಗೋಡೇನೂ ಸ್ವಲ್ಪ ತೊಳೆದು ಬಿಡಲೇ ? ’ ಎಂದಳು.

ಮಂಜುಳಾ ಉಕ್ಕಿ ಬರುತ್ತಿದ್ದ ನಗುವನ್ನು ಒತ್ತಿ ಹಿಡಿದಿದ್ದಳು.

‘ ಹೂ, ಹಾಗೇ ಮಾಡು ನನ್ನ ತಾಯಿ.’

‘ ಚಕ್ಕುಲಿ ಹಾಕಿದ್ದ ಬುಟ್ಟಿ ಇದಕ್ಕಿಂತ ದೊಡ್ಡದೋ ಹೇಗೆ ? ದೊಡ್ಡದಾಗಿದ್ದರೆ ಸ್ವಲ್ಪ ಅಗಲವಾಗಿ ಗೋಮೆ........’

ಅಜ್ಜಿಗೆ ಆಗ ಅವಳ ಮಾತಿನ ಅರ್ಥವಾಯಿತು.

‘ ನಿಮಗೆಲ್ಲಾ ಹಾಸ್ಯ ನನ್ನ ಮಡಿ ಅಂದರೆ. ಎಲ್ಲಾ ಆ ಮಂಜುಳಾ ಹೇಳಿಕೊಟ್ಟಿರಬೇಕು........’

ಅದೇನಾದರೂ ಇರಲಿ. ನನಗೂ, ಉಷೆಗೂ ಒಂದೊಂದು ಕೋಡು ಬಳೆ ಸಿಕ್ಕಿತು.

‘ ಇಲ್ಲಿ ತಿನ್ನ ಬೇಡಿ. ಚೂರು ಉದುರಬಹುದು. ನಿಮ್ಮನೇಗೆ ಹೋಗಿ ಏನೇನು ಅನಾಚಾರ ಬೇಕಾದರೂ ಮಾಡಿಕೊಳ್ಳಿ’ ಎಂದು ಅಜ್ಜಿ ನೂರು ಬಾರಿ ಎಚ್ಚರಿಕೆಯನ್ನಿತ್ತು ನಮ್ಮನ್ನು ಹೊರಗೆ ಕಳುಹಿಸಿದರು.

ನವರಾತ್ರಿಯ ಉತ್ಸವ ಮೈಸೂರಿಗೆ ಹೊಸ ಕಳೆಯನ್ನು ತಂದಿತು. ಮೈಸೂರು ಶೃಂಗರಿಸಿಕೊಂಡು ನವ ವಧುವಿನಂತೆ ಮೆರೆಯಿತು. ಅಪ್ಪನಿಗೆ ಸ್ಕೂಲಿಗೆ ರಜ ಆದುದರಿಂದ ಸುಬ್ಬಿಗೆ ಏನೋ ಒಂದು ಬಗೆಯ ಉತ್ಸಾಹ,

ಸಮಾಧಾನ. ಆದರೆ ಆ ಸಮಾಧಾನ ಬಹಳ ಹೊತ್ತು ಉಳಿಯಲಿಲ್ಲ.

'ಇನ್ನು ರಜ ಕಳೆಯೋವರೆಗೂ ಪರವಾಗಿಲ್ಲ. ನೀವು ಯಾವಾಗಲೂ ಮನೇಲೇ ಇರ್ತೀರಿ. ಅಲ್ವೇ?'

'ಇಲ್ಲ. ಎಕ್ಸಿಬಿಷನ್‌ಲಿ ಒಂದು ಸ್ಟಾಲ್ ನೋಡಿಕೊಳ್ಳೋ ಕೆಲಸಕ್ಕೆ ಒಪ್ಪಿಕೊಂಡಿದೀನಿ. ದಿನಕ್ಕೆ ಒಂದಕಾಲು ರೂಪಾಯಿ ಸಿಗತ್ತೆ. ಎಕ್ಸಿಬಿಷನ್ ಹದಿನೈದು ದಿನ ನಡೆಯಬಹುದು........'

ಸುಬ್ಬಿ ಏನೋ ಹೇಳಲು ಬಾಯಿ ತೆಗೆದಳು. ಕ್ಷಣದ ನಂತರ ಬೇರೆಯಾಗಿದ್ದ ತುಟಿಗಳು ಮತ್ತೆ ಒಂದಾದವು. ಗಂಟಲಿನ ಚರ್ಮ ಕೆಳಗೆ ಮೇಲಾಡಿಸಿತು.

'ಓ ಸರಿ.'

ಅಪ್ಪ ಹಗಲು, ಸಂಜೆ ಯಾವಾಗಲೂ ಮನೆಯಲ್ಲಿರುತ್ತಿರಲಿಲ್ಲ.—ಒಂದು ಸಂಜೆ ವಠಾರದ ಮನೆಯುವರೆಲ್ಲಾ ಎಕ್ಸಿಬಿಷನ್ನಿಗೆ ಹೊರಟರು. ಆದರೆ ಅವರಲ್ಲಿ ಯಾರೂ ಸುಬ್ಬಿಯನ್ನು 'ಬಾ' ಎಂದು ಕರೆಯಲಿಲ್ಲ. ಸುಬ್ಬಿಯೂ ಅವರೊಡನೆ ಹೋಗುವ ಉತ್ಸಾಹ ತೋರಲಿಲ್ಲ. ಗಂಡಸರು ಯಾರೂ ಮನೆಯಲಿಲ್ಲವಾದುದರಿಂದ ಹೆಂಗಸರೆಲ್ಲ ಮನೆಯ ಬಾಗಿಲುಗಳಿಗೆ ಬೀಗ ತಗುಲಿಸಿ ಬೀಗದ ಕೈಯನ್ನು ಸುಬ್ಬಿಯ ಕೈಗಿತ್ತು 'ಮನೆ ಕಡೆ ಜೋಪಾನ' ಎಂದು ಹೇಳಿದರು. ಮಂಜುಳಾ ಉಷೆಗೆ ಅಲಂಕರಿಸಿ ತಾಯಿ ತಂಗಿಯರೊಡನೆ ವಸ್ತುಪ್ರದರ್ಶನಕ್ಕೆ ಹೊರಟಿದ್ದಳು. ಸಿಲ್ಕ್ ಫ್ಯಾಕ್ಟರಿಯಲ್ಲಿ ಕೆಲಸ ದೊರೆಕಿಸಿಕೊಂಡಿದ್ದ ಮಂಜುಳೆಯನ್ನು ತಾಯಿ ಈಗ ಗೌರವದಿಂದ ಕಾಣತೊಡಗಿದ್ದರು. ಸ್ವಂತ ದುಡಿಮೆಯ ಅನ್ನ ತಿಂದು ಮಂಜುಳಾ ಕೆಂಪು ಕೆಂಪಾಗಿ ಚೆನ್ನಾಗಿ ಕಾಣುತ್ತಿದ್ದಳು. ಮಂಜುಳಾ ತನ್ನ ಮನೆಯ ಬೀಗದ ಕೈ ಕೊಟ್ಟು 'ಪರವಾಗಿಲ್ಲವೇನೇ?' ಎಂದಳು ಪಿಸುಮಾತಿನಲಿ.

ಉತ್ತರರೂಪವಾಗಿ ಸುಬ್ಬಿ ನಕ್ಕಳು.

ವಠಾರ, ರಜಾ ದಿನದ ಶಾಲೆಯಂತೆ ನಿಶ್ಶಬ್ದವಾಯಿತು.

ಸುಬ್ಬಿ ಒಳಗೆ ಹೋದಳು. ನಾನು ಮರದ ಕುದುರೆಯೊಡನೆ ಆಡ ತೊಡಗಿದೆ. ಇದ್ದಕ್ಕಿದ್ದಂತೆಯೇ ರಕ್ತವನ್ನು ಹೆಪ್ಪುಗಟ್ಟಿಸುವ ನರಳುವಿಕೆ

ಕೇಳಿಬಂತು. ನಾನು ಆಟವನ್ನು ನಿಲ್ಲಿಸಿ ಒಳಗೆ ಹೋದೆ. ಸುಬ್ಬಿ ನೆಲದ ಮೇಲೆ ಉರುಳಾಡುತ್ತಿದ್ದಳು.

'ಅಜ್ಜಿ........ಅಜ್ಜೀ........ಕರಿ........ಬೇಗ.'

ನಾನು ಹೋಗಿ ಕರೆಯುವುದಕ್ಕೆ ಮುಂಚೆಯೇ ಸುಬ್ಬಿಯ ನರಳಾಟ ಕೇಳಿದ್ದ ಅಜ್ಜಿ ಬಾಗಿಲಿನಲ್ಲಿ ಬಂದು ನಿಂತಿದ್ದರು.

ಅಜ್ಜಿ ಹುಬ್ಬುಗಂಟು ಹಾಕಿಕೊಂಡು 'ಯಾರೂ ಇಲ್ವೆ ?' ಎಂದರು.

'ಇ........ಲ್ಲ.........'

'ಮಂಜುಳಾನಾದ್ರೂ ನಿಲ್ಲಿಸ್ಕೋಬೇಕಿತ್ತು. ದಿನ ತುಂಬಿದೇಂತ ತಿಳಿದೂ........'

'ಅವಳು ಮೂರು ದಿನದಿಂದ ಇವತ್ತಿನ ಸಂಜೇನ ಎದಿರು ನೋಡುತ್ತಿದ್ದಳು. ನಾನು ಹೇಗೆ........ಓಹ್........ಅಮ್ಮ........

ಅಜ್ಜಿಯ ಬಚ್ಚು ಬಾಯಿ ಮತ್ತಷ್ಟು ಬಿಗಿತುಕೊಂಡಿತು. ಸೆರಗನ್ನು ತೆಗೆದು ಸೊಂಟಕ್ಕೆ ಸಿಕ್ಕಿಸಿ ಅಜ್ಜಿ ಒಳಗೆ ಕಾಲಿಟ್ಟರು.

'ಬೇಡಾಜ್ಜಿ. ಋಷಿಪಂಚಮಿ........ಮೈಲಿಗೆ........'

ಅಜ್ಜಿ ನಿಧಾನವಾಗಿ ಹತ್ತಿರ ಬಂದರು. ಆದರೆ ಯಾವ ಮಾತೂ ಆಡಲಿಲ್ಲ.

'ಬೇಡಾ ಅಜ್ಜಿ. ಬೇರೆ ಯಾರನ್ನಾದರೂ ಕರೆಯಿರಿ. ಮಡಿ.... ಋಷಿ ಪಂಚಮಿ........ಮೈಲಿಗೆ........'

ನೆಲದಮೇಲೆ ಹೊರಳಾಡುತ್ತಿದ್ದ ಸುಬ್ಬಿಯ ಬಳಿನಿಂತು ಅಜ್ಜಿ ಬಗ್ಗಿ ನೋಡಿದರು. ಹೆಡೆಯಮೇಲೆ ಪೆಟ್ಟು ತಿಂದ ನಾಗನ, ಬಳ್ಳಿ ದೇಹದಂತೆ ಸುಬ್ಬಿಯ ದೇಹ ಬಳ್ಳಿಯಾಗಿ, ವಕ್ರವಾಗಿ, ಮುದ್ದೆಯಾಗಿ ಮತ್ತೆ ನೀಳ ವಾಗುತ್ತಿತ್ತು.

ಅಜ್ಜಿ ಹರಕಲು ಚಾಪೆಯೊಂದನ್ನು ಹಾಸಿದರು.

ಮರುಕ್ಷಣ ಎಳೆಯ ಕಂದನ ಆಕ್ರಂದನವೊಂದು ವಠಾರದಲ್ಲೆಲ್ಲಾ ಪ್ರತಿಧ್ವನಿಸಿತು. ಅಜ್ಜಿ ಮಗುವನ್ನು ಕೈಗೆ ತೆಗೆದುಕೊಂಡು

'ಸುಬ್ಬೀ, ಮುತ್ತಿನಂಥಾ ಮಗ' ಎಂದರು.

ನನ್ನಕಡೆ ತಿರುಗಿ ಹಲ್ಲಿಲ್ಲದ ಬಚ್ಚುಬಾಯಿಂದ ನಗುತ್ತಾ 'ನಿನಗೊಬ್ಬ

ತಮ್ಮ ಬಂದಿದ್ದಾನೆ.' ಎಂದರು

ಒಂದು ಗಂಟೆಯಲ್ಲಿ ನಮ್ಮ ಮನೆ ಪೂರ್ವ ಸ್ಥಿತಿಗೆ ಬಂತು. ಸುಬ್ಬಿ ದಣಿದ ಕಂಠದಲ್ಲಿ ಅಜ್ಜಿಗೆ ಏನೇನೊ ಹೇಳುತ್ತಿದ್ದಳು. ಅವರು ನನಗೆ ಅಧಿಕಾರ ವಾಣಿಯಿಂದ 'ಅದು ತೆಗೆದುಕೊಡು, ಇದುತೆಗೆದುಕೊಡು' ಎನ್ನುತ್ತಿದ್ದರು. ಅವರು ಹೇಳಿದ್ದನ್ನು ತೆಗೆಯುತ್ತಿದ್ದೆ. ಕೆಲವು ಸಲ

'ಅದಲ್ಲ, ಇದಲ್ಲ' ಎಂದು ಅಜ್ಜಿ ದೂರ ನಿಂತು ಬೆರಳಿನಿಂದ ತಮಗೆ ಬೇಕಾದ ಸಾಮಾನನ್ನು ತೋರಿಸುತ್ತಿದ್ದರು.

ಮಿನುಗುದೀಪದ ಬೆಳಕಿನಲ್ಲಿ ನಾನು ತಾಯಿಯ ಮುಖ ನೋಡಿದೆ. ಆಕೆ ಕಣ್ಣು ಮುಚ್ಚಿ ಮಲಗಿದ್ದಳು. ಪಕ್ಕದಲ್ಲಿಯೇ, ಮೊರವೊಂದರಮೇಲೆ ಮಗುವೊಂದು ಮಲುಗಿತ್ತು. ಇಷ್ಟು ಹೊತ್ತು ಇಲ್ಲದಿದ್ದ ಮಗು ಈಗ ಎಲ್ಲಿಂದ ಬಂತೋ ?

ಎಪ್ಪತ್ತೈದು ವರ್ಷ ದಾಟಿದ್ದ ಹಣ್ಣು ಮುದುಕಿ, ರಾತ್ರಿ ಎಂಟು ಗಂಟೆಯಮೇಲೆ ನಲ್ಲಿಯ ನೀರಿನಲ್ಲಿ ಸಚೇಲ ಸ್ನಾನಮಾಡಿದರು ಮೂರು ನಾಲ್ಕು ಬಾರಿ ಸ್ನಾನಮಾಡಿ ತುಳಸಿದಳ ತೆಗೆದುಕೊಂಡು ಒಳಗೆಹೋದರು. ಚಳಿಯಿಂದ ನಿರಿಗಟ್ಟಿದ್ದ ದೇಹ ತೆಂಗಿನಮರದ ಗರಿಯಂತೆ ಥರಥರನೆ ನಡುಗುತ್ತಿತ್ತು.

ಕಾಲುಗಂಟೆಯ ನಂತರ ಹೊಗೆ ಹೊರಡುತ್ತಿದ್ದ ಕಾಫಿಯ ಚಂಬನ್ನು ಹಿಡಿದು ಅಜ್ಜಿ ಸುಬ್ಬಿಯಬಳಿಗೆ ಬಂದು ಮೃದುವಾಗಿ

'ಸುಬ್ಬಿ' ಎಂದರು.

ಸುಬ್ಬಿ ಕಣ್ಣುಬಿಟ್ಟು ಅಜ್ಜಿಯಮುಖ ನೋಡಿದಳು. ಕಾಫಿಯಪಾತ್ರೆಯನ್ನು ಹಿಡಿದಿದ್ದ ಅಜ್ಜಿಯ ಕೈ ನಡುಗುತ್ತಿತ್ತು. ಸುಬ್ಬಿಯ ದೇಹ ಬೆವತುಹೋಗಿತ್ತು. ಬೆವರಿನ ಮಣಿಮಾಲೆ ಹಣೆ, ಎದೆಯಮೇಲೆ ಕಂಗೊಳಿಸುತ್ತಿತ್ತು. ಸುಬ್ಬಿ ನಾಲಿಗೆಯಿಂದ ಒಣಗಿದ ತುಟಿಯನ್ನು ಸವರಿ ಒದ್ದೆ ಮಾಡಿಕೊಂಡು ಕ್ಷೀಣವಾದ ದನಿಯಲ್ಲಿ 'ಏನು' ಎಂದಳು.

'ಕಾಫಿ ತಂದಿದೀನಿ. ಪಾತ್ರೇನೆ ಇಡ್ತೀನಿ. ನಿಧಾನವಾಗಿ ಕೊಡುವಿಯಂತೆ. ಈಗ ಸ್ವಲ್ಪ ಕುಡಿ.'

ಕಾಫಿಯ ಹೆಸರು ಕೇಳಿ ಸುಬ್ಬಿಯ ಒಣಗಿದ್ದ ಮುಖದ ಮೇಲೆ

ಕೃತಜ್ಞತೆಯ ಕಾಂತಿ ಹರಡಿತು.

ಸುಬ್ಬಿ ಕಾಫಿಯನ್ನು ಕುಡಿದು ಮುಗಿಸಿ ಅಜ್ಜಿಯ ಕಡೆ ತಿರುಗಿ ಗದ್ಗದ ಕಂಠದಿಂದ

' ಅಜ್ಜಿ, ನನಗೆ ಏನು ಹೇಳಬೇಕೋ ಗೊತ್ತಾಗೋದಿಲ್ಲ ' ಎಂದಳು.

' ಏನೂ ಹೇಳಬೇಡ. ಈಗ ನಿದ್ದೆಮಾಡು. '

' ನೀವಿಲ್ಲದಿದ್ರೆ........ ನಿಮ್ಮಿಂದ........ ನೀವು........ನಿಮ್ಮ ಮಕ್ಕಳು ಮರಿ ತಣ್ಣಗೆ ಬದುಕಲಿ. '

ಅಜ್ಜಿ ನನ್ನ ಕಡೆ ತಿರುಗಿ ' ಪಾಪ ! ಮಗು ಬೆಪ್ಪುಗಟ್ಟಿಹೋಗಿದೆ. ನಮ್ಮನೇಗೆ ಬಾ. ಅನ್ನ ಹಾಕುತ್ತೀನಿ ' ಎನ್ನುತ್ತಾ ನನ್ನನ್ನು ತಮ್ಮ ಮನೆಗೆ ಕರೆದುಕೊಂಡು ಹೊದರು.

ರಾತ್ರಿ ಒಂಭತ್ತೂವರೆ ಗಂಟೆಗೆ ವಠಾರದ ಜನರೆಲ್ಲಾ ಹಿಂತಿರುಗಿ ಬಂದರು. ಹೊಸ ಜೀವಿಯೊಂದು ತಮ್ಮ ವಠಾರದಲ್ಲಿರುವುದನ್ನು ನೋಡಿ ಎಲ್ಲರೂ ಬೆರಗಾದರು. ಅದೂ ಹೆರಿಗೆ ಮಾಡಿದವರು ಅಜ್ಜಿಯೆಂದು ತಿಳಿದ ಮೇಲೆ ಮಂಜುಳಾ ದುರ್ಬಲಳಾಗಿ ಹೊಸಲಿನಮೇಲೆ ಕುಸಿದು ಕುಳಿತಳು.

ಮೈಲಿಗೆ ಮುಟ್ಟಿಕೊಳ್ಳಬೇಕೆಂದು, ಎಂಜಲನ್ನು ಇತರರು ತುಳಿದಾರೆಂದು ಗಂಟೆಗಟ್ಟಲೆ ಮುಸುರೆ ಜಾಗವೊಂದನ್ನು ಕಾದು ಕುಳಿತ ಅಜ್ಜಿಯೇ ಈಗ ಹೀಗೆ........ ?

'ಸುಬ್ಬಿ, ಇನ್ನು ನಾನು ಬದುಕಿರುವವರೆಗೆ ಅಜ್ಜೀನ ಅವರ ಮಡಿ ವಿಷಯ ಹಾಸ್ಯ ಮಾಡೋದಿಲ್ಲ. ಅವರು ಏನಾದರೂ ಮಾಡಿಕೊಳ್ಳಲಿ. ಅವರಿಗೆ ಮಾನವ ಹೃದಯವಿದೆ. ಅಷ್ಟು ಸಾಕು ' ಎಂದಳು ಬಿಗಿದ ಕಂಠದಿಂದ ಮಂಜುಳ.

ಮಾರನೆಯ ಬೆಳಗ್ಗೆ ಅಪ್ಪ ಅಜ್ಜಿಗೆ ' ನಿಮ್ಮಿಂದ ತುಂಬಾ ಸಹಾಯವಾಯಿತು ಅಜ್ಜಿ, ನೀವಿಲ್ಲದಿದ್ದರೆ ಅವಳ ಗತಿ ಏನಾಗ್ತಿತ್ತೋ ? ವ್ರತ, ಗಿತ ಮಾಡಿದೋರು ನೀವು........ ಅಂಥಾದ್ರಲ್ಲೂ........ '

' ಬಿಡಪ್ಪ. ಏನು ಮಾತೂಂತ ಆಡ್ತೀಯ? ಅವಳು ಪ್ರಸವ ವೇದನೆ ಅನುಭವಿಸುತ್ತಿರುವಾಗಲೂ ನನ್ನ ಮಡಿಯೇ? ಏನೋ ಹುಟ್ಟಿದಾಗಿನಿಂದ ಬಂದಿದ್ದು ಅದು. ಈಗ ಬಿಡೋಕೆ ಆಗೋದಿಲ್ಲ. ಆದರೆ ನೋವು

ಅನುಭವಿಸುತ್ತಾ ಇರೋವಾಗ ಸಂತಯಿಸೋದು ಧರ್ಮ'

ಎಂದು ಅಜ್ಜಿ ಅಲ್ಲಿಗೆ ಆ ವಿಷಯುವನ್ನು ಮರೆಸಿಬಿಟ್ಟರು. ಆದರೆ ವಠಾರದ ಮಹಿಳಾಮಂಡಳಿಗೆ ಅಜ್ಜಿಯಲ್ಲಿನ ವಿಶ್ವಾಸ ಹೆಚ್ಚಾಯಿತು.

ನನ್ನ ತಮ್ಮ ಗುರುರಾಜ ಹುಟ್ಟಿದ ಮೇಲೆ ನನ್ನ ಎರಡು ವರ್ಷದ ಬದುಕು ಒಮ್ಮಿಂದೊಮ್ಮೆಗೆ ಬದಲಾಯಿಸಿತು. ಈ ಬಗೆಯ ಬದಲಾವಣೆಯನ್ನು ನಾನು ಕನಸಿನಲ್ಲಿಯೂ ನಿರೀಕ್ಷಿಸಿರಲಿಲ್ಲ.

ನಾನು ಹುಟ್ಟಿದಾಗ ಹೆಣ್ಣಾಯಿತೆಂದು ನಿರಾಶೆಗೊಂಡಿದ್ದ ಸುಬ್ಬಿ, ಅಪ್ಪ ಗುರುವಿನ ಜನನದಿಂದ ಹರ್ಷಿತರಾಗಿದ್ದರು. ಸುಬ್ಬಿ ತಾನು ಮೊದಲೇ ಮನಸ್ಸಿನಲ್ಲಿ ಮಾಡಿಕೊಂಡಿದ್ದಂತೆ ಗುರುಗಳ ಹೆಸರನ್ನು ಮಗನಿಗಿರಿಸಿದ್ದಳು.

ಮೊದಲು ಮನೆಯಲ್ಲಿ ನನಗಿದ್ದ ಸ್ಥಾನ ನಿಧಾನವಾಗಿ ಹಿಂದಕ್ಕೆ ಸರಿಯಿತು.

ಈಗ ಪ್ರತಿಯೊಂದೂ ಗುರುವಿಗೆ ಮೊದಲಾಗಬೇಕು. ಅವನದಾಗಿ ಉಳಿದ ನಂತರ ನನ್ನದಾಗಬೇಕು.

ಈಗ ನಾನು ಮೊದಲಿನಂತೆ ಸುಬ್ಬಿಯ ತೊಡೆಯಮೇಲೆ ತಲೆಯಿಟ್ಟು ಮಲಗುವುದಾಗುತ್ತಿರಲಿಲ್ಲ. ನಾನು ಒಂದು ಗಳಿಗೆ ಮಲಗುವುದರಲ್ಲಿ ಗುರು ಎದ್ದು ಬಿಡುತ್ತಿದ್ದ.

'ಏಳು ಆ ಕಡೆ ಮಲಗಿಕೋ. ಗುರು ಎದ್ದುಬಿಟ್ಟ' ಎನ್ನುತ್ತಾ ಸುಬ್ಬಿ ನನ್ನ ತಲೆಯನ್ನು ಕೆಳಕ್ಕೆ ಸರಿಸಿ ಗುರುವನ್ನು ತೊಡೆಯಮೇಲೆ ಮಲಗಿಸಿಕೊಳ್ಳುತ್ತಿದ್ದಳು. ಆಗ ನನಗೆ ಗುರುವಿನ ಮೇಲೆ ತುಂಬಾ ಕೋಪ ಬರುತ್ತಿತ್ತು. ಒಂದೊಂದು ಸಲ

'ಗುರು ಬೇಡ. ನನ್ನೇ ಮಲಗಿಸಿಕೋ' ಎಂದು ಹಠ ಮಾಡಿದ್ದೂ ಉಂಟು. ಆಗ ಸುಬ್ಬಿ ನನ್ನನ್ನು ಬೈಯುತ್ತಿದ್ದಳು.

'ಏನು ಹೆಣ್ಣೇ ನೀನು! ತಮ್ಮನ್ಮೇಂತ ಸ್ವಲ್ಪವೂ ಪ್ರೀತಿ ಬೇಡವೇ?'

ಗುರುವಿಗೆ ಮಡಿಯಾದ ನಂತರ ನನಗೆ ಮಡಿ, ಗುರುವಿಗೆ ಹಾಲು ಕುಡಿಸಿದನಂತರ ನನಗೆ ಊಟ!

ಅಪ್ಪನಿಗೂ ಗುರುವಿನಲ್ಲೇ ಹೆಚ್ಚು ಆಸಕ್ತಿಯಿತ್ತು. ಸಂಜೆಯ ವಾಕಿಂಗಿಗೆ ಗುರುವನ್ನು ಮಾತ್ರ ಕರೆದುಕೊಂಡು ಹೋಗುತ್ತಿದ್ದರು.

ಕೆಲವು ಸಲ ' ನಾನೂ ಬರ್ತೀನಿ' ಎಂದು ನಾನು ರಗಳೆ ಮಾಡುತ್ತಿದ್ದೆ ಆಗ ಅಪ್ಪ

' ನಾನು ಹೇಳಿದ ಹಾಗೆ ನೀನು ಕೇಳುವ ಹಾಗಿದ್ದರೆ ಮಾತ್ರ ಕರ್ಕೊಂಡು ಹೋಗ್ತೀನಿ ' ಎಂದು ಶರತ್ತು ಹಾಕುತ್ತಿದ್ದರು.

' ಏನು ? '

' ನೀನು ಮಧ್ಯದಲ್ಲಿ ಕಾಲು ನೋಯುತ್ತೆ. ಎತ್ತಿಕೋ ಎಂದು ಹಠ ಮಾಡಬಾರದು. ಹಾಗಾದರೆ ಮಾತ್ರ ನಮ್ಮ ಜೊತೆ ಬಾ.'

ನಾನೊಬ್ಬಳೇ ಇದ್ದಾಗ ಅಪ್ಪ ಈ ರೀತಿಯ ಶರತ್ತುಗಳನ್ನು ನನಗೆ ಹಾಕುತ್ತಿರಲಿಲ್ಲ. ಆಗ ಅವರೊಡನೆ ವಾಕಿಂಗಿಗೆ ಹೊರಟಾಗ ನನ್ನನ್ನೂ ಎತ್ತಿಕೊಂಡೇ ಹೊರಡುತ್ತಿದ್ದರು. ಈಗ ಮಾತ್ರ ಅವರಿಗೆ ಗುರು ಬೇಕು, ನಾನು ಬೇಡ.

ನಾನು ಮತ್ಸರ, ಕೋಪದಿಂದ ಬದಲು ಹೇಳದೇ ಆಳುತ್ತಾ ಹಠ ಮಾಡುತ್ತಿದ್ದೆ. ಆಗ ಸುಬ್ಬಿ ಬಂದು ನನಗೆ ಎರಡೇಟು ಕೊಟ್ಟು ಒಳಗೆ ಎಳೆದುಕೊಂಡು ಹೋಗುತ್ತಿದ್ದಳು. ಗುರು ಅಪ್ಪನ ಬೆನ್ನಿನ ಮೇಲೆ ಸವಾರಿ ಮಾಡುತ್ತಾ ಸುತ್ತಾಡಿ ಬರುತ್ತಿದ್ದ.

ಗುರು ನನ್ನ ಪ್ರತಿಸ್ಪರ್ಧಿಯಾದರೂ ಅವನಲ್ಲಿ ನನಗೆ ತುಂಬಾ ಪ್ರೀತಿಯಿತ್ತು. ಅವನ ದುಂಡು ಮುಖ, ಹಾಲುಗೆನ್ನೆ, ಹೊಳಪುಗಣ್ಣು, ಗುಂಗರು ಕೂದಲು, ತಿಳಿಯಾದ ದೇಹಕಾಂತಿ ನನ್ನಲ್ಲಿ ಕೋಮಲ ಭಾವನೆಯನ್ನು ಹುಟ್ಟಿಸುತ್ತಿದ್ದವು. ಗುರುವಿನೊಡನೆ ಆಡಲು ನನ್ನ ಮನಸ್ಸು ತವಕಿಸುತ್ತಿತ್ತು. ಅವನು ಮಲಗುತ್ತಿದ್ದ ತೊಟ್ಟಿಲನ್ನು ತೂಗಲು ನನ್ನ ಕೈಗಳು ಆಸೆಪಡುತ್ತಿದ್ದವು. ಆದರೆ ಸುಬ್ಬಿಗೆ ನನ್ನಲ್ಲಿ ನಂಬಿಕೆಯಿರಲಿಲ್ಲ. ಗುರುವಿನ ಬಳಿಗೆ ಹೋದೊಡನೆ

' ಈ ಕಡೆ ಬಾ. ನೀನೋ ಒರಟು ಹುಡುಗಿ. ಅವನು ನಿನ್ನ ಒರಟಾಟ ತಡೆಯಲಾರ ' ಎನ್ನುತ್ತಿದ್ದಳು.

ಅವನು ಅಳುವಾಗ ತೊಟ್ಟಿಲ ಹಗ್ಗ ಕೈಗೆ ತೆಗೆದುಕೊಂಡೊಡನೆ ' ಸಧ್ಯ. ನೀನು ಸುಮ್ಮನಿದ್ದರೆ ಆದೀತು. ಇನ್ನು ಅವನನ್ನ ಬೀಳಿಸಿ ಆದೊಂದು ಉಪಕಾರ ಮಾಡಬೇಡ ' ಎಂಬ ಮಾತು ಬಾಣದಂತೆ ಹಾರಿ

ಬಂದು ನನ್ನ ಕಿವಿಯಲ್ಲಿ ನಾಟುತ್ತಿತ್ತು.

ಆಗ ಮಾತ್ರ ನನಗೆ ಗುರುವಿನ ಮೇಲೆ ಕೋಪ ಬರುತ್ತಿತ್ತು. ಗುರು ವೇನು ದೇವಲೋಕದಿಂದ ಬಂದವನೇನೋ ?

ಗುರುವನ್ನು ನಾನೂ ಪ್ರೀತಿಸುತ್ತಿದ್ದೆ. ಆದರೆ ಈ ಪಕ್ಷಪಾತವನ್ನು ಮಾತ್ರ ನನ್ನಿಂದ ಸಹಿಸುವುದಾಗುತ್ತಿರಲಿಲ್ಲ.

ಬಯಸಿ ಬಯಸಿ ಹುಟ್ಟಿದ ವಂಶೋದ್ಧಾರಕ ಗುರು. ಹುಟ್ಟುವುದಕ್ಕೆ ಮುಂಚೆನಿಂದಲೂ ಬೇಡವಾಗಿ ಕೊನೆಗೆ ಹೆಣ್ಣಾಗಿ ಹುಟ್ಟಿದ ನಾನು. ಸಹಜ ವಾಗಿ ದಂಪತಿಗಳ ಮನಸ್ಸು ಗುರುವಿನ ಕಡೆ ವಾಲಿತ್ತು.

ಸಾಲದುದಕ್ಕೆ ಗುರು ನನಗಿಂತಲೂ ಸುರೂಪಿ. ಗುರು ತಂದೆಯಂತೆ ಬೆಳ್ಳಗಿದ್ದ. ನಾನು ತಾಯಿಯಂತೆ ಕಪ್ಪಗಿದ್ದೆ. ಆದರೆ ಕಣ್ಣು, ಮೂಗು, ಹುಬ್ಬು, ತುಟಿ, ಮುಖದ ಮಾಟ ನಮ್ಮಿಬ್ಬರದೂ ಒಂದೇ. ತಿಳಿಬಣ್ಣ ದಿಂದಾಗಿ ಗುರು ಎಲ್ಲರಿಂದಲೂ 'ಮುದ್ದಾಗಿದಾನೆ' ಎನಿಸಿಕೊಳ್ಳುತ್ತಿದ್ದ. ಕಪ್ಪು ಬಣ್ಣದಿಂದಾಗಿ ನಾನು 'ಇದಾಳೆ ಸುಮಾರಾಗಿ' ಎನಿಸಿಕೊಂಡಿದ್ದೆ. ಗುರುವನ್ನು ನೋಡಲು ಮನೆಗೆ ಬಂದವರೆಲ್ಲಾ

'ಚೆನ್ನಾಗಿದಾನೆ, ಅಕ್ಕನ ಹಾಗೆ ಅಲ್ಲ' ಎಂದಾಗ ಸುಬ್ಬಿಯ ಮುಖ ಅರಳುತ್ತಿತ್ತು. ನನಗಿನ್ನೂ ಆಗ ಆ ಮಾತಿನ ಮಹತ್ವ ತಿಳಿಯುತ್ತಿರಲಿಲ್ಲ. ನಾನು ಬಂದವರ ಮಾತಿಗೆ ಕಿವಿಗೊಡದೇ ನನ್ನ ಚೇಷ್ಟೆಯಲ್ಲಿ ಮಗ್ನಳಾಗಿರು ತ್ತಿದ್ದೆ.

'ಆದ್ರೂ ಕಣ್ಣು, ಮೂಗು, ಬಾಯಿ ಎಲ್ಲಾ ಅವಳ ಹಾಗೆ' ಎನ್ನು ತ್ತಿದ್ಧಳು ಸುಬ್ಬಿ. ಎಷ್ಟಾಗಲಿ ತಾಯಿ ಅವಳು. ಕಲಾವಿದೆಯ ಒಂದೇ ಕುಂಚದಿಂದ ಹೊರಬಿದ್ದ ಎರಡು ಚಿತ್ರಗಳು ನಾನು, ಗುರು. ನನ್ನನ್ನು ಚಿತ್ರಿಸುವಾಗ ಅವಳ ಕೈ ಅಷ್ಟು ಪಳಗಿರಲಿಲ್ಲವೇನೋ ?

ಕೆಲವು ಬಾರಿ ಸುಬ್ಬಿ 'ಗಂಡುಮಗುವಿಗೇಕೆ ಬಣ್ಣ? ಇವನಿಗೆ ಬದಲು ಇವಳಿಗಾದರೂ ಈ ಬಣ್ಣ ಬಂದಿದ್ದರಾಗಿತ್ತು' ಎನ್ನುತ್ತಿದ್ದಳು. ಆದರೆ ಮೂರನೆಯವರು ನನ್ನ ರೂಪನ್ನು ಟೀಕಿಸಿದಾಗ ಸುಬ್ಬಿ ಅವರ ಮೇಲೆ ತಿರುಗಿಬಿದ್ದು

'ಕಪ್ಪಾದರೇನಂತೆ ? ಲಕ್ಷಣವಾಗಿದಾಳೆ' ಎನ್ನುತ್ತಿದ್ದಳು.

ನನಗೆ ಮಾತ್ರ ಇತರರ ಮಾತು ಕೇಳಿ ಸುಖ, ದುಃಖ ಯಾವುದೂ ಆಗುತ್ತಿರಲಿಲ್ಲ. ಆಗ ನಾನು ಮೂರು ವರ್ಷದ ನಿರ್ಲಿಪ್ತೆ.

ನನಗೆ ಸುಮಾರು ಮೂರೂವರೆ ವರ್ಷಗಳಾಗಿದ್ದಾಗ ಅಜ್ಜಿಯ ವಠಾರಕ್ಕೆ ಮತ್ತೊಂದು ಸಂಸಾರ ಬಂತು. ಹಳೆಯ ಸಂಸಾರಗಳಿಗೆ ಹೊಸದಾಗಿ ಬಂದು ಸೇರಿದ ಸಂಸಾರದಲ್ಲಿ ಯಾವ ಕುತೂಹಲವೂ, ಆಸಕ್ತಿಯೂ ಇರಲಿಲ್ಲ. ಅಜ್ಜಿಯ ವಠಾರಕ್ಕೆ ಬರಬೇಕಾದರೆ ಇನ್ನೆಂತಹವರು ಬರುತ್ತಾರೆ? ಯಾರೋ ನಮ್ಮಂತೆಯೇ ಪರದೇಶಿ ಎಂದು ಎಲ್ಲರೂ ಉದಾಸೀನ ಭಾವನೆ ತಾಳಿದ್ದರು.

ಆ ಸಂಸಾರದ ಯಜಮಾನ ಜೋಯಿಸನಿಗೆ ಏನು ಕೆಲಸವಿತ್ತೋ ಅದು ಪರಮಾತ್ಮನಿಗೆ ಮಾತ್ರ ತಿಳಿದಿತ್ತು. ಜೋಯಿಸನ ಹೆಂಡತಿ ಅಂಬುಜಮ್ಮ ಮಾತ್ರ ತನ್ನ ಗಂಡನಿಗೆ ಹಲವು ಬಗೆಯ ಕೆಲಸಗಳಿರುವುದಾಗಿ ಹೇಳಿಕೊಳ್ಳುತ್ತಿದ್ದರು. ಜೋಯಿಸರು ಮಾತ್ರ ಮನೆಯಲ್ಲಿಯೇ ಹೆಚ್ಚು ಹೊತ್ತು ಕಾಲ ಕಳೆಯುತ್ತಿದ್ದರು. ಮಂಜುಳಾ ಆಗಾಗ್ಗೆ ಕೀಟಲೆಗಾಗಿ

'ಅಂಬುಜಮ್ಮ, ಯಜಮಾನರು ಮನೇಲೇ ಇರುವ ಹಾಗಿದೆ. ಎಲ್ಲೂ ಕೆಲಸಕ್ಕೆ ಹೋಗಲಿಲ್ಲವೇ ?' ಎಂದು ಒಂದು ಬಾರಿ ಕೇಳಿದಾಗ ಆಕೆ

'ಅವರು ಮನೆಯಲ್ಲಿಯೇ ಕೆಲಸ ಮಾಡ್ತಿದಾರೆ ಕಣ್ರಿ. ವಿಜಯ ಪ್ರೊಡಕ್ಷನ್ಸ್‌ರವರು ತಯಾರಿಸುತ್ತಿರುವ ಚಿತ್ರ 'ದುರಾದೃಷ್ಟ' ಕತೆಯನ್ನು ನಮ್ಮ ಯಜಮಾನರು ಬರೆಯುತ್ತಿದ್ದಾರೆ' ಎಂದರು.

ಮಂಜುಳ ನಿಟ್ಟುಸಿರೊಡನೆ 'ನಮ್ಮ ದುರಾದೃಷ್ಟ' ಎಂದಳು.

'ಏನಂದಿರಿ ?'

'ಅಲ್ಲಾ, ಇಂತಹ ಎಲೆಯ ಮರೆಯ ಕಾಯಿಗಳಿರುವಾಗ ಚಿತ್ರ ತಯಾರಿಕರು ಕೆಲಸಕ್ಕೆ ಬಾರದ ಲೇಖಕರನ್ನು ಕಟ್ಟಿಕೊಂಡು ಹಾಳುಮೂಳು ತಯಾರಿಸುತ್ತಾರಲ್ಲಾಂತ ನಾನು ಹಾಗೆ ಹೇಳಿದೆ.'

ಅಂಬುಜಮ್ಮನ ಬಾಯಂಚು ಕಿವಿಯವರೆಗೆ ಹಬ್ಬಿತು.

'ನೀವು ಹೇಳೋದು ನಿಜ ಮಂಜುಳಮ್ಮ. ಆ ತಯಾರಿಕನೋ ದಿನಕ್ಕೆ ಒಂದೊಂದು ರೀತಿ ಕತೆ ಬದಲಾಯಿಸಲು ಹೇಳ್ತಾನಂತೆ' ಎಂದರು ಅಂಬುಜಮ್ಮ.

'ಈ ಕತೆ ಬರೆಯುವ ಹವ್ಯಾಸಾನ ಅದರ ಪಾಡಿಗೆ ಬಿಟ್ಟು ನಿಮ್ಮ ಯಜಮಾನರು ಚಿತ್ರದಲ್ಲಿ ನಟಿಸಲು ಯಾಕೆ ಪ್ರಯತ್ನಿಸಬಾರದು ?' ಎನ್ನುತ್ತಾ ಮಂಜುಳ ಬಾಗಿ ಅಂಬುಜಮ್ಮನ ಕಿವಿಯಲ್ಲಿ

'ನಿನ್ನೆ ನಿಮ್ಮ ಯಜಮಾನರು ವಲ್ಲಿ, ಗಿಲ್ಲಿ ಹೊದ್ದುಕೊಂಡು ತಲೆ ಬಾಚಿಕೊಂಡು ಹೊರಗೆ ಹೊರಟಾಗ ನಾನು ಎದುರಿಗೆ ಬಂದೆ. ಭರತ್‌ಭೂಷಣನನ್ನೂ, ನಿಮ್ಮ ಯಜಮಾನರನ್ನೂ ಅವಳಿ ಜವಳಿ ಎಂದೇ ಹೇಳಬಹುದು' ಎಂದಳು.

ಅಂಬುಜಮ್ಮ ನಸುನಾಚಿ

'ಸಾಕು ಬಿಡ್ರಿ ಹಾಸ್ಯ' ಎಂದರು.

'ಇರೋ ವಿಷಯ ಹೇಳಿದರೆ ಹಾಸ್ಯ ಅಂತೀರಿ. ನಿಮ್ಮ ಯಜಮಾನರ ಸ್ಥಾನ ಚಲನ ಚಿತ್ರ ಪ್ರಪಂಚದಲ್ಲಿ ಅಂಬುಜಮ್ಮ. ಅವರು ಬೆಳಕಿಗೆ ಬರದೇ ಇರೋದರಿಂದಾನೇ ಇವತ್ತು ದಿಲೀಪ್‌ಕುಮಾರ್ ಲಕ್ಷಾಧಿಕಾರಿಯಾಗಿದಾನೆ. ನಮ್ಮಲ್ಲಿ ಅಭಿನಯದ ಕಲೆಗೆ ಪ್ರೋತ್ಸಾಹವಿಲ್ಲ. ಇಲ್ಲದಿದ್ದರೆ........'

ಇಲ್ಲದಿದ್ದರೆ ಮಾತು ಎಲ್ಲಿಗೆ ಹೋಗುತ್ತಿತ್ತೋ ? ಯಾವುದೋ ಒಂದು ಸಣ್ಣ ವಿಷಯಕ್ಕೆ ನನಗೂ, ಉಷಾಗೂ ಜಗಳ ಶುರುವಾಯಿತು. ಮಂಜುಳಾ ಮಾತು ನಿಲ್ಲಿಸಿ ಉಷೆಯ ಬಿಗಿ ಹಿಡಿತದಲ್ಲಿದ್ದ ನನ್ನ ಕೂದಲಿಗೆ ಸ್ವಾತಂತ್ರ್ಯ ಕೊಡಿಸಲು ಓಡೋಡಿ ಬಂದಳು.

'ಕತ್ತೆಗಳಾ. ಜಗಳವಿಲ್ಲದೇ ಆಟ ಆಡಿಕೋಬಾರದೇ ? ಒಂದು ನಿಮಿಷ ಆಟ ಆಡೋದು, ಇನ್ನೊಂದು ನಿಮಿಷ ಕಾದಾಡೋದು.'

ಮುಗ್ಧೆ ಅಂಬುಜಮ್ಮನ ಮನಸ್ಸಿಗೆ ಬಣ್ಣ ಬಳಿದ ಮಾತಿನ ಸ್ವರ್ಗ ಅಂಗೈ ಮೇಲೆ ತೋರಿಸುತ್ತಿದ್ದಾಗಲೇ ನಾವು ಕಾದಾಡಿ ಮಾತಿನ ಗೋಪುರ ನೆಲಕ್ಕೆ ಕುಸಿಯುವಂತೆ ಮಾಡಿದ್ದರಿಂದ ಮಂಜುಳಾಗೆ ಕೋಪ ಬಂದಿತ್ತು.

ಮಾರನೆಯ ದಿನದಿಂದಲೇ ಜೋಯಿಸರ ಅಲಂಕಾರ ಜಾಸ್ತಿಯಾಯಿತು. ಅವರ ಶುಭ್ರ ವಲ್ಲಿ ಗಾಳಿ, ಬೆಳಕು ಧೂಳಿಗೆ ಸಿಕ್ಕಿ ಮಲಿನವಾಗತೊಡಗಿತು.

ಅದೊಂದು ದಿನ ನಾನು, ಗುರು ಸುಬ್ಬಿಯ ಮುಂದೆ ಆಟವಾಡುತ್ತಿ

ಳ್ದಾಗ ಮಂಜುಳಾ ಸೆರಗಿನಿಂದ ಬಾಯಿ ಮುಚ್ಚಿಕೊಂಡು ನಸುನಗುತ್ತಾ ಜೋಯಿಸರ ಮನೆಯಿಂದ ಈಚೆಗೆ ಬಂದಳು. ಅವಳನ್ನು ನೋಡಿ ಸುಬ್ಬಿ

'ಬಾ ಇಲ್ಲಿ' ಎಂದಳು.

ಮಂಜುಳಾ ಹತ್ತಿರ ಬಂದು ಬಿದ್ದು ಬಿದ್ದು ನಕ್ಕಳು.

'ಯಾಕೆ ?'

'ಮತ್ತೇ....ಮತ್ತೆ ಅಂಬುಜಮ್ಮ ಅವರ ಯಜಮಾನರದೊಂದು ಫೋಟೋ ತೋರಿಸಿದರು. 'ಬೈಜೂ ಬಾವರಾ' ಲಿ ಭರತ್‌ಭೂಷಣ್ ಹಣೆಯ ಮೇಲೆ ಮುಂಗುರುಳನ್ನು ಕೆದರಿ, ಕನಸಿನ ಕಣ್ಣುಗಳನ್ನು ಗಗನ ದತ್ತ ಹರಿಸಿ....' ಮತ್ತೆ ನಗುವಿನ ಬುಗ್ಗೆಯುಕ್ಕಿತು ಅವಳ ತುಟಿಯ ಬಿರು ಕಿನಿಂದ.

'ಮಾತು ಪೂರ್ತಿ ಮಾಡಿ ನಗಮ್ಮ.'

'ಅದೇ ಭಂಗೀಲಿ ಜೋಯಿಸರು ಫೋಟೋ ತೆಗೆಸಿಕೊಂಡಿದ್ದಾರೆ. ಅದರ ಪ್ರತಿಗಳನ್ನು ಬೊಂಬಾಯಿ, ಮದ್ರಾಸಿನ ಸ್ಟುಡಿಯೋಗಳಿಗೆಲ್ಲಾ ಕಳಿ ಸ್ತಾರಂತೆ.'

'ನೀನು ತುಂಬಾ ಕೆಟ್ಟವಳು ಕಣೇ ಮಂಜೂ. ಪಾಪ! ಅವರಿಗೆ ಇಲ್ಲದ ಬಣ್ಣದ ಮಾತು ಹೇಳಿ ಮೋಸ ಮಾಡ್ತಿದೀಯಾ ?'

'ಹೀಗೆಲ್ಲಾ ಆಡೋದರಿಂದ ನನಗೂ ಸ್ವಲ್ಪ ಸಮಯ ಹೋಗ್ತಿದೆ'

'ಹೂಂ. ಇನ್ನೇನು ಮಾಡ್ತೀಯ. ತಿಂದು ಕೊಬ್ಬು ಜಾಸ್ತಿಯಾ ಯ್ತೂಂತ ತೋರತ್ತೆ. ಒಳಗಿರೋ ಚೈತನ್ಯ ಸುಮ್ಮನಿರಗೊಡೋದಿಲ್ಲ. ಅಲ್ಲವೇ ?'

ತಕ್ಷಣ ನಗೆಯ ಬುಗ್ಗೆ ಕಣ್ಣೀರಿನ ಕಡಲಾಯಿತು.

'ಜೋಯಿಸರು ನನ್ನ ಗಂಡನಿಗಿಂತ ಎಷ್ಟೋ ವಾಸಿ ಸುಬ್ಬಿ ಹೆಂಡತೀನ ಬೇರೊಬ್ಬನ ಹತ್ತಿರ ಹೋಗೂಂತ ಹಿಂಸೆ ಮಾಡೋದಿಲ್ಲ. ಸ್ವತಃ ದುಡಿಯುವುದಿಲ್ಲ. ಹೆಂಡತಿ ದುಡಿದು ತಂದು ಹಾಕಿದ್ದನ್ನು ತೆಪ್ಪಗೆ ತಿಂದು ಕೊಂಡು ಬಿದ್ದಿದಾರೆ. ಆದರೂ ಗಂಡ, ಹೆಂಡತಿ ಅನ್ಯೋನ್ಯವಾಗಿ ದಾರೆ.'

ಆ ಮಾತನಾಡುವಾಗ ಮಂಜುಳೆಯ ದನಿ ನಡುಗಿತು. ಸುಬ್ಬಿ

ಎನಸ್ಸಿನಲ್ಲಿ 'ಪಾಪ! ಹರಿಯದ ಹುಡುಗಿ. ಗಂಡನ್ನ ನೆನಸಿರಬೇಕು. ಯಾವುದೋ ಒಂದು ಭಾವನೆಗೆ ಬೆಲೆ ಕೊಟ್ಟು ತವರು ಮನೆಗೆ ಬಂದಿದಾಳೆ. ದಾರಿ ತಪ್ಪಿ ಹೋಗಲಾರಳು. ಗಂಡನನ್ನು ನೆನಸದೇ ಇರಲಾರಳು' ಎಂದುಕೊಂಡು ಕನಿಕರದಿಂದ ಮಂಜುಳೆಯ ಕಡೆ ನೋಡಿದಳು.

ಮಂಜುಳಾ ಕಣ್ಣೀರಿನ ನಡುವೆ ನಕ್ಕಳು.

ನಗು ಅಳು—ಮತ್ತೆ ಅಳು ನಗು!

'ಯಾಕೆ ನಗ್ತೀಯೊ?'

'ಓ, ಆ ಫೋಟೋ....ಭರತ್....ಭೂಷಣ್....ನಂಕೈಲಿನ್ನಾಗೋಲ್ಲಾಮ್ಮಾ ಈ ನಗು ತಡೆಯೋಕೆ....'

'ಎಲ್ಲೋ ಶುದ್ಧ ಹುಚ್ಚು.'

'ಭ....ಭ....ಭರತ್....' ಮಂಜುಳಾ ನಗುತ್ತಿದ್ದಂತೆಯೇ ಸುಬ್ಬಿ ರೇಗಿಕೊಂಡು ಎದ್ದು ಒಳಗೆ ಹೋದಳು. ನಾನು ಬೆರಗಾಗಿ ಮಂಜುಳೆಯ ನಗುವನ್ನು ನೋಡುತ್ತಾ ನಿಂತಿದ್ದೆ.

ಅಂಬುಜಮ್ಮನ ಮಗ ವೇಣುಗೋಪಾಲ ನನಗಿಂತಲೂ ಎರಡು ವರ್ಷ ದೊಡ್ಡವನು. ನಾನು, ಉಷಾ ಆಡುವಾಗ ಆಟ ಆಡುವ ಆಸೆಯಿಂದ ನಮ್ಮ ಬಳಿ ಬಂದು ನಿಲ್ಲುತ್ತಿದ್ದ. ಮೊದಲೆರಡು ದಿನ ನಾನು, ಉಷಾ ಅವನನ್ನು ಆಟಕ್ಕೆ ಕರೆಯಲಿಲ್ಲ. ನಾವೇನು ಕರೆಯೋದು? ಅಷ್ಟೊಂದು ಇಷ್ಟ ಇದ್ದರೆ ತಾನಾಗಿಯೇ ಬರ್ತಾನೆ ಎಂದು ನಮ್ಮ ಧೋರಣೆ. ಆದರೆ ನಮ್ಮ ಧೋರಣೆ ಬೇಗ ಸ್ನೇಹರೂಪಕ್ಕೆ ತಿರುಗಿತು. ಆದಕ್ಕೆ ಕಾರಣ ನನ್ನ ಮರದ ಕುದುರೆ.

ಒಂದು ಸಲ ಮರದ ಕುದುರೆ ನೀರಿನ ತೊಟ್ಟಿಯಲ್ಲಿ ಬಿದ್ದುಹೋಯಿತು. ನಾನು, ಉಷಾ ದಿಕ್ಕುಗಾಣದೇ ನಿಂತಿದ್ದಾಗ ವೇಣು ತೊಟ್ಟಿಯೊಳಗೆ ಇಳಿದು ಕುದುರೆಯನ್ನು ತೆಗೆದುಕೊಟ್ಟ. ನೀರಿನಿಂದ ಅವನ ಚಡ್ಡಿ ಬನೀನು ಒದ್ದೆಯಾಯಿತು. ಅಂದಿನಿಂದ ನಮ್ಮಿಬ್ಬರ ದೃಷ್ಟಿಯಲ್ಲಿ ವೇಣು ವೀರಾಧಿವೀರ. ಅವನು ಕೂಡಲೇ ನಮ್ಮ ಆಟದ ಬಳಗದ ಸದಸ್ಯನಾದ.

ನಾನು, ಉಷಾ ರೈಲಿನಾಟ ಆಡುತ್ತಿದ್ದೆವು. ಒಬ್ಬರ ಬನಿಯನ್ನಿನ

ತುದಿ ಮತ್ತೊಬ್ಬರು ಹಿಡಿದು ರೈಲಿನಂತೆ 'ಕೂ' ಎಂದು ಕೂಗುತ್ತಾ 'ಜುಗ್ ಜುಗ್' ಎಂದು ಬಾಯಲ್ಲಿ ಹೇಳುತ್ತಾ ವಠಾರದ ಅಂಗಳವನ್ನೆಲ್ಲಾ ಸುತ್ತಾಡುತ್ತಿದ್ದೆವು. ಈ ದಿನ ರೈಲಿನಾಟವಾಡುವಾಗ ವೇಣುವೇ ಎಂಜಿನ್ನಾದ. ಅವನಂತೆ ಮನೋಹರವಾಗಿ ಸಿಳ್ಳೆಹಾಕಲು ನನಗಾಗಲಿ, ಉಷೆಗಾಗಲಿ ಬರುತ್ತಿರಲಿಲ್ಲ. ವೇಣು ಒದ್ದೆ ಚಡ್ಡಿಯಲ್ಲಿಯೇ ಎಂಜಿನ್ನಿನ ಪಾತ್ರವಹಿಸಿದ್ದ.

ಅಷ್ಟರಲ್ಲಿ ಅಂಬುಜಮ್ಮ ಹೊರಗೆ ಬಂದರು. ವೇಣು ತನ್ನ ಚಡ್ಡಿ ಒದ್ದೆ ಮಾಡಿಕೊಂಡಿರುವುದನ್ನು ನೋಡಿ ಅವರಿಗೆ ಕೋಪ ಬಂತು. ಈ ತಾಯಂದಿರಿಗೆ ಮಕ್ಕಳ ಒದ್ದೆ ಬಟ್ಟೆ ನೋಡಿದರೆ ಯಾಕಷ್ಟು ಕೋಪವೋ? ಒದ್ದೆ ಬಟ್ಟೆಯಿಂದ ನಮಗಾಗುವಷ್ಟು ಸಂತೋಷ ಇನ್ನು ಯಾತರಿಂದಲೂ ಆಗೋದಿಲ್ಲ ಎನ್ನುವುದು ಅವರಿಗೆ ತಿಳಿಯುವುದಿಲ್ಲವೇ?

ಆಕೆ ಭತ್ತ ಅರಳಾಗುವಂತೆ ಸಿಡಿದು 'ಬಾರೋ ಒಳಗೆ ಹೆಣ್ಣು ಹುಡುಗರೊಡನೆ ಎಂತಹ ಆಟ' ಎಂದು ಗದರಿಸಿದರು.

ಅಷ್ಟು ಪುಟ್ಟ ವಯಸ್ಸಿನಿಂದಲೂ ಹಿರಿಯರು ತಲೆಗೆ ತುಂಬೋಕೆ ಶುರು—ನೀನು ಗಂಡು, ಅವಳು ಹೆಣ್ಣು ಇವರಿಬ್ಬರೂ ಆಡೋದು ತಪ್ಪು ಅಂತ.

ಆದರೆ ಹಿರಿಯರು ಯಾವುದನ್ನು 'ತಪ್ಪು', 'ಬೇಡ' ಎನ್ನುತ್ತಾರೋ ಅದನ್ನು ಕದ್ದಾದರೂ ಮಾಡುವುದರಲ್ಲಿ ನಮಗೆ ಎಲ್ಲಿಲ್ಲದ ತೃಪ್ತಿ.

ವೇಣು ತಾಯಿಯ ಕರೆಯನ್ನು ಮನ್ನಿಸಲಿಲ್ಲ. ಆಕೆ ಹತ್ತಿರ ಬಂದು ತಿಂಡಿಯ ಆಸೆ ತೋರಿಸಿ ವೇಣುವನ್ನು ಮನೆಯೊಳಗೆ ಕರೆದುಕೊಂಡು ಹೋದರು. ನಮಗೆ ಆಟದಲ್ಲಿ ಆಸಕ್ತಿಯೇ ಹೊರಟುಹೋಯಿತು. ವೇಣುವಿನಂತೆ ಸಿಳ್ಳು ಹಾಕುವುದು ನಮಗೆ ಬರುತ್ತಿರಲಿಲ್ಲ. ನಾವೂ ಆಟವನ್ನು ಬಿಟ್ಟು ಮಣ್ಣನ್ನು ಗೋರಿ ಗುಡ್ಡೆ ಹಾಕತೊಡಗಿದೆವು.

ವೇಣು ರೊಟ್ಟಿಯ ಚೂರೊಂದನ್ನು ಕಡಿಯುತ್ತಾ ಹೊರಗೆ ಬಂದ. ರೊಟ್ಟಿ ಮುಗಿಯುತ್ತಲೂ ನಮ್ಮೊಡನೆ ಬಂದು ರೈಲಾಟಕ್ಕೆ ಮೊದಲು ಮಾಡಿದ.

ಅಂಬುಜಮ್ಮ ಮತ್ತೆ ಬಂದು 'ನಾಯಿ ಬಾಲ' ಎಂದು ವೇಣು

ವನ್ನು ಬೈದರು. ಅವನಿಗೆ ತಿಂಡಿಯ ಆಸೆ ತೋರಿಸಿದರು. ಆದರೆ ವೇಣು ಜಗ್ಗಲಿಲ್ಲ.

ಸುಬ್ಬಿ ಬಂದು ನನ್ನೊಬ್ಬಳನ್ನು ಒಳಗೆ ಕರೆದು ಚಕ್ಕುಲಿಯನ್ನು ಕೈಗೆ ಕೊಟ್ಟಳು. ನಾನು ಅದನ್ನು ಕೈಲಿ ಹಿಡಿದು ಹೊರಗೆ ಹೊರಟಾಗ ಸುಬ್ಬಿ

'ಇಲ್ಲೇ ತಿಂದು ಹೋಗು. ಹೊರಗೆ ಹೋದರೆ ಅವರೆಲ್ಲಾ ಕಿತ್ತು ಕೊಳ್ಳುತ್ತಾರೆ' ಎಂದು ಉಪದೇಶಿಸಿದಳು.

'ಅವರಿಗೂ ಕೊಡ್ತೀನಿ.'

'ಕೊಡದೇ ಏನ್ಮಾಡೀಯ? ರಾಜಕುಮಾರಿ ನೀನು.'

ಆಟದ ಚಪಲದಿಂದ ನಾನು ಹೊರಗೆ ಬಂದೆ. ಎರಡು ಜೊತೆ ಎಳೆಯ ಕಣ್ಣುಗಳು ಆಸೆಯಿಂದ ನಾನು ಕೈಲಿ ಹಿಡಿದಿದ್ದ ಚಕ್ಕುಲಿಯ ಬಳ್ಳಿಯಲ್ಲಿ ನಾಟಿ ನಿಂತವು. ವೇಣುವಿಗೆ, ಉಷಳಿಗೆ ಒಂದೊಂದು ಚೂರು ಕೊಟ್ಟೆ.

ಅಂಬುಜಮ್ಮ ಧಾವಿಸಿ ಬಂದು ವೇಣುವಿನ ಕೈಲಿದ್ದ ಚೂರನ್ನು ಕಿತ್ತು ಎಸೆದು

'ಸಿಕ್ಕ ಸಿಕ್ಕವರು ಕೊಟ್ಟ ಎಣ್ಣೇ ತಿಂಡೀನೆಲ್ಲಾ ತಿನ್ತೀಯೇನೋ' ಎಂದು ಗದರಿದರು.

ಆಕೆ ಶ್ರೀಮಂತಳೇನೋ? ತುಪ್ಪ ಹೇಗಿರತ್ತೆ ಎಂದವರು ನೋಡಿದ್ದರೋ ಇಲ್ಲವೋ ನನಗೆ ಅನುಮಾನ. ಆದರೆ ಜಂಭ ಮಾತ್ರ ಹಿಡಿಸಸು.

ಅಂಬುಜಮ್ಮನ ಈ ಮಾತು ಸುಬ್ಬಿಗೆ ಕೇಳಿಸಿತು. ಕೂಡಲೇ ಹಿರಿಯರಲ್ಲಿ ಜಗಳ ಶುರುವಾಯಿತು. ನಾವು ಬೆರಗಾಗಿ ಹಿರಿಯರ ಜಗಳವನ್ನು ನೋಡಿದೆವು. ನೋಡಿ ಬೇಸರವಾಗಿ ಮತ್ತೆ ಒಂದಾಗಿ ಆಡತೊಡಗಿದೆವು.

ಎಷ್ಟು ಹೊತ್ತು ಆಡಿದೆವೋ ನೆನಪಿಲ್ಲ. ಸುಬ್ಬಿ ಬಂದು ನನ್ನ ಬೆನ್ನಿನ ಮೇಲೆ ಗುದ್ದಿದಾಗಲೇ ನನಗೆ ಎಚ್ಚರವಾಯಿತು. ಮಂಜುಳಾ ಉಷೆಗೂ, ಅಂಬುಜಮ್ಮ ವೇಣುವಿಗೂ ಎರಡೇಟಿನ ರುಚಿ ತೋರಿಸಿದರು. ನಾವೆಲ್ಲಾ ಚೀರುತ್ತಿದ್ದಂತೆಯೇ ನಮ್ಮ ನಮ್ಮ ತಾಯಂದಿರು ನಮ್ಮನ್ನು ಎಳೆದುಕೊಂಡು ಮನೆಯೊಳಗೆ ಕರೆದುಕೊಂಡು ಹೋದರು.

ಸುಮಾರು ಅರ್ಧ ಗಂಟೆಯುವರೆವಿಗೆ ಒಂದು ವಠಾರದ ಮೂರು ಮನೆಯ ತಗಡಿನ ಬಾಗಿಲಿನ ಮೂಲಕ ಮೂರು ದನಿಯ ಚೀರಾಟ, ವಿವಿಧ ರೀತಿಯ ಬೈಗಳ ಕೇಳಿ ಬಂತು. ಅನಂತರ ಅತ್ತು ಸೋತಿದ್ದ ನಾವು, ಬೈದು ಸೋತಿದ್ದ ಹಿರಿಯರು ಒಂದೇ ಸಲಕ್ಕೆ ತೆಪ್ಪಗಾದೆವು.

ಎರಡು ದಿನ ನಾವು ಪರಸ್ಪರ ಬೆರೆಯಲಿಲ್ಲ. ಮೂರನೆಯ ದಿನ ಎಂದಿನಂತೆ ನೀರಿನ ತೊಟ್ಟಿಯ ಬಳಿ ಎಲ್ಲರೂ ಸೇರಿದೆವು. ನೀರಿನಲ್ಲಿ ಆಡುತ್ತಾ, ಮಣ್ಣನ್ನು ಗಾಳಿಗೆ ತೂರುತ್ತಾ ಎಲ್ಲರೂ ಒಂದಾಗಿ ನಕ್ಕೆವು.

ಗುರು ದೊಡ್ಡವನಾಗಿದ್ದ. ನಮ್ಮೊಡನೆ ಆಟವಾಡಲು ಅವನ ಹೃದಯ ತವಕಿಸುತ್ತಿತ್ತು. ಆದರೆ ಸುಬ್ಬಿಗೆ ತನ್ನ ಮಗನನ್ನು ನನ್ನೊಡನೆ ಬಿಡಲು ಎಲ್ಲಿಲ್ಲದ ಹೆದರಿಕೆ. ನಾನು ಬಜಾರಿ, ಘಟಿಂಗಿ, ಗುರು ಮೆದುಗ, ಚಿಕ್ಕವನು. ಅವನು ನಮ್ಮೊಡನೆ ಆಡಲು ಬಂದರೆ ಸುಬ್ಬಿ ಒಳಗಿನಿಂದಲೇ ಕೂಗುತ್ತಿದ್ದಳು.

'ಬಾರೋ ಗುರು, ಅವಳ ಜೊತೆ ಹೋಗಬೇಡ. ಬೀಳಿಸಿಬಿಡ್ತಾಳೆ' ಆದರೆ ಗುರು ಒಳಗೆ ಹೋಗುತ್ತಿರಲಿಲ್ಲ. ಸುಬ್ಬಿ ಹಿಂದಿನಂತೆ ಚಟುವಟಿಕೆಯಿಂದ ಬಂದು ಗುರುವನ್ನೆತ್ತಿಕೊಂಡು ಒಳಗೆ ಹೋಗುತ್ತಿರಲಿಲ್ಲ. ಏನೋ ಒಂದು ಬಗೆಯ ಆಲಸ್ಯ, ಜಡತೆ ಅವಳಲ್ಲಿ ಮನೆಮಾಡಿದ್ದಂತೆ ತೋರಿತು,

ಒಂದು ದಿನ ಮಂಜುಳಾ ಮಾರ್ಕೆಟ್ಟಿಗೆ ಹೊರಟಿದ್ದಳು. ನಾನು. ಉಷಾ ಅವಳ ಬೆನ್ನು ಹತ್ತಿದೆವು. ನಾವು ಮನೆಗೆ ವಾಪಸ್ಸು ಬಂದಾಗ ಗುರು ಬಾಗಿಲನಲ್ಲಿ ಕುಳಿತಿದ್ದ. ಮಂಜುಳೆಯ ತಾಯಿಯ ದನಿ ನಮ್ಮ ಮನೆಯಿಂದ ಕೇಳಿ ಬರುತ್ತಿತ್ತು. ಮಂಜುಳೆಗೆ ಅನುಮಾನವಾಯಿತೇನೋ—ಅವಳು ತನ್ನ ಮನೆಗೆ ಹೋಗುವುದಕ್ಕಿಂತ ಮುಂಚೆ ನನ್ನೊಡನೆ ನಮ್ಮ ಮನೆಗೇ ಬಂದಳು.

ಸುಬ್ಬಿ ದಟ್ಟಿಗಳ ಮೇಲೆ ಮಲಗಿದ್ದಳು. ಮುಖದ ಮೇಲೆ ಆಯಾಸ, ಬಳಲಿಕೆ ತೇಲುತ್ತಿತ್ತು. ಪಕ್ಕದಲ್ಲಿ ಎಳೆಯ ಜೀವಿಯೊಂದು ಕಣ್ಣು ಮುಚ್ಚಿ ನಿರಾತಂಕವಾಗಿ ತಾಯಿಯ ಬೆಚ್ಚನೆಯ ಎದೆಯ ಬಳಿ ಮಲಗಿತ್ತು.

ಮಂಜುಳೆಯ ಮುಖವರಳಿತು.

'ಯಾವಾಗ್ಲೇ?

‘ ನೀವು ಈ ಕಡೆ ಮಾರ್ಕೆಟ್ಟಿಗೆ ಹೋಗುತ್ತಲೇ....’

‘ ಹೆರಿಗೆ ಮಾಡಿದೋರು ಯಾರು ? ’

‘ ನಿಮ್ಮಮ್ಮ.’

‘ ಹಾಗಾದರೆ ಸೂಲಗಿತ್ತೀನ ಕರೆಸಲಿಲ್ಲವೇ ? ’

‘ಅವಳಿಗೆ ಹಣ ತೆರೋರು ಯಾರು ? ’

‘ ಎಂತಹ ಮಗು ? ’

‘ ನಿನ್ನಂತಹದೇ.’

ಮಂಜುಳಾ ಬಗ್ಗಿ ಮಗುವಿನ ಮುಖ ನೋಡಿ ‘ ಮುದ್ದಾಗಿದೆ’ ಎಂದಳು. ಸುಬ್ಬಿ ಬೇಸರದಿಂದ ಮುಖ ತಿರುಗಿಸಿಕೊಂಡಳು.

‘ ನಿನ್ನ ಗಂಡನ ಹಾಗೆ ಬೆಳ್ಳಗಿದೆ. ಕಣ್ಣು, ಮೂಗು ನಿನ್ನಂತೆ ಲಕ್ಷಣವಾಗಿದೆ.’

‘ ನಮ್ಮ ಗುರು ಏನಾಗಿದಾನೋ ? ’

ಸುಬ್ಬಿಗೆ ಯಾವಾಗಲೂ ಗುರುವಿನ ಮೇಲೆ ಮಮತೆ ಹೆಚ್ಚು.

‘ ಅವನಿಗೇನು ದೊರೆ ಮಗನ ಹಾಗಿದಾನೆ.’

ಅವರ ಮಾತಿನ ನಡುವೆ ನನ್ನ ವಿಷಯ ಮಾತ್ರ ಬರಲಿಲ್ಲ. ಕಪ್ಪು ತೊಗಲು ಹೊದ್ದುಕೊಂಡು ಈ ಪ್ರಪಂಚದೊಳಗೆ ಬಂದ ನನ್ನನ್ನು ಚರ್ಚಿಸುವುದು ಅವರಿಗೆ ಬೇಡವಾದ ವಿಷಯವಾಗಿತ್ತೇನೋ ?

ನಮ್ಮ ತಂದೆಗೆ ರಾಮಕೃಷ್ಣ ಪರಮಹಂಸರೆಂದರೆ ತುಂಬಾ ಭಕ್ತಿ. ಆದುದರಿಂದ ನನ್ನ ಹೊಸ ತಂಗಿ ಶಾರದಾಮಣಿಯಾದಳು. ಆದರೆ ನಮ್ಮೆಲ್ಲರ ಪಾಲಿಗೆ ಅವಳು ‘ ಮಣಿ ’ ಮಾತ್ರ.

ಹತ್ತಿರದಲ್ಲಿಯೇ ಇದ್ದ ಸ್ಕೂಲಿಗೆ ಹಿರಿಯರು ನನ್ನನ್ನು ಸೇರಿಸಿದರು. ಆಗ ನನಗೆ ಆರುವರ್ಷ. ನಮ್ಮ ತರಗತಿಯಲ್ಲಿ ಹೆಚ್ಚು ಕಡಿಮೆ ನನ್ನ ವಯಸ್ಸಿನವರೇ ಸುಮಾರು ಅರವತ್ತು ಹುಡುಗಿಯರಿದ್ದರು. ನಮ್ಮ ತಂದೆ ನನ್ನನ್ನು ಸ್ಕೂಲಿಗೆ ಸೇರಿಸಿದ ದಿನ ಅಲ್ಲಿನ ಗದ್ದಲ, ಜಗಳ ನೋಡಿ ನಾನು ಬೆಪ್ಪಾಗಿ ಹೋದೆ. ಪ್ರೈಮರಿ ಒಂದನೇ ಕ್ಲಾಸಿನಲ್ಲಿ ನನ್ನನ್ನು ಬಿಟ್ಟು ನಮ್ಮ ತಂದೆ ಮನೆಗೆ ಹೊರಟೊಡನೆ ನಾನೂ ಅಳಲು ಮೊದಲು ಮಾಡಿದೆ.

‘ ಅಣ್ಣಾ, ನಾನೂ ಬರ್ತೀನಿ.... ಊಂ....’

ಕನ್ನಡಕ ಧರಿಸಿದ ಮೇಡಂ ನನ್ನ ಬಳಿ ಬಂದು ನಗುಮುಖದಿಂದ 'ಬಾಮ್ಮಾ, ನಿಮ್ಮ ತಂದೆ ಹೋಗಲಿ. ನೀನು ಸ್ಕೂಲಿನಲ್ಲಿ ಓದಿ ಜಾಣೆಯಾಗಬೇಕು' ಎಂದರು.

'ಇವಳು ಸ್ಕೂಲಿಗೆ ಬಂದಿರೋದು ಇದೇ ಮೊದಲನೇ ದಿನ. ಸ್ವಲ್ಪ ಗಲಾಟೆ ಮಾಡಬಹುದು. ಆದರೆ....' ಎಂದು ನಮ್ಮ ತಂದೆ ಹೇಳುವಷ್ಟರಲ್ಲಿ ಮೇಡಂ ನಗೆ ಮೊಗ್ಗನ್ನು ಬಲವಂತದಿಂದ ಹೂವಾಗಿಸಿ

'ಪರವಾಗಿಲ್ಲ. ನೀವು ಹೋಗಿ. ನಾನು ನೋಡಿಕೊಳ್ಳುತ್ತೀನಿ' ಎಂದರು. ನಮ್ಮ ತಂದೆ ಹೊರಟು ಹೋದರು. ನಾನು ಸಣ್ಣದಾಗಿ ರಾಗ ತೆಗೆದೆ.

'ಅಣ್ಣಾ........ಅಣ್ಣಾ........'

ಮೇಡಂ ಮುಖದ ಮೇಲೆ ಅರಳಿದ್ದ ನಗೆ ಹೂವು ಸಂಜೆಯ ಕಮಲವಾಯಿತು. ಆಕೆ ಹುಬ್ಬು ಗಂಟಿಕ್ಕಿ ಕಠೋರ ದನಿಯಲ್ಲಿ ಗದ್ದರಿಸಿದರು.

'ಏಯ್ ಬಾಯಿ ಮುಚ್ಚು. ಇಲ್ಲದಿದ್ದರೆ ಏಟು ಬೀಳುತ್ತದೆ.'

ನಾನು ಹೆದರಿಕೆಯಿಂದ ಸುಮ್ಮನಾದೆ. ಹೊಸದಾಗಿ ಸೇರಿದ ನನ್ನ ಸುತ್ತಲೂ ನಿಂತಿದ್ದ ಹುಡುಗಿಯರನ್ನು ನೋಡಿ ಆಕೆ ಮತ್ತೆ ಮೇಜು ಬಡಿದು ಕೂಗಿದರು

'ಎಲ್ಲರೂ ನಿಮ್ಮ ನಿಮ್ಮ ಜಾಗಗಳಿಗೆ ಹೋಗಿ.'

ಎಲ್ಲರೂ ಹಿಂತಿರುಗಿದರು. ಮತ್ತೆ ದೂರುಗಳಿಗೆ ಮೊದಲಾಯಿತು.

'ಮೇಡಂ, ಇವಳು ನನ್ನ ಬಳಪ ಕಿತ್ಕೊಂಡಿದಾಳೆ'

'ಶಾಂತಿ ನನ್ನ ಜಡೆ ಎಳೀತಾಳೆ'

'ಸೀತು ನನ್ನ ಜಾಗದಲ್ಲಿ ಕೂತಿದಾಳೆ.'

ಕೊನೆ ಮೊದಲಿಲ್ಲದ ಪುಕಾರುಗಳು ಸುತ್ತಲಿಂದಲೂ ಹಾರಿ ಬಂದವು. ನಲವತ್ತು ರೂಪಾಯಿಗೋಸ್ಕರ ಬೆಳಗಿನಿಂದ ಸಂಜೆಯವರೆವಿಗೆ ದುಡಿಯುವ ಮೇಡಂ—ಅದರಲ್ಲೂ ಪ್ರೈಮರಿ ಸ್ಕೂಲಿನ ಮೇಡಂ—ಧ್ವನಿ ದೊಡ್ಡದು ಮಾಡಿ ಕೈಲಿದ್ದ ಇಂಚು ಪಟ್ಟಿಯಿಂದ ಮೇಜನ್ನು ಬಡಿದು

'ಸದ್ದು' ಎಂದು ಅಬ್ಬರಿಸಿದರು.

'ಮೇಡಂ, ಕಸ್ತೂರಿ ನನ್ನ ನವಿಲುಗರಿ ಕದ್ದಿದ್ದಾಳೆ.' ಕಸ್ತೂರಿಯ

ಮೇಲೆ ದೂರು ತಂದ ಕಾವೇರಿಯ ಕಣ್ಣುಗಳಲ್ಲಿ ಗಂಗಾವತಾರವಾಗಿತ್ತು.

ಜೀವಶವದಂತಿದ್ದ ಮೇಡಂ ಕಸ್ತೂರಿಯ ಬಳಿಗೆ ಬಂದು ಇಂಚುಪಟ್ಟಿಯಿಂದ ಒಂದೇಟು ಕೊಟ್ಟು

'ಇನ್ನು ಗದ್ದಲ ಮಾಡೋರಿಗೆ ಏಟು ಬೀಳತ್ತೆ' ಎಂದು ಎಚ್ಚರಿಕೆಯನ್ನಿತ್ತು ಕನ್ನಡ ಪುಸ್ತಕದಿಂದ ಪಾಠವನ್ನು ಓದತೊಡಗಿದರು.

'ನಮ್ಮ ಗುರು ಹಿರಿಯರನ್ನು ನಾವು ಗೌರವಿಸಬೇಕು....'

ಏಟು ತಿಂದಿದ್ದ ಕಸ್ತೂರಿ ಮುಖ ಸೊಟ್ಟುಮಾಡಿ ಮೇಡಂನನ್ನು ಅಣಕಿಸಿದಳು. ಅವಳ ಅಣಕಿಸುವ ಮುಖ ನೋಡಿ ನನಗೆ ತುಂಬಾ ನಗು ಬಂತು.

ಸ್ಕೂಲು ಬಿಡುವ ಹೊತ್ತಿಗೆ ನಾನು ಇಬ್ಬರಲ್ಲಿ ಸ್ನೇಹವನ್ನು ಬೆಳಸಿದ್ದೆ. ಮಾರನೆಯ ದಿನ ನಾನು ಸ್ಕೂಲಿಗೆ ಹೋಗಲು ಹಠ ಮಾಡಲಿಲ್ಲ. ಹುಡುಗಿಯರ ಸ್ನೇಹ, ಆಟ, ಪಾಠ ನನಗೆ ಮನೆಗಿಂತಲೂ ಆಕರ್ಷಣೀಯವಾಗಿ ತೋರಿತು. ಮನೇಲಿದ್ದರೆ ಸದಾ ಅಳುವ ಮಣಿಯನ್ನು ಅನುಸರಿಸಿಕೊಂಡಿರಬೇಕಾಗುತ್ತಿತ್ತು. ಗುರು ಅತ್ತರೆ, ಕಿರಿಚಾಡಿದರೆ, ಮೊಂಡತನ ಮಾಡಿದರೆ ಅದಕ್ಕೆಲ್ಲಾ ನಾನೇ ಕಾರಣಾಂತ ಬೈಸಿಕೊಳ್ಳುವುದು ತಪ್ಪಿತು. ಸಾಲದುದಕ್ಕೆ ಅಮ್ಮ ಹೇಳಿದ ಚಿಕ್ಕಪುಟ್ಟ ಕೆಲಸಗಳನ್ನೂ ನಾನೇ ಮಾಡಬೇಕಿತ್ತು. ಇವುಗಳೆಲ್ಲದರಿಂದಲೂ ಮುಕ್ತಿ ಪಡೆಯಬೇಕಾದರೆ ಸ್ಕೂಲೇ ಗತಿ ಎಂದು ನಾನು ನಿರ್ಧರಿಸಿದ್ದೆ.

ಕಸ್ತೂರಿ ಸುಂದರವಾದ ಹುಡುಗಿ. ಸಾಲದುದಕ್ಕೆ ಶ್ರೀಮಂತರ ಮನೆಯವಳು. ಅವಳ ನೀಳವಾದ ಜೋಡಿ ಜಡೆ, ರಂಗು ರಂಗಿನ ಸಿಲ್ಕಿನ ಲಂಗವನ್ನು ನೋಡಿ ನನಗೆ ಕಸ್ತೂರಿಯಲ್ಲಿ ಒಂದು ಬಗೆ ಪೂಜ್ಯ ಭಾವನೆ ಉದಿಸಿತ್ತು. ಅವಳು ಮಾಡಿದಂತೆಯೇ ಮಾಡಲು ನನ್ನ ಮನಸ್ಸು ತವಕಿಸುತ್ತಿತ್ತು.

ರಂಗು ರಂಗಿನ ಸಿಲ್ಕಿನ ಲಂಗವಂತೂ ನನ್ನ ಕೈಗೆಟುಕದ ವಸ್ತು. ಆದರೆ ಜೋಡಿ ಜಡೆ ಹಾಕಿಕೊಳ್ಳಲು ಯಾರದೇನು ಅಡ್ಡಿ?

ಮಾರನೆಯ ದಿನ ಸುಬ್ಬಿ ನನಗೆ ಜಡೆ ಹಾಕಲು ಬಂದಾಗ ನಾನು ಹೇಳಿದೆ.

'ಸುಬ್ಬಿ, ನಂಗೆ ಎರಡು ಜಡೆ ಹಾಕು.'

ನಮ್ಮ ತಂದೆ ಊಟ ಮಾಡಲು ಕಾದು ಕುಳಿತಿದ್ದರು. ಗುರು ಬೇರೆ ರಚ್ಚೆ ಹಿಡಿದು ಅಳುತ್ತಿದ್ದ. ಮಣಿಗೆ ಹಾಲು ಕುಡಿಸುವ ಹೊತ್ತಾಗಿತ್ತು.

ನನ್ನ ಮಾತು ಕೇಳಿ ಸುಬ್ಬಿ ಸಿಡುಕಿ ನುಡಿದಳು 'ನಂಗೆ ಹೊತ್ತಾಯ್ತು. ಈಗ ಪುರುಸೊತ್ತಿಲ್ಲ. ಸಂಜೆ ಮನೆಗೆ ಬಂದಾಗ ತಲೆ ಬಾಚ್ತೀನಿ. ಈಗ ಹಾಗೇ ಮುಂದಲೆ ಬಾಚಿ ಕಳಿಸುತ್ತೀನಿ'

'ಊಂ....ಬೇಡ. ನಂಗೆ ಎರಡು ಜಡೇನೇ ಬೇಕು' ಎನ್ನುತ್ತಾ ನಾನು ಜಡೆಗೆ ಕಟ್ಟಿದ್ದ ನಾರನ್ನು ಬಿಚ್ಚತೊಡಗಿದೆ.

' ಈಗ ಜಡೆ ಬಿಚ್ಚಿಕೊಂಡರೆ ಏಟು ಬೀಳುತ್ತದೆ' ಎನ್ನುತ್ತಾ ಸುಬ್ಬಿ ತಂದೆಗೆ ಬಡಿಸತೊಡಗಿದಳು.

ಕಸ್ತೂರಿಯ ಜೋಡಿ ಜಡೆ ನನ್ನ ಕಣ್ಣೆದುರಿಗೆ ತೂಗಾಡಿತು.

' ಊಹೂಂ. ನಂಗೆ ಈಗ್ಲೇ ಹಾಕು. ನಂಗೆ ಎರಡು ಜಡೇನೇ....' ಗುರು, ಮಣಿಯ ಆಲಾಪನೆಯೊಡನೆ ನನ್ನ ಮೇಳವೂ ಸೇರಿತು.

' ನಂಗೆ ಎರಡು ಜಡೇ........'

ಸುಬ್ಬಿ ಅನ್ನದ ತಪ್ಪಲೆಯನ್ನು ಕೆಳಗಿರಿಸಿ ಬಂದು ನನ್ನ ಬೆನ್ನಿನ ಮೇಲೆ ಗುದ್ದಿದಳು. ನಾನು ನೆಲದ ಮೇಲೆ ಬಿದ್ದು ಹೊರಳತೊಡಗಿದೆ. ಮಣಿ ಎಳೆಯ ಮಗುವಾದುದರಿಂದ ಸುಬ್ಬಿ ಅವಳನ್ನು ಹೊಡೆಯುವ ಹಾಗಿರಲಿಲ್ಲ. ಗುರು ವಂಶೋದ್ಧಾರಕನಾದುದರಿಂದ ಸುಬ್ಬಿಯ ಪ್ರಾಣಪದಕವಾಗಿದ್ದ. ಉಳಿದವಳು ನಾನು. ಸುಬ್ಬಿಯ ಭಾಷೆಯಲ್ಲಿಯೇ ಹೇಳುವುದಾದರೆ 'ಕೊಂಟಿ ಕೋಣ.'

ಸುಬ್ಬಿ ಹೊಡೆದಷ್ಟೂ ನನ್ನ ಹಠ, ಅಳು ಜಾಸ್ತಿಯಾಯಿತು. ನಾನು ವಠಾರದ ಅಂಗಳದಲ್ಲೆಲ್ಲಾ ಉರುಳಾಡಿದೆ. ಲಂಗವನ್ನೆಲ್ಲಾ ಧೂಳು ಮಾಡಿ ಕೊಂಡೆ. ಜೋಯಿಸರ ಹೆಂಡತಿ ಅಂಬುಜಮ್ಮ ಬಂದು ನನ್ನನ್ನು ಸುಬ್ಬಿ ಯಿಂದ ಬಿಡಿಸಿಕೊಂಡರು.

''ನೀವೇನು ತಾಯಿಯೋ ದನವೋ? ಮಗೂನ ಹಾಗೆ ಹೊಡೆದರೆ ಯಾಕಾದೀತು? ಸ್ವಲ್ಪವಾದರೂ ಮೈಮೇಲೆ ಜ್ಞಾನವಿರಲಿ.'

' ನನ್ನಿಷ್ಟ. ನನ್ನ ಮಗಳನ್ನ ನಾನು ಏನುಬೇಕಾದರೂ ಮಾಡ್ತೀನಿ.

ನೀವ್ಯಾರು ಅದನ್ನ ಕೇಳೋಕೆ ? ' ಸುಬ್ಬಿ ಕೂಗಿಕೊಂಡಳು.

' ನಾನು ಮನುಷ್ಯಳು. ನಿಮ್ಮ ಹಾಗೆ ಪಶುವಲ್ಲ. ಅಪಾಯ ಸ್ಥಳಕ್ಕೆ ಏಟು ಬಿದ್ದು ಹೆಚ್ಚು ಕಮ್ಮಿ ಆದರೆ ? '

' ಆದರೆ ಆಯಿತು. ಇಂಥ ಮಕ್ಕಳು ಇರೋದಕ್ಕಿಂತ ಹೋಗೋದು ವಾಸಿ.'

ಅಂಬುಜಮ್ಮನಿಗೆ ಸುಬ್ಬಿಯ ಕೈಲಿ ವಾದಮಾಡಿ ಪ್ರಯೋಜನವಿಲ್ಲ ವೆಂದು ತೋರಿತು. ಆಕೆ ನನ್ನನ್ನು ಅಪ್ಪಿಕೊಂಡು ತನ್ನ ಮನೆಗೆ ಕರೆದು ಕೊಂಡು ಹೋದರು. ನನ್ನನ್ನು ಸಮಾಧಾನ ಪಡಿಸಿ ' ಏನಾಗಬೇಕು ? ' ಎಂದು ಕೇಳಿದರು.

ನಾನು ಬಿಕ್ಕಳಿಸುತ್ತಾ 'ನಂ....ಗೆ ಎರಡು....ಜಡೆ....'ಎಂದೆ.

' ಇಷ್ಟೇನೇ ! ನಾನು ಏನು ವಜ್ರ, ವೈಢೂರ್ಯ ಕೇಳಿದೆಯೋ ಎಂದುಕೊಂಡಿದ್ದೆ. ನಾನು ಎರಡು ಜಡೆ ಹಾಕಲಾ ? '

' ಹೂಂ.'

ಅಂಬುಜಮ್ಮ ನನಗೆ ಎರಡು ಜಡೆ ಹಾಕಿ, ಹೂ ಮುಡಿಸಿ, ಮುಖ ತೊಳೆದು ಊಟ ಮಾಡಿಸಿ ' ಈಗ ಸ್ಕೂಲಿಗೆ ಹೋಗು ' ಎಂದರು.

ನಾನು ಅಂಬುಜಮ್ಮನ ಮನೆಯಿಂದ ಹೊರಗೆ ಬಂದಾಗ ಸುಬ್ಬಿ ಮಣಿಯನ್ನು ಎತ್ತಿಕೊಂಡು ಸಮಾಧಾನಪಡಿಸುತ್ತಿದ್ದಳು. ಅವಳ ಮೇಲೆ ಕೋಪಗೊಂಡಿದ್ದ ನಾನು ನೇರವಾಗಿ ಸ್ಕೂಲಿಗೆ ಹೊರಟು ಬಂದೆ.

ಕಸ್ತೂರಿ ಕ್ಲಾಸಿಗೆ ತಡವಾಗಿ ಬಂದಳು. ಅವಳೊಡನೆ ಧರ್ಮಾವರದ ಸೀರೆ ಉಟ್ಟಿದ್ದ ಶ್ರೀಮಂತ ಮಹಿಳೆಯೊಬ್ಬರು ಬಂದರು. ಹಿಂದಿನ ದಿನ ಕಸ್ತೂರಿಯನ್ನು ಹೊಡೆದಿದ್ದ ಜಯಮ್ಮ ಮೇಡಂ ಕಕ್ಕಾಬಿಕ್ಕಿಯಾದರು. ಕಸ್ತೂರಿಯ ತಾಯಿ ಕೋಪಗೊಂಡಿದ್ದಂತೆ ತೋರಿತು. ಅವರು ಕ್ಲಾಸಿ ನೊಳಗೆ ಬಂದವರೇ ಜಯಮ್ಮನೊಡನೆ ಜಗಳವಾಡಲು ಆರಂಭಿಸಿದರು.

' ನಮ್ಮ ಮಕ್ಕಳನ್ನು ನೀವು ಹೊಡೆಯಲೀಂತ ನಾವು ಸ್ಕೂಲಿಗೆ ಕಳಿಸುತ್ತೀವೇನ್ರಿ ? ಸರಕಾರದೋರು ನಿಮಗೆ ಸಂಬಳ ಕೊಟ್ಟು ಇಟ್ಟಿ ರೋದು ಯಾಕೆ ? ನೀವಿಲ್ಲಿರೋದು ಪಾಠ ಕಲಿಸಕ್ಕೊ ಹೊಡೆಯೋಕೋ ?'

ಜಯಮ್ಮ ಸಮಾಧಾನದಿಂದ ಉತ್ತರ ಕೊಟ್ಟರು ' ನೋಡಿ ತಾಯಿ,

ನಿಮಗೆ ಎಷ್ಟು ಜನ ಮಕ್ಕಳಿದಾರೆ ? ಸ್ವಲ್ಪ ಹೇಳ್ತೀರಾ ? '

' ಅದೆಲ್ಲಾ ಕಟ್ಟಿಕೊಂಡು ನಿಮಗೇನು ? '

' ನೀವು ಹೇಳಿ. ನಾನು ಆಮೇಲೆ ಉತ್ತರ ಹೇಳ್ತೀನಿ.'

' ನಂಗೆ ಆರು ಜನ ಮಕ್ಕಳಿದಾರೆ ' ಆಕೆ ಅಸಹನೆಯಿಂದ ನುಡಿದರು.

' ನಿಮ್ಮ ಮಕ್ಕಳು ಅವರವರಲ್ಲೇ ಜಗಳ ಆಡೋದಿಲ್ಲವೆ? ಆಗ ನೀವು ಅವರಿಗೆ ಏಟು ಹಾಕೋದಿಲ್ಲವೇ ? '

' .... .... .... .... '

' ಆರು ಜನ ಮಕ್ಕಳನ್ನ ನೋಡಿಕೊಳ್ಳಕ್ಕಾಗದೇ ಹೆತ್ತ ತಾಯಿಯೇ ಮಕ್ಕಳ ಮೇಲೆ ಬೇಜಾರು ಮಾಡಿಕೊಂಡು ಒಂದೊಂದು ಸಲ ಹೊಡೆಯುವಾಗ, ನೋಡಿ ಈ ಅರವತ್ತು ಮಕ್ಕಳನ್ನೂ ನೋಡಿಕೊಂಡು, ಬಾಯಿ ಒಣಗಿಸಿಕೊಂಡು ಒಂದು ದಿನಕ್ಕೆ ಐದು ಗಂಟೆ ನಾನು ಒಂದೇ ಸಮ ಕಿರಿಚಬೇಕಲ್ಲಾ–ನಾನು ಸಹನೆಯಿಂದ ಇರೋದು ಹೇಗೆ ಸಾಧ್ಯ ಹೇಳಿ? ಸಾಲದುದಕ್ಕೆ ನನ್ನ ಹೊಟ್ಟೆ ಬರಿದು, ನನ್ನ ಮನೆ ಸುಧಾಮನ ಕುಟೀರ ಎನ್ನುವುದನ್ನ ಮರೆಯಬೇಡಿ. ಮನೆಯಲ್ಲಿ ಬಡತನದೊಡನೆ ಹೋರಾಡಬೇಕು, ಇಲ್ಲಿಗೆ ಬಂದರೆ ಈ ಹುಡುಗರೊಡನೆ ಹೆಣಗಾಡಬೇಕು. ಎಲ್ಲಿ ಐದು ನಿಮಿಷ ನೀವು ಈ ಕ್ಲಾಸನ್ನು ನೋಡಿಕೊಳ್ಳಿ. ಆಗ ನಿಮಗೇ ಎಲ್ಲಾ ಅರ್ಥವಾಗತ್ತೆ.'

' ನಿಮಗೆ ಈ ಕೆಲಸ ಮಾಡೋಕೆ ಆಗದಿದ್ದರೆ ಬಿಟ್ಟುಬಿಡಿ.'

' ನನಗೆ ಬರೋ ಸಂಬಳದಿಂದ ಪ್ರಾಣದಿಂದಲಾದರೂ ಇರಬಹುದು. ಬಿಟ್ಟರೆ ಅದಕ್ಕೂ ಗತಿಯಿಲ್ಲ. ನನ್ನ ಕೆಲಸ ಪ್ರೈಮರಿ ಸ್ಕೂಲಿನ ಉಪಾಧ್ಯಾಯವೃತ್ತಿ. ಬರೋ ಸಂಬಳ ನಲವತ್ತು. ದಿನಕ್ಕೆ ಐದು ಗಂಟೆ ಕೆಲಸ. ಅವರಿರುವುದು ಅರವತ್ತು ಜನ. ನಾನು ಒಬ್ಬಳು. ಸಾಲದುದಕ್ಕೆ Individual attention ಕೊಡೋದಿಲ್ಲಾಂತ ಬೇರೆ ದೂರು.... '

' .... .... .... .... '

' ನೀವು ಹೇಗಿದ್ದರೂ ಶ್ರೀಮಂತರು. ನೀವು ನಾಲ್ಕುಜನ ಸೇರಿ ಸರಕಾರಕ್ಕೆ ಯಾಕೆ ಹೇಳಬಾರದು—ಪ್ರೈಮರೀ ಸ್ಕೂಲುಗಳಲ್ಲಿ ಹೆಚ್ಚು ಸೆಕ್ಷನ್ನುಗಳನ್ನು ತೆಗೆಯಿರಿ. ಒಂದೊಂದು ಸೆಕ್ಷನ್ನಿನಲ್ಲಿ ನಲವತ್ತು ಜನ ಹುಡುಗರಿಗಿಂತ ಜಾಸ್ತಿ ಇರಬಾರದು. ಈಗಿರುವ ಎರಡರಷ್ಟು ಉಪಾಧ್ಯಾಯಿನಿಯ

4

ರನ್ನು ನೇಮಿಸಿ ಸಂಬಳ ಚೆನ್ನಾಗಿ ಕೊಡಿ....ಕೊನೆಗೆ ಅವರಿಗೆ ಕಿರಿಚ ಲಾದರೂ ಶಕ್ತಿ ಬೇಕಲ್ಲ–ಅದಕ್ಕಾದರೂ ಸಂಬಳ ಕೊಡಿ....ಆಗ ನಮಗೂ Individual attention ಕೊಡಲು ಸಾಧ್ಯ. ಹಸಿವು ಹಿಂಗಿದರೆ ಸಹನೆ ತಾನಾಗಿಯೇ ಬರುತ್ತದೆ........ '

ಕಸ್ತೂರಿಯ ತಾಯಿ ಒಂದುಗಳಿಗೆ ಸುಮ್ಮನೆ ನಿಂತಿದ್ದು

' ನಾನಿನ್ನು ಬರ್ತೀನಿ ' ಎನ್ನುತ್ತಾ ಹೊರಟುಹೋದರು. ಜಯಮ್ಮ ವಿಷಾದದ ನಗೆ ನಕ್ಕು ಪುಸ್ತಕ ಕೈಗೆ ತೆಗೆದುಕೊಂಡರು.

' ಗಂಧದ ಗುಡಿಯಿದು ಮೈಸೂರು;

ವೀಣೆಯ ಬೆಡಗಿದು ಮೈಸೂರು;

ಚಿನ್ನದ ನಾಡಿದು ಮೈಸೂರು........'

ಆಯಾಸದಿಂದ ಅವರ ದನಿ ಕ್ಷಣಕ್ಷಣಕ್ಕೂ ಕುಗ್ಗಿತ್ತು.

* * * * *

ಸಂಜೆ ಆಟವಾಡಿಕೊಂಡು ನಾನು ಮನೆ ತಲುಪಿದಾದ ಏಳು ಘಂಟೆ ಯಾಗಿತ್ತು. ಸುಬ್ಬಿ ಗುರುವನ್ನು ಆಡಿಸುತ್ತಾ ವಠಾರದ ಬಾಗಿಲಲ್ಲಿ ಕುಳಿತಿದ್ದಳು. ಸ್ನೇಹಿತೆಯೊಬ್ಬಳಿಂದ ಒಂದು ಚೂರು ಬಳಪವನ್ನು ಸಂಪಾದಿಸಿದ್ದ ನಾನು ಬಹಳ ಉತ್ಸಾಹದಲ್ಲಿದ್ದೆ. ಸುಬ್ಬಿ ನನ್ನ ದಾರಿ ಕಾಯುತ್ತಾ ಕುಳಿತಿದ್ದಂತೆ ತೋರಿತು. ನನಗೆ ಬೆಳಗಿನ ಕೋಪ ಆರಿರಲಿಲ್ಲ. ನಾನು ಸುಬ್ಬಿಯ ಕಡೆ ತಿರುಗಿಯೂ ನೋಡದೆ ಒಳಗೆ ನುಸುಳಿಹೋಗಲು ಯತ್ನಿಸಿದೆ.

' ಮಧ್ಯಾಹ್ನ ಯಾಕೆ ಬರಲಿಲ್ಲ ? ' ಸುಬ್ಬಿ ಕೇಳಿದಳು.

'...............'

ನಾನು ಸ್ಲೇಟನ್ನು ಗೂಡಿನಲ್ಲಿರಿಸಿ ಉಷೆಯೊಡನೆ ಆಡಲೆಂದು ಹೊರಗೆ ಹೊರಟೆ. ಸುಬ್ಬಿ ನನ್ನ ಕೈ ಹಿಡಿದೆಳೆದು ' ತಿಂಡಿ ತಿನ್ನೋಲ್ವೇ ' ಎಂದಳು.

'...............'

' ಹಸಿವಾಗುತ್ತಿಲ್ಲವೇ ? '

ನಾನು ಮಾತಾಡದೇ ಸುಬ್ಬಿಯ ಹಿಡಿತದಿಂದ ಪಾರಾಗಲು ಯತ್ನಿಸಿದೆ. ನಾನು ತಿಂಡಿ ತಿಂದರೆಷ್ಟು ಬಿಟ್ಟರೆಷ್ಟು ? ಸುಬ್ಬಿಗೆ ಬೇಕಾದವರು

ಗುರು, ಮಣಿ ತಾನೇ ? ಏಟು ತಿನ್ನೋದಕ್ಕೆ ಮಾತ್ರ ನಾನು.

ಸುಬ್ಬಿ ನನ್ನನ್ನು ತಬ್ಬಿಕೊಂಡು ' ನನ್ನ ಚಿನ್ನ ಮಾತಾಡಮ್ಮ. ನನ್ನ ಕೈ ಸೇದು ಹೋಗಲಿ, ಬೆಳಗ್ಗೆ ನಂಗೆ ಬುದ್ಧಿಸರಿಯಾಗಿರಲಿಲ್ಲ. ಅವರಿಗೂ ಸ್ಕೂಲಿಗೆ ಹೊತ್ತಾಗಿತ್ತು. ಗುರು, ಮಣಿ ಬೇರೆ ಹಠ ಮಾಡ್ತಿದ್ದರು. ಅಂಬುಜಮ್ಮ ಬಂದು ಬಿಡಿಸಿಕೊಳ್ಳದಿದ್ದರೆ ನೀನು ಸತ್ತೇಹೋಗ್ತಿದ್ದೆ. ಮಾಡೋಕೆ ಕೈಲಾಗೋದಿಲ್ಲ. ಬಡತನ ಬೇರೆ ಬಂದು ಕಾಡುತ್ತಿದೆ. ನನ್ನ ಕೈ ಮುರಿದು ಬೀಳ. ನೋಡು, ನಿಂಗಿಷ್ಟವಾದ ಗುಳ್ಪಾಟೆ ಮಾಡಿದೀನಿ. ಬೆಲ್ಲ ಹಾಕಿಲ್ಲ. ಸಕ್ಕರೆ ಹಾಕಿ ಮಾಡಿದೀನಿ .... .... ' ಎಂದಳು.

ನಾನು ಕಪ್ಪು ಎನ್ನುವುದು ನನಗೆ ಮೊದಲಿನಿಂದ ತಿಳಿದಿತ್ತು. ಕಪ್ಪಗಿರುವ ಬೆಲ್ಲ, ಚಿಗುಳಿ ಇವುಗಳನ್ನು ತಿಂದರೆ ಬಣ್ಣ ಇನ್ನೂ ಕಪ್ಪಾಗುವುದೆಂದು ನನ್ನ ಧೃಡ ನಂಬಿಕೆ. ಅದರಿಂದಾಗಿಯೇ ಹುರಿಟ್ಟು, ಬೆಲ್ಲ ಹಾಕಿದ ಗುಳ್ಪಾಟೆ ಯಾವುದನ್ನೂ ತಿನ್ನುತ್ತಿರಲಿಲ್ಲ. ಅದನ್ನು ತಿಳಿದ ಸುಬ್ಬಿ ನನಗಾಗಿ ಸಕ್ಕರೆ ಹಾಕಿ ಗುಳ್ಪಾಟೆ ಮಾಡಿದ್ದಳು.

' ಸಕ್ಕರೆ ಹಾಕಿದ ಗುಳ್ಪಾಟೆ ' ಎಂದೊಡನೆ ನನ್ನ ಕೋಪವೆಲ್ಲ ಮಾಯವಾಯಿತು. ನಾನು ಉತ್ಸಾಹದಿಂದ ಚಪ್ಪಾಳೆ ತಟ್ಟಿ ' ತುಂಬಾ ಸಕ್ಕರೆ ಹಾಕಿದೀಯಾ ? ' ಎಂದೆ.

' ಹೂಂ. ತಂದುಕೊಡ್ತೀನಿ ' ಎನ್ನುತ್ತಾ ಸುಬ್ಬಿ ಗುಳ್ಪಾಟೆಯ ದಪ್ಪ ಉಂಡೆಯನ್ನು ತಂದು ನನ್ನ ಕೈಗಿತ್ತಳು. ನಾನು ತಿನ್ನುತ್ತಾ ಆಟವಾಡಲು ಹೊರಗೆ ಬಂದೆ. ಅಂಬುಜಮ್ಮ ಸುಬ್ಬಿಯನ್ನು ನೋಡಿ ನಸುನಕ್ಕು

' ಇನ್ನೇನು ನಿಮ್ಮ ಮಗಳನ್ನು ಸಂತೋಷಪಡಿಸಿದ್ದಾಯಿತಲ್ಲಾ ಇನ್ನಾದರೂ ಹೋಗಿ ಊಟಮಾಡಿ. ಬೆಳಗಿನಿಂದ ಹಸಿದುಕೊಂಡಿದೀರಿ ' ಎಂದರು.

' ನಿಮ್ಮ ಹತ್ತಿರ ಸಾಲ ತೆಗೆದುಕೊಂಡಿರುವ ಸಕ್ಕರೇನ ನಾಳೆ ತೀರಿಸ್ತೀನಿ.'

' ಅದು ಆಮೇಲಾಗಲಿ. ನೀವು ಹೋಗಿ ಊಟ ಮಾಡಿ. ನೀವು ಅವಳನ್ನ ಸಾಯುಬೀಳ ಹೊಡೆದಿರಿ ಅನ್ನೋದನ್ನ ಅವಳು ಮರೆತ್ತಿದಾಳೆ. ನೀವು ಬೆಳಗಿನಿಂದ ಉಪವಾಸ ಮಾಡಿ ಕೊರಗಿದಿರಿ. ಹೋಗಿ ಊಟಮಾಡಿ'

ಎಂದು ಅಂಬುಜಮ್ಮ ಸುಬ್ಬಿಗೆ ಹೇಳಿದರು.

ನಾನು ಒಳಗೆ ಹೋದಾಗ ಸೀಮೆಯೆಣ್ಣೆ ದೀಪದ ಮಂಕು ಬೆಳಕಿನಲ್ಲಿ ಸುಬ್ಬಿ ಒಬ್ಬಳೇ ಕುಳಿತು ಊಟಮಾಡುತ್ತಿದ್ದಳು. ನಾನು ಒಳಗೆ ಬಂದು ದನ್ನು ನೋಡಿ ತಲೆ ಎತ್ತಿ 'ಬಾಪ್ಪಾ, ನನ್ನ ಹತ್ತಿರವೇ ಕುಳಿತುಕೋ' ಎಂದಳು. ನಾನು ಹೋಗಿ ಸುಬ್ಬಿಯ ಒತ್ತಿಗೇ ಕುಳಿತುಕೊಂಡೆ. ಸುಬ್ಬಿ ಎಡಗೈಯಿಂದ ನನ್ನನ್ನು ಮತ್ತಷ್ಟು ಹತ್ತಿರಕ್ಕೆ ಎಳೆದುಕೊಂಡು ತಂಗಳು ಅನ್ನವನ್ನು ತಿಂದು ಮುಗಿಸಿದಳು.

ರಾತ್ರಿ ನನಗಿನ್ನೂ ನಿದ್ದೆ ಸರಿಯಾಗಿ ಬಂದಿರಲಿಲ್ಲ. ಸುಬ್ಬಿ, ಅಪ್ಪ ಮಾತನಾಡುತ್ತಿದ್ದುದು ನನ್ನ ಕಿವಿಯ ಮೇಲೆ ಬಿತ್ತು.

'ನಿದ್ದೆ ಬಂತೇ ?' ಸುಬ್ಬಿ ಅಪ್ಪನನ್ನು ಕೇಳಿದಳು.

'ಇನ್ನೂ ಇಲ್ಲ.'

ಒಂದು ಗಳಿಗೆ ಸುಮ್ಮನಿದ್ದು ಆಕೆ ಹೇಳಿದಳು 'ಬಡವರಿಗೆ ಮಕ್ಕಳಾಗಬಾರದು. ಅಲ್ಲವೇ'

'................'

'ಅವಕ್ಕೂ ಸುಖವಿಲ್ಲ. ನಮಗೂ ಸುಖವಿಲ್ಲ. ಬೆಳಗ್ಗೆ ಎರಡು ಜಡೆ ಹಾಕೂಂತ ಹಠ ಮಾಡಿದಳು. ನನಗೂ ಕೈ ಬಿಡುವಿರಲಿಲ್ಲ. ಅವಳನ್ನ ಹೊಡೆದ ಹಾಗೆ ಗುರೂನ ಹೊಡೆದಿದ್ದರೆ ಅವನು ಖಂಡಿತ ಸತ್ತು ಹೋಗ್ತಿದ್ದ. ಅವಳನ್ನ ಹೊಡೆದಿದ್ದಕ್ಕೆ ನನ್ನ ಕೈಯಿನ್ನೂ ಚುರು ಗುಟ್ಟುತ್ತಿದೆ. ಕೋಪದಲ್ಲಿ ಹೊಡೆದುಬಿಟ್ಟೆ. ಮಧ್ಯಾಹ್ನವೆಲ್ಲಾ ಮನಸ್ಸು ಒದ್ದಾಡಿಬಿಡ್ತು .... ....'

'ಅದಕ್ಕೆ ಸಕ್ಕರೆಯಿಂದ ಮಾಡಿದ ಗುಳುಪಾಟಿ ಲಂಚ ....'

'ಹೂಂ. ಸಾಲ ತಂದು ಮಾಡಿದೀನಿ. ನಾಳೆ ತೀರಿಸಬೇಕು.'

ನನಗೆ ನಿದ್ದೆ ಹತ್ತಿದುದರಿಂದ ಮುಂದಿನ ಮಾತುಗಳು ಕೇಳಲಿಲ್ಲ.

ಮಾರನೆಯ ದಿನ ನನಗೆ ಎರಡು ಜಡೆ ಹಾಕಲು ಸುಬ್ಬಿ ತಾನಾಗಿಯೇ ಮುಂದೆ ಬಂದಳು.

'ಬಾಮ್ಮಾ ಇವತ್ತು ಎರಡು ಜಡೆ ಹಾಕ್ತೀನಿ.'

ಜೋಡಿ ಜಡೆಗೆ ತಕ್ಕಹಾಗೆ ನನ್ನ ಹತ್ತಿರ ರಿಬ್ಬನ್ನು, ಲಂಗವಿರಲಿಲ್ಲ.

ಎರಡು ಜಡೆ ಹಾಕಿಕೊಂಡು ನಾರು ಬಿಗಿದುಕೊಳ್ಳುವುದು ನನಗಿಷ್ಟವಿರಲಿಲ್ಲ. ಅಲ್ಲದೆ ಒಂದೇ ದಿನಕ್ಕೆ ಎರಡು ಜಡೆಯ ಮೇಲಿನ ವ್ಯಾಮೋಹ ಹೊರಟು ಹೋಗಿತ್ತು.

'ಬೇಡ. ನಂಗೆ ಒಂದೇ ಸಾಕು.'

ಸುಬ್ಬಿಗೆ ನಿರಾಶೆಯಾಯಿತು. 'ನಾನು ಅಂಬುಜಮ್ಮನಿಗಿಂತ ಚೆನ್ನಾಗಿ ಹಾಕ್ತೀನಿ. ಬರ್‍ತೀಯಾ?'

'ಬೇಡ.'

ಸುಬ್ಬಿಯ ನಿರಾಶೆ ಸಿಡುಕಿನ ರೂಪ ತಾಳಿತು. 'ಬೇಡದೇ ಇದ್ರೆ ಹೋಗು' ಎಂದು ಆಕೆ ರೇಗಿ ನುಡಿದಳು.

ನನ್ನ ಏಳನೇ ವರ್ಷದಿಂದಲೂ ನಾನು ಸುಬ್ಬಿಗೆ ಮನೆಗೆಲಸದಲ್ಲಿ ಸಹಾಯ ಮಾಡತೊಡಗಿದೆ. ಹಾಗೆ ಸಹಾಯ ಮಾಡದೇ ಬೇರೆ ದಾರಿಯೇ ಇರಲಿಲ್ಲ. ಗುರು ಹುಡುಗನಾದುದರಿಂದ ಅವನು ಮನೆಗೆಲಸ ಮಾಡುವುದು ಸಾಧ್ಯವೇ ಇರಲಿಲ್ಲ. ಮಣಿ ಚಿಕ್ಕ ಹುಡುಗಿ ಎನಿಸಿಕೊಂಡಳು. ಸುಬ್ಬಿಗೆ ಬಿಡುವಿಲ್ಲದಿದ್ದರೆ ಮಣಿಗೆ ಮಡಿ ಉಡಿಸುವುದು, ಊಟ ಮಾಡಿಸುವುದು, ಬಟ್ಟೆ ಹಾಕುವುದು ಈ ಕೆಲಸಗಳೆಲ್ಲಾ ನನ್ನ ಪಾಲಿಗೆ ಬಂದವು. ಸುಬ್ಬಿ ತಲೆನೋವು, ತಲೆಸುತ್ತು ಎಂದು ಮಲಗಿದಾಗ ಕಾಫಿ ಮಾಡುವುದು, ಒಲೆ ಹಚ್ಚಿ ಅನ್ನ ಮಾಡುವುದು ಈ ಕೆಲಸವೂ ಕ್ರಮೇಣ ನನ್ನದಾಯಿತು.

ಮಣಿ ಎರಡೂವರೆ ವರ್ಷದವಳಿದ್ದಾಗ ಸುಬ್ಬಿ ತಲೆ ಸುತ್ತು, ವಾಕರಿಕೆ ಎಂದು ಹಾಸಿಗೆ ಹಿಡಿದು ಮಲಗಿದಳು. ಬೆಳಿಗ್ಗೆಯೇ ಸುಬ್ಬಿ ನನಗೆ

'ಇವತ್ತು ಸ್ಕೂಲಿಗೆ ಹೋಗಬೇಡ. ನೀನೇ ಕೆಲಸ ಮಾಡಬೇಕು' ಎಂದಳು. ನನ್ನ ವಿದ್ಯಾಭ್ಯಾಸ ಕುಂಟಲು ಮೊದಲಾದುದು ಅಂದಿನಿಂದ.

ಸುಬ್ಬಿ ಒಲೆ ಹಚ್ಚುವುದು, ಅಕ್ಕಿ ತೊಳೆದು ಅನ್ನಕ್ಕೆ ನೀರಿಡುವುದು ಎಲ್ಲವನ್ನೂ ಕುಳಿತಲ್ಲಿಂದಲೇ ಕಲಿಸಲು ಪ್ರಯತ್ನಿಸಿದಳು. ಮೊದಲು ನನಗೆ ಅದೂ ಒಂದು ಆಟವಾಗಿ ತೋರಿತು. ಬೆಂಕಿ ಕಡ್ಡಿ ಗೀರಿ ಅದು ಭಗ್ಗನೆ ಹತ್ತಿಕೊಳ್ಳುವುದನ್ನು ನೋಡುವುದೆಂದರೆ ನನಗೆ ತುಂಬಾ ಆಸೆ. ಅದನ್ನು ನೋಡಲೆಂದೇ ನಾಲ್ಕಾರು ಕಡ್ಡಿಯನ್ನು ವ್ಯರ್ಥಗೊಳಿಸಿ ಒಲೆ ಹೊತ್ತಿಸಿದೆ.

'ಅನ್ಯಾಯವಾಗಿ ನಾಲ್ಕು ಕಡ್ಡಿ ಹೋಯ್ತು' ಎಂದು ಸುಬ್ಬಿ ಮಲಗಿದಲ್ಲಿಂದಲೇ ಸಂಕಟಪಟ್ಟಳು. ಬೀಸಣಿಗೆಯನ್ನು ರಪರಪನೆ ನೆಲದಮೇಲೆ ಬಡಿದು ಬೀಸುವುದೂ ನನಗೆ ತಮಾಷೆಯಾಗಿ ತೋರಿತು.

'ಹಾಗೆ ಬೀಸಿದರೆ ಬೀಸಣಿಗೆ ಒಂದು ದಿನ ಕೂಡ ಬಾಳೋದಿಲ್ಲ. ಇಲ್ಲಿ ತಗೊಂಡು ಬಾ. ಓಲೆ ಬೀಸೋದು ಹೇಗೇಂತ ತೋರಿಸ್ತೀನಿ.'

ನಾನು ಬೀಸಣಿಗೆಯನ್ನು ತೆಗೆದುಕೊಂಡು ಹೋಗಿ ಸುಬ್ಬಿಯ ಕೈಗೆ ಕೊಟ್ಟೆ. ಆಕೆ ಬೀಸಣಿಗೆ ಹಾಳಾಗದಂತೆ ಬೀಸುವುದನ್ನು ಕಲಿಸಿಕೊಟ್ಟಳು.

ಅಕ್ಕಿ ಕುದಿದು ಅನ್ನವಾಗಿ ಮಾರ್ಪಾಡಾಗುವುದಂತೂ ನನ್ನ ಪಾಲಿಗೆ ಅತ್ಯಂತ ಮನೋರಂಜನೆಯ ದೃಶ್ಯ. ಅಕ್ಕಿ ಕುದಿಯುವಾಗ ಗುಳ್ಳೆಗಳು ಒಡೆದು ಹಬೆ ಹೊರಡುವುದನ್ನು ನೋಡಲು ಎರಡು ಕಣ್ಣು ಸಾಲದು ಎಂದು ನಾನು ತಿಳಿದೆ

ಮೊದಲನೆಯ ದಿನ ಅನ್ನ ಮಿಡ್ಡೆಯಾಯಿತು. ಸಾರಿಗೆ ಉಪ್ಪು, ಹುಳಿ, ಖಾರ ಯಾವುದೂ ಇರಲಿಲ್ಲ. ಆದರೂ ಸುಬ್ಬಿ, ಅಪ್ಪ ನನ್ನಡಿಗೆಯನ್ನು ಮುಕ್ತ ಕಂಠದಿಂದ ಹೊಗಳಿ ಊಟ ಮಾಡಿದರು. ಆ ದಿನವಂತೂ ನನ್ನ ಕಾಲು ನೆಲದ ಮೇಲಿದ್ದರೂ ತಲೆ ಮಾತ್ರ ಸ್ವರ್ಗದಲ್ಲಿತ್ತು. ಸುಬ್ಬಿ ಊಟ ಮಾಡಿ ಗಂಡನ ಕಡೆ ತಿರುಗಿ ಹೇಳಿದಳು

'ಎಂಟು ದಿನ ಹೀಗೆ ಮಾಡಿದರೆ ಆಮೇಲೆ ನನ್ನೂ ಮೀರಿಸ್ತಾಳೆ.'

ಅಂದಿನಿಂದ ನಾನು ಸ್ಕೂಲಿಗೆ ತಪ್ಪಿಸಿಕೊಳ್ಳುವುದು ಸಾಮಾನ್ಯವಾಯಿತು. ಸುಬ್ಬಿ ಎರಡೆರಡು ದಿನಕ್ಕೂ ಮೈಗೆ ಹುಷಾರಿಲ್ಲವೆಂದು ಮಲಗಿ ಬಿಡುತ್ತಿದ್ದಳು. ಆಗ ಮನೆಯ ಕೆಲಸವೆಲ್ಲಾ ನನ್ನ ಮೇಲೆ ಬೀಳುತ್ತಿತ್ತು. ಕೊನೆಗೊಂದು ದಿನ ಸುಬ್ಬಿ ನನಗೆ

'ಈ ವರ್ಷ ಸ್ಕೂಲು ಬಿಟ್ಟುಬಿಡು. ಈ ಸಾರಿ ನಾನು ಮೈ ಕಳೆದ ಮೇಲೆ ನೀನು ಮತ್ತೆ ಹೋಗುವಿಯಂತೆ' ಎಂದಳು.

ನನ್ನ ಓರಗೆಯವರಾದ ಉಷಾ, ವೇಣು ಸ್ಕೂಲಿಗೆ ಹೋಗುವಾಗ ನಾನು ಮನೆಯಲ್ಲಿಯೇ ಉಳಿದು ಕೆಲಸ ಮಾಡಬೇಕೆಂದು ತಿಳಿದು ನನಗೆ ದುಃಖವಾಯಿತು. ಸುಬ್ಬಿಯ ಸಲಹೆಯನ್ನು ನಾನು ಮೊದಲು ತಿರಸ್ಕರಿಸಿದೆ. ಸುಬ್ಬಿ ಒಳ್ಳೆಯ ಮಾತಿನಿಂದ ನನ್ನನ್ನು ಒಪ್ಪಿಸಲು ಪ್ರಯತ್ನಿಸಿದಳು.

ನಾನು ಅದಕ್ಕೆ ಒಪ್ಪದಿರಲು ಏಟಿನ ಬೆದರಿಕೆ ಹಾಕಿ ನನ್ನನ್ನು ಒಪ್ಪಿಸಿದಳು.

ಅಲ್ಲಿಗೆ ನನ್ನ ವಿದ್ಯಾಭ್ಯಾಸ ಮುಕ್ತಾಯಗೊಂಡಿತು.

ಮೊದಲು ವಿನೋದಕರವಾಗಿದ್ದ ಅಡಿಗೆ ಕೆಲಸ ಈಗ ನನಗೆ ಬೇಸರ ವನ್ನುಂಟುಮಾಡುತ್ತಿತ್ತು. ಆದರೂ ನನ್ನ ಅಡಿಗೆ ರುಚಿ ಎಂದು ವಠಾರ ದಲ್ಲಿದ್ದವರೆಲ್ಲಾ ಒಪ್ಪಿಕೊಂಡಿದ್ದರು.

ಈ ಬಾರಿ ಸುಬ್ಬಿ ದುರ್ಬಲಳಾಗಿದ್ದುದರಿಂದ ಮನೆಯಲ್ಲಿ ಹೆರಿಗೆಯಾ ಗುವುದು ಸಾಧ್ಯವಿರಲಿಲ್ಲ. ಆದುದರಿಂದ ಅಪ್ಪ ಸುಬ್ಬಿಯನ್ನು ಆಸ್ಪತ್ರೆಗೆ ಸೇರಿಸಿದರು. ಮನೆಯ ಸಂಪೂರ್ಣ ಜವಾಬ್ದಾರಿ ನನ್ನ ಮೇಲೆ ಬಿತ್ತು.

ಗುರು, ಮಣಿ 'ಅಕ್ಕ, ಅಕ್ಕ' ಎನ್ನುತ್ತಾ ಪ್ರತಿಯೊಂದು ಕೆಲಸಕ್ಕೂ ನನ್ನನ್ನು ಆಶ್ರಯಿಸುತ್ತಿದ್ದರು. ಜವಾಬ್ದಾರಿಯೆಲ್ಲಾ ನನ್ನ ತಲೆಯ ಮೇಲೆ ಬಿದ್ದುದರಿಂದ ನನಗೆ ಎಲ್ಲಿಲ್ಲದ ಹಿರಿತನ ಬಂದಿತ್ತು. ನನಗೆ ತಿಳಿಯದ ಕೆಲ ಸವನ್ನು ವಠಾರದ ಅಜ್ಜಿಯೋ, ಅಂಬುಜಮ್ಮನೋ ಯಾರಾದರೂ ಹೇಳಿ ಕೊಡುತ್ತಿದ್ದರು. ಮಂಜುಳಾ ಬೆಳಗಾದೊಡನೆ ಫ್ಯಾಕ್ಟರಿಗೆ ಹೊರಟು ಹೋಗುತ್ತಿದ್ದಳಾದುದರಿಂದ ಅವಳಿಂದ ನನಗೆ ಯಾವ ಸಹಾಯವೂ ಆಗುತ್ತಿ ರಲಿಲ್ಲ. ಗುರುವನ್ನು ಸಮಯಕ್ಕೆ ಸರಿಯಾಗಿ ಸ್ಕೂಲಿಗೆ ಕಳುಹಿಸುವಾಗ ಮಾತ್ರ ನನಗೆ ಕೊಂಚ ಹೊಟ್ಟೆಯುರಿಯುತ್ತಿತ್ತು. ನಾನೂ ಹುಡುಗನಾಗಿ ಹುಟ್ಟಿ ದ್ದರೆ ಈ ಜವಾಬ್ದಾರಿಯಿಲ್ಲದೆ ಹಾಯಾಗಿರಬಹುದಾಗಿತ್ತಲ್ಲವೆ ?

ಸುಬ್ಬಿ ಹನ್ನೊಂದು ದಿನಗಳ ನಂತರ ಮನೆಗೆ ಬಂದಳು. ಮಗುವಿಗೆ 'ರಾಮಕೃಷ್ಣ' ಎಂದು ನಾಮಕರಣವಾಯಿತು. ನಾಮಕರಣವೆಂದರೆ ಬರಿಯ ಶಾಸ್ತ್ರದ ನಾಮಕರಣ. ಮನೆಯ ಮುಂದೆ ತೋರಣವಾಗಲಿ, ವಾಲಗ ವಾಗಲಿ ಇರಲಿಲ್ಲ. ಅಜ್ಜಿಯ ಮೊಮ್ಮಗುವಿಗೆ ನಾಮಕರಣವಾದಾಗ ಮನೆಯ ಮುಂದೆ ಹಸಿರು ತೋರಣ ಹಾರಾಡಿತ್ತು. ವಠಾರವೆಲ್ಲಾ ವಾಲಗದಿಂದ ಪ್ರತಿಧ್ವ ನಿಸಿತ್ತು. ಅಜ್ಜಿಯ ಮನೆಯ ಅಡಿಗೆ ಮನೆಯಿಂದ ಔತಣದಡಿಗೆಯ ಹೊಗೆ ದಟ್ಟವಾಗಿ ಮೇಲೆದ್ದು ಮುಗಿಲಿನಲ್ಲಿ ಲೀನವಾಗಿತ್ತು. ಆದರೆ ನಮ್ಮ ಮನೆಯಲ್ಲಿ ಯಾವ ಸಂಭ್ರಮವೂ ನಡೆಯಲಿಲ್ಲ. ತಂದೆಯ ಮುಖ ಚಿಂತೆ ಯಿಂದ ಸುಕ್ಕಾಗಿತ್ತು. ಆಯಾಸ, ಬಳಲಿಕೆಯಿಂದ ಸುಬ್ಬಿಯ ಮುಖ ಬಿಳಿಚಿಕೊಂಡಿತ್ತು. ಇಬ್ಬರೂ ಏನೋ ಅಗಾಧವಾದ ಯೋಚನೆಯಲ್ಲಿ

ಮುಳುಗಿದ್ದಂತೆ ತೋರಿತು.

ಸಂಜೆ ಫ್ಯಾಕ್ಟರಿಯಿಂದ ಮಂಜುಳಾ ಬಂದವಳೇ ನೇರವಾಗಿ ಸುಬ್ಬಿಯನ್ನು ನೋಡಲು ಬಂದಳು. ರಾಮಕೃಷ್ಣನನ್ನು ಎತ್ತಿಕೊಂಡು ನನ್ನ ಕಡೆ ಬೆರಳು ತೋರಿಸಿ

'ಎಲ್ಲಾ ಇವಳ ಹಾಗೇನೆ. ಬಣ್ಣವೂ ಕಪ್ಪು. ಆದರೇನಂತೆ? ಗಂಡಸಿಗೆಂತಹ ಬಣ್ಣ? ಗಂಡು ಮಕ್ಕಳು ಹೇಗಿದ್ದರೂ ಸರಿ' ಎಂದಳು.

ಈಗ ನನಗೆ ಬುದ್ಧಿ ಸುಮಾರಾಗಿ ಬೆಳೆದಿತ್ತು. ಇತರರು ನನ್ನನ್ನು 'ಕಪ್ಪು' ಎಂದಾಗ ನನ್ನ ಮನಸ್ಸಿನಲ್ಲಿಯೇ ನೋವಿನ ಅಲೆಯೊಂದು ಎದ್ದು ಮಾಯವಾಗುತ್ತಿತ್ತು. ಗುರು, ಮಣಿಗೆ ನನ್ನನ್ನು ಹೋಲಿಸಿದಾಗ ನನ್ನ ಎದೆಯಲ್ಲಿ ಮತ್ಸರ ಕಡೆಯುತ್ತಿತ್ತು.

ಮಂಜುಳೆಯ ಮಾತುಗಳು ಸುಬ್ಬಿಯ ಕಿವಿಯ ಮೇಲೆ ಬಿದ್ದಿರಲಿಲ್ಲ. ಆಕೆ 'ಅದೆಲ್ಲಾ ಸರಿ. ಸಂಸಾರ ಹೀಗೆ ಬೆಳೆದರೆ ಗತಿಯೇನು?' ಎಂದಳು.

'ಹಾಗಾದರೆ ನಾನೊಂದು ಉಪಾಯ ಹೇಳ್ತೀನಿ ಕೇಳ್ತೀಯಾ?'

'ಏನದು?'

'ಇನ್ನು ಮೇಲೆ ನೀನು ನಮ್ಮ ಮನೆಯಲ್ಲಿ ಮಲಗಿಕೋ. ಉಷಾ, ನನ್ನ ಚಿಕ್ಕ ತಮ್ಮಂದಿರು ನಿಮ್ಮ ಮನೆಯಲ್ಲಿ ಮಲಗಿಕೊಳ್ಳಲಿ.'

'ಎಷ್ಟು ದಿನಾಂತ ಹೀಗೆ....' ಸುಬ್ಬಿ ರಾಗ ತೆಗೆಯುವಷ್ಟರಲ್ಲಿ ಮಂಜುಳ ಮೃದುವಾಗಿ ಸುಬ್ಬಿಯ ಕೆನ್ನೆಯ ಮೇಲೆ ಹೊಡೆದು

'ಅಕ್ಕಿಯ ಮೇಲೆ ಆಸೆ. ನೆಂಟರ ಮೇಲೆ ಪ್ರೀತಿ ಅಲ್ಲವೆ?' ಎಂದಳು. ಸುಬ್ಬಿ ಮಂಜುಳೆಯ ಅಪಹಾಸ್ಯ ಕೇಳಿ ನಗುವ ಸ್ಥಿತಿಯಲ್ಲಿರಲಿಲ್ಲ.

'ತಮಾಷಿ ಮಾಡಬೇಡ ಮಂಜೂ. ಅವರೂ ಚಿಕ್ಕವರು, ನಾನೂ ........'

'ಈಗ ನಾನಿಲ್ಲವೇ?'

'ನಿನ್ನದು ಬೇರೆ ರೀತಿಯಾಯಿತು. ಹೀಗೇ ಮಕ್ಕಳಾಗುತ್ತಿದ್ದರೆ ಇದು ಎಲ್ಲಿಗೆ ಕೊನೆ ಎಂದು ನಮ್ಮಿಬ್ಬರಿಗೂ ಯೋಚನೆಯಾಗಿದೆ. ಈಗಾಗಲೇ ಎರಡು ಹೊತ್ತಿನ ಊಟ ಹವಣಿಸಬೇಕಾದರೆ ಅವರಿಗೆ ಸಾಕಾಗಿ ಹೋಗಿದೆ. ಒಂದು ಗಳಿಗೆ ವಿರಾಮವಿಲ್ಲದ ಹಾಗೆ ಅವರು ದುಡಿಯುತ್ತಿ

ದ್ದಾರೆ. ಸ್ಕೂಲು....ಸ್ಕೂಲು ತಪ್ಪಿದರೆ ಮನೆಪಾಠಗಳು....ಪಾಪ! ಅವ ರಿಗೂ ವಿಶ್ರಾಂತಿ ಬೇಡವೇ? ಸಾಲದುದಕ್ಕೆ ಒಳ್ಳೇ ಆಹಾರವೇ? ಗಾಳಿ ಬೆಳಕಿರುವ ಮನೆಯೇ? ಮನರಂಜನೆಯೇ? ಅವರಂತೂ ಅಸ್ಥಿಪಂಜರದ ಹಾಗಾಗಿದಾರೆ....' ಮಾತನಾಡುತ್ತಾ ಸುಬ್ಬಿ ಅಳತೊಡಗಿದಳು.

ಮಂಜುಳಾ ಅವಾಕ್ಕಾದಳು.

'ಶ್ ...ಸುಬ್ಬೀ, ಅಳಬೇಡ. ಹಸೀ ಮೈ. ನಂಜಾದೀತು. ನೀನು ಅಳ್ತಾ ಇರೋದನ್ನ ನೋಡಿ ಮಕ್ಕಳೆಲ್ಲಾ ಗಾಬರಿಯಾಗಿವೆ....'?

'ಮಕ್ಕಳಿಗೆ ತಾನೇ ಏನು ಸುಖ ಹೇಳು? ಅವುಗಳಿಗೆ ಎರಡು ಹೊತ್ತು ಹೊಟ್ಟೆ ತುಂಬಾ ಅನ್ನ ಹಾಕುವ ಯೋಗ್ಯತೆ ನಮಗಿಲ್ಲ. ಇನ್ನು ಅವುಗಳಿಗೆಲ್ಲಾ ವಿದ್ಯ ಬುದ್ಧಿ ಕಲಿಸಿ ಸರಿಯಾದ ಕಡೆ ಕೊಟ್ಟು ಮದುವೆ ಮಾಡುವ ಯೋಗ್ಯತೆ ಮೊದಲೇ ಇಲ್ಲ. ಇವಳನ್ನಂತೂ ಸ್ಕೂಲು ಬಿಡಿಸಿ ಮನೇಲಿ ಪರಿಚಾರಿಕೆಗೆ ಇಟ್ಟುಕೊಂಡಿದ್ದಾಯಿತು. ಇನ್ನೂ ಎಂಟು ಕೂಡ ತುಂಬಿಲ್ಲ. ಆಗಲೇ ನನ್ನ ಬಾಣಂತನಕ್ಕೆ ಹಾಕಿಕೊಳ್ಳಬೇಕು....'

'ಅಳಬೇಡ ಸುಬ್ಬಿ. ದೇವರು ಕಣ್ಣುಬಿಟ್ಟು ನೋಡಿಯಾನು.'

ಮಂಜುಳಾ ಸುಬ್ಬಿಯನ್ನು ಸಮಾಧಾನ ಪಡಿಸಲು ದೇವರ ಹೆಸರು ಹೇಳಿದಳು. ಆದರೆ ಅವಳಿಗೇ ತನ್ನ ಮಾತಿನಲ್ಲಿ ನಂಬಿಕೆಯಿರಲಿಲ್ಲ.

ಸುಬ್ಬಿ ಹೇಳಿದಂತೆ ನಾನೇ ಅವಳ ಬಾಣಂತನಕ್ಕೆ ನಿಲ್ಲಬೇಕಾಯಿತು. ಅಪ್ಪ ಐದು ಗಂಟೆಗೇ ಎದ್ದು ನೀರು ಕಾಸುತ್ತಿದ್ದರು. ಸುಬ್ಬಿ ಮಗುವನ್ನು ಕಾಲಮೇಲೆ ಮಲಗಿಸಿಕೊಂಡು ಎರೆಯುತ್ತಿದ್ದಳು. ನಾನು ನೀರು ತುಂಬಿ ಹಾಕುತ್ತಿದ್ದೆ.

ಕ್ರಮೇಣ ಪಥ್ಯದ ಅಡಿಗೆ ಮಾಡುವುದನ್ನೂ ನಾನು ಕಲಿತುಕೊಂಡೆ. ಮೆಣಸಿನ ಸಾರು, ಸೀಸಾರು, ಜೀರಿಗೆ ಕಷಾಯ ಇವುಗಳನ್ನು ತಯಾರು ಮಾಡುವುದರಲ್ಲಿ ನನ್ನ ಕೈ ಪಳಗಿತು.

ಕಿರಿಯರಿಗೆ ನಾನೇ ಪುಟ್ಟ ತಾಯಿಯಾದೆ ಸುಬ್ಬಿಯ ಕೈಕೆಳಗೆ ಕೆಲಸ ಮಾಡುವಾಕೆಯಾದೆ. ಅಪ್ಪ ಸಂಪಾದಿಸಿ ತಂದುದನ್ನು ಮನೆಯಲ್ಲಿ ಕುಳಿತು ತಿನ್ನುವ ಕುಟುಂಬವೊಂದರ ಸದಸ್ಯೆಯಾದೆ. ಬಾಲ್ಯದ ಆಟ ಪಾಟಗಳೆಲ್ಲದರಿಂದಲೂ ನಾನು ವಂಚಿತಳು. ಕೆಲಸದ ಒತ್ತಡ, ಪ್ರೀತಿ

ವಿಶ್ವಾಸದ ಅಭಾವ, ವಯಸ್ಸಿಗೆ ಮೀರಿ ಹೊತ್ತ ಜವಾಬ್ದಾರಿ ಇವುಗಳಿಗೆ ಸಿಕ್ಕಿ ನನ್ನ ಹೃದಯ ನಲುಗತೊಡಗಿತ್ತು.

ದಿನದಿನಕ್ಕೆ ಬೆಳೆದ ಸಂಸಾರ, ಬಡತನ, ಅನಾರೋಗ್ಯದಿಂದಾಗಿ ಸುಬ್ಬಿಯಲ್ಲಿ ದಿನದಿನಕ್ಕೆ ಅಸಹನೆ, ಸಿಡುಕು ಹೆಚ್ಚಾಯಿತು. ಆಕೆ ತನ್ನ ಸಿಡುಕನ್ನು ಬೇರಾರ ಮೇಲೂ ತೋರಿಸುವಂತಿರಲಿಲ್ಲ. ಅವಳ ಆಗ್ರಹಕ್ಕೆ ಸುಲಭವಾಗಿ ಬಲಿಯಾದವಳು ನಾನು. ಸುಬ್ಬಿಗೆ ಕೆಲಸ ಕೈಲಿ ಹರಿಯುತ್ತಿರಲಿಲ್ಲ. ಆದರೂ ನಾನು ಮಾಡಿದ ಕೆಲಸಗಳಲ್ಲಿ ಏನಾದರೊಂದು ತಪ್ಪು ತೆಗೆದು ನನ್ನ ಮೇಲೆ ರೇಗುತ್ತಿದ್ದಳು. ನಾನು ಕೆಲವು ದಿವಸ ಅವಳು ರೇಗಿದರೂ ಉದಾಸೀನವಾಗಿದ್ದುಬಿಡುತ್ತಿದ್ದೆ. ಕೆಲವು ಸಲ ಅವಳು ಒಂದು ಮಾತನಾಡಿದರೆ ನಾನು ನಾಲ್ಕು ಮಾತನಾಡಿ

'ನೀನೇ ಎಲ್ಲಾ ಮಾಡಿಕೋ. ನಾನು ನಾಳೆಯಿಂದ ಸ್ಕೂಲಿಗೆ ಹೋಗುತ್ತೇನೆ' ಎನ್ನುತ್ತಿದ್ದೆ. ಆಗ ಸುಬ್ಬಿ ತನ್ನ ರೇಗಾಟ ಕಡಿಮೆ ಮಾಡುತ್ತಿದ್ದಳು.

ಗುರು, ಮಣಿ ಸ್ಕೂಲಿಗೆ ಸೇರಿದ್ದರು. ಗುರುವಂತೂ ಗಂಡು ಹುಡುಗ. ವಿದ್ಯಾವಂತನಾಗಿ ಸಂಪಾದಿಸಿ ಮನೆ ಉದ್ಧಾರ ಮಾಡುವ ಕುಲದೀಪಕ. ಆದರೆ ಮಣಿ? ಹಿರಿಯುವಳಾದ ನಾನು ದುಡಿಯಲು ಮನೆಯಲ್ಲಿರುವಾಗ ಮಣಿ ಮನೇಲಿದ್ದು ಏನು ಮಾಡಬೇಕಾಗಿದೆ? ಅದೂ ಅಲ್ಲದೆ ಮಣಿ ಮನೇಲಿದ್ದರೆ ಸುಬ್ಬಿಗೆ ಅವಳಿಂದ ಹಿಂಸೆಯಾಗುತ್ತಿತ್ತೇ ಹೊರತು ಉಪಯೋಗವೇನೂ ಇರಲಿಲ್ಲ. ರಜಾ ದಿನಗಳಲ್ಲಿ ಮಣಿ

'ಸುಬ್ಬೀ, ಹಸಿವು. ತಿಂಡಿ ಕೊಡು' ಎಂದು ಆಲಾಪನೆಗೆ ಶುರು ಮಾಡಿಬಿಟ್ಟರೆ ನಿಲ್ಲಿಸುತ್ತಿರಲಿಲ್ಲ. ಸಾಲದುದಕ್ಕೆ ಸುಬ್ಬಿಯ ಹಿಂದೆ ಮುಂದೆ ಓಡಾಡಿ ಕೈಕಾಲಿಗೆ ಸಿಕ್ಕಿಕೊಂಡು, ಮಾಡುವ ಕೆಲಸಗಳಿಗೆ ಆತಂಕವನ್ನು ತಂದೊಡ್ಡುತ್ತಿದ್ದಳು. ಆದುದರಿಂದ ಮಣಿಯನ್ನು ಸ್ಕೂಲಿಗೆ ಕಳಿಸುವುದೇ ನನಗೂ, ಸುಬ್ಬಿಗೂ ಕ್ಷೇಮಕರವಾಗಿತ್ತು.

ಮುಂಜುಳಾ ಸಿಲ್ಕ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ಉಷಾ ಶುಭ್ರವಾದ ಚೀಟಿಯ ಲಂಗಗಳನ್ನು ಹಾಕಿಕೊಂಡು ಸ್ಕೂಲಿಗೆ ಹೋಗುತ್ತಿದ್ದಳು. ನಾನು ಆ ರೀತಿಯ ಲಂಗವನ್ನು ಎಂದೂ ಹಾಕಿ

' ಅವರು ಬಗೆಪ್ಪ ನನಗೆ ವರ್ಷಕ್ಕೊಂದು ಬಾರಿ ಎರಡು ಒರಟಾದ ಹಬ್ಬದ ಗಲಾಟೆ-ಂಗಗಳನ್ನು ಹೊಲೆಸಿ ತರುತ್ತಿದ್ದರು. ಸಾಧಾರಣವಾಗಿ ದಿಗೆ ನಮ್ಮ ಮನೆಯಲ್ಲಿ ಎಲ್ಲರಿಗೂ ಹೊಸಬಟ್ಟೆ ಹೊಲೆಸುವುದು ವಾಡಿಕೆಯಾಗಿತ್ತು. ಈ ಸಲ ಯುಗಾದಿಗೆ ಅಪ್ಪ ಬಟ್ಟೆ ತರಲು ಹೋದಾಗ ನಾನೇ ಜೊತೆಯಲ್ಲಿ ಹೋಗಿ ನನಗೆ ಬೇಕಾದ ಚೀಟಿ ಬಟ್ಟೆಯನ್ನು ತರಲು ನಿರ್ಧರಿಸಿದ್ದೆ. ನನ್ನ ಈ ನಿರ್ಧಾರಕ್ಕೆ ಕಾರಣ ಉಷೆಯ ಹೊಸ ಲಂಗ.

ಉಷೆಯ ಬಳಿ ತಿಳಿ ಹಳದಿಯ ಚೀಟಿ ಲಂಗವೊಂದಿತ್ತು. ತಿಳಿ ಹಳದಿ ಬಟ್ಟೆಯ ಮೇಲೆ ಷರಾಯಿ, ಬೂಟ್ಸು ಹಾಕಿಕೊಂಡಿದ್ದ ಮೊಲ, ಲಂಗ ಬನೀನು ಹಾಕಿದ್ದ ಮೊಲಗಳ ಹಲವಾರು ಬಗೆಯ ಪ್ರಾಣಿಗಳ ಚಿತ್ರಗಳಿದ್ದವು. ಉಷಾ ಆ ಲಂಗ ಹಾಕಿಕೊಂಡು ನನ್ನೆದುರಿಗೆ ಬಂದಾಗ ನನ್ನ ನಾಲಿಗೆಯಲ್ಲಿ ನೀರೂರಿತು.

ಯುಗಾದಿ ಇನ್ನೂ ಒಂದು ವಾರವಿದೆ ಎನ್ನುವಾಗ ಅಪ್ಪ ಮನೆಯವರಿಗೆಲ್ಲಾ ಬಟ್ಟೆ ತರಲು ಹೊರಟರು. ಅವರು ಎಂದೂ ಯಾರನ್ನೂ ಎಂತಹ ಬಟ್ಟೆ ತರಲಿ ಎಂದು ಕೇಳಿದವರಲ್ಲ. ಅವರು ಬಟ್ಟೆ ತರುವರೆಂದು ಹಿಂದಿನ ದಿನವೇ ತಿಳಿದುಕೊಂಡಿದ್ದ ನಾನು ಮಾರನೆಯ ದಿನ ನನ್ನ ಕೆಲಸಗಳನ್ನೆಲ್ಲಾ ಬೇಗನೆ ಮುಗಿಸಿ

' ಅಪ್ಪ, ನಾನೂ ನಿನ್ನ ಜೊತೆ ಅಂಗಡೀಗೆ ಬರ್ತೀನಿ ' ಎಂದೆ.

' ಯಾಕಮ್ಮ. ಅಂಗಡಿ ತುಂಬಾ ದೂರವಿದೆ. ನಿನ್ನ ಕೈಲಿ ನಡೆಯೋಕಾಗೋದಿಲ್ಲ.'

' ನನ್ನ ಕೈಲಿ ನಡೆಯೋಕೆ ಆಗತ್ತೆ. ನಾನು ಈ ಸಲ ಒಂದು ತರಹಾ ಬಟ್ಟೆ ತಗೊಳ್ಳೋಣಾಂತ ಮಾಡಿದೀನಿ.'

' ಯಾವ ತರಹ ?'

' ಉಷಾ ಹೊಲೆಸಿಕೊಂಡಿದಾಳಲ್ಲಾ ಹಳದೀದು....ಮೊಲ....'

' ಎಲ್ಲಿ ತಗೊಂಡು ಬಾ ನೋಡೋಣ '

ನಾನು ಉತ್ಸಾಹದಿಂದ ಉಷೆಯ ಮನೆಗೆ ಓಡಿಹೋಗಿ ಅವಳ ಲಂಗವನ್ನು ತೆಗೆದುಕೊಂಡು ಬಂದೆ. ಮಂಜುಳಾ ನನ್ನನ್ನು ಹಿಂಬಾಲಿಸಿ ಬಂದಳು. ಅಪ್ಪ ಉಷೆಯ ಲಂಗವನ್ನು ಕೈಲಿ ಹಿಡಿದು ತಿರುಗಿಸಿ ನೋಡಿ

‘ ಗಜ ಹೇಗೋ ? ’ ಎಂದರು. ಸ್ತಾರಿ ಇವುಗಳಿಗೆ

ನನ್ನ ಹಿಂದೆಯೇ ಬಂದಿದ್ದ ಮಂಜುಳಾ ‘ ಗಜ ರೂಪಾಯಿ ’ ಎಂದಳು. ಸುಬ್ಬಿ.

‘ ಏನು ! ಹೂಂ. ಸರಿ. ನಾನೇ ನೋಡಿದೆನಲ್ಲಾ ಈ ಮಾದರಿಯದು ತರುತ್ತೇನೆ. ಸರಿಯಾ ? ’

‘ ಆಗಲಿ. ಆದರೆ ಈ ಬಣ್ಣದ್ದೇ ನನಗೆ ಬೇಕು.’

ಅಪ್ಪ ಹೊರಟು ಹೋದರು. ನಾನು ಮನೆಯ ಮೆಟ್ಟಲಿನ ಮೇಲೆ ಕುಳಿತು ಅವರ ದಾರಿ ಕಾಯತೊಡಗಿದೆ.

ಸಂಜೆಯುಳಿದು ಕತ್ತಲು ಹರಡಿತು. ನಕ್ಷತ್ರಗಳು ಒಂದೊಂದಾಗಿ ಮುಖ ತೋರಿಸಿ ಕಣ್ಣು ಮಿಟುಕಿಸಿದವು. ನಾನು ಮಾತ್ರ ಕುಳಿತಲ್ಲಿಂದ ಮಿಸುಕಾಡಲಿಲ್ಲ. ನನ್ನೆರಡು ಕಾಲುಗಳನ್ನೂ ಕೈಯಿಂದ ಕಟ್ಟಿ, ಮಂಡಿಯ ಮೇಲೆ ತಲೆಯೂರಿ ತಂದೆಯ ಆಗಮನವನ್ನು ಅತ್ಯಂತ ಆಸೆಯಿಂದ ನಿರೀಕ್ಷಿಸುತ್ತಿದ್ದೆ.

ಉಷಾ ಹತ್ತಿರ ನಿಂತು ಕೂಗಿದಳು ‘ಬಾರೇ ಗಜ್ಜುಗ ಆಡೋಣ.’

‘ ಇಲ್ಲಮ್ಮ. ಅಪ್ಪ ಬರ್‍ತಾರೆ. ಮೊಲದ ಲಂಗ ತರ್‍ತಾರೆ. ನಾನು ಬರೋದಿಲ್ಲ.’

ಉಷಾ ಹೊರಟುಹೋದಳು. ವೇಣು ಬಂದು ಆಟದ ಪಿಸ್ತೂಲನ್ನು ನನ್ನೆದೆಗೆ ಗುರಿಯಿಟ್ಟು ‘ಹೊಡೆಯಲ್ಲಾ ? ’ ಎಂದ.

‘ ಹೊಡಿ.’

‘ ನಾನು, ನೀನು, ಉಷಾ ಕಳ್ಳ ಪೋಲಿಸಾಟ ಆಡೋಣವಾ ? ’

‘ ನಾನು ಬರೋದಿಲ್ಲಪ್ಪ. ನಮ್ಮ ತಂದೆ ನನಗೆ ಹೊಸ ಲಂಗ ತರೋಕೆ ಹೋಗಿದಾರೆ. ನಾಳೆ ಬೇಕಾದರೆ ಆಡೋಣ.’

ವೇಣು ನಿರಾಶನಾಗಿ ಹೊರಟು ಹೋದ.

ಸುಬ್ಬಿ ಒಳಗಿನಿಂದ ಕೂಗಿದಳು ‘ ಊಟಕ್ಕೆ ಬರೋದಿಲ್ಲವೇನೇ ? ಗುರು, ಮಣಿ ಊಟ ಮಾಡಿ ಮಲಗಿಕೊಂಡರು. ಆಗಲೇ ಎಂಟೂವರೆಯಾಗಿರಬೇಕು. ಊಟಕ್ಕೆ ಬಾ.’

‘ ನಾನು ಅಪ್ಪನ ಜೊತೆ ಮಾಡ್ತೀನಿ.’

'ಅವರು ಬರೋದು ಎಷ್ಟು ಹೊತ್ತು ಆಗುತ್ತದೆಯೋ ಏನೋ? ಹಬ್ಬದ ಗಲಾಟೆ. ಅಂಗಡೀಲಿ ಬೇಗ ಬಟ್ಟೆ ಕೊಡೋದಿಲ್ಲ.'

'ಎಷ್ಟು ಹೊತ್ತಾದರೂ ಆಗಲಿ. ಪರವಾಗಿಲ್ಲ.'

ಸುಬ್ಬಿ ಗೊಣಗಿಕೊಂಡು ಸುಮ್ಮನಾದಳು.

ಕತ್ತಲೆಯಲ್ಲಿ ಕಣ್ಣು ಹಿಗ್ಗಿಸಿ ನಾನು ನಮ್ಮ ಮನೆಯ ಮುಂದೆ ಹಾದು ಹೋದ ಗಂಡಸರನ್ನೆಲ್ಲಾ ನೋಡಿದೆ.

ನನಗೆ ಯುಗ ಕಳೆದಿರಬಹುದು ಎನಿಸಿದಾಗ ಅಪ್ಪ ಬಂದರು.

'ಸುಬ್ಬೀ, ಅಪ್ಪ ಬಂದರು' ಎನ್ನುತ್ತಾ ನಾನು ಒಳಗೋಡಿ ಬಂದೆ.

ಅವರು ತಂದಿದ್ದ ಬಟ್ಟೆಯ ಗಂಟನ್ನು ಆತುರದಿಂದ ಕಿತ್ತುಕೊಂಡು 'ಮೊಲದ ಲಂಗ ತಂದಿದೀಯಾ?' ಎಂದೆ.

ತಂದೆ ಸುಬ್ಬಿಯ ಕಡೆ ತಿರುಗಿ ವಿಷಾದದ ನಗೆ ಬೀರಿ

'ಇಲ್ಲಮ್ಮ. ಆ ತರಹದ ಬಟ್ಟೆ ಮುಗಿದು ಹೋಗಿದೆ. ಎಲ್ಲ ಅಂಗಡಿಯಲ್ಲೂ ವಿಚಾರಿಸಿದೆ. ಎಲ್ಲೂ ಸಿಕ್ಕಲಿಲ್ಲ' ಎಂದರು.

ಬಟ್ಟೆಯ ಗಂಟನ್ನು ಬಿಚ್ಚಿ ನೋಡುವ ಉತ್ಸಾಹ ಒಂದೇ ಸಲಕ್ಕೆ ಇಳಿಯಿತು. ಕೈಲಿ ತೆಗೆದುಕೊಂಡಿದ್ದ ಗಂಟನ್ನು ಸರಿಸಿ ನಾನು ನನ್ನ ಹಾಸಿಗೆಯನ್ನು ಬಿಡಿಸಿದೆ. ಸುಬ್ಬಿ ಗಂಟನ್ನು ಬಿಚ್ಚಿ ನನಗಾಗಿ ತಂದಿದ್ದ ಲಂಗದ ಬಟ್ಟೆಯನ್ನು ಕೈಲಿ ಹಿಡಿದು

'ನೋಡು, ನಿನಗೆ ಯಾವ ತರಹ ತಂದಿದಾರೆ' ಎಂದಳು.

'ನಾಳೆ ಬೆಳಿಗ್ಗೆ ನೋಡ್ತೀನಿ. ನನಗೆ ನಿದ್ದೆ ಬರ್ತಿದೆ.'

'ಊಟ ಮಾಡೋದಿಲ್ಲವೇ?'

'ಇವಳಿನ್ನೂ ಊಟ ಮಾಡಿಲ್ಲವೆ?' ಅಪ್ಪ ಕೇಳಿದರು.

'ಇಲ್ಲ. ನಿಮ್ಮ ಜೊತೆ ಮಾಡ್ತೀನೀಂತ ಕಾಯ್ಕೊಂಡು ಕೂತಿದ್ದಳು'

ತಂದೆ ನಿಟ್ಟುಸಿರಿನೊಡನೆ 'ಬಾಮ್ಮ. ಊಟ ಮಾಡು' ಎಂದರು.

ಆದರೆ ನಾನಾಗಲೇ ಹಾಸಿಗೆಯಲ್ಲಿ ಮುದುರಿಕೊಂಡು ಮಲಗಿದ್ದೆ. ನಿರಾಶೆಯ ಹೊಡೆತ ನನ್ನ ಕಣ್ಣಿನಲ್ಲಿ ನೀರನ್ನು ತರಿಸಲಿಲ್ಲ. ಈ ಬಗೆಯ ನಿರಾಶೆ, ಆಶಾಭಂಗ ನನಗೆ ಹೊಸದಾಗಿರಲಿಲ್ಲ. ಹುಟ್ಟಿದಾಗಿನಿಂದ ಅನೇಕ ಬಗೆಯ ಪೆಟ್ಟುಗಳನ್ನು ತಿಂದು ನನ್ನ ಹೃದಯ ಒಂದು ರೂಪು ಪಡೆ

ದಿತ್ತು. ಆದರೆ ಆ ರಾತ್ರಿ ನನಗಿಂತ ಹೆಚ್ಚು ಸಂಕಟಪಟ್ಟವರು ನನ್ನ ತಾಯಿ ತಂದೆ.

ರಾಮಕೃಷ್ಣನಿಗೆ ಮೂರು ವರ್ಷಗಳಾಗಿದ್ದಾಗ ನನಗೆ ಮತ್ತೊಬ್ಬ ತಂಗಿ ಹುಟ್ಟಿದಳು. ಸುಬ್ಬಿಗಂತೂ ಆತ್ಮಹತ್ಯೆ ಮಾಡಿಕೊಂಡುಬಿಡುವಷ್ಟು ಸಂಸಾರ ಬೇಸರ ತಂದಿತ್ತು. ಆಕೆ ತನ್ನ ಬೇಸರವನ್ನು ಹೊಸದಾಗಿ ಹುಟ್ಟಿದ ಮಗುವಿನ ಮೇಲೆ ತೋರಿಸತೊಡಗಿದಳು. ಭಗವತಿ ಹುಟ್ಟಿದಾಗ ಸುಬ್ಬಿ ಬದುಕಿದುದೇ ಹೆಚ್ಚಾಯಿತು. ಅನಾರೋಗ್ಯ, ಬಡತನ ಇವುಗಳಿಂದಾಗಿ ಆಕೆಯ ತನು, ಮನಗಳೆರಡಕ್ಕೂ ಗೆದ್ದಲು ಹಿಡಿಯತೊಡಗಿತ್ತು. ಅಪ್ಪನಂತೂ ದುಡಿಯುವ ಯಂತ್ರವಾಗಿದ್ದರು. ರಾತ್ರಿ ಹತ್ತು ಗಂಟೆಗೆ ಮುಂಚೆ ಅವರು ಎಂದೂ ಮನೆಗೆ ಬಂದವರಲ್ಲ. ಬೆಳಿಗ್ಗೆ ಆರು ಗಂಟೆಗೇ ಎದ್ದು ಒಂದು ಲೋಟ ಕಾಫಿ ಕುಡಿದು ಮನೆಪಾಠ ಹೇಳಲು ಹೊರಡುತ್ತಿದ್ದರು. ಸ್ವತಂತ್ರ ಸರ್ಕಾರ ಪ್ರೈಮರೀ ಶಾಲೆಯ ಉಪಾಧ್ಯಾಯನಿಗೆ ಕೊಡುತ್ತಿದ್ದ ಸಂಬಳ ಇಬ್ಬರಿಗೆ ಒಂದು ಹೊತ್ತಿನ ಊಟಕ್ಕೂ ಸಾಲುತ್ತಿರಲಿಲ್ಲ. ಅಪ್ಪ ಆಗಾಗ್ಗೆ ಸುಬ್ಬಿಯ ಕೈಲಿ ವಿಷಾದದ ನಗೆಯೊಡನೆ ಹೇಳುತ್ತಿದ್ದರು

'ದಡ್ಡ ಹುಡುಗರಿರೋದರಿಂದ ನಾವೂ ಅರೆಹೊಟ್ಟೆ ಊಟ ಮಾಡಿ ಜೀವಿಸುತ್ತಿದೀವಿ. ಇಲ್ಲದಿದ್ದರೆ ನಾವೆಲ್ಲಾ ಕತ್ತಿಗೆ ಕಲ್ಲು ಕಟ್ಟಿಕೊಂಡು ಕುಕ್ಕನಹಳ್ಳಿ ಕೆರೆಗೆ ಬೀಳಬೇಕಾಗಿತ್ತು. ಮೇಷ್ಟರುಗಳಿಗೆ ಸಹನೆ ಬೇಕು ಎಂದು ಹೇಳ್ತಾರಲ್ಲಾ ನಮಗೆ ಸಹನೆ ಇಲ್ಲಾಂತ ಯಾರು ಹೇಳ್ತಾರೆ? ಈ ಭಂಡ ಬಾಳನ್ನು ಅಪ್ಪಿಕೊಂಡು ಇನ್ನೂ ಜೀವಸಹಿತ ಇರೋದೇ ನಮ್ಮ ಸಹನೆಗೆ ಸಾಕ್ಷಿ.'

'ರಾಮರಾಜ್ಯ....ಸ್ವರಾಜ್ಯ....'

'ಅವೆಲ್ಲಾ ಹಲವರಿಗೇ ಮೀಸಲು. ದೊಡ್ಡ ಭಾಷಣ ಮಾಡಿ, ಕತ್ತಿಗೆ ಹಾರ ಹಾಕಿಸಿಕೊಂಡು, ಕಾರಿನಲ್ಲಿ ಓಡಾಡಿ 'ಪ್ರಜೆಗಳೇ ರಾಜ್ಯ ಆಳೋರು' ಅಂತ ಪುಸಲಾಯಿಸಿ ಮೆರೀತಾರಲ್ಲಾ ಅವರಿಗೆ ಮಾತ್ರ ಸ್ವರಾಜ್ಯ. ನಮ್ಮ ಪಾಲಿಗಿರೋದು ಅರೆ ಹೊಟ್ಟೆಗಾಗುವಷ್ಟು ಗಂಜಿ, ಚಿಂದಿ ಬಟ್ಟೆ, ಮತ್ತೆ ತುಂಬಾ ಸಾಲ.'

ನನಗೆ ಅಪ್ಪನ ಮಾತುಗಳು ಸರಿಯಾಗಿ ಅರ್ಥವಾಗದಿದ್ದರೂ ಏನೋ ಒಂದು ಬಗೆಯ ಯಾತನೆಯಾಗುತ್ತಿತ್ತು.

'ಅಪ್ಪಾ, ಹಾಗಾದರೆ ಹಾರ ಹಾಕಿಸಿಕೊಂಡು ದೊಡ್ಡ ಭಾಷಣ ಮಾಡ್ತಾರಲ್ಲಾ, ಅವರನ್ನೆಲ್ಲಾ ಜೈಲಿಗೆ ಯಾಕೆ ಹಾಕಿಸಬಾರದು ? ' ನಾನು ಮುಗ್ಧತೆಯಿಂದ ಕೇಳಿದೆ.

ತಂದೆ ನನ್ನ ಮಾತಿಗೆ ನಕ್ಕು 'ಅವರೆಲ್ಲಾ ಜೈಲಿಗೆ ಹೋಗಿ ಬಂದೇ ದೊಡ್ಡ ಮನುಷ್ಯರಾದರು' ಎಂದರು.

'ಹಾಗಾದರೆ ಜೈಲಿಗೆ ಹೋಗಿ ಬಂದವರೆಲ್ಲಾ ದೊಡ್ಡ ಮನುಷ್ಯ ರಾಗುತ್ತಾರೆಯೇ ? '

'ನಾನು, ನೀನು ಜೈಲಿಗೆ ಹೋಗಿ ಬಂದರೆ ಹಾರ ಹಾಕಿಸಿಕೊಳ್ಳೋಕೆ ಬದಲಾಗಿ ಕಲ್ಲಿನೇಟು ತಿನ್ನುತ್ತೀವಿ ಅಷ್ಟೆ.'

ಭಗವತಿಯ ಆಗಮನದಿಂದ ಅಪ್ಪ ಮುಪ್ಪಾದರು. ಸುಬ್ಬಿ ಎಲು ಬಿನ ಹಂದರವಾದಳು. ನನ್ನ ಜವಾಬ್ದಾರಿ ಇಮ್ಮಡಿಯಾಯಿತು. ಭಗ ವತಿಯ ಲಾಲನೆ ಪಾಲನೆಯೆಲ್ಲಾ ಸಂಪೂರ್ಣವಾಗಿ ನನ್ನದಾಗಿತ್ತು.

* * * * *

ಸಂಸಾರದ ತೇರನ್ನೆಳೆಯಲು ನಾನು ಮತ್ತೊಂದು ರೀತಿಯಲ್ಲಿ ಸಹಾ ಯಕಳಾದೆ. ಸುತ್ತಮುತ್ತಲಿನ ಮನೆಗಳಲ್ಲಿ ಕಸಮುಸುರೆ ಮಾಡುವುದು, ಸಮಯ ಬಂದರೆ ಅಡಿಗೆ ಕೆಲಸ, ನೀರು ಹಾಕುವುದು ಇವುಗಳಿಂದಾಗಿ ನನ್ನ ಊಟ ಸಾಧಾರಣವಾಗಿ ಹೊರಗೇ ಕಳೆಯುತ್ತಿತ್ತು.

ನಾನು ಹೊರಗಿನ ಕೆಲಸಕ್ಕೆ ಮೊದಲು ಸಲ ಒಪ್ಪಿಕೊಂಡಾಗ ಅಪ್ಪ ವಿರೋಧಿಸಿದರು. ಸುಬ್ಬಿಗೂ ನನ್ನನ್ನು ಕೆಲಸಕ್ಕೆ ಕಳುಹಿಸುವುದು ಸ್ವಲ್ಪವೂ ಇಷ್ಟವಿರಲಿಲ್ಲ. ಆದರೆ ಪಥ ಸಾಗಬೇಕಲ್ಲ ?

ನಾನು ಕಾಲೇಜು ಪ್ರೊಫೆಸರ್ ಅನಂತರಾಯರ ಮನೆಯಲ್ಲಿ ಅಡಿಗೆ ಕೆಲಸಕ್ಕೆ ಒಪ್ಪಿಕೊಂಡೆ. ಅನಂತರಾಯರ ಮುದಿ ತಾಯಿ ನಮ್ಮ ಮನೆಗೇ ಬಂದು ತಮ್ಮ ಸಂಸಾರದ ಗೋಳನ್ನು ಹೇಳಿಕೊಂಡರು.

'ನೋಡು ಸುಬ್ಬೀ, ನನಗಂತೂ ಕಣ್ಣು ಕಾಣಿಸೋಲ್ಲ. ಸೊಸೆ ವಾತರೋಗದಿಂದ ಹಾಸಿಗೆ ಹಿಡಿದು ಹದಿನೈದು ದಿನವಾಯಿತು. ನನ್ನ

ಮಗ, ಮೊಮ್ಮಕ್ಕಳು ಎಲ್ಲರೂ ಸ್ಕೂಲು, ಕಾಲೇಜಿಗೆ ಹೋಗೋರು. ನನ್ನ ಸೊಸೆ ಹುಷಾರಾಗುವವರೆಗೆ ನಿನ್ನ ಮಗಳು ನಮ್ಮ ಮನೆಯಲ್ಲಿರಲಿ. ಊಟ ಬಟ್ಟೆ ಕೊಟ್ಟು ತಿಂಗಳಿಗೆ ಹದಿನೈದು ರೂಪಾಯಿ ಕೊಡ್ತೀವಿ. ನೀನು ಒಪ್ಪಿಕೊಳ್ಳದಿದ್ದರೆ ನಮಗೆ ಹೋಟಲೂಟವೇ ಗತಿ. ನಾನು ಸಾಯುವ ಮುದುಕಿ, ಈಗ ಹೋಟಲನ್ನ ತಿನ್ನಬೇಕೆ?'

ಸುಬ್ಬಿ ವಿನಯವಾಗಿ

'ನಮ್ಮ ಯಜಮಾನರನ್ನು ಕೇಳಿ ಹೇಳ್ತೀನಿ' ಎಂದಳು.

ರಾತ್ರಿ ಅಪ್ಪ ಮನೆಗೆ ಬರುತ್ತಲೇ ಸುಬ್ಬಿ ಅನಂತರಾಯರ ಮನೆಯ ಸಮಾಚಾರವನ್ನು ತಿಳಿಸಿದಳು. ಅಪ್ಪ ಸುಬ್ಬಿಯ ಮೇಲೆ ರೇಗಿ

'ಸರಿ. ನಿನಗೆ ಬುದ್ಧಿಯಿಲ್ಲ. ನಾನು ನನ್ನ ಮಗಳನ್ನ ಕಂಡವರ ಮನೆ ಕೆಲಸಕ್ಕೆ ಕಳಿಸೋದಿಲ್ಲ' ಎಂದರು.

ಸುಬ್ಬಿ ಶಾಂತ ದನಿಯಲ್ಲಿ 'ರೇಗಬೇಡಿ. ನಮ್ಮ ಮನೆ ಸ್ಥಿತಿ ಹೇಗಿದೆ ಸ್ವಲ್ಪ ಯೋಚನೆ ಮಾಡಿ ನೋಡಿ. ನಮ್ಮ ಮನೇಲಿ ಅವಳಿಗೆ ದುಡಿತ ಮಾತ್ರವಿದೆ. ಎರಡು ಹೊತ್ತು ಹೊಟ್ಟೆ ತುಂಬ ಊಟ ಸಹ ಇಲ್ಲ. ಅನಂತರಾಯರ ಮನೇಲಿ ಕೊನೆಗೆ ಹೊಟ್ಟೆ ತುಂಬಾ ಅನ್ನವಾದರೂ ಸಿಗುತ್ತೆ. ತಿಂಗಳಿಗೆ ಹದಿನೈದು ರೂಪಾಯಿ ಬೇರೆ....'

'ಏನು, ಹದಿನೈದು ರೂಪಾಯೀ!'

ತಂದೆಯ ಕೋಪ ವಿಸ್ಮಯಕ್ಕೆಡೆಗೊಟ್ಟಿತು.

'ಹೂಂ'

'ಪರವಾಗಿಲ್ಲ. ನನಗೆ ಎರಡು ಕಡೆ ಪಾಠ ಹೇಳೋದರಿಂದಾನೂ ಅಷ್ಟು ಬರೋದಿಲ್ಲ. ನಾನೂ ಈ ಕೆಲಸಕ್ಕೆ ರಾಜೀನಾಮೆ ಕೊಟ್ಟು ಬಿಟ್ಟು ಯಾಕೆ ಎಲ್ಲಾದರೂ ಅಡಿಗೆ ಕೆಲಸಕ್ಕೆ ಸೇರಬಾರದು .... ?'

'ಯಾಕೆ ಹೀಗೆ ಮಾತಾಡಿ ನನ್ನ ಉರಿಸ್ತೀರಿ....' ಮಾತನಾಡುತ್ತಿದ್ದಂತೆಯೇ ಸುಬ್ಬಿಯ ಕಣ್ಣುಗಳಲ್ಲಿ ನೀರೂರಿದವು.

'ನಾನು ಅಳುವಂತಾದ್ದು ಏನು ಹೇಳಿದೆ?'

'ನಾನು ಬದುಕಿರುವಾಗ ನೀವು ಸೌಟು ಹಿಡಿಯೋದನ್ನೂ ನೋಡಬೇಕೆ?'

‘ ನನ್ನ ಮಗಳು ಕಂಡೋರ ಮನೆಗೆ ಹೋಗಿ ಸೌಟು ಹಿಡಿಯಬಹು ದಂತೆ. ನಾನೇಕೆ ಅದೇ ಕೆಲಸ ಮಾಡಬಾರದು? ಅವಳನ್ನ ಅನಂತ ರಾಯರ ಮನೇಗೆ ಕೆಲಸಕ್ಕೆ ಕಳಿಸೋದನ್ನ ಕಣ್ಣಿದೆ ಮಾಡಿಕೊಂಡು ನಾನು ನೋಡಬೇಕಾಗಿದೆಯಲ್ಲಾ ? ’

‘ ಅವಳನ್ನ ಅಲ್ಲಿಗೆ ಕಳಿಸೋದರಿಂದ ನಿಮಗೆ ಅಷ್ಟೊಂದು ಬೇಜಾ ರಾಗುವ ಹಾಗಿದ್ದರೆ ಬೇಡ.’

‘ ಬೇಜಾರು ! ’ ಅಪ್ಪ ವ್ಯಂಗ್ಯವಾಗಿ ನಕ್ಕು ಮತ್ತೆ ಹೇಳಿದರು

‘ ಅವಳು ಅನಂತರಾಯರ ಮನೆಗೆ ಹೋದರೆ ಇಲ್ಲಿ ನಿನ್ನ ಜೊತೆಗೆ ಯಾರು ? ’

‘ ಮಣಿ ಇದಾಳಲ್ಲಾ ? ’

‘ ಸರಿ. ಅದೊಂದು ಬಣ್ಣದ ಬೀಸಣಿಗೆ. ಮೂರು ಹೊತ್ತೂ ಮುಂದಲೆ ಕುರುಳು ತಿದ್ದಿಕೊಳ್ತಾ, ಕಣ್ಣಿಗೆ ಕಪ್ಪು ಬಳಿದುಕೊಳ್ಳೋಕೇ ಅವಳಿಗೆ ಸಮಯವಿಲ್ಲ. ಸಾಲದುದಕ್ಕೆ ಆ ನಾಲ್ಕಾಣೆ ‘ ಬೆಂಟೆಕ್ಸ್ ’ ಹಾಕಿ ಕೊಂಡು ಬಿಟ್ಟರಂತೂ ತನ್ನ ಸಮಾನ ರೂಪವತಿಯರೇ ಇಲ್ಲ ಅಂತ ಅಂದು ಕೊಂಡು.........’

ಸುಬ್ಬಿ ಹುಬ್ಬುಗಂಟಿಕ್ಕಿ ‘ ಸಾಕು ಸುಮ್ಮನಿರಿ. ಏನೋ ಚಿಕ್ಕ ವಯಸ್ಸು. ಅಲಂಕಾರ ಮಾಡಿಕೊಳ್ತಾಳೆ....’ ಎಂದಳು.

‘ ಮಾಡಿಕೊಳ್ಳಲಿ. ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಎಲ್ಲಿ ನಿನ್ನ ಹುಬ್ಬುಗಂಟು ಮರೆಯಾಗಲಿ....’ ಎನ್ನುತ್ತಾ ಅಪ್ಪ ಎದ್ದು ಬಂದು ಸುಬ್ಬಿಯ ಕೆನ್ನೆ ತಿವಿದರು.

‘ ಥೂ, ಇದೇನಿದು ? ಮಕ್ಕಳ ಎದುರಿಗೆಲ್ಲಾ ನಿಮ್ಮ ಸರಸ ? ಹದಿ ನೇಳು ವರ್ಷದ ಮಗಳು ನನ್ನುದ್ದಕ್ಕೂ ನಿಂತಿರುವಾಗ ಅವಳ ಎದುರಿಗೆ....’

‘ ನಾವೇನು ಚಿಕ್ಕ ವಯಸ್ಸಿನ ದಂಪತಿಗಳಲ್ಲವಲ್ಲ ? ಮುದುಕ ದಂಪ ತಿಗಳು—ಯಾರ ಎದುರಿಗೆ ಬೇಕಾದರೂ ಸರಸವಾಡಬಹುದು.’

ಅಪ್ಪನ ಮಾತು ಕೇಳಿ ನನಗೆ ತುಂಬಾ ನಗು ಬಂತು.

ಮಾರನೆಯ ದಿನದಿಂದ ನಾನು ಅನಂತರಾಯರ ಮನೆಗೆ ಕೆಲಸಕ್ಕೆ ಹೋಗತೊಡಗಿದೆ. ಅನಂತರಾಯರ ಮನೆ ನಮ್ಮ ಮನೆಗೆ ಸಮೀಪ

5

ವಾಗಿದ್ದುದರಿಂದ ಅವರ ಮನೆಯ ಕೆಲಸ ಮುಗಿದ ಕೂಡಲೇ ನಾನು ಮನೆಗೆ ವಾಪಸ್ಸು ಬಂದುಬಿಡುತ್ತಿದ್ದೆ. ನಾನು ಅವರ ಮನೆಯಲ್ಲಿ ಮೂರು ತಿಂಗಳು ಕೆಲಸ ಮಾಡುವಷ್ಟರಲ್ಲಿ ಅನಂತರಾಯರ ಹೆಂಡತಿ ವಾತರೋಗದಿಂದ ಮುಕ್ತರಾದರು. ಅಲ್ಲಿಗೆ ನಾನು ಅವರ ಮನೆಗೆ ಹೋಗುವುದು ನಿಂತುಹೋದರೂ ಇತರ ಮನೆಗಳಿಗೆ ಹೋಗುವುದು ಮೊದಲಾಯಿತು. ನೆರೆಹೊರೆಯವರು ತಮ್ಮ ಮನೆಗೆಲಸಗಳಿಗೆ ನನ್ನನ್ನೇ ಕರೆಯುತ್ತಿದ್ದರು. ಮಣಿ ಕೆಲಸ ಮಾಡುವ ಹುಡುಗಿಯಲ್ಲವೆಂಬುದು ಅವರೆಲ್ಲರಿಗೂ ತಿಳಿದಿತ್ತು.

ಈ ಮಧ್ಯೆ ನನಗೆ ಮದುವೆ ಮಾಡಲು ಅಪ್ಪ ವರನ ಬೇಟೆಗೆ ತೊಡಗಿದ್ದರು. ನನಗೆ ಹೇಗೆ ಮದುವೆಯಾಗುವುದೋ ಎಂಬ ಯೋಚನೆ ಸುಬ್ಬಿಯನ್ನು ಕೊರೆಯುತ್ತಿತ್ತು. ಹಣ, ವಿದ್ಯ, ಸೌಂದರ್ಯ ಯಾವುದೂ ಇಲ್ಲದ ಹುಡುಗಿಗೆ ಮದುವೆಯಾಗುವುದು ಒಂದು ಸಮಸ್ಯೆ ಎಂದವಳ ಭಾವನೆ.

ಸುಬ್ಬಿ ಆಗಾಗ್ಗೆ ಅಪ್ಪನ ಕೈಲಿ ನನ್ನ ಮದುವೆಯ ಮಾತು ಬಂದಾಗಲೆಲ್ಲಾ 'ನನಗೆ ಇವಳ ಮದುವೆ ಹೇಗೆ ಆಗುತ್ತೆ ಎನ್ನೋದೇ ದೊಡ್ಡ ಯೋಚನೆಯಾಗಿದೆ. ನನಗೆ ಮಣಿ ಯೋಚನೆ ಏನೂ ಇಲ್ಲ' ಎನ್ನುತ್ತಿದ್ದಳು. ಆಗ ಅಪ್ಪ

'ನೀನೇನು ಮಹಾ ಸುರಸುಂದರಿಯೋ? ನಾನು ನಿನ್ನ ಒಪ್ಪಿ ಮದುವೆಯಾಗಲಿಲ್ಲವೆ' ಎನ್ನುತ್ತಿದ್ದರು.

'ನೀವು ಚೆನ್ನಾಗಿರೋದು ಅಷ್ಟರಲ್ಲೇ ಇದೆ. ಸ್ವಲ್ಪ ಬೆಳ್ಳಗಿದೀರಿಂತ ಎಲ್ಲೂ ಇಲ್ಲದ ಜಂಭ' ಎಂದು ಸುಬ್ಬಿ ಮೂದಲಿಸಿದಳು.

'ನಿನ್ನ ಮಣಿ ತಾನೆ ಇನ್ನೇನು? ಇವಳಿಗಿಂತ ಬೆಳ್ಳಗಿದಾಳೆ ಅಷ್ಟೆ.'

'ನಿಮಗೆ ಮಣಿ ಬಲಮಗಳೇ? ಅವಳನ್ನು ಕಂಡರೆ ನಿಮಗೆ ಯಾವತ್ತೂ ಆಗೋದಿಲ್ಲ.'

'ತಾಯಿ, ತಂದೆಗೆ ಯಾವಾಗಲೂ ತಮ್ಮ ಕುರೂಪಿ ಮಗುವಿನಲ್ಲಿ ಅಥವಾ ಆರೋಗ್ಯವಿಲ್ಲದೇ ಇರೋ ಮಗುವಿನಲ್ಲಿ ಪ್ರೀತಿ ಜಾಸ್ತಿ.'

'ಪ್ರೀತಿಯೋ ಅಥವಾ ಮರುಕವೋ?'

'ಪ್ರೀತಿಗೂ, ಮರುಕಕ್ಕೂ ತುಂಬಾ ವ್ಯತ್ಯಾಸವೇನಿಲ್ಲ.

'ಅಯ್ಯೋ ಹೋಗಿ. ನಿಮ್ಮ ಕೈಲಿ ಮಾತನಾಡಿ ಯಾರು ಗೆಲ್ಲಬಲ್ಲರು' ಎಂದು ಸುಬ್ಬಿ ಹಿಂದಿರುಗಿದಳು.

ಅಪ್ಪ ತಮ್ಮ ಯೋಗ್ಯತೆಗೆ ತಕ್ಕ ಹುಡುಗರನ್ನು ಶೋಧಿಸುತ್ತಿದ್ದರು. ನನಗೆ ಮದುವೆ ಮಾಡಿ ನಾನು ಸಂಸಾರ ಮಾಡುವುದನ್ನು ಕಣ್ಣಾರೆ ಕಾಣಬೇಕೆಂಬ ಹಂಬಲದಿಂದಲೇ ಅಪ್ಪ ನನ್ನನ್ನು ಫ್ಯಾಕ್ಟರಿಯ ಕೆಲಸಕ್ಕೆ ಸೇರಿಸಲು ಒಪ್ಪಿರಲಿಲ್ಲ. ಹಿಂದೊಂದು ದಿನ ನಮ್ಮ ಬಡತನ ನೋಡಲಾರದೆ ಮಂಜುಳಾ ನನ್ನನ್ನು ಫ್ಯಾಕ್ಟರಿ ಕೆಲಸಕ್ಕೆ ತಾನು ಶಿಫಾರಸು ಮಾಡಿ ಸೇರಿಸುವುದಾಗಿ ತಿಳಿಸಿದ್ದಳು. ಸುಬ್ಬಿಗೆ ಹಣದ ಹೊರತು ಬೇರಾವ ಯೋಚನೆಯೂ ಇರಲಿಲ್ಲ. ಅವಳು ಹಿಂದೆ ಮುಂದೆ ಯೋಚಿಸದೆ ಮಂಜುಳೆಯ ಯೋಚನೆಗೆ ಒಪ್ಪಿಕೊಂಡಳು. ರಾತ್ರಿ ಅಪ್ಪ ಮನೆಗೆ ಬಂದ ಕೂಡಲೇ ಸುಬ್ಬಿ ತನ್ನ ಯೋಚನೆಯನ್ನು ಅಪ್ಪನಿಗೆ ತಿಳಿಸಿದಳು.

'ಇವಳನ್ನು ಫ್ಯಾಕ್ಟರಿ ಕೆಲಸಕ್ಕೆ ಯಾಕೆ ಸೇರಿಸಬಾರದು ?'

'ಅದಕ್ಕೆ ಬದಲು ಭಾವಿಗೆ ಯಾಕೆ ತಳ್ಳಬಾರದು ?' ಅಪ್ಪ ಕೇಳಿದರು.

ಸುಬ್ಬಿ ಪೆಚ್ಚಾದಳು. ಕ್ಷಣದ ಬಳಿಕ ಸಾವರಿಸಿಕೊಂಡು 'ಅಲ್ಲಾಂದ್ರೇ....' ಎಂದು ಮೊದಲು ಮಾಡಿದಳು.

'ಅವಳಿಗೆ ಮದುವೆ ಮಾಡುವ ಯೋಚನೆ ನಿನಗೆ ಇದೆ ತಾನೆ ?' ಅಪ್ಪ ಕೆರಳಿ ಕೇಳಿದರು.

'ಇದೆ.'

'ಹಾಗಾದರೆ ಫ್ಯಾಕ್ಟರಿಯ ಯೋಚನೆ : ಬಿಟ್ಟುಬಿಡು. ಮುಂದೆ ಬಾಳಿ ಬದುಕಬೇಕಾದ ಹುಡುಗಿಯನ್ನು ನಾವಾಗಿಯೇ ಹಾಳು ಮಾಡಬಾರದು.'

'ಅವರಿವರ ಮನೆ ಕೆಲಸಕ್ಕೆ ಮಾತ್ರ ಕಳುಹಿಸಬಹುದೋ ?'

'ನಾವೇನು ದಿಕ್ಕು, ದೆಸೆ ಇಲ್ಲದವರು, ಪರಿಚಯವಿಲ್ಲದವರ ಮನೆಗೆ ಕಳಿಸಿಲ್ಲವಲ್ಲ. ಅನಂತರಾಯರು ಋಷಿಯಂತಹ ಮನುಷ್ಯರು. ನಾರಣಪ್ಪನ ಮನೆ ಹಾಲಿನಂತಹ ಸಂಸಾರ. ಮನೆ ತುಂಬಾ ಜನವಿದಾರೆ. ಆ ಐಯ್ಯರ್ ಸ್ವಲ್ಪ ಹಾಗ್ಹಾಗೇನೆ ಅಂತಾನೇ ನಾನು ಅವರ ಮನೆಗೆ ಮಗಳನ್ನ ಕಳಿಸುವುದಕ್ಕೆ ಒಪ್ಪಿಕೊಳ್ಳಲಿಲ್ಲ. ಇಷ್ಟಾಯಿತು ಅವಳು ರಾತ್ರಿ ಹೊತ್ತು

ಮನೆಗೇ ಮಲಗಿಕೊಳ್ಳೋಕೆ ಬರುತ್ತಿರಲಿಲ್ಲವೇ ? ನಾರಣಪ್ಪನ ಮನೇಲಿ ಕೆಲಸ ಸಿಕ್ಕಿದಾಗ ಒಂದು ದಿನ ಇವಳು ಮನೇಗೆ ಬರೋದು ರಾತ್ರಿ ಸ್ವಲ್ಪ ಹೊತ್ತಾದಾಗ ಹುಯ್ಯೋ ಮಳೇಲಿ ನಾನೇ ಹೋಗಿ ಅವಳನ್ನ ಕರ್‍ಕೊಂಡು ಬರಲಿಲ್ಲವೇ? ಮರ್ಯಾದೆಯಿಂದಿರುವ ಸಂಸಾರೊಂದಿಗರ ಮನೆಗೆ ಮಗಳನ್ನ ಕೆಲಸಕ್ಕೆ ಕಳುಹಿಸೋದಕ್ಕೂ, ನಾನಾತರಹ ಜನ ಸೇರುವ ಫ್ಯಾಕ್ಟರಿಗೆ ಕಳಿಸೋದಕ್ಕೂ ವ್ಯತ್ಯಾಸ ಇಲ್ಲವೇ ? '

' ಮಂಜುಳಾ ಹೋಗುತ್ತಾಳಲ್ಲಾ ? '

' ಮಂಜುಳನಿಗಾದ್ರೆ ಮದುವೆಯಾಗಿ, ಸಂಸಾರ ಒಡೆದು, ಇನ್ನೇನೂ ದಾರಿ ಕಾಣದೆ ಸೇರಬೇಕಾಯಿತು. ಇವಳಿನ್ನೂ ಮದುವೆಯಾಗಬೇಕಾದ ಹುಡುಗಿ.'

' ಸರಿಯಪ್ಪ ' ಎಂದು ಮಾತು ಮುಗಿಸಿದಳು ಸುಬ್ಬಿ.

ಅಪ್ಪ ನನಗೆ ವರನೊಬ್ಬನನ್ನು ಹುಡುಕಿದರು. ಆತ ಕಾನಸ್ಟೇಬಲ್ ಆಗಿದ್ದ. ಅವರು ' ಹುಡುಗಿ ಒಪ್ಪಿಗೆಯಾದರೆ ನಿಮ್ಮ ಸಂಬಂಧ ಬೆಳೆಸಲು ಅಡ್ಡಿಯಿಲ್ಲ ' ಎಂದು ಹೇಳಿದರು. ಮಾತು ಕತೆಯೆಲ್ಲಾ ನಿಶ್ಚಯವಾಗಿ ನನ್ನ ಸೌಂದರ್ಯ ಪ್ರದರ್ಶನವೊಂದು ಉಳಿದಿತ್ತು. ಆತ ನನ್ನನ್ನು ನೋಡಲು ಭಾನುವಾರ ಬರುವುದಾಗಿ ಹೇಳಿದ್ದರು.

ಭಾನುವಾರ ಸುಬ್ಬಿಗೆ ಸ್ವಲ್ಪವೂ ಬಿಡುವಿರಲಿಲ್ಲ. ಸುಬ್ಬಿ, ಮಣಿ ಸೇರಿ ಮನೆಯ ಕಸವನ್ನೆಲ್ಲಾ ತೆಗೆದು ಚೊಕ್ಕಟಮಾಡಿದರು. ನನ್ನನ್ನು ನೋಡಲು ಬರುವಾತನನ್ನೂ, ಅವರ ತಾಯಿಯನ್ನೂ ಸತ್ಕರಿಸಲು ಹಣ್ಣು, ಹೂವು ಪೇಟೆಯಿಂದ ತರಿಸಿ, ಮನೆಯಲ್ಲಿ ಕಾಫಿ, ಬೋಂಡ ತಯಾರು ಮಾಡಿದರು.

ನನ್ನಬಳಿ ಹೊಸ ಸೀರೆಯಿರಲಿಲ್ಲ. ಸುಬ್ಬಿಯ ಮದುವೆಯ ಸೀರೆಯೂ ಹರಿದು ಹೋಗಿತ್ತು. ಮಂಜುಳಾ ತನ್ನ ಸಿಲ್ಕಿನ ಸೀರೆಯನ್ನು ತಂದು ನನಗೆ ಉಡಿಸಿದಳು. ಉಷಾ ತನ್ನ ರೋಲ್ಡ್ ಗೋಲ್ಡ್ ಜುಮುಕಿಯನ್ನು ತಂದು ನನ್ನ ಕಿವಿಗೆ ತಗುಲಿ ಹಾಕಿದಳು. ಅಂಬುಜಮ್ಮ ತಮ್ಮ ಕನ್ನಡಿ ಬಳೆಯನ್ನು ತಂದು ನನ್ನ ಕೈಗೆ ತೊಡಿಸಿದರು. ಸುಬ್ಬಿ ಅಜ್ಜಿಯ ಮನೆಯಿಂದ ಕೆಲವು ಬೆಳ್ಳಿಯ ಪಾತ್ರೆಗಳನ್ನೂ, ಒಂದು ಜಮಖಾನವನ್ನೂ ಎರವಲಾಗಿ ತಂದಳು. ಮಣಿ ನಾಲ್ಕಾಣೆಯ ಪೌಡರನ್ನು ತಂದು ಧಾರಾಳವಾಗಿ ನನ್ನ

ಕಪ್ಪು ಮುಖಕ್ಕೆ ಬಳಿದಳು. ಸುಬ್ಬಿ ಮಲ್ಲಿಗೆ ಹೂವಿನಿಂದ ನನ್ನ ತುರುಬನ್ನು ಅಲಂಕರಿಸಿದಳು. ಮಣಿ ತನ್ನ ಕೊರಳಿನಲ್ಲಿದ್ದ ಬೆಂಟೆಕ್ಸ್ ತೆಗೆಯಲು ಯತ್ನಿಸಿದ್ದಾಗ ನಾನು ಬಿಗಿದು ಬಂದ ಕಂಠದಿಂದ ನುಡಿದೆ

'ಇರಲಿ ಬಿಡು'

'ಯಾಕಕ್ಕ ?'

'ನನಗೆ ಈ ಅಲಂಕಾರ ಸಾಕು. ಎಲ್ಲಿ ಆ ಕನ್ನಡಿ ಕೊಡು-ನಾನು ಈ ಅಲಂಕಾರದಲ್ಲಿ ಹೇಗೆ ಕಾಣ್ತೀನಿ ನೋಡಬೇಕು.'

ಮಣಿ ಮಧ್ಯೆ ಸೀಳುಬಿಟ್ಟಿದ್ದ ಕನ್ನಡಿಯನ್ನು ತಂದು ನನ್ನ ಕೈಗೆ ಕೊಟ್ಟಳು. ನಾನು ಅದರಲ್ಲಿ ನನ್ನ ಮುಖ ನೋಡಿಕೊಂಡೆ.

'ಹೇಗಿದೇಂತ ಎನ್ನಿಸುತ್ತೆ ?'

'ತುಂಬಾ ಅಸಹ್ಯವಾಗಿದೆ. ಈ ಅಲಂಕಾರವೆಲ್ಲಾ ನಿನ್ನಂತಹವಳಿಗೇ ಸರಿ. ನನಗೆ ಒಪ್ಪೋದಿಲ್ಲ. ತೆಗೆದುಬಿಡಲೇನು ?'

'ಇರಲಿಬಿಡು. ನೀನೇನು ದಿನಾ ಮಾಡಿಕೊಳ್ಳಬೇಕಾಗಿಲ್ಲವಲ್ಲ.'

ಮಣಿಯ ಮಾತು ನನಗೆ ಒಪ್ಪಿಗೆಯಾಯಿತು.

ವರಮಹಾಶಯ ವಠಾರದ ಕಲ್ಲು ನೆಲದ ಮೇಲೆ ಕಾಲಿಟ್ಟರೆಂಬುದು ಬೂಟ್ಸಿನ ಸದ್ದಿನಿಂದಲೇ ನನಗೆ ತಿಳಿಯಿತು. ವಠಾರದ ಎಲ್ಲಾ ಬಾಗಿಲು, ಕಿಟಕಿಗಳಿಂದ ಹಲವು ಜೊತೆ ಕಣ್ಣುಗಳು ಇಣುಕಿ ನೋಡಿದವು.

ವರ, ಆತನ ತಾಯಿಯನ್ನು ಅಪ್ಪ ಮರ್ಯಾದೆಯಿಂದ ಸ್ವಾಗತಿಸಿ ನಮ್ಮ ಮನೆಯೊಳಗೆ ಕರೆದು ತಂದರು. ಕುಶಲ ಪ್ರಶ್ನೆಗಳ ನಂತರ ಕಾಫಿ ತಿಂಡಿಯ ಉಪಚಾರವಾಯಿತು. ಅನಂತರ ನನಗೆ ಕರೆ ಬಂತು. ನಾನು ತಲೆ ತಗ್ಗಿಸಿ ಬಂದು ಚಾಪೆಯ ಮೇಲೆ ಕುಳಿತೆ. ನಾನೊಬ್ಬಳೇ ಉಳಿದರೆ ನಾಚಿಕೊಳ್ಳಬಹುದೆಂದು ಮಣಿಯೂ ನನ್ನೊಡನೆ ಉಳಿದಳು.

'ಹುಡುಗಿ ಯಾರು ?' ವರನ ತಾಯಿ ಪ್ರಶ್ನಿಸಿದರು. ಮಣಿ ಸೀರೆಯುಡಲು ಮೊದಲು ಮಾಡಿದ್ದುದ್ದರಿಂದ ಅವಳನ್ನು ನೋಡಿದವರಿಗೆ ಅವಳು ಚಿಕ್ಕ ಹುಡುಗಿ ಎನ್ನುವ ಅಭಿಪ್ರಾಯ ಬರುತ್ತಿರಲಿಲ್ಲ. ಸಾಲದುದಕ್ಕೆ ಅವಳೂ, ನಾನೂ ಒಂದೇ ಎತ್ತರದಲ್ಲಿದ್ದೆವು. ಅವಳು ನನಗಿಂತ ನಾಲ್ಕುವರ್ಷ ಚಿಕ್ಕವಳಾದರೂ ನಮ್ಮಿಬ್ಬರಿಗೂ ವಯಸ್ಸಿನಲ್ಲಿ ಹೆಚ್ಚು ವ್ಯತ್ಯಾಸ ಹೇಳುವ ಹಾಗಿರಲಿಲ್ಲ.

ನಮ್ಮ ತಂದೆ ಉಗುಳು ನುಂಗಿ 'ಬಲಗಡೆ ಇರೋಳು' ಎಂದರು.

'ಓ!'

ದನಿಯಲ್ಲಿದ್ದ ನಿರಾಶೆ ನನಗೆ ಗೋಚರವಾಗದೇ ಇರಲಿಲ್ಲ. ಹುಡುಗನ ತಾಯಿಗೆ ಸುಬ್ಬಿ ಅಡಿಕೆಲೆ, ಕುಂಕುಮ ಕೊಟ್ಟಳು. ಒಂದು ತಟ್ಟೆಯ ತುಂಬಾ ಹಣ್ಣುಗಳು, ಬಾದಾಮಿ, ದ್ರಾಕ್ಷಿ, ಕಲ್ಲುಸಕ್ಕರೆಯಿರಿಸಿ ಸುಬ್ಬಿ ವರನ ತಾಯಿಗೆ

'ತಗೊಳ್ಳಿ. ನಮ್ಮನ್ನು ಕಾಪಾಡಿ' ಎಂದಳು.

ಹಣ್ಣಿನ ತಟ್ಟೆಯನ್ನು ಅವರ ಮುಂದಿಡುವಾಗ ನನ್ನ ಕರುಳು ಚುರುಕ್ಕೆಂದಿತು. ಬಂದವರಿಗೆ ಕೊಡಲು ತಂದಿದ್ದ ಕಿತ್ತಳೇ ಹಣ್ಣಿಗಾಗಿ ಭಗವತಿ, ರಾಮಕೃಷ್ಣ ಆ ಮಧ್ಯಾಹ್ನವೆಲ್ಲಾ ಅತ್ತು ರಂಪ ಮಾಡಿದ್ದರು. ಮನಸ್ಸು ರೋಸಿಹೋಗಿದ್ದ ಸುಬ್ಬಿ ಭಗವತಿಯನ್ನು ಹಿಡಿದು ಚಚ್ಚಿ ಸುಮ್ಮನಾಗಿಸಿದ್ದಳು. ಆದರೆ ರಾಮಕೃಷ್ಣ ಅವಳ ಹೊಡೆತಕ್ಕೆ ಸಿಕ್ಕದೆ ತಪ್ಪಿಸಿಕೊಂಡು ಓಡಿ ಹೋಗಿದ್ದ. ಹಣ್ಣಿನ ತಟ್ಟೆಯನ್ನು ಸುಬ್ಬಿ ಅವರ ಮುಂದಿಡುವಾಗ ನನಗೆ ಭಗವತಿಯ ಕಣ್ಣೀರಿನ ಮುಖ ನೆನಪಿಗೆ ಬಂದು 'ಎಲ್ಲಾನೂ ಅನ್ಯಾಯವಾಗಿ ಅವರಿಗೇಕೊಟ್ಟು ಬಿಡ್ತಿದಾಳಲ್ಲಾ' ಎನ್ನಿಸಿತು.

ವರನ ತಾಯಿ ತಟ್ಟೆಯಲ್ಲಿದ್ದುದೆಲ್ಲವನ್ನೂ ತಮ್ಮ ಜೊತೆಯಲ್ಲಿ ತಂದಿದ್ದ ಒಂದು ಕೈ ಚೀಲಕ್ಕೆ ಹಾಕಿಕೊಂಡು

'ನಾವಿನ್ನು ಬರ್ತೀವಿ. ನಾಳೆ ಯಾವುದೂ ಹೇಳ್ತೀವಿ' ಎಂದರು. ನಮ್ಮ ತಂದೆ ಅವರನ್ನು ಬಾಗಿಲಿನವರೆವಿಗೆ ಕಳಿಸಲು ಹೋದರು. ನಾನು ನಿಟ್ಟುಸಿರಿನೊಡನೆ ಮೇಲೆದ್ದು ಮೊದಲು ಮುಖದ ಮೇಲಿದ್ದ ಪೌಡರ್ ಒರೆಸಿಕೊಂಡು, ನಂತರ ಕಿವಿಯನ್ನು ಹಿಡಿದು ಜಗ್ಗುತ್ತಿದ್ದ ಜುಮಕಿಯನ್ನು ಕಳಚಿದೆ. ನನ್ನ ಮಾಮೂಲಿನ ಒರಟು ನೂಲಿನ ಸೀರೆಯನ್ನುಟ್ಟು ಮಂಜುಳೆಯ ಸಿಲ್ಕಿನ ಸೀರೆಯನ್ನು ಅವಳಿಗೆ ಹಿಂತಿರುಗಿಸಿದೆ. ಮಂಜುಳಾ ನನ್ನ ಕೆನ್ನೆ ಹಿಂಡಿ

'ಹೇಗಿದಾನೆಯೇ ನಿನ್ನ ಗಂಡ?' ಎಂದಳು.

'ನಾನು ನೋಡಲಿಲ್ಲ.'

'ಸುಳ್ಳು.'

'ಹೌದು ಮಂಜುಳಕ್ಕ. ಅಕ್ಕ ಕತ್ತೆತ್ತಲೇ ಇಲ್ಲ. ಥೂ ಆತ ತುಂಬಾ ಕಪ್ಪಗಿದಾರೆ.' ಮಣಿ ನನ್ನ ಪರವಾಗಿ ನುಡಿದಳು.

ಮಂಜುಳ ಮಣಿಯನ್ನು ಕೆಣಕಿದಳು 'ನೀನೇನು ಅವನನ್ನು ಮದುವೆ ಮಾಡಿಕೊಳ್ಳಬೇಕಾಗಿಲ್ಲ. ಅದು ಸರಿ. ಹುಡುಗೀನ ಹೆದರಿಸೋಣಾಂತ ಆತ ಪೋಲೀಸಿನವನ ಡ್ರೆಸ್ಸಿನಲ್ಲೇ ಬರಬೇಕೆ ? '

'ಮಣೀ....ಅಜ್ಜಿಮನೆ ಬೆಳ್ಳಿಪಾತ್ರೆಗಳನ್ನು ಕೊಟ್ಟು ಬಾಮ್ಮ' ಎಂದು ಸುಬ್ಬಿ ಒಳಗಿನಿಂದ ಕೂಗಿದಳು. ಮಣಿ ಒಳಗೆ ಓಡಿದಳು. ಮಂಜುಳಾ ಪಿಸುಮಾತಿನಲ್ಲಿ 'ಪಾಸೋ, ಫೆಯಿಲೋ ? ' ಎಂದಳು.

'ಮುಕ್ಕಾಲು ಪಾಲು ಫೆಯಿಲೂಂತ ಕಾಣತ್ತೆ' ಎಂದೆ ನಾನು. ಅಷ್ಟರಲ್ಲಿ ಅಪ್ಪ ಹಿಂತಿರುಗಿ ಬಂದುದರಿಂದ ಮಂಜುಳ ಹೊರಟು ಹೋದಳು. ಕಾಫಿ ಪಾತ್ರೆ ತೊಳೆದಿರಿಸುತ್ತಿದ್ದ ಸುಬ್ಬಿಯ ಬಳಿ ನಿಂತು ಅಪ್ಪ

'ಐದು ರೂಪಾಯಿ ಖರ್ಚಾಯಿತು. ಫಲಿತಾಂಶ ಏನಾಗುತ್ತೋ ಗೊತ್ತಿಲ್ಲ' ಎಂದರು.

ಮಾರನೆಯ ದಿನ ಅಪ್ಪ ಪರೀಕ್ಷೆಯ ಫಲಿತಾಂಶ ತಿಳಿದು ಬರಲು ಹೋದರು. ಸುಬ್ಬಿ ಅವರ ದಾರಿ ಕಾಯುತ್ತಾ ಮೆಟ್ಟಿಲಿನ ಮೇಲೆ ಕುಳಿತಳು. ಅಪ್ಪ ಮನೆಗೆ ಬಂದಾಗ ರಾತ್ರಿ ಒಂಭತ್ತು ಗಂಟೆಯಾಗಿತ್ತು. ಅಪ್ಪ ಒಳಗೆ ಬಂದು ಕೋಟು ಬಿಚ್ಚಿಡುವಷ್ಟರಲ್ಲಿ ಸುಬ್ಬಿ ಆತುರವಾಗಿ 'ಏನಂದರು ?' ಎಂದಳು.

'ಹುಡುಗಿ ತುಂಬಾ ಕಪ್ಪು. 'ಬೇಡಾ' ಎಂದು ಹೇಳಿದರು.'

'ಮಹಾ ಅವನು ಬೆಳ್ಳಗಿರೋದು ಅಷ್ಟರಲ್ಲೇ ಇದೆ. ಕರೀ ಟೊಣಪ.'

'ಮಣೀನ ಕೊಟ್ಟರೆ ಮದುವೆ ಮಾಡಿಕೊಳ್ಳುತ್ತಾನಂತೆ.'

'ನೀವೇನಂದಿರಿ ?'

'ಮನೇಲಿ ಕೇಳಿ ಹೇಳ್ತೀನಿ ಎಂದೆ.'

ಮಣಿ ಗಾಬರಿಯಾಗಿ 'ಅಪ್ಪಾ, ನನಗೆ ಅವನ ಮೀಸೆ ನೋಡೇ ಹೆದರಿಕೆ ಆಯಿತು. ನಾನವನ್ನ ಖಂಡಿತ ಮಾಡಿಕೊಳ್ಳೋದಿಲ್ಲ' ಎಂದು ಹೇಳಿ ಅಳಲು ಶುರುಮಾಡಿದಳು. ಅಪ್ಪ ಮಣಿಯ ಬೆನ್ನು ತಟ್ಟಿ

'ಅವನು ಹಾಗೆಂದ ಮಾತ್ರಕ್ಕೆ ಈಗ ನಿನ್ನ ಮದುವೆಯಾಯಿತೇ ? ನಿನ್ನ ಅವನಿಗೆ ಕೊಡೋದಿಲ್ಲ. ಸುಮ್ಮನಿರು' ಎಂದು ಸಮಾಧಾನ ಮಾಡಿದರು.

'ನಾಳೆ ಅವರಿಗೆ ಏನು ಹೇಳ್ತೀರಿ ?' ಸುಬ್ಬಿ ಕೇಳಿದಳು.

'ಅವನ ಮಾತು ಅವನಿಗೇ ಹಿಂತಿರುಗಿಸಿ ಬರ್ತೀನಿ.'

'ಹಾಗಂದರೆ ?'

ಅಪ್ಪ ಕಟುವಾಗಿ ಹೇಳಿದರು 'ನೀನು ತುಂಬಾ ಕಪ್ಪು. ನಿನ್ನ ಮಣಿ ಮಾಡಿಕೊಳ್ಳುವುದಿಲ್ಲ ಎಂದು ಹೇಳಿದಳು' ಅಂತ ತಿಳಿಸಿ ಬರ್ತೀನಿ.'

'ಮಗೂಗೆ ಕೂಡ ಒಂದು ಹಣ್ಣು ಉಳಿಸಿಕೊಳ್ಳದೇ ಎಲ್ಲಾ ಅವರ ಬಾಯಿಗೇ ಸುರಿದೆ' ಎಂದು ಸುಬ್ಬಿ ಕೈ ಕೈ ಹಿಸುಕಿಕೊಂಡಳು.

ನನ್ನ ಮದುವೆ ಮುಂದುವರಿಯಿತು. ಅಪ್ಪ ನಿರಾಶರಾಗದೇ ನನ್ನ ಮದುವೆಯ ಪ್ರಯತ್ನವನ್ನು ಮಾಡುತ್ತಲೇ ಇದ್ದರು.

ನನ್ನನ್ನು ನೋಡಲು ಬಂದಿದ್ದ ಮತ್ತೊಬ್ಬ ಹುಡುಗ ಎಸ್. ಎಸ್. ಎಲ್.ಸಿ. ಪರೀಕ್ಷೆಯಲ್ಲಿ ಪಾಸು ಮಾಡಿ ಮಿಡಲ್ ಸ್ಕೂಲಿನಲ್ಲಿ ಉಪಾಧ್ಯಾಯನಾಗಿದ್ದ. ಅವನು ನನ್ನನ್ನು ನೋಡಿ ಒಪ್ಪಿಕೊಂಡ. ಆದರೆ ಒಂದು ಶರತ್ತು ಹಾಕಿದ. ಆತ 'ನನ್ನ ಕಾಲೇಜು ವಿದ್ಯಾಭ್ಯಾಸಕ್ಕೆ ನೀವು ಸಹಾಯ ಮಾಡುವುದಾದರೆ ಮಾತ್ರ ನಾನು ನಿಮ್ಮ ಮಗಳನ್ನು ಮದುವೆಯಾಗ್ತೀನಿ' ಎಂದು ಹೇಳಿದ.

ಗುರುವಿನ ವಿದ್ಯಾಭ್ಯಾಸವೇ ಅಪ್ಪನಿಗೆ ಒಂದು ದೊಡ್ಡ ಹೊರೆಯಾಗಿತ್ತು. ಗುರು ಮುಂದಿನ ವರ್ಷ ಕಾಲೇಜಿಗೆ ಸೇರುವವನಿದ್ದ. ಹೈಸ್ಕೂಲಿನಲ್ಲಿ ಅವನಿಗೆ ಫ್ರೀಷಿಪ್ಪಾಗಿತ್ತು. ಅವನಿಗೆ ಫ್ರೀಷಿಪ್ ಆಗಲು ಅಪ್ಪ ಎಷ್ಟು ಜನರ ಮನೆ ಬಾಗಿಲಿಗೆ ಹಗಲಿರುಳೂ ಅಲೆದರೋ ಅದಂತೂ ಲೆಕ್ಕವೇ ಇಲ್ಲ. ಫ್ರೀಷಿಪ್ಪಾಗಿ ಕೊಟ್ಟ ಫೀಸೆಲ್ಲಾ ವಾಪಸ್ಸು ಬಂದ ದಿನ ಗುರುವಿನ ಸಂತೋಷಕ್ಕಂತೂ ಪಾರವೇ ಇರಲಿಲ್ಲ. ಅವನು ಅಪ್ಪನ ಜೊತೆ ಪೇಟೆಗೆ ಹೋಗಿ ಎರಡು ಪಾಯಿಜಾಮು, ಶರಟು ಹೊಲೆಯಲು ಹಾಕಿ ಬಂದ. ಸುಬ್ಬಿಗಂತೂ ಮಗ ತಾನೇ ಸಂಪಾದಿಸಿ ಬಟ್ಟೆ ಹೊಲೆಸಿಕೊಂಡಷ್ಟು ಸಂತೋಷವಾಯಿತು. ಗುರು, ರಾಮಕೃಷ್ಣನ ಹೊರತು ನಾವುಗಳು ಯಾರೂ ಸ್ಕೂಲಿಗೆ ಹೋಗುತ್ತಿರಲಿಲ್ಲ. ಗುರುವಿಗೆ ಒಂದು ಪಠ್ಯ ಪುಸ್ತಕ ತೆಗೆದುಕೊಡಬೇಕಾದರೆ ಅಪ್ಪ ಮೂರು ದಿವಸ ಶ್ರಮಪಟ್ಟು ಹಣ ಹೊಂದಿಸಿಕೊಳ್ಳುತ್ತಿದ್ದರು. ಅಂತಹದರಲ್ಲಿ ಇನ್ನೊಬ್ಬ ಹುಡುಗನ ಕಾಲೇಜು ವಿದ್ಯಾಭ್ಯಾಸದ ಜವಾಬ್ದಾರಿಯನ್ನು

ಹೊರುವುದೆಂದರೆ ?

ಅಪ್ಪ ಪ್ರಯತ್ನಪಟ್ಟನಷ್ಟು ನನ್ನ ಮದುವೆ ದೂರ ಓಡಿತು. ಸುಬ್ಬಿಯಂತೂ 'ಇವಳ ಮದುವೆ ಗಣೇಶನ ಮದುವೆಯಾಗಿದೆ' ಎಂದು ಗೊಣಗುತ್ತಿದ್ದಳು. ಅಪ್ಪನ ಪ್ರಯತ್ನ, ಸುಬ್ಬಿಯ ಗೊಣಗಾಟ ಕೇಳಿ ನನ್ನ ಮನಸ್ಸು ರೋಸಿಹೋಯಿತು.

ನನ್ನ ಮದುವೆಯ ಮತ್ತೊಂದು ಪ್ರಯತ್ನ ಮುರಿದು ಬಿದ್ದಾಗ ಸುಬ್ಬಿ 'ಇವಳ ಮದುವೆ ಆಗಿಬಿಟ್ಟರೆ ನಾನು ಬದುಕಿದೆ. ಆಮೇಲೆ ಮಣಿ ಮದುವೆ ಏನೇನೂ ಕಷ್ಟವಾಗೋದಿಲ್ಲ' ಎಂದಳು.

ಅಲ್ಲಿಯೇ ನಿಂತಿದ್ದ ನಾನು ರೇಗಿ ನುಡಿದೆ 'ಈಗಲೂ ಮಣಿಗೇ ಮದುವೆ ಮಾಡಿ. ನಾನು ಮದುವೆ ಮಾಡಿಕೊಳ್ಳೋದಿಲ್ಲ. ನನ್ನ ಮದುವೆ ಆದಮೇಲೆ ಮಣೀ ಮದುವೆ ಮಾಡೀಂತ ನಾನೇನೂ ಹೇಳಿಲ್ಲ.'

'ನಿನ್ನ ಎಷ್ಟು ದಿನಾಂತ ಮನೇಲಿಟ್ಟುಕೊಂಡಿರೋದು ?'

'ನೀವೇನೂ ನನಗೆ ಬಿಟ್ಟಿ ಅನ್ನ ಹಾಕುತ್ತಿಲ್ಲ. ನೀವು ಅನ್ನ ಹಾಕುವುದಕ್ಕೆ ಬದಲಾಗಿ ನನ್ನ ಕೈಲಿ ಚಾಕರಿ ಮಾಡಿಸಿಕೊಳ್ಳುತ್ತಿಲ್ಲವೇ ? ಅವರಿವರ ಮನೇಲಿ ಕೆಲಸ ಮಾಡಿ ನಿನ್ನ ಕೈಗೆ ಎಷ್ಟು ಹಣ ಕೊಟ್ಟಿದೀನಿ ಜ್ಞಾಪಕ ವಿದೆಯೇ ?'

'ಏನು ಬಾಯಿ ಮಾಡ್ತೀಯೇ ಬಜಾರಿ. ಅಕ್ಕಪಕ್ಕದ ಮನೆಯವರಿಗೆ ಕೇಳೀತು. ಸಧ್ಯ ಸುಮ್ಮನಿರು.'

'ನಿನ್ನ ಕೈಲಿ ಅನ್ನಿಸಿಕೊಂಡು ಸುಮ್ಮನಿರೋಕೆ ನಾನೇನೂ ಮರದ ಬೊಂಬೆಯಲ್ಲ. ನೀವು ಮಣಿಗೆ ಯಾವಾಗ ಬೇಕಾದರೂ ಮದುವೆ ಮಾಡಿ. ನಾನು ನಾಳೇನೇ ಮಂಜುಳಕ್ಕನ ಜೊತೆ ಹೋಗಿ ಫ್ಯಾಕ್ಟರಿ ಕೆಲಸಕ್ಕೆ ಸೇರಿಕೊಂಡು ನನ್ನ ಪಾಡಿಗೆ ಬೇರೆ ಇರ್ತೀನಿ. ನನ್ನಿಂದ ನಿಮಗೆ ಯಾಕೆ ತೊಂದರೆ ?'

ಸುಬ್ಬಿ ಗದ್ಗದ ದನಿಯಿಂದ 'ಏನೋ ನಿನ್ನ ಮದುವೆ ಆಗಲಿಲ್ಲವಲ್ಲಾ ಎನ್ನುವ ಸಂಕಟಕ್ಕೆ ನಾನೊಂದು ಮಾತನಾಡಿದೆ. ಅದಕ್ಕೆ....'

'ನೀನು ಇನ್ನೊಂದು ಸ್ವಲ್ಪ ಬೆಳ್ಳಗಿದ್ದಿದ್ದರೆ ಆಗ ನಾನೂ ಬೆಳ್ಳಗೆ ಹುಟ್ಟಿದ್ದೆ. ಆಗ ನನಗೆ ಸುಲಭವಾಗಿ ಮದುವೆಯಾಗ್ತಿತ್ತು. ಆದ್ದರಿಂದ

ನನಗೆ ಮದುವೆ ಆಗದೇ ಇರೋದು ನನ್ನ ತಪ್ಪಲ್ಲ. ನಿನ್ನ ತಪ್ಪು.'

'ಹುಚ್ಚುಚ್ಚಾಗಿ ಮಾತನಾಡಬೇಡ.'

'ನಿನ್ನ ಮಾತು ಕೇಳಿದರೆ ಹುಚ್ಚೂ ಹಿಡಿಯುತ್ತೆ, ಬೆಪ್ಪೂ ಹಿಡಿಯುತ್ತೆ. ಹೊರಗಿನಿಂದ ಹೆಣ ಚಾಕರಿ ಮಾಡಿಕೊಂಡು ಮನೆಗೆ ಬಂದ ತಕ್ಷಣ "ಇವಳಿಗೆ ಇನ್ನೂ ಮದುವೆ ಆಗಲಿಲ್ಲಾ' ಅಂತ ಚುಚ್ಚುತ್ತಾನೇ ಇದ್ದರೆ ನನಗೂ ಬೇಜಾರಾಗೋದಿಲ್ಲವೇ ? ಇನ್ನೊಂದು ದಿನ ನನ್ನೆದುರಿಗೆ ಹಾಗೆಂದರೆ ನಾನು ಯಾರನ್ನಾದರೂ ಕಟ್ಟಿಕೊಂಡು ಓಡಿಹೋಗ್ತೀನಿ. ಇಲ್ಲದಿದ್ದರೆ ಫ್ಯಾಕ್ಟರಿ ಕೆಲಸಕ್ಕೆ ಸೇರಿಕೊಂಡು ಬೇರೆ ಇರ್ತೀನಿ. ನಾನು ಹುಟ್ಟಲಿಲ್ಲಾಂತ ತಿಳಿದುಕೊಂಡು ನೀವು....'

ನನ್ನ ಮಾತು ಮುಗಿಯುವಷ್ಟರಲ್ಲಿ ಅಪ್ಪ ಒಳಗೆ ಬಂದರು. ಅಪ್ಪನ ಮುಖ ನೋಡಿದ ಕೂಡಲೇ ನನ್ನ ಆವೇಶ, ದನಿ ಉಡುಗಿಹೋಯಿತು. ನಾನು ತಲೆ ತಗ್ಗಿಸಿ ಅಡಿಗೆ ಮನೆಯ ಕಡೆ ಹೊರಟೆ.

ಸುಬ್ಬಿ ಗಂಡನ ಮುಖ ಕಂಡ ಕೂಡಲೇ 'ನಿಮ್ಮ ಮಗಳ ಮಾತು ಕೇಳಿ ಹೊಟ್ಟೆಗೆ ಹಾಲು ಹುಯಿದುಕೊಳ್ಳಿ' ಎನ್ನುತ್ತಾ ಅಳಲು ಪ್ರಾರಂಭ ಮಾಡಿದಳು.

'ಏನಾಯಿತು ? ನಡೆದದ್ದಾದರೂ ಏನು ?'

'ಅವಳು ಯಾರನ್ನಾದರೂ ಕಟ್ಟಿಕೊಂಡು ಓಡಿಹೋಗ್ತಾಳಂತೆ. ಇಲ್ಲದಿದ್ದರೆ ಫ್ಯಾಕ್ಟರೀಗೆ ಸೇರಿಕೊಳ್ತುತ್ತಾಳಂತೆ....'

'ನೀನು ಅವಳನ್ನ ಮದುವೆ ಆಗಲಿಲ್ಲಾಂತ ಮೂದಲಿಸಿದೇಂತ ಕಾಣುತ್ತೆ. ಅವಳ ಮುಖ ಕಂಡಾಗಲೆಲ್ಲಾ ಹಾಗಂದರೆ ಅವಳು ತಾನೆ ಯಾಕೆ ಸುಮ್ಮನಿರುತ್ತಾಳೆ.'

'ಹೌದು. ಎಲ್ಲಾ ನಂದೇ ತಪ್ಪು. ಮುಖ್ಯವಾಗಿ ನನ್ನ ಅದೃಷ್ಟ ಚೆನ್ನಾಗಿಲ್ಲ' ಎನ್ನುತ್ತಾ ಸುಬ್ಬಿ ಬಿಕ್ಕಿದಳು.

'ಇನ್ನು ಮೇಲೆ ನೀನು ಅವಳನ್ನು ಎದುರೆದುರಿಗೇ ಮೂದಲಿಸೋದನ್ನ ನಿಲ್ಲಿಸಿ ಬಿಡು. ಅವಳೇನೂ ಚಿಕ್ಕ ಹುಡುಗಿಯಲ್ಲ. ಅವಳಿಗೂ ಹತ್ತೊಂಬತ್ತು ವರ್ಷವಾಯಿತು.'

ಸುಬ್ಬಿ ಮಾತನಾಡಲಿಲ್ಲ. ಆದರೆ ಅಂದಿನಿಂದ ಮೂದಲಿಕೆ ತಪ್ಪಿತು.

ನಮ್ಮ ದೊಡ್ಡಮ್ಮ ಸುಶೀಲಮ್ಮನ ಮೊಮ್ಮಗಳ ಮದುವೆ ನಿಶ್ಚಯವಾಯಿತು. ಸುಶೀಲಮ್ಮನ ಮೊಮ್ಮಗಳು ಸರೋಜಿನಿ ನಾನು ಒಂದೇ ವಯಸ್ಸಿನವರು. ನಾವು ಅಷ್ಟು ಹತ್ತಿರದ ನೆಂಟರಾದರೂ ಒಬ್ಬರ ಮನೆಗೆ ಮತ್ತೊಬ್ಬರು ಬಂದು ಹೋಗುತ್ತಿರಲಿಲ್ಲ.

'ನಾವು ಅವರಿಗಿಂತ ಬಡವರು. ಆದ್ದರಿಂದ ದೂರವಿರುವುದೆ ಮರ್ಯಾದೆ' ಎಂದು ಅಪ್ಪ ಸುಬ್ಬಿಗೆ ಹೇಳಿದ್ದರು. ಆದರೆ ಮದುವೆ, ಮುಂಜಿ ಎಂದರೆ ಒಂದು ಕಡೆ ಸೇರದಿರುವುದು ಹೇಗೆ? ಅದೂ ಅಲ್ಲದೆ ಮದುವೆ ಸಮಯದಲ್ಲಿ ಬಡನೆಂಟರಿಂದ ಆಗುವ ಸಹಾಯ ಬೇರಾರಿಂದಲೂ ಆಗೋದಿಲ್ಲ. ಎಲೆ ಗೋಮೆ, ಅಳುವ ಮಕ್ಕಳನ್ನು ಸುಧಾರಿಸುವುದು, ಅವರಿವರು ಬಿಚ್ಚಿ ಹಾಕಿದ ಹದಿನೆಂಟು ಮೊಳದ ಧರ್ಮಾವರದ ಸೀರೆಗಳನ್ನು ಮಡಿಸಿಡುವುದು, ಜಡೆ ಹೆಣೆಯುವುದು ಮೊದಲಾದ ಕೆಲಸಗಳನ್ನು ನಿಸ್ಸಂಕೋಚದಿಂದ ಬಡನೆಂಟರ ಮೇಲೆ ಹಾಕುವುದು ಸರ್ವೇಸಾಮಾನ್ಯ.

ನಾವು ಎರಡು ದಿನ ಮುಂಚಿತವಾಗೇ ಸರೋಜಿನಿಯ ಮದುವೆಗೆ ಹೋದೆವು. ಸರೋಜಿನಿಯ ಮದುವೆಗೆ ಅವಳ ಶ್ರೀಮಂತ ಗೆಳತಿಯೊಬ್ಬಳು ಆಹ್ವಾನಿತಳಾಗಿ ಎರಡು ದಿನ ಮೊದಲೇ ಬಂದಿದ್ದಳು. ಆ ಶ್ರೀಮಂತ ಕೊಡಗಿನ ಹುಡುಗಿಯ ಹೆಸರು ಕಾಮಿನಿ. ಮೂರು ದಿನದ ಮದುವೆಗಾಗಿ ಕಾಮಿನಿ ಮೂರು ಟ್ರಂಕಿನ ತುಂಬಾ ಸೀರೆ, ಬ್ಲೌಸು, ಒಡವೆಗಳನ್ನು ತಂದಿದ್ದಳು.

ಕಾಮಿನಿ, ಮಣಿ ಪರಿಚಯವಾದ ಐದು ನಿಮಿಷಗಳಲ್ಲಿ ತುಂಬಾ ಗೆಳತಿಯರಾದರು. ಕಾಮಿನಿಯ ಅಲಂಕಾರ, ಸೀರೆ, ಒಡವೆಗಳನ್ನು ನೋಡಿ ಮಣಿ ಬೆರಗಾಗಿ ಹೋಗಿದ್ದಳು. ಕಾಮಿನಿಯೆಂದರೆ ಮಣಿಗೆ ಒಂದು ರೀತಿಯ ಪೂಜ್ಯ ಭಾವನೆ ಉದಯಿಸಿತು. ಸ್ವಭಾವತಃ ಮಣಿ ಅಲಂಕಾರ ಪ್ರಿಯೆ. ಸಾಲದುದಕ್ಕೆ ತಾನು ಚೆಲುವೆ ಎಂಬುದೂ ಅವಳಿಗೆ ತಿಳಿದಿತ್ತು. ಅವಳು ಉಡುತ್ತಿದ್ದುದು ಐದಾರು ರೂಪಾಯಿನ ನೂಲಿನ ಸೀರೆಯನ್ನಾದರೂ ಅದನ್ನು ಸಿಸ್ತಾಗಿ ಉಡುತ್ತಿದ್ದಳು. ಕಾಮಿನಿಯ ಆಡಂಬರದ ಉಡುಪಿಗೆ ಮಣಿ ಮುಗ್ಧಳಾದುದರಲ್ಲಿ ಆಶ್ಚರ್ಯವೇನೂ ಇರಲಿಲ್ಲ. ಕಾಮಿನಿಯ ಪರಿಚಯವಾದ ಗಳಿಗೆಯಿಂದಲೇ ಮಣಿ ಅವಳ ಹಿಂದೆ ಹಿಂದೆ ತಿರುಗಿದಳು. ಕಾಮಿನಿ

ಹೇಳಿದ ಕೆಲಸಗಳನ್ನೆಲ್ಲಾ ವಿಧೇಯಳಾಗಿ ಮಾಡುತ್ತಿದ್ದಳು. ಅದರ ಪರಿಣಾಮವಾಗಿ ಮದುವೆಯ ಮನೆಯಲ್ಲಿ ಮಣಿ ಕಾಮಿನಿಯ ಸೀರೆ, ಒಡವೆಗಳಿಂದ ಅಲಂಕೃತಳಾಗಿ ಮೆರೆದಾಡಿದಳು.

ಸರೋಜಿನಿಯ ಮದುವೆಯ ದಿನ ಸಂಜೆ ರಿಸೆಪ್ಷನ್ನಿಗೆ ಕಾಮಿನಿ ಮಣಿಯನ್ನು ತಾನೇ ಶೃಂಗರಿಸಿದಳು. ಕಾಮಿನಿ ಮಣಿಯ ಗುಂಗುರು ಕೂದಲನ್ನು ಹಗುರವಾಗಿ ಬಾಚಿ, ಜಡೆ ಹಾಕದೆ ಕೆಂಪು ರಿಬ್ಬನ್ನಿನಿಂದ ಕೂದಲನ್ನು ಕಟ್ಟಿದಳು. ಅಗಲವಾದ ಒಂದು ಕೆಂಪು ಗುಲಾಬಿಯನ್ನು ತಂದು ಎಡಗಿವಿಯ ಮೇಲೆ ಪಿನ್ನು ಹಾಕಿ ಚುಚ್ಚಿದಳು. ಮಣಿಯ ಹುಬ್ಬು, ಕಣ್ಣುಗಳನ್ನು ತಿದ್ದಿ ಮುಖಕ್ಕೆ ಎಂತಹದೋ ಬಣ್ಣ ಬಳಿದು, ತುಟಿಗೆ ಕೆಂಪು ಹಚ್ಚಿದಳು. ಮುಖಕ್ಕೆ ಬಳಿದ ದ್ರವ ಆರಿದ ಮೇಲೆ ಮತ್ತೆ ಅದರ ಮೇಲೆ ಕೆನ್ನೆಗೆ ಮಾತ್ರ ಕೆಂಪು ಪೌಡರ್ ಬಳಿದು ಉಳಿದ ಕಡೆ ಶೀರೋಜಾ ಬಣ್ಣದ ಪೌಡರ್ ಹಚ್ಚಿದಳು. ಕಿವಿಗೆ ಕೆಂಪಿನೋಲೆಯನ್ನು ಹಾಕಿ, ಅದಕ್ಕೆ ಹೊಂದಿಕೊಂಡಿದ್ದ ಆಧುನಿಕ ರೀತಿಯ ಕೆಂಪಿನ ಕೆನ್ನೆ ಸರಪಳಿಯನ್ನು ಕೂದಲಿಗೆ ಸೆಕ್ಕಿಸಿದಳು. ಮಣಿಯ ಕೈಗೆ ಮುತ್ತುಕೆಂಪಿನ ಕೈ ಬಳೆಗಳನ್ನು ಹಾಕಿ, ಕೊರಳಿಗೆ ಅದೇ ಮಾದರಿಯ ನೆಕಲೇಸನ್ನು ತೊಡಿಸಿದಳು.

ಗಳಿಗೆ ಗಳಿಗೆಗೆ ಮಣಿಯ ಬಣ್ಣ, ಸ್ವರೂಪ ಬದಲಾಯಿಸಿತು. ನಾನು ರೂಮಿನಲ್ಲಿ ಕುಳಿತು ಈ ಮಾರ್ಪಾಡನ್ನು ಮಂತ್ರ ಮುಗ್ಧಳಂತೆ ನೋಡುತ್ತಿದ್ದೆ. ದೇವತೆಯೊಬ್ಬಳು ಸಿಂಡ್ರೆಲ್ಲಾಳನ್ನು ತನ್ನ ದಂಡದಿಂದ ಸ್ಪರ್ಶಿಸಿದ ಕತೆಯನ್ನು ನಾನು ಹಿಂದೆ ಕೇಳಿದ್ದೆ. ಕಾಮಿನಿಯೇ ಆ ದೇವತೆಯಾಗಿ ಈ ಸಿಂಡ್ರೆಲ್ಲಾಳನ್ನು ತನ್ನ ದಂಡದಿಂದ ಸ್ಪರ್ಶಿಸುತ್ತಿದಾಳೆ ಎಂದು ನನಗೆ ತೋರಿತು.

ಕಾಮಿನಿ ತನ್ನ ಅರುಣವರ್ಣದ ಟಿಷ್ಯೂ ಸೀರೆಯನ್ನು ಮಣಿಗೆ ಓರಣವಾಗಿ ಉಡಿಸಿ ಅದೇ ವರ್ಣದ ವೆಲ್ವೆಟ್ಟಿನ ರವಿಕೆಯನ್ನು ಹಾಕಿದಳು. ಹುಬ್ಬಿನ ಮೇಲೆ ಹುಡಿಯಾಗಿ ನಿಂತಿದ್ದ ಹೆಚ್ಚಿಗೆ ಪೌಡರನ್ನು ತನ್ನ ಕರವಸ್ತ್ರದಿಂದ ಒರೆಸಿ, ಕೆನ್ನೆಯ ಮೇಲೆ ಮತ್ತಷ್ಟು ಪೌಡರ್ ಉದುರಿಸಿ, ಸ್ವಲ್ಪ ದೂರ ನಿಂತು ಮಣಿಯನ್ನು ದಿಟ್ಟಿಸಿ ನೋಡಿ

ಲೌವ್‌ಲಿ, ಲೌವ್‌ಲಿ....' ಎಂದು ಚಪ್ಪಾಳೆ ತಟ್ಟಿದಳು, ಕಾಮಿನಿ.

‘ ಹಾಗಂದರೆ ? ’ ಮಣಿ ಕಣ್ಣು ಅಗಲವಾಗಿ ತೆಗೆದು ಕೇಳಿದಳು.

‘ ಹಾಗಂದರೆ ಮುದ್ದಾಗಿದೀಂತ ಅರ್ಥ. ನಾನು ನಿನ್ನಷ್ಟು ಚೆನ್ನಾಗಿದ್ದಿದ್ದರೆ ಇನ್ನೂ ಎಷ್ಟೋ ಮೆರೆದಾಡುತ್ತಿದ್ದೆ ಕಣೆ ಮಣಿ.’

‘ ಇಷ್ಟೊಂದು ಒಡವೆ, ಸೀರೆ ಎಲ್ಲಾ ಇದೆ. ಆದರೂ ಚೆನ್ನಾಗಿಲ್ಲಾಂತ....’

‘ ಒಡವೆ ಸೀರೆ ಇದ್ದ ಮಾತ್ರಕ್ಕೆ ಚೆನ್ನಾಗಿದೀನೀಂತ ಹೇಳೋಕಾಗುತ್ತದೆಯೇ ? ನನ್ನ ಮೂಗು, ಕಣ್ಣು, ಬಾಯಿ ಯಾವುದೂ ನಿನ್ನಷ್ಟು ಚೆನ್ನಾಗಿಲ್ಲ. ಎಲ್ಲಾದಕ್ಕಿಂತ ನನ್ನ ಮೂಗು.... ಓ ಮೈ ಪೂರ್ ನೋಸ್....’ ಎನ್ನುತ್ತಾ ಕಾಮಿನಿ, ಆನೆಯ ಸೊಂಡಿಲಿನಂತಿದ್ದ ತನ್ನ ಮೂಗಿನ ಮೇಲೆ ಬೆರಳಾಡಿಸಿ

‘ನಾನು ಏನು ಅಲಂಕಾರ ಮಾಡಿಕೊಂಡರೂ ಈ ಹಾಳು ಮೊಳದುದ್ದದ ಮೂಗಿನಿಂದಾಗಿ ನನ್ನೆಲ್ಲಾ ಅಲಂಕಾರವೂ ಮುಚ್ಚಿ ಹೋಗತ್ತೆ’ ಎಂದಳು.

‘ ಆದರೂ ಈ ಒಡವೆಗಳು, ಸೀರೆ ಇರಬೇಕಾದರೆ ಎಷ್ಟು ಪುಣ್ಯ ಮಾಡಿರಬೇಕೋ ? ’ ಮಣಿ ಆಸೆಯಿಂದ ಹೇಳಿದಳು.

‘ ನಾನು ನಿನ್ನಷ್ಟು ಚೆನ್ನಾಗಿದ್ದಿದ್ದರೆ ಈ ಅಲಂಕಾರ ಒಂದೂ ಬೇಡಾಂತ ಹೇಳುತ್ತಿದ್ದೆ. ಮಣಿ, ನಿಮ್ಮ ತಾಯಿ ಎಲ್ಲಿ ? ’

‘ ಸುಬ್ಬಿ, ದೊಡ್ಡಮ್ಮ ಸರೋಜಿನಿಗೆ ಅಲಂಕಾರ ಮಾಡ್ತಿರಬೇಕು.’

‘ ಬಾ. ನಿನ್ನ ಅವರ ಹತ್ತಿರ ಕರೆದುಕೊಂಡು ಹೋಗ್ತೀನಿ. ಅವರೆಲ್ಲಾ ನಿನ್ನ ನೋಡಿ ಗಾಬರಿಯಾಗಬೇಕು. ತಾಳು ಆ ರೂಮಿನಲ್ಲಿ ಯಾರಾದಾರೆ ನಾನು ಹೋಗಿ ನೋಡಿ ಬರುತ್ತೇನೆ’ ಎನ್ನುತ್ತಾ ಕಾಮಿನಿ ಎದ್ದು ಹೊರಗೆ ಓಡಿದಳು. ಮಣಿ ನನ್ನ ಕಡೆ ತಿರುಗಿ

‘ ಹೇಗೆ ಕಾಣ್ತೀನಕ್ಕ ? ’ ಎಂದಳು.

‘ ನಂಗೆ ವರ್ಣನೆ ಮಾಡೋದಿಕ್ಕೆ ಬರೋದಿಲ್ಲಮ್ಮ. ರಾಮಾಯಣದ ಕತೆ ಓದಿದೀನಿ. ಸೀತೆ ತನ್ನ ಸ್ವಯಂವರಕ್ಕೆ ಹೊರಟಾಗ ಹೀಗೇ ಕಾಣಿಸುತ್ತಿರಬಹುದು. ಆದರೆ ಇದು ಮಣಿ ಸ್ವಯಂವರ....’

‘ ಊಂ....ಸಂದೇನೂ ಮದುವೆ ಅಲ್ಲ.’

ಕಾಮಿನಿ ಬಿರುಗಾಳಿಯಂತೆ ಮತ್ತೆ ರೂಮಿನೊಳಗೆ ನುಗ್ಗಿ ಬಂದಳು.

'ಮಣೀ, ಎಲ್ಲಾರೂ ಸರೋಜಿನಿ ರೂಮಿನಲ್ಲೇ ಸೇರಿಬಿಟ್ಟಿದಾರೆ. ಸರೋಜಿನಿ ಅಲಂಕಾರವೂ ಪೂರ್ತಿಯಾಗಿದೆ....'

'ಅಲ್ಲಿ ಯಾರೂ ಗಂಡಸರಿಲ್ಲ ತಾನೆ?' ಮಣಿ ಸಂದೇಹದಿಂದ ಕೇಳಿದಳು.

ಕಾಮಿನಿ ಕಿಲಕಿಲನೆ ನಕ್ಕು 'ಯಾರೂ ಇಲ್ಲ. ಸರೋಜಿನಿ ಅಣ್ಣ ಇದಾರೆ. ಆಮೇಲೆ ನಿನ್ನ ಮಜ್ನು ಇದಾನೆ' ಎಂದಳು.

ಮಣಿ ಮುಖ ತಿರುಗಿಸಿ 'ಹಾಗಾದರೆ ನಾನು ಬರೋದಿಲ್ಲ' ಎಂದಳು.

ನಾನು, ಕಾಮಿನಿ ನಕ್ಕೆವು. ಮಣಿಯನ್ನು ಮದುವೆ ಮನೆಯಲ್ಲಿ ನೋಡಿ ಬೆರಗಾದವರಲ್ಲಿ ಸರೋಜಿನಿಯ ಅಣ್ಣನ ಗೆಳೆಯ ಮೂರ್ತಿಯೂ ಒಬ್ಬ. ವರಪೂಜೆಯ ದಿನ ರಾತ್ರಿ ಅವನು ಸರೋಜಿನಿಯ ಅಣ್ಣ ಮೋಹನನ ಆಹ್ವಾನವನ್ನು ಮನ್ನಿಸಿ ಬೆಂಗಳೂರಿನಿಂದ ಮದುವೆಗಾಗಿ ಬಂದಿದ್ದ. ಬಂದ ದಿನ ರಾತ್ರಿಯೇ, ಮದುವೆಯ ಚಪ್ಪರದಲ್ಲಿ ಕಾಮಿನಿಯ ಮುಗಿಲವರ್ಣದ ಜಾರ್ಜೆಟ್ ಉಟ್ಟು ಅಪ್ಸರೆಯಂತೆ ಓಡಾಡುತ್ತಿದ್ದ ಮಣಿಯನ್ನು ನೋಡಿ ಮೂರ್ತಿ ಮರುಳಾಗಿದ್ದ. ಆ ಗಳಿಗೆಯಿಂದ ಮೊದಲ್ಗೊಂಡು ಮೂರ್ತಿಯ ಕಣ್ಣುಗಳು ಮಣಿಯನ್ನು ಬಿಟ್ಟು ಕದಲಿರಲಿಲ್ಲ. ಮಣಿ ಎಲ್ಲಿದ್ದರೂ ಅವಳಿಗೆ ಒಂದೆರಡು ಮಾರು ದೂರದಲ್ಲಿ ಸ್ಥಳ ದೊರಕಿಸಿಕೊಂಡು ನಿಲ್ಲುತ್ತಿದ್ದ. ಮೂರ್ತಿಯ ಈ ಮರುಳುತನ ನನಗೆ, ಕಾಮಿನಿಗೆ, ಮಣಿಗೆ ಚೆನ್ನಾಗಿ ತಿಳಿದಿತ್ತು. ಮೂರ್ತಿಯ ಕಣ್ಣುಗಳು ಮಣಿಯನ್ನೇ ಹಿಂಬಾಲಿಸುತ್ತಿರುವುದನ್ನು ಗಮನಿಸಿದ್ದ ಕಾಮಿನಿ ಅವನಿಗೆ 'ಮಣಿಯ ಮಜ್ನು' ಎಂದು ಹೆಸರಿಟ್ಟಿದ್ದಳು.

ವರಪೂಜೆಯ ರಾತ್ರಿಯೇ ಮೂರ್ತಿಯ ಮನಸ್ಸನ್ನರಿತ ಕಾಮಿನಿ ಅವನನ್ನು ಚೆನ್ನಾಗಿ ಗೋಳಾಡಿಸಿ ಬಿಟ್ಟಿದ್ದಳು. ರಾತ್ರಿ ಊಟದ ಸಮಯದಲ್ಲಿ ಎಲ್ಲರೂ ಚಪ್ಪರದಲ್ಲಿ ಕುಳಿತಿದ್ದೆವು. ಮಣಿ ಊಟಕ್ಕೆ ಕುಳಿತಿದ್ದ ಎದುರು ಸಾಲಿನಲ್ಲಿ ಮೂರ್ತಿ ಕುಳಿತಿದ್ದ. ನಾನು, ಮಣಿ, ಕಾಮಿನಿ ಒಟ್ಟಾಗಿ ಕುಳಿತಿದ್ದೆವು. ಮದುವೆಯ ಊಟಕ್ಕೆ ಆಹ್ವಾನಿತರಾಗಿ ಬಂದವರೊಬ್ಬರಿಗೆ ಎಲೆ ಸಾಲದಾಯಿತು. ಕಾಮಿನಿ ಮಣಿಯನ್ನು ತಿವಿದು ಮೂರ್ತಿಗೆ ಕೇಳಿಸುವಂತೆ

'ಮಣೀ, ನೀನು ಏಳಮ್ಮ. ಈಗ ಬಂದವರು ಇಲ್ಲಿ ಕುಳಿತು ಕೊಳ್ಳಲಿ. ಅದೂ ಅಲ್ಲದೆ ಹಾಗೆ ದೃಷ್ಟಿಯಾಗುವ ಹಾಗೆ ಯಾರಾದರೂ ನೋಡುತ್ತಿದ್ದರೆ ನಿನಗೂ ಗಂಟಲಿನಲ್ಲಿ ಅನ್ನ ಇಳಿಯುವುದಿಲ್ಲ' ಎಂದಳು.

ಅದುವರೆವಿಗೂ ಮಣಿಯನ್ನು ನೋಡುತ್ತಿದ್ದ ಮೂರ್ತಿ ಕಾಮಿನಿಯ ಮಾತು ಕೇಳಿ ತಟಕ್ಕನೆ ಬೇರೆ ಕಡೆ ತಿರುಗಿದ. ಮಣಿ ಎದ್ದು ತನ್ನ ಎಲೆ ಯನ್ನು ಬಂದವರಿಗೆ ಬಿಟ್ಟುಕೊಟ್ಟು ಒಳಗೆ ಹೊರಟು ಹೋದಳು. ಬಡಿ ಸಿದುದೆಲ್ಲಾ ಮುಗಿಯಿತು. ಎಲೆಗೆ ಕೈ ಹಾಕುವುದಕ್ಕೆ ಮುಂಚೆ ಕಾಮಿನಿ ಮೂರ್ತಿ ಕುಳಿತಿದ್ದ ಕಡೆ ನೋಡಿದಳು. ಮೂರ್ತಿಯೂ ಯಾವ ಮಾಯ ದಲ್ಲೋ ಎದ್ದು ಹೊರಟು ಹೋಗಿದ್ದ. ಅವನು ಕುಳಿತ ಸ್ಥಳದಲ್ಲಿ ಮುದುಕ ರೊಬ್ಬರು ಕುಳಿತಿದ್ದರು. ಕಾಮಿನಿ ನನ್ನ ಕಡೆ ತಿರುಗಿ

'ನನ್ನ ಜಾಗ ಕೊಂಚ ನೋಡಿಕೋ. ಈಗ ಬಂದು ಬಿಡುತ್ತೇನೆ' ಎನ್ನುತ್ತಾ ಎದ್ದು ಹೋಗಿ, ಎರಡು ನಿಮಿಷದ ನಂತರ ನಗುತ್ತಾ ಬಂದು ತನ್ನ ಸ್ಥಳದಲ್ಲಿ ಕುಳಿತು

'ಮಣಿ ಹಾಲಿನಲ್ಲಿ ಊಟಕ್ಕೆ ಕುಳಿತಿದ್ದಾಳೆ' ಎಂದಳು.

'ಮೂರ್ತಿ?'

'ಅವನೂ ಅಲ್ಲೇ ಮಣಿಯ ಎದುರು ಸಾಲಿನಲ್ಲೇ ಕೂತಿದಾನೆ' ಎನ್ನುತ್ತಾ ಜೋರಾಗಿ ನಕ್ಕಳು.

ಆ ಗಳಿಗೆಯಿಂದ ಮೂರ್ತಿಯೆಂದರೆ ನಾಚಿ ಕೆಂಪಾಗುತ್ತಿದ್ದ ಮಣಿ ಸಾಧ್ಯವಾದ ಮಟ್ಟಿಗೆ ಅವನ ಕಣ್ಣು ತಪ್ಪಿಸಿ ಓಡಾಡಲು ಪ್ರಯತ್ನಿಸು ತ್ತಿದ್ದಳು. ಆದುದರಿಂದಲೇ ಸರೋಜಿನಿಯ ರೂಮಿನಲ್ಲಿ ಮೂರ್ತಿ ಇದಾ ನೆಂದು ಕೇಳಿ ಮಣಿ 'ನಾನು ಬರೋದಿಲ್ಲ' ಎಂದಳು.

ಕಾಮಿನಿ ಹಠ ಮಾಡಿ 'ಮೂರ್ತಿ ನಿನ್ನ ತಿಂದುಬಿಡೋದಿಲ್ಲ. ಅವನು ನಿನ್ನ ನೋಡಿದರೆ ನಿನ್ನ ರೂಪವೇನೂ ಕಡಿಮೆಯಾಗೋಲ್ಲ' ಎನ್ನುತ್ತಾ ಮಣಿಯ ಕೈ ಹಿಡಿದೆಳೆದುಕೊಂಡು ಹೊರಟಳು. ನಾನೂ ಅವರಿಬ್ಬರ ಹಿಂದೆ ಹೋದೆ.

ಮಣಿಯನ್ನು ನೋಡಿದೊಡನೆ ನಮ್ಮ ದೊಡ್ಡಮ್ಮ, ಸುಬ್ಬಿ, ಸರೋ ಜಿನಿ ಎಲ್ಲರೂ ಆಶ್ಚರ್ಯಗೊಂಡರು. ಸರೋಜಿನಿಯಂತೂ ಮಗುವಿನಂತೆ

ಕೇಕೆ ಹಾಕಿ ' ವಂಡರ್‌ಫುಲ್ ' ಎಂದಳು.

' ಹಾಗಂದರೆ ಏನು ಗೊತ್ತೇನೇ ಮಣಿ ? ' ಕಾಮಿನಿ ಕೇಳಿದಳು.

ಮಣಿ ತಗ್ಗಿಸಿದ ತಲೆ ಎತ್ತಲಿಲ್ಲ. ಮೂರ್ತಿ, ಮೋಹನ ರೂಮಿನಲ್ಲಿ ಸುರುಳಿಸುತ್ತಿದ್ದ ಹಾಸಿಗೆಯೊಂದರ ಮೇಲೆ ಕುಳಿತು ದೊಡ್ಡಮ್ಮನೊಡನೆ ಮಾತನಾಡುತ್ತಿದ್ದರು. ಮಣಿ ಅವರಿಗೆ ಬೆನ್ನು ಮಾಡಿ ನಿಂತಿದ್ದಳು.

ದೊಡ್ಡಮ್ಮ ' ತುಂಬಾ ಚೆನ್ನಾಗಿದೆ ಕಾಮಿನಿ. ನೀನು ಅಲಂಕಾರ ಮಾಡಿದ ಮೇಲೆ....'

' ನಾನು ಅಲಂಕಾರ ಮಾಡೋದಿರಲಿ, ಯಾರಿಗೆ ಅಲಂಕಾರ ಮಾಡುತ್ತೀನಿ ಎನ್ನೋದೇ ಎಲ್ಲಕ್ಕಿಂತ ಮುಖ್ಯವಾದ್ದು ಅಲ್ಲವೇ ? ಅಲಂಕಾರ ಮಾಡಿಸಿಕೊಳ್ಳೋರೂ ಅಷ್ಟೇ ಮುದ್ದಾಗಿರಬೇಕು ತಾನೆ ? '

ಮೋಹನ ಕಾಮಿನಿಗೆ ' ನಾವು ನಿಮ್ಮಲಂಕಾರಾನ ಮೆಚ್ಚಿಲ್ಲ ' ಎಂದ. ಕಾಮಿನಿ ಹುಬ್ಬು ಗಂಟಿಕ್ಕಿ ' ಯಾಕೋ ? ' ಎಂದಳು.

' ಹೀಗೆ ಬೆನ್ನು ತಿರುಗಿಸಿ ನಿಂತರೆ ನಾವೇನು ನೋಡಿ ಮೆಚ್ಚೋದು ? ಎಲ್ಲಿ ಮಣಿ ಕೊಂಚ ಈ ಕಡೆ ತಿರುಗು. ಕಾಮಿನಿಗೆ ನಾವು ಸರ್ಟಿಫಿಕೇಟ್ ಕೊಡಬೇಕಾಗಿದೆ.'

ಮಣಿ ' ಊಹೂಂ ' ಎಂದಳು. ಕಾಮಿನಿ ತನ್ನ ಕೈ ಚಳಕವನ್ನು ಮೋಹನ ಹಳಿಯದಂತೆ ಮಾಡಲು ಮಣಿಯನ್ನು ಬಲವಂತದಿಂದ ಮೋಹನ, ಮೂರ್ತಿಯ ಎದುರಿಗೆ ಮುಖ ತಿರುಗಿಸಿ ನಿಲ್ಲುವಂತೆ ಮಾಡಿದಳು.

' ಪರವಾಗಿಲ್ಲ. ನಿಮ್ಮ ಕೈಗೆ ಕಾಣಿಕೆ ಕೊಡಬೇಕು. ನೀನೇನು ಹೇಳ್ತೀಯೋ ಮೂರ್ತಿ ? '

' ನನದೇನಪ್ಪ, ನೀವೆಲ್ಲ ಹೇಗೆ ಹೇಳಿದರೆ ಹಾಗೆ.'

ಮೋಹನ ಮತ್ತೆ ಕಾಮಿನಿಯನ್ನು ಹೊಗಳಿದ ' ನಿಜವಾಗಿಯೂ ನೀವು ಚೆನ್ನಾಗಿ ಅಲಂಕಾರ ಮಾಡಿದೀರಿ. ಅಲಂಕಾರ ಮಾಡೋದೂ, ಮಾಡಿಕೊಳ್ಳೋದೂ ಒಂದು ಕಲೆ.'

' ತುಂಬಾ ಥ್ಯಾಂಕ್ಸ್ ' ಕಾಮಿನಿ ತೃಪ್ತಳಾಗಿ ನುಡಿದು ಮೂರ್ತಿಯ ಕಡೆ ತಿರುಗಿ ' ನಿಮ್ಮದೇನು ಅಭಿಪ್ರಾಯ ? ' ಎಂದಳು.

' ಮೋಹನನಂದೂ, ನನ್ನದೂ ಒಂದೇ ಅಭಿಪ್ರಾಯ.'

' ಬಾರೆ ಮಣಿ ಉಳಿದವರಿಗೆಲ್ಲಾ ತೋರಿಸಿಕೊಂಡು ಬರೋಣ ' ಕಾಮಿನಿ ಮಣಿಯನ್ನು ಕರೆದಳು.

' ನಾನು ಬರೋದಿಲ್ಲವಮ್ಮ.'

ಸರೋಜಿನಿ ಕಾಮಿನಿಗೆ 'ಇರಲಿ ಬಿಡು. ಚಪ್ಪರಕ್ಕೆ ಬಂದಾಗ ಎಲ್ಲರೂ ನೋಡೇ ನೋಡ್ತಾರೆ ' ಎಂದಳು.

ದೊಡ್ಡಮ್ಮ ಹೊಸ ಧರ್ಮಾವರದ ಸೀರೆಯೊಂದನ್ನು ಪೆಟ್ಟಿಗೆಯೊಂದ ರಿಂದ ಹೊರಗೆ ತೆಗೆದು ಮೋಹನ, ಮೂರ್ತಿಗೆ

' ಹೊರಗೆ ಹೋಗ್ರೋ, ಆಗಿಂದ ಇಲ್ಲೇ ಹರಟೆ ಹೊಡೀತಿದೀರಿ. ಚಪ್ಪರದಲ್ಲಿ ಕುರ್ಚಿಗಳನ್ನು ಸರಿಯಾಗಿ ಹಾಕಿಸಿ, ನೀವೂ ಬಟ್ಟೆ ಬರೆ ಹಾಕಿ ಕೊಳ್ಳಿ. ನಾವೂ ಸೀರೆ ಉಟ್ಟುಕೊಂಡು ಸಿದ್ಧವಾಗ್ತೀವಿ' ಎಂದರು.

ಮೋಹನ ತಟ್ಟನೆ ನಿಂತು ' ಆಗಲಿ ಅಜ್ಜಿ ' ಎಂದು ಹೇಳಿ ಮೂರ್ತಿ ಯನ್ನು ತಟ್ಟಿ ' ಏಳೋ ಕನಸು ಕಾಣೋದಕ್ಕೆ ಇನ್ನೂ ಸಮಯವಿದೆ ' ಎಂದ.

ಸರೋಜಿನಿಯ ಮದುವೆ ಮುಗಿದ ಮಾರನೆಯ ದಿನವೇ ನಾವು ನಮ್ಮ ಮನೆಗೆ ಹೊರಟು ಬಂದೆವು. ಅಪ್ಪ ತಮ್ಮ ಸ್ನೇಹ ಬೆಳೆಸಿದ್ದ ಮೂರ್ತಿ ಯನ್ನು ಔಪಚಾರಿಕವಾಗಿ ' ಮನೆಗೆ ಬನ್ನಿ ' ಎಂದು ಆಹ್ವಾನಿಸಿದರು. ಕಾಮಿನಿಯನ್ನು ಮಣಿ ಮನೆಗೆ ಬರುವಂತೆ ಕರೆದಿದ್ದರೂ ಅವಳಿಗೆ ಬರಲು ಸಮಯವಾಗಲಿಲ್ಲ. ಮದುವೆಯಾದ ಮರುದಿನ ಬೆಳಗಿನ ಬಸ್ಸಿನಲ್ಲೇ ಕಾಮಿನಿ ಮಡಕೇರಿಗೆ ಹೊರಟುಹೋದಳು. ಅವಳನ್ನು ಕಳುಹಿಸಿಕೊಡಲು ನಾನು, ಮಣಿ, ಮೋಹನ, ಮೂರ್ತಿ, ಸರೋಜಿನಿ ಅವಳ ಗಂಡ ಎಲ್ಲರೂ ಬಸ್ ಸ್ಟಾಂಡಿಗೆ ಹೋಗಿದ್ದೆವು. ಕಾಮಿನಿ ಬಸ್ಸು ಹತ್ತುವುದಕ್ಕೆ ಮುಂಚೆ ಸರೋಜಿನಿಯ ಕಿವಿಯಲ್ಲಿ

' ನಮ್ಮ ಲೈಲಾ, ಮಜ್ನೂ ರೊಮಾನ್ಸ್ ಎಲ್ಲಿಯವರೆವಿಗೆ ಮುಂದು ವರಿಯುತ್ತೆ ಎನ್ನೋದನ್ನ ಖಂಡಿತ ತಿಳಿಸು ' ಎಂದಳು.

ಸರೋಜಿನಿ ಮೃದುವಾಗಿ ನಕ್ಕು ತಲೆ ಅಲುಗಿಸಿದಳು.

ಅಪ್ಪನ ಆಹ್ವಾನವನ್ನು ಮೂರ್ತಿ ತಿರಸ್ಕರಿಸಲಿಲ್ಲ. ಬೆಂಗಳೂರಿಗೆ

ವಾಪಸ್ಸು ಹೊರಡುವ ಹಿಂದಿನ ದಿನ ಸಂಜೆ ಮೂರ್ತಿ ಮೋಹನನೊಡನೆ ನಮ್ಮ ಮನೆಗೆ ಬಂದ. ಆಗ ನಾನು, ಮಣಿ ನಲ್ಲಿಯ ಬಳಿ ಕೊಡವೊಂದನ್ನಿರಿಸಿ ನೀರು ಹಿಡಿಯುತ್ತ ನಿಂತಿದ್ದೆವು. ಮಣಿ ಸೆರಗನ್ನು ಸೊಂಟಕ್ಕೆ ಕಟ್ಟಿ, ಸೀರೆಯ ನಿರಿಯನ್ನೆಲ್ಲಾ ತೋಯಿಸಿಕೊಂಡು ನಿಂತಿದ್ದಳು.

ಮೋಹನ ಮೊದಲು ವಠಾರದ ಅಂಗಳದೊಳಗೆ ಬಂದ. ಅವನ ಹಿಂದೆಯೇ ಮೂರ್ತಿ ಪ್ರವೇಶ ಮಾಡಿದ. ಮಣಿ ಸೆರಗನ್ನು ಸರಿಮಾಡಿಕೊಳ್ಳುತ್ತಾ ಒಳಗೆ ಓಡಿಬಿಟ್ಟಳು. ನಾನೇ ಬಂದವರನ್ನು ಸ್ವಾಗತಿಸಿದೆ.

'ಬನ್ನಿ ಬನ್ನಿ. ಅಪ್ಪ ಇಲ್ಲ. ಎಲ್ಲೋ ಹೊರಗೆ ಹೋಗಿದಾರೆ.'

'ಬರೋದು ಎಷ್ಟು ಹೊತ್ತಾಗತ್ತೆ?' ಮೂರ್ತಿ ಕೇಳಿದ.

'ಈಗ ಬರಬಹುದು. ಒಳಗೆ ಬನ್ನಿ. ಅಮ್ಮ, ಗುರು, ಮಣಿ ಎಲ್ಲಾ ಇದಾರೆ' ಎನ್ನುತ್ತಾ ನಾನೇ ಮುಂದಾಗಿ ಮನೆಯೊಳಗೆ ಹೋದೆ. ಮೊದಲು ಮನೆಯೊಳಗೆ ಓಡಿಹೋದ ಮಣಿ ಮನೆಯ ಹರದವನ್ನೆಲ್ಲಾ ತೆಗೆದು, ಚಾಪೆ ಹಾಸಿ ಅಡಿಗೆ ಮನೆ ಸೇರಿಬಿಟ್ಟಿದ್ದಳು. ಸುಬ್ಬಿ ಬಂದವರಿಗೆ ಉಪಚಾರ ಮಾಡಿದಳು. ಗುರು ಮೋಹನ, ಮೂರ್ತಿಯೊಡನೆ ಮಾತನಾಡುತ್ತಾ ಕುಳಿತಿದ್ದ. ಮಣಿಯಂತೂ ಅಡಿಗೆ ಮನೆಯಿಂದೀಚೆಗೇ ಬರಲಿಲ್ಲ. ಬಂದವರಿಗೆ ನಾನೇ ಕಾಫಿಯನ್ನು ತಂದುಕೊಟ್ಟೆ.

ಅವರು ಬಂದ ಅರ್ಧ ಗಂಟೆಯ ಮೇಲೆ ಅಪ್ಪ ಮನೆಗೆ ಬಂದರು. ಅವರು ತಮ್ಮ ಉಪಚಾರದ ಮಾತನ್ನು ಮನ್ನಿಸಿ ಮೂರ್ತಿ ಮನೆಗೆ ಬರಬಹುದು ಎಂದು ತಿಳಿದಿರಲಿಲ್ಲ. ಸ್ವಲ್ಪ ಹೊತ್ತು ಮಾತುಕತೆಯಾದ ನಂತರ ಮೋಹನ ಎದ್ದು ನಿಂತು ಅಪ್ಪನಿಗೆ

'ಬನ್ನಿ ಹಾಗೇ ವಾಕಿಂಗಿಗೆ ಹೋಗೋಣ' ಎಂದ.

ಅಪ್ಪ ಟೋಪಿ ಹಾಕಿಕೊಂಡು ಎಕ್ಕಡ ಮೆಟ್ಟಿದರು.

ಮೂರ್ತಿ ಸುಬ್ಬಿ, ನನ್ನ ಕಡೆ ತಿರುಗಿ 'ಬರ್ತೀನಿ' ಎಂದ.

'ಒಳ್ಳೆಯದಪ್ಪ' ಎಂದಳು ಸುಬ್ಬಿ.

ಮೋಹನ, ಮೂರ್ತಿಯೊಡನೆ ಅಪ್ಪ ಹೊರಗೆ ಹೊರಟು ಹೋದರು. ಅವರು ಹೋದನಂತರ ಮಣಿ ಅಡಿಗೆ ಮನೆಯಿಂದ ಹೊರಗೆ ಬಂದಳು.

ನಾನು ಮಣಿಯನ್ನು ಕೆಣಕಿದೆ 'ನಿನ್ನ ಧೈರ್ಯವೆಲ್ಲಾ ನಮ್ಮ ಮುಂದೆ

ಅಷ್ಟೆ. ಮೂರ್ತಿನ ನೋಡಿದರೆ ಯಾಕೆ ಒಳಗೆ ಅವಿತುಕೊಳ್ಳಬೇಕು. ಅವನೇನೂ ನಿನ್ನ ನೋಡೋಕೆ ಬರಲಿಲ್ಲ.'

'ಊಂ. ಯಾಕೋ ನಿನಗ್ಯಾಕೆ ಅದೆಲ್ಲಾ ? '

'ಮೂರ್ತಿಯೇನೂ ನಿನ್ನ ನೋಡೋಕೆ ಬರಲಿಲ್ಲ. ಅವನಿಗೆ ಆಗಲೇ ಮದುವೆ ಆಗಿದೆ.'

'ನಿಜವಾಗಿ ! '

'ನಿಜವೋ ಸುಳ್ಳೋ ಕ್ರಮೇಣ ನಿನಗೇ ತಿಳಿಯತ್ತೆ.'

'ಅವನಿಗೆ ಮದುವೆ ಆಗಿದ್ದರೆ ನನಗೇನಂತೆ ? ನಾನೇನೂ ಈಗ ಅವನನ್ನ ಮದುವೆ ಮಾಡಿಕೋಬೇಕೂಂತಿಲ್ಲ.'

'ಹಾಗಾದರೆ ನಾಚಿಕೆ ಯಾಕೆ ?'

'ನನಗೇನೋ ಅವನೆದುರಿಗೆ ಬರೋಕೆ ಒಂದು ತರಹಾ ಆಗುತ್ತಮ್ಮ' ಎಂದು ಮಣಿ ಹೇಳಿ ನಲ್ಲಿಯ ಕೆಳಗಿದ್ದ ಕೊಡವನ್ನು ತರಲು ಹೋದಳು.

ಅಪ್ಪ ಮನೆಗೆ ಬಂದಾಗ ರಾತ್ರಿ ಎಂಟು ಗಂಟೆಯು ಮೇಲಾಗಿತ್ತು. ನಮ್ಮದೆಲ್ಲಾ ಊಟ ಮುಗಿದು ಮಲಗಿದ್ದೆವು. ಗುರು ಪರೀಕ್ಷೆಗೆ ಓದಿ ಕೊಳ್ಳಲು ತನ್ನ ಗೆಳೆಯನೊಬ್ಬನ ಮನೆಗೆ ಹೊರಟು ಹೋಗಿದ್ದ. ನನಗೆ, ಮಣಿಗೆ ನಿದ್ದೆ ಬಂದಿರಲಿಲ್ಲವಾದರೂ ಕಣ್ಣು ಮುಚ್ಚಿ ಮಲಗಿದ್ದೆವು.

ಸುಬ್ಬಿ ಅಪ್ಪನಿಗೆ ಬಡಿಸತೊಡಗಿದಳು.

'ಅಲ್ಲಾಂದ್ರೇ ಮೂರ್ತಿ ಎಷ್ಟು ಒಳ್ಳೇ ಹುಡುಗ. ಊರಿಗೆ ಹೋಗೋಕೆ ಮುಂಚೆ ನಮ್ಮ ಮನೆಗೆ ಬರಬೇಕೂಂತ ಏನು ?'

'ಅವನು ಮನೆಗೆ ಬಂದಿದ್ದು ನಮಗೋಸ್ಕರ ಅಲ್ಲ. ಮಣಿಗೋಸ್ಕರ ಬಂದ.'

'ಹಾಗಂದರೆ ?'

'ನಮ್ಮದೇನೂ ಅಭ್ಯಂತರವಿಲ್ಲದಿದ್ದರೆ ಅವನು ಮಣಿಯನ್ನು ಮದುವೆ ಮಾಡಿಕೊಳ್ಳುತ್ತಾನಂತೆ.'

'ನಿಜವಾಗಿ !'

'ನಿಜವಾಗಿ. ಹುಡುಗ ಒಳ್ಳೆಯವನು. ತಾಯಿ ಇಲ್ಲ. ತಂದೆ ಮಗಳ ಮನೇಲೇ ಬೆಳಗಾಂನಲ್ಲಿದ್ದಾರೆ. ಮೂರ್ತಿಗೆ ಎಸ್. ಎಸ್. ಎಲ್. ಸಿ.

ಆಗಿದೆ. ಬೆಂಗಳೂರಿನಲ್ಲಿ ಹಿಟ್ಟಿನ ಮಿಲ್ಲಿಟ್ಟುಕೊಂಡು ತನ್ನ ಪಾಡಿಗೆ ತಾನಿದ್ದಾನೆ. ಊಟ, ಬಟ್ಟೆಗೇನೂ ಕೊರತೆಯಿಲ್ಲ.'

'ಮೋಹನನಿಗೂ, ಮೂರ್ತಿಗೂ ಹೇಗೆ ಪರಿಚಯ ?'

'ಮೋಹನ ಬೆಂಗಳೂರಿನಲ್ಲಿ ಓದುತ್ತಿದ್ದಾಗ ಮೂರ್ತಿ ರೂಮಿನ ಪಕ್ಕದಲ್ಲೇ ರೂಮು ಮಾಡಿಕೊಂಡಿದ್ದನಂತೆ. ಮೂರ್ತಿ ಚಿನ್ನದಂತಹ ಹುಡುಗ ಅಂತ ಮೋಹನನೂ ಮೂರ್ತೀನ ತುಂಬಾ ಹೊಗಳಿದ. ಹುಡುಗ ಹೇಗಿದಾನೆ ಅನ್ನೋದನ್ನ ನೀನೇ ನೋಡಿದೀಯ.'

'ಹುಡುಗನಿಗೇನು ಜೋರಾಗಿದಾನೆ. ಮಣೀಗೆ ಸರಿಯಾದ ಹುಡುಗ. ಆದರೆ....?'

'ಆದರೆ ಏನು ?'

'ದೊಡ್ಡೋಳಿಗೆ ಮದುವೆ ಮಾಡದೆ ಚಿಕ್ಕೋಳಿಗೆ ಹೇಗೆ ಮಾಡೋದು ?'

'ನೋಡು ಸುಬ್ಬಿ, ನಮ್ಮ ಪುಣ್ಯದಿಂದ ಮೂರ್ತಿ ಮಣಿಗೆ ಮರುಳಾಗಿದಾನೆ. ದೊಡ್ಡೋಳಿಗೆ ಮದುವೆ ಮಾಡದೇ ಚಿಕ್ಕೋಳಿಗೆ ಮಾಡೋದು ಬೇಡಾಂದ್ರೆ ಅನ್ಯಾಯವಾಗಿ ನಾವು ಒಂದು ಒಳ್ಳೇ ವರನನ್ನ ಕಳೆದುಕೊಂಡ ಹಾಗಾಗತ್ತೆ. ಮಣಿಗೆ ಮದುವೆ ಮಾಡಿಬಿಡೋಣ. ಇವಳಿಗೆ ಯಾವಾಗ ಕಂಕಣ ಬಲ ಒದಗಿಬರುತ್ತದೋ ಆಗ ಮಾಡಿದರಾಯಿತು. ನಾವೂ ಒಂದೊಂದಾಗಿ ಜವಾಬ್ದಾರಿ ಕಳೆದುಕೊಳ್ಳಬೇಕು. ನಮಗೂ ವಯಸ್ಸಾಯಿತು.'

'ಅದು ನಿಜ. ಆದರೆ ಮಣಿ ಏನಂತಾಳೋ ? '

ಅಪ್ಪನ ಮಾತು ಕೇಳಿ ನಾನು ಮಣಿಯನ್ನು ಜಿಗುಟಿ ಮೆಲ್ಲನೆ ಕೇಳಿದೆ.

'ಏನೇ ಮಣಿ, ನೀನು ಏನಂತೀಯ ?'

ಮಣಿ ಗಾಢ ನಿದ್ರೆಯನ್ನು ನಟಿಸಿದಳು.

ಮಣಿಯ ಮದುವೆ ನಿಶ್ಚಯವಾಯಿತು. ಮೂರ್ತಿಗೆ ನಮ್ಮ ತಂದೆಯ ಸ್ಥಿತಿ ತಿಳಿದಿತ್ತು. ಆದುದರಿಂದ ಅವನು ಆದಷ್ಟು ಕಡಿಮೆ ಖರ್ಚಿನಲ್ಲಿ ಎಲ್ಲವನ್ನೂ ಮುಗಿಸುವಂತೆ ಕಾಗದ ಬರೆದಿದ್ದ. ಮದುವೆ ಪಶ್ಚಿಮವಾಹಿನಿ

ಯಲ್ಲಿ ನಡೆದರೇ ಒಳ್ಳೆಯದೆಂದು ಅಪ್ಪ ತಿಳಿದಿದ್ದರು. ಯಾಕೆಂದರೆ ಕಂಡ ಊರಿನಲ್ಲಿ ಮದುವೆ ಮಾಡಿದರೆ ಊಟದ ಖರ್ಚು, ಕಾಯಿಯ ಖರ್ಚು ಹೆಚ್ಚಾಗುವುದೆಂದು ಅವರ ಭಾವನೆಯಾಗಿತ್ತು. ಸುಬ್ಬಿ ಅಪ್ಪನ ಏರ್ಪಾಡಿಗೆ ಒಪ್ಪಿಕೊಂಡಳು. ಮಣಿಯ ಮದುವೆಯ ಆಹ್ವಾನ ಪತ್ರಿಕೆಯನ್ನು ಕಾಮಿನಿಗೆ ನಾನೇ ಕಳುಹಿಸಿದೆ. ಆ ತುಂಟ ಹುಡುಗಿ ಈ ಎಳೆಯ ಲೈಲಾ, ಮಜ್ನುವಿಗೆ ಶುಭ ದಾಂಪತ್ಯಜೀವನವನ್ನು ಕೋರಿ ಕಾಗದ ಬರೆದಿದ್ದಳು.

ಮದುವೆಗೆ ಹಿಂದಿನ ದಿನವೇ ನಾವೆಲ್ಲರೂ ಪಶ್ಚಿಮವಾಹಿನಿಗೆ ಹೋದೆವು. ಸಂಜೆಯ ರೈಲಿಗೆ ಮೂರ್ತಿ, ಅವನ ತಂದೆ, ಅಕ್ಕ, ಭಾವ, ಇತರ ನೆಂಟರು ಕೆಲವರು ಬಂದಿಳಿದರು. ಮದುವೆ ಆಡಂಬರವಿಲ್ಲದೇ ಸರಳವಾಗಿ ನಡೆಯಿತು.

ಧಾರೆಗೆ ಮುಂಚೆ ಕಾಮಿನಿಯಿಂದ ಮಣಿಯ ಹೆಸರಿಗೆ ಸಣ್ಣದೊಂದು ಪಾರ್ಸಲ್ ಬಂತು. ಮಣಿ ಪಾರ್ಸಲ್ಲನ್ನು ಒಡೆದು ನೋಡಿದಳು. ಪುಟ್ಟ ಪೆಟ್ಟಿಗೆಯೊಂದರಲ್ಲಿ ಒಂದೆಳೆಯ ಮುತ್ತಿನ ಸರವಿತ್ತು. ಸರದೊಡನೆ ಚಿಕ್ಕದೊಂದು ಕಾಗದವಿತ್ತು. ಅದರಲ್ಲಿ ಕಾಮಿನಿ ತನ್ನ ಸೊಟ್ಟ ಅಕ್ಷರದಲ್ಲಿ ಬರೆದಿದ್ದಳು

'ಮಣೀ,

ನಿನ್ನ ಸುಂದರವಾದ ಕೊರಳಿಗೆ 'ಬೆಂಟೆಕ್ಸ್' ಹಾಕಿ ಅಪಮಾನ ಮಾಡಬೇಡ. ಅದಕ್ಕೆ ಬದಲಾಗಿ ಒಳ್ಳೆಯ ಮುತ್ತಿನ ಸರ ನಿನಗೆ ಕಳಿಸಿದ್ದೇನೆ. ಈ ಸರಾನ ನಿನ್ನ ಮಜ್ನುವೇ ನಿನಗೆ ಹಾಕಬೇಕೆಂದು ನನ್ನ ಆಸೆ. ಸರ ತಲುಪಿದ ಕೂಡಲೇ ನಿನ್ನವರೇ ಇದನ್ನು ನಿನ್ನ ಕತ್ತಿಗೆ ಹಾಕಲಿ.'

ನಿನ್ನ ಕಾಮಿನಿ'

ಮೂರ್ತಿಯ ಅಕ್ಕ ಜಯಮ್ಮ ಕಾಗದ ಓದಿ ತಮ್ಮ ಮಗನಿಗೆ

'ಮೂರ್ತೀನ ಕರೆಯೋ' ಎಂದರು.

ಮಣಿ 'ಬೇಡಿ ಜಯಮ್ಮ' ಎಂದಳು.

'ಪಾಪ! ಆ ಹುಡುಗಿ ಅಷ್ಟೊಂದು ವಿಶ್ವಾಸದಿಂದ ಮೂರ್ತಿಯೇ ಸರ ಹಾಕಲೀಂತ ಬರೆದಿದಾಳೆ.'

'ಇನ್ನೂ ಧಾರೆ ಆಗಿಲ್ಲವಲ್ಲಾ....' ಎಂದು ಸುಬ್ಬಿ ರಾಗ ಎಳೆದ್ಳಳು.

ನಾನು ನಕ್ಕು ಹೇಳಿದೆ ‘ ಸುಬ್ಬೀ, ಸರೋಜಿನಿ ಮದುವೇಲೇ ಮಣಿ ಮದುವೆಯೂ ಆಗಿಹೋಗಿದೆ. ಈಗ ಮಾಡ್ಕೋತಿರೋ ಮದುವೆ ನಾಲ್ಕು ಜನಗಳಿಗೋಸ್ಕರ ಅಷ್ಟೆ.’

ಮೂರ್ತಿ ಅಕ್ಕನ ಮಗನೊಡನೆ ‘ ಏನಕ್ಕಾ ’ ಎನ್ನುತ್ತಾ ಒಳಗೆ ಬಂದ. ಮೂರ್ತಿ ಒಳಗೆ ಬಂದೊಡನೆ ಮಣಿ ಎದ್ದು ನಿಂತಳು. ಜಯಮ್ಮ ಮಾತನಾಡದೆ ಕಾಮಿನಿಯ ಕಾಗದವನ್ನೂ, ಮುತ್ತಿನ ಸರ ವನ್ನೂ ಮೂರ್ತಿಯ ಕೈಗೆ ಕೊಟ್ಟಳು. ಮೂರ್ತಿ ಕಾಗದ ಓದಿಕೊಂಡು

‘ ಇಷ್ಟೇ ತಾನೇ....’ ಎನ್ನುತ್ತಾ ಮಣಿಯ ಬಳಿಗೆ ಹೋದ.

‘ ಎಲ್ಲಿ ಕೊಂಚ ತಲೆ ಎತ್ತು ಮಣಿ ’ ಎಂದು ಮೂರ್ತಿ ಸಾವಕಾಶ ವಾಗಿ ಹೇಳಿ ನಾಚಿ ನಿಂತಿದ್ದ ಮಣಿಯ ಕೊರಳಿಗೆ ಮುತ್ತಿನ ಸರ ಹಾಕಿ

‘ ಈಗ ತೃಪ್ತಿಯಾಯಿತೇ ಅಕ್ಕ ? ’ ಎಂದ.

‘ ಹೂಂ. ನೀನಿನ್ನು ಮಣಿ ಮುಖ ನೋಡ್ತಾ ಇಲ್ಲೇ ನಿಂತುಕೋ ಬೇಡ. ಹೊರಗೆ ಹೋಗು. ಧಾರೆ ಹೊತ್ತು ಹತ್ತಿರವಾಯಿತು’ ಎಂದು ಜಯಮ್ಮ ಗಲಾಟೆ ಮಾಡಿ ಮೂರ್ತಿಯನ್ನು ಹೊರಗೆ ಕಳುಹಿಸಿದರು.

ಬೆಳಿಗ್ಗೆ ಮದುವೆಯಾಯಿತು. ಸಂಜೆಯ ಟ್ರೈನಿಗೇ ಮೂರ್ತಿ ಮಣಿ ಯೊಡನೆ ಬೆಂಗಳೂರಿನ ಗಾಡಿ ಹತ್ತಿದ. ನಾವು ಮೈಸೂರಿಗೆ ವಾಪಸ್ಸು ಬಂದೆವು. ಸುಬ್ಬಿಗೆ ಮಣಿಯನ್ನು ಮದುವೆಯಾದ ಕೂಡಲೇ ಬೆಂಗಳೂ ರಿಗೆ ಕಳುಹಿಸಿಬಿಡುವುದು ಇಷ್ಟವಿರಲಿಲ್ಲ. ಜಯಮ್ಮನೂ ತಮ್ಮನಿಗೆ

‘ ಮಣಿ ಎರಡು ದಿನ ತಾಯಿ ಮನೇಲಿರಲಿ’ ಎಂದರು.

‘ ಹೇಗಿದ್ದರೂ ಮನೆ ಮಾಡಿದೀನಿ. ಮಣಿ ಯಾಕೆ ಮೈಸೂರಿಗೆ ಹೋಗಬೇಕು ? ’

‘ ಏನೋ ಅಕ್ಕ ಪಕ್ಕದ ಮನೆಯವರನ್ನು ಕರೆದು ಒಂದು ಆರತಿ....’ ಎಂದು ಸುಬ್ಬಿ ನುಡಿಯುವಷ್ಟರಲ್ಲಿ ಮೂರ್ತಿ

‘ ಬೆಂಗಳೂರಿನಲ್ಲೇ ಮಾಡಿದರಾಯಿತು’ ಎಂದ. ಜಯಮ್ಮ ತಮ್ಮನ ಮೇಲೆ ರೇಗಿ ನುಡಿದರು ‘ನಿಂದು ಯಾಕೋ ಎಲ್ಲಾ ಅತಿಯಾ ಯಿತು. ಹೆಂಡತೀನ ಎರಡು ದಿನ ಬಿಟ್ಟಿರಲಾರೆಯಾ ? ’

‘ ಊಹೂಂ ’ ಎಂದ ಮೂರ್ತಿ. ಮೂರ್ತಿಯ ಮಾತು ಕೇಳಿ

ಉಳಿದವರೆಲ್ಲಾ ನಕ್ಕರು. ಜಯಮ್ಮ ತಲೆತಗ್ಗಿಸಿ ನಿಂತಿದ್ದ ಮಣಿಯ ಕಡೆ ತಿರುಗಿ

'ನೀನೇನು ಹೇಳ್ತೀಯಮ್ಮ?' ಎಂದರು.

'ಇವರು ಹೇಗೆ ಹೇಳಿದರೆ ನಾನು ಹಾಗೆ' ಎಂದಳು ಮಣಿ.

ಜಯಮ್ಮ ನಗುತ್ತಾ 'ಸರಿ. ಇಬ್ಬರಿಗೂ ಬೇಕಿಲ್ಲದ ಆರತಿ ನೀವು ಯಾಕೆ ಇಟ್ಕೊಕೋತೀರಿ? ಖರ್ಚೇ ಕಡಿಮೆಯಾಯಿತು' ಎಂದರು ಸುಬ್ಬಿಯ ಕಡೆ ತಿರುಗಿ

ಮದುವೆಯಾದ ಕೂಡಲೇ ಮಣಿಗೆ ಎಲ್ಲಿಲ್ಲದ ಹಿರಿತನ, ಗಾಂಭೀರ್ಯ ಬಂದು ಬಿಟ್ಟಿತು. ಗಂಡನ ಸಾಮಾನುಗಳನ್ನೆಲ್ಲಾ ತಾನೇ ಓರಣವಾಗಿ ತೆಗೆದಿರಿಸಿದಳು. ನಾನೂ ಅವಳಿಗೆ ಸಾಮಾನು ಕಟ್ಟಿಕೊಡುವುದರಲ್ಲಿ ಸಹಾಯಕಳಾದೆ. ಮೂರ್ತಿ ಗಳಿಗೆಗಿಪ್ಪತ್ತು ಸಲ ಏನಾದರೂ ಹೇಳುವ ನೆಪದಲ್ಲಿ ಒಳಗೆ ಬರುತ್ತಿದ್ದ. ಅವನು ಒಳಗೆ ಬಂದಾಗ ಮಣಿ ಕಣ್ಣು ತಗ್ಗಿಸಿ ಬಿಡುತ್ತಿದ್ದಳು. ಮೂರ್ತಿ ಮರೆಯಾದ ಕೂಡಲೇ ಅವಳ ಕಣ್ಣುಗಳು ಅವನನ್ನು ಅರಸುತ್ತಿದ್ದವು. ಎಷ್ಟೋ ಬಾರಿ ನಾನಾಡಿದ ಮಾತುಗಳು ಅವಳ ಕಿವಿಯ ಮೇಲೆ ಸಹ ಬಿದ್ದಿರಲಿಲ್ಲ.

ಈ ಬಗೆಯ ತನ್ಮಯತೆ, ಏಕಾಗ್ರತೆ ಸಾಧ್ಯವೇ?

ಮಣಿ ಮೂರ್ತಿಯನ್ನು ಪ್ರೀತಿಸಿದಂತೆ ನಾನು ಯಾರನ್ನೂ ಪ್ರೀತಿಸಿರಲಿಲ್ಲ. ಆದುದರಿಂದ ನನಗೆ ಮಣಿಯ ತನ್ಮಯತೆ ಒಂದೊಂದು ಬಾರಿ ಹಾಸ್ಯಾಸ್ಪದವಾಗಿ ತೋರುತ್ತಿತ್ತು.

ಬೆಂಗಳೂರಿನ ರೈಲು ಮೊದಲು ಬಂತು. ಮೂರ್ತಿ ತನ್ನ ಪರಿವಾರದೊಡನೆ ಟ್ರೈನು ಹತ್ತಿದ. ಮಣಿ ಎಲ್ಲರಿಗೂ ಹೋಗಿ ಬರುವುದಾಗಿ ಹೇಳಿ ಸುಬ್ಬಿಗೂ, ಅಪ್ಪನಿಗೂ ನಮಸ್ಕಾರ ಮಾಡಿದಳು. ನನ್ನ ಕಡೆ ತಿರುಗಿ

'ಬರ್ತೀನಿ ಅಕ್ಕ' ಎಂದಳು.

'ಒಳ್ಳೆಯದಮ್ಮ. ಆಗಾಗ್ಗೆ ಕಾಗದ ಬರಿ' ಎಂದೆ ನಾನು.

ಟ್ರೈನು ಬಹಳ ದೂರ ಹೋಗುವವರೆವಿಗೂ ಮಣಿ, ಮೂರ್ತಿ ಕಿಟಕಿಯಿಂದ ಬಗ್ಗಿ ನೋಡುತ್ತಿದ್ದರು. ಮೈಸೂರಿನ ಟ್ರೈನು ಬರುತ್ತಲೇ ನಾವು

ಹತ್ತಿದೆವು. ನಾವು-ಮೈಸೂರಿನಲ್ಲಿ ಮನೆ ತಲುಪಿದಾಗ ರಾತ್ರಿ ಹತ್ತು ಗಂಟೆ ಯಾಗಿತ್ತು.

* * * * *

ಮಣಿಯಿಂದ ನಮಗೆ ಆಗಾಗ್ಗೆ ಕಾಗದಗಳು ಬರುತ್ತಿದ್ದವು. ಮಣಿ ತಾನು ಸಂಸಾರ ಮಾಡುತ್ತಿದ್ದ ಬಗೆಯನ್ನು ಕುರಿತು ಬರೆಯುತ್ತಿದ್ದಳು. ಅವಳ ಕಾಗದದ ತುಂಬಾ ಮೂರ್ತಿಯ ಗುಣವರ್ಣನೆ ತುಂಬಿರುತ್ತಿತ್ತು. ಅವಳ ಕಾಗದಗಳನ್ನು ಓದಿ ಅಪ್ಪ, ಸುಬ್ಬಿಗೆ ಎಲ್ಲಿಲ್ಲದ ಸಂತೋಷವಾಗು ತ್ತಿತ್ತು. ಸಂತಸದ ನಗೆಯ ಹಿಂದೆ ವಿಷಾದದ ನಿಟ್ಟುಸಿರೂ ಅವರಿಬ್ಬರ ಮುಖದಿಂದ ಹೊರಡುತ್ತಿತ್ತು. ಆ ನಿಟ್ಟುಸಿರಿನ ಅರ್ಥ ನನಗೆ ತಿಳಿದಿತ್ತು.

'ಇವಳಿಗಿನ್ನೂ ಮದುವೆಯಾಗಿಲ್ಲವಲ್ಲಾ' ಎಂಬುದೇ ಅವರ ದುಃಖಕ್ಕೆ ಕಾರಣವಾಗಿತ್ತು. ನಾನು ಯಾವುದೂ ತಿಳಿಯದವಳಂತೆ ನನ್ನ ಕೆಲಸಗಳಲ್ಲಿ ಮಗ್ನಳಾಗಿರುತ್ತಿದ್ದೆ.

ಆದರೆ ನನ್ನ ಹೃದಯದಲ್ಲಿ ಯೌವನದ ಸಂಚಾರವಾಗಿತ್ತು. ಯಾವು ದೋ ಒಂದು ಮಧುರ ಯಾತನೆಯಿಂದ ನನ್ನ ಹೃದಯ ಮಿಡಿಯುತ್ತಿತ್ತು. ದಿನ ದಿನಕ್ಕೆ ನನ್ನ ಅನ್ಯಮನಸ್ಕತೆ, ಕೆಲಸ ಕಾರ್ಯಗಳಲ್ಲಿ ನಿರಾಸಕ್ತಿ, ಹಗಲುಗನಸುಗಳನ್ನು ಕಾಣುವಿಕೆ ಜಾಸ್ತಿಯಾಯಿತು. ಮಣಿಯ ಮದು ವೆಗೆ ಮುಂಚೆ ನನಗೆ ಈ ಬಗೆಯ ಅತೃಪ್ತಿ, ಅಶಾಂತಿ ತಲೆದೋರಿರಲಿಲ್ಲ. ಅದುವರೆವಿಗೂ ನಾನು ಹತ್ತೊಂಭತ್ತು ವರ್ಷದ 'ಮಗು' ವಾಗಿದ್ದೆ. ಆದರೆ ಮಣಿಯ ಮದುವೆಯಾದ ನಂತರ ನನ್ನ ಹೃದಯದಲ್ಲಿ ನಿದ್ರಿಸುತ್ತಿದ್ದ ರಾಗ ಭಾವೋದ್ವೇಗಗಳೆಲ್ಲಾ ಒಂದೇ ಬಾರಿಗೆ ಜಾಗೃತಗೊಂಡವು. ಮಗು ವಾಗಿದ್ದವಳು ಒಂದೇ ದಿನದಲ್ಲಿ ಯುವತಿಯಾದೆ. ಮಣಿ, ಮೂರ್ತಿಯ ಕಣ್ಣುಗಳ ಸಮಾಗಮ, ಮೂಕ ಸಂದೇಶ, ಕಳ್ಳ ನೋಟಗಳು, ಪರಸ್ಪರ ನಗೆಯಲ್ಲಡಗಿದ್ದ ಪ್ರಣಯ ಇವುಗಳನ್ನು ನಾನು ಗಮನಿಸಿದ್ದೆ. ಮೂರ್ತಿಯ ಕಣ್ಣುಗಳು ಪ್ರಣಯದ ಸಂದೇಶ ಹೊತ್ತು ಮಣಿಯಲ್ಲಿ ನಾಟಿದಾಗ ನನ್ನೆದೆ ಭಾರವಾಗಿತ್ತು. ಧಾರೆಗೆ ಮುಂಚೆ ಮಣಿ, ಎದುರಿಗೆ ಕುಳಿತಿದ್ದ ನನ್ನ ಮುಖ ದಲ್ಲಿ ಎದುರಿಗಿಲ್ಲದ ತನ್ನ ನಲ್ಲನ ಮುಖ ಚಿತ್ರಿಸಿಕೊಂಡು ತನ್ಮಯಳಾದಾಗ, ನಾನು ಈ ಹುಚ್ಚೂ ಉಂಟೆ ಎಂದು ಚಕಿತಳಾಗಿದ್ದೆ. ಆದರೆ ಈ ಬಗೆಯ

ಹುಚ್ಚಿಲ್ಲದಿದ್ದರೆ, ಮಧುರ ಪುಲಕವಿಲ್ಲದಿದ್ದರೆ ಬಾಳು ಎಷ್ಟೊಂದು ಶೂನ್ಯ ಎಂದು ನನಗೆ ಈಗ ಎನಿಸತೊಡಗಿತ್ತು. ಕೋಗಿಲೆ ಕೂಗಿದಾಗ, ಹೂವು ಅರಳಿದಾಗ, ಪೂರ್ಣಿಮೆಯ ಚಂದ್ರ ನೀಲಿಯಾಗಸದಲ್ಲಿ ಮುಖ ತೋರಿದಾಗ, ಮಂದ ಮಾರುತ ಸುಮ ಸೌರಭ ಹೊತ್ತು ನನ್ನೆಡೆಗೆ ತೇಲಿ ಬಂದಾಗ ನನ್ನ ಬಾಳಿನ ಶೂನ್ಯತೆ ಇಮ್ಮಡಿಯಾಗುತ್ತಿತ್ತು.

ಅಡಿಗೆ ಮಾಡುವಾಗ ಯಾವುದೋ ಯೋಚನೆಯಲ್ಲಿ ಸಾರಿಗೆ ಎರಡು ಬಾರಿ ಉಪ್ಪು ಹಾಕಿಬಿಡುತ್ತಿದ್ದೆ. ಹುಳಿಗೆ ಹುಣಿಸೇ ಹಣ್ಣು ಹಾಕುವುದೇ ನನಗೆ ಮರೆತು ಹೋಗುತ್ತಿತ್ತು. ಹಗಲುಗನಸಿನ ಸಮಾಧಿಯಲ್ಲಿ ನಾನು ಮುಳುಗಿದ್ದಾಗ ಸುಬ್ಬಿ ನನ್ನನ್ನು ಕೂಗಿದರೂ ನನಗೆ ಎಚ್ಚರವಾಗುತ್ತಿರಲಿಲ್ಲ. ಇವುಗಳಿಂದ ನನಗೆ ಮುಕ್ತಿ ಎಂದಿಗೆ?

ಚಂದಿರ ಕಪ್ಪು ಮೋಡಗಳ ಹಿಂದೆ ಮರೆಯಾದಾಗ ಅವನು ತನ್ನ ಪ್ರೇಯಸಿಯೊಡನೆ ಕಣ್ಣುಮುಚ್ಚಾಲೆಯಾಟವಾಡುತ್ತಿರಬಹುದು ಎನಿಸುತ್ತಿತ್ತು. ಕೋಗಿಲೆ ಕೂಗಿದಾಗ ಯಾವುದೋ ಪ್ರಣಯದ ವಿರಹಗೀತೆಯನ್ನು ನಾನು ಕೇಳುತ್ತಿರುವಂತೆ ಭಾಸವಾಗುತ್ತಿತ್ತು. ಮಂದಮಾರುತ ನನಗೆ ಕಚಗುಳಿಯಿಟ್ಟು, ಮುಂಗುರಳನ್ನು ಚದುರಿಸಿ ಚೆಲ್ಲಾಟವಾಡಿದಾಗ ಗುಪ್ತ ಸಂದೇಶ ಆಲಿಸುತ್ತಿದ್ದಂತೆ ನನಗೆ ತೋರುತ್ತಿತ್ತು. ಆದರೆ ನನಗೆ ಬಿಡುಗಡೆ ಎಂದಿಗೆ?

ನನಗೆ ಬಿಡುಗಡೆ ಬೇಕಿತ್ತು—ಪ್ರಣಯ ಬಂಧನದೊಳಗೆ ಹಾರುವ ಬಿಡುಗಡೆ. ಪ್ರೇಮದ ಬಲೆಯಲ್ಲಿ ಬೀಳಲು, ಪ್ರಣಯದ ಹುಚ್ಚು ಮಾತುಗಳನ್ನು ಕೇಳಲು ನಾನು ಬಿಡುಗಡೆಯನ್ನು ಬಯಸಿದೆ. ನನ್ನ ಹೃದಯದಲ್ಲಿ ಹರಿಯುತ್ತಿರುವ ಹುಚ್ಚು ಹೊಳೆ ಶಾಂತವಾಗುವುದು ಎಂದಿಗೆ? ನನ್ನ ಹೃದಯವನ್ನು ದಹಿಸಿ ಭಸ್ಮ ಮಾಡುತ್ತಿರುವ ಜ್ವಾಲಾಮುಖಿ ತಣ್ಣಗಾಗುವುದೆಂದಿಗೆ?

ಹುಟ್ಟಿದ ಗಳಿಗೆಯಿಂದ ಮೊದಲ್ಗೊಂಡು ನಾನು ಬಡತನದ ಕಿಚ್ಚಿನಲ್ಲಿ ಬೆಂದು ನೊಂದಿದ್ದೆ. ಸುಖ, ಸಂತೋಷ ನನ್ನ ಪಾಲಿಗೆ ಬಿಸಿಲುಗುದುರೆಯಾಗಿದ್ದವು. ನಿರಾಶೆ, ದುಡಿಮೆಯೇ ನನ್ನ ಬಾಳಿನ ಊರೆಗೋಲಾಗಿದ್ದವು. ಆದರೆ ...ಆದರೆ.... ನಾನೂ ಎಲ್ಲರಂತೆ ಬಾಳಲು ಬಯಸಿದೆ.

ದಿನಗಳು ಉರುಳಿದವು. ಅಮಾವಾಸ್ಯೆ, ಪೂರ್ಣಿಮೆಗಳು ಒಂದ ರೊಂದು ಬೆನ್ನಟ್ಟಿ ತಿಂಗಳುಗಳೂ ಕಳೆದವು.

ನನ್ನ ಜೀವನದಲ್ಲಿ ಮಾತ್ರ ಯಾವ ವಿಧವಾದ ಬದಲಾವಣೆಯೂ ಆಗಲಿಲ್ಲ. ನಾನು ಮನೆಯಲ್ಲಿ, ಮನೆಯ ಹೊರಗೆ ದುಡಿಯುತ್ತಿದ್ದೆ. ಕದಾನ್ನ ತಿಂದು, ಒಡಟು ಸೀರೆಯುಟ್ಟು, ಹರುಕು ಮಗ್ಗಲ್ಹಾಸಿಗೆಯ ಮೇಲೆ ಮಲಗುತ್ತಿದ್ದೆ. ಈ ಪ್ರೇಮಸಂಪತ್ತಿನ ಭಾರ ನಾನಿನ್ನು ಹೊರಲಾರದಾದೆ.

ಮಣಿಗೆ ಮದುವೆಯಾಗಿ ಸುಮಾರು ಒಂದು ವರ್ಷವಾಗಿತ್ತು. ಅಪ್ಪ, ಸುಬ್ಬಿ ಒಂದು ಬಾರಿ ಮಣಿಯ ಮನೆಗೆ ಹೋಗಿ ಅವಳ ಸಂಸಾರವನ್ನು ಕಣ್ಣಾರೆ ಕಂಡು ಆನಂದಿಸಿದ್ದರು. ಬೆಂಗಳೂರಿನಿಂದ ಬಂದು ಒಂದು ವಾರ ವಾದರೂ ಸುಬ್ಬಿ ಮೂರ್ತಿಯ ಗುಣಗಾನ ಮಾಡುತ್ತಲೇ ಇದ್ದಳು.

'ಮೂರ್ತಿಗೆ ಮಣೀಂದ್ರೆ ಪ್ರಾಣ....ಅವಳನ್ನ ಚೆನ್ನಾಗಿ ನೋಡ್ಕೊ ತಾರೆ....ಮಣೀನೂ ಅಷ್ಟೆ....ಮೂರ್ತೀನ ಬಿಟ್ಟು ಒಂದು ದಿನಾನೂ ಮೈಸೂ ರಿಗೆ ಬರೋದಿಲ್ಲಾಂತಾಳೆ....ಮಣಿ ಮೊದಲೇ ಚೆನ್ನ....ಈಗಂತೂ ಪಾಪಿ ಕಣ್ಣುಗಳಿಂದ ನೋಡಬಾರದು....'

ಮಣಿಯ ಸಂಸಾರ ಸುಖಮಯವಾಗಿರುವುದನ್ನು ಕೇಳಿ ನನಗೂ ಸಂತೋಷವಾಯಿತು.

ಒಂದು ದಿನ ಮೂರ್ತಿಯಿಂದ ಅಪ್ಪನಿಗೆ ಕಾಗದ ಬಂತು. ಮೂರ್ತಿ ಯು ಕಾಗದ ಓದಿ ಅಪ್ಪ ಯೋಚನೆಗೀಡಾದರು. ಅಪ್ಪನ ಮುಖವನ್ನೇ ನೋಡುತ್ತಿದ್ದ ಸುಬ್ಬಿ,

'ಯಾಕೆ? ಕಾಗದದಲ್ಲಿ ಏನು ಬರೆದಿದಾರೆ?' ಎಂದಳು.

'ಮಣೀಗೆ ಏಳು ತಿಂಗಳಾಗಿದೆಯಂತೆ....'

'ಇಲ್ಲೀಗೆ ಮಣೀನ ಕರೆಸೋಣ....'

'ಮೂರ್ತಿ ಅದಕ್ಕೆ ಒಪ್ಪುವ ಹಾಗಿಲ್ಲ. ಮಣೀನ ನಾನು ಮೈಸೂ ರಿಗೆ ಕಳಿಸುವುದಿಲ್ಲ. ಅದರಿಂದ ನಿಮಗೂ ತೊಂದರೆ, ನನಗೂ ತೊಂದರೆ. ಮಣಿ ತಾಯಿಯೇ ಇಲ್ಲಿಗೆ ಬಂದು ಬಾಣಂತನ ಮಾಡುವುದು ವಾಸಿ ಎಂದು ಬರೆದಿದಾರೆ....'

'ಆದರೆ ಮನೆ, ಮಕ್ಕಳನ್ನ ಬಿಟ್ಟು ನಾನು ಹೇಗೆ ಹೋಗಲಿ?

ನಾನು ಒಂದು ದಿನ ಮನೆ ಬಿಟ್ಟಿರೋಕಾಗೋದಿಲ್ಲ. ಭಗವತಿ ನನ್ನ ಬಿಟ್ಟು ಒಂದು ಕ್ಷಣವೂ ಇರೋದಿಲ್ಲ....'

'ನಾನೋ ?'

'ಸಾಕು ಸುಮ್ಮನಿರಿ. ವಯಸ್ಸಾಗ್ತಾ ನಿಮಗೆ ಹುಡುಗತನ ಬರ್‍ತಿದೆ. ನಿಮ್ಮನ್ನು ಬಿಟ್ಟೂ ನಾನು ಹೋಗೋದಿಲ್ಲ. ನಾನು ಹೊರಟು ಹೋದರೆ ನೀವು ಆಡಿದ್ದೇ ಆಟವಾಗತ್ತೆ. ಮನೆಗೆ ಬಂದರೆ ಬಂದಿರಿ, ಊಟ ಮಾಡಿದರೆ ಮಾಡಿದಿರಿ, ಇಲ್ಲದಿದ್ದರೆ ಇಲ್ಲ. ನಿಮ್ಮ ಬುದ್ಧಿ ನನಗೆ ಚೆನ್ನಾಗಿ ಗೊತ್ತು.'

'ಮೂರ್ತಿಗೆ ಏನಂತ ಕಾಗದ ಬರೆಯಲಿ ?'

'ಮಣೀನ ಇಲ್ಲಿಗೆ ಕಳಿಸಿ ಎಂದು ಬರೆಯಿರಿ.'

'ಅವನು ಅದಕ್ಕೆ ಒಪ್ಪದಿದ್ದರೆ ?'

ಸುಬ್ಬಿ ನನ್ನ ಕಡೆ ಬೆರಳು ತೋರಿಸಿ

'ಆಗ ಇವಳನ್ನು ಬೆಂಗಳೂರಿಗೆ ಕಳಿಸಿದರಾಯಿತು. ಭಗವತಿಯು ಬಾಣಂತನಾನ ಇವಳು ಅಂತಹ ಚೆನ್ನಾಗಿ ನನಗೆ ಮಾಡಿದಳು. ಯಾವ ಕೆಲಸ ಮಾಡಿದರೂ ನನಗಿಂತ ಚೆನ್ನಾಗಿ, ಅಚ್ಚುಕಟ್ಟಾಗಿ ಮಾಡುತ್ತಾಳೆ' ಎಂದಳು.

ಸುಬ್ಬಿಯ ಸಲಹೆಯಂತೆ ಅಪ್ಪ ಮೂರ್ತಿಗೆ ಕಾಗದ ಬರೆದರು. ಮೂರ್ತಿ ಅಪ್ಪನಿಗೆ ಉತ್ತರ ಬರೆದರು

'ನಿಮ್ಮ ಕುಟುಂಬಕ್ಕೆ ಬರಲು ಸಾಧ್ಯವಿಲ್ಲದಿದ್ದರೆ ನಿಮ್ಮ ಮಗಳನ್ನೇ ಕಳಿಸಿಕೊಡಿ. ಮಣಿಗೆ ತನ್ನ ಅಕ್ಕ ಬರುವಳೆಂದು ತಿಳಿದು ಎಷ್ಟೋ ಸಂತೋಷವಾಗಿದೆ. ನೀವು ನಿಮ್ಮ ಮಗಳನ್ನು ಇಂತಹ ದಿನ ಕಳಿಸುತ್ತೀ ನೆಂದು ತಿಳಿಸಿದರೆ ನಾನೇ ಸ್ಟೇಷನ್ನಿಗೆ ಬಂದು ಕರೆದುಕೊಂಡು ಹೋಗು ತ್ತೇನೆ.'

ಅಪ್ಪ, ಸುಬ್ಬಿ ನನ್ನನ್ನೇ ಬೆಂಗಳೂರಿಗೆ ಕಳುಹಿಸಲು ನಿಶ್ಚಯಿಸಿದರು.

ಸುಬ್ಬಿ ಮಗಳಿಗಾಗಿ ಅನೇಕ ಬಗೆಯ ತಿಂಡಿಗಳನ್ನು ಮಾಡಿ ಕೊಟ್ಟಳು. ನಾನು ಮಣಿಯನ್ನು ಹೇಗೆ ನೋಡಿಕೊಳ್ಳಬೇಕೆಂಬ ವಿಷಯ ದಲ್ಲಿ ಅನೇಕ ಸಲಹೆಗಳನ್ನು ಕೊಟ್ಟು, ಭಗವತಿಯ ಪುಟ್ಟಲಂಗಗಳ ಗಂಟೊಂ ದನ್ನು ನನ್ನ ಚೀಲದೊಳಗೆ ಸೇರಿಸಿದಳು. ಅಪ್ಪ ನನ್ನನ್ನು ಬೆಂಗಳೂರಿಗೆ ಬಿಟ್ಟು ಬರಲು ಎರಡು ದಿನ ರಜ ತೆಗೆದುಕೊಂಡಿದ್ದರು. ನಾವು ಇಂತಹ

ದಿವಸ ಬರುತ್ತೇವೆಂದು ಅಪ್ಪ ಮೂರ್ತಿಗೆ ಕಾಗದ ಬರೆದಿದ್ದರು. ನಾವು ಟ್ರೈನಿಗೆ ಹೊರಡುವುದಕ್ಕೆ ಮುಂಚೆ ಸುಬ್ಬಿ ನನಗೆ

'ಮಣೀನ ಜೋಪಾನವಾಗಿ ನೋಡಿಕೋ' ಎಂದು ಎರಡೆರಡು ಸಾರಿ ಎಚ್ಚರಿಕೆ ಹೇಳಿದಳೇ ಹೊರತು ನನ್ನ ಬಗ್ಗೆ ಒಂದು ಮಾತೂ ಹೇಳಲಿಲ್ಲ.

ನಾನು ಹುಟ್ಟಿದ ಇಪ್ಪತ್ತೊಂದು ವರ್ಷಕ್ಕೆ ಟ್ರೈನಿನಲ್ಲಿ ದೂರ ಪ್ರಯಾಣ ಮಾಡಿದೆ. ನಾನು ಹೆಂಗಸರ ಗಾಡಿಯಲ್ಲಿ ನನ್ನ ಕೈ ಚೀಲ, ತಿಂಡಿಯ ಬುಟ್ಟಿಯೊಡನೆ ಕುಳಿತಿದ್ದೆ. ನನ್ನ ಅಕ್ಕಪಕ್ಕಗಳಲ್ಲಿ ಕುಳಿತಿದ್ದ ಹೆಂಗಸರು ನಾನು ಹತ್ತಿ ಕುಳಿತ ಕೂಡಲೇ ಪ್ರಶ್ನೆಗಳಿಗೆ ಶುರು ಮಾಡಿದರು.

'ನಿಮಗೆ ಮದುವೆ ಆಗಿದೆಯೇ?'

'ಇಲ್ಲ.'

ಮದುವೆ ಆಗಿಲ್ಲ ಎಂದ ಮೇಲೆ ಮಕ್ಕಳೆಷ್ಟು ಎನ್ನುವ ಪ್ರಶ್ನೆ-ಕೇಳುವ ಹಾಗೇ ಇಲ್ಲ.

'ಯಾವೂರಿಗೆ ಹೋಗ್ತಿದೀರಿ?'

'ಬೆಂಗಳೂರಿಗೆ.'

'ಯಾಕೆ?'

ಏನಂತ ಹೇಳಲಿ? ನನ್ನ ತಂಗೀಗೆ ಬಾಣಂತನ ಮಾಡೋಕೆ ಹೋಗ್ತಿದೀನಿ ಎಂದು ಹೇಳಲೇ? ಹಾಗೆ ಹೇಳಿದರೆ ಅವರು ಮುಂದೆ ಯಾವ ಪ್ರಶ್ನೆ ಕೇಳಬಹುದೆಂದು ನಾನು ಊಹಿಸಿದ್ದೆ. ಆದುದರಿಂದ ಸುಳ್ಳು ಹೇಳಬೇಕಾಯಿತು.

'ಹೀಗೇ... ನಮ್ಮ ನೆಂಟರಿಗೆ ಮದುವೆ....'

'ಇದೇನು ಕೇಡಮ್ಮಾ... ಅಧಿಕ ಮಾಸದಲ್ಲಿ ಮದುವೆ ಮಾಡೋರೂ ಉಂಟೆ?'

ನನಗೆ ಸುಳ್ಳು ಹೇಳಿ ಅಭ್ಯಾಸವಿರಲಿಲ್ಲವಾದುದರಿಂದ ನಾನು ಸುಳ್ಳು ಹೇಳಿದ ಕೂಡಲೇ ಸಿಕ್ಕಿಬಿದ್ದೆ.

'ಅದೇನೋ ನಂಗೆ ಅವೆಲ್ಲಾ ಗೊತ್ತಿಲ್ಲ.'

ಒಂದು ಸಲ ಸುಳ್ಳು ಹೇಳಿದ ಮೇಲೆ ಕಡೆಯವರೆವಿಗೂ ಅದನ್ನು

ಉಳಿಸಿಕೊಳ್ಳಬೇಕಲ್ಲ ?

ಆಕೆ ನನ್ನ ಮುಖ ದುರುಗುಟ್ಟಿ ನೋಡಿ 'ನೀವು ಮೂಗು ಯಾಕೆ ಚುಚ್ಚಿಕೊಂಡಿಲ್ಲ ?' ಎಂದರು.

ನಾನು ಆಕೆಯ ಮೂಗಿನಲ್ಲಿದ್ದ ಹಿತ್ತಾಳೆಯ ಮೂಗತಿಯ ಕಡೆ ನೋಡುತ್ತಾ 'ಮೂಗು ಚುಚ್ಚಿ ನೋವು ಮಾಡಿಕೊಂಡ ಮೇಲೆ ವಜ್ರದ ಮೂಗುನತ್ತು ಇಟ್ಕೊಳ್ಳಬೇಕು. ಆಗ ಮೂಗು ನೋವು ಮಾಡಿಕೊಂಡಿದ್ದೂ ಸಾರ್ಥಕ. ಹಿತ್ತಾಳೆ ಬೊಟ್ಟು ಇಟ್ಕೊಳ್ಳೋ ಪಕ್ಷಕ್ಕೆ ಮೂಗು ಯಾಕೆ ಚುಚ್ಚಿಕೋಬೇಕು ?' ಎನ್ನುತ್ತಾ ಎದ್ದು ಹೋಗಿ ಬೇರೊಂದು ಜಾಗದಲ್ಲಿ ಕುಳಿತುಕೊಂಡೆ.

ಅಪ್ಪ ಮದ್ದೂರಿನಲ್ಲಿ ಇಳಿದು ಬಂದು, ನನಗೆ ಹೋಟಲಿನಿಂದ ಕಾಫಿ, ವಡೆ ತಂದುಕೊಟ್ಟು ಹೋದರು. ಚನ್ನಪಟ್ಟಣದಲ್ಲಿ ರಂಗುರಂಗಿನ ಆಟದ ಸಾಮಾನುಗಳನ್ನು ನೋಡಿ ನನ್ನ ಮನಸ್ಸು ಇನ್ನೂ ಜನ್ಮ ತಾಳದಿದ್ದ ಮಣಿಯ ಮಗುವನ್ನು ನೆನೆಯಿತು. ಮೈಸೂರಿನಲ್ಲಿ ರೈಲು ಹತ್ತುವಾಗ ಅಪ್ಪ ನನ್ನ ಕೈಗೆ ನಾಲ್ಕಾಣೆಯ ಬಿಲ್ಲೆಯೊಂದನ್ನು ಕೊಟ್ಟು

'ನಿನಗೆ ಏನಾದರೂ ಬೇಕಾದರೆ ತಗೋ. ಹತ್ತಿರ ಇಟ್ಕೊಂಡಿರು' ಎಂದು ಹೇಳಿದ್ದರು. ನಾನು ನಾಲ್ಕಾಣೆಯನ್ನು ಸೊಂಟದಿಂದ ತೆಗೆದು ಮರದ ಆಟದ ಸಾಮಾನುಗಳನ್ನು ತೆಗೆದುಕೊಂಡು ಹೋಗುತ್ತಿದ್ದವನನ್ನು ಕೂಗಿದೆ. ಬಣ್ಣ ಬಣ್ಣದ ಸಾಮಾನುಗಳನ್ನು ನೋಡಿ ನನಗೆ ಏನು ತೆಗೆದುಕೊಳ್ಳಬೇಕೋ ತಿಳಿಯಲಿಲ್ಲ. ಸ್ವಲ್ಪ ಹೊತ್ತು ಯೋಚನೆ ಮಾಡಿ ಕೊನೆಗೆ ಕೆಂಪು ಬಣ್ಣದ ಗಿಲಕಿಯನ್ನು ಕೊಂಡುಕೊಂಡೆ. ಉಳಿದ ಎರಡಾಣೆಗೆ ಮಣಿಗಾಗಿ ಚನ್ನಪಟ್ಟಣದ ಮಲ್ಲೆ ಹೂವನ್ನು ಕೊಂಡು ಚೀಲದಲ್ಲಿರಿಸಿದೆ. ಅಲ್ಲಿಗೆ ನನ್ನ ಖಜಾನೆ ಬರಿದಾಯಿತು.

ನಾವು ಬೆಂಗಳೂರು ತಲುಪಿದಾಗ ಸಂಜೆ ಏಳು ಗಂಟೆಯಾಗಿತ್ತು. ಅಪ್ಪ ನಾನು ಕುಳಿತಿದ್ದ ಗಾಡಿಯ ಬಳಿಗೆ ಬಂದು ನನ್ನನ್ನು ಇಳಿಸಿಕೊಂಡರು.

'ಇಲ್ಲೇ ನಿಂತಿರೋಣ. ಮೂರ್ತಿ ಬರಬಹುದು' ಎಂದು ಅಪ್ಪ ಸುತ್ತಮುತ್ತ ನೋಡುತ್ತಿದ್ದಂತೆಯೇ ಮೂರ್ತಿ ನಗುತ್ತಾ ನಮ್ಮ ಬಳಿಗೆ ಬಂದು

'ಕ್ಷೇಮವೇ?' ಎಂದರು.

'ಹೂಂ. ಮಣಿ ಹೇಗಿದಾಳಪ್ಪ?'

'ನೀವೇ ನೋಡಿ ಹೇಳಿ. ಬನ್ನಿ ಹೋಗೋಣ' ಎನ್ನುತ್ತಾ ಮೂರ್ತಿ ಬಗ್ಗಿ ತಿಂಡಿಯ ಬುಟ್ಟಿಯನ್ನು ಕೈಗೆ ತೆಗೆದುಕೊಂಡರು.

ಮಣಿ ಮನೆಯ ಬಾಗಿಲಿನಲ್ಲಿ ನಮ್ಮನ್ನು ಎದಿರುನೋಡುತ್ತಾ ನಿಂತಿದ್ದಳು. ವಿಶಾಲವಾದ ಮನೆಯ ಹಿಂಭಾಗದ ಔಟ್‌ಹೌಸಿನಲ್ಲಿ ಮಣಿಯ ಮನೆಯಿತ್ತು. ಮೂರ್ತಿ ಒಳಗೆ ಹೋಗಿ ಬುಟ್ಟಿಯನ್ನಿರಿಸಿದರು.

ಮಣಿ ನಗುತ್ತಾ 'ಬಾಪ್ಪ. ಬಾಕ್ಕ' ಎಂದಳು.

ನಾವು ಒಳಗೆ ಹೋದೆವು. ಅಪ್ಪ ವಾತ್ಸಲ್ಯದಿಂದ ಕೇಳಿದರು

'ಹೇಗಿದೀಯಾ ಮಣಿ.'

'ಹುಷಾರಾಗಿದೀನಿ. ಸುಬ್ಬಿ ಬಂದಿದ್ದರೆ ಚೆನ್ನಾಗಿತ್ತು.'

ಮಣಿಯ ಮಾತು ಕೇಳಿ ನನಗೆ ನೋವಾಯಿತು. ಮಣಿಯ ಸ್ಥಿತಿಯಲ್ಲಿರುವ ಯಾವ ಹುಡುಗಿಯೇ ಆಗಲಿ ತನ್ನ ಬಳಿ ತಾಯಿ ಇರಬೇಕೆಂದು ಬಯಸುವುದು ಸಹಜ ಎಂದು ನಾನು ತಿಳಿದಿದ್ದರೂ, ಆ ಕ್ಷಣಕ್ಕೆ ಅವಳ ಮಾತಿನಿಂದ ನನಗೆ ಚುಚ್ಚಿದಂತಾಯಿತು.

'ಏನ್ಮಾಡೋದಮ್ಮ ಅವಳಿಗೆ ಒಂದು ಗಳಿಗೆ ಮನೆ ಬಿಟ್ಟು ಬರುವುದು ಸಾಧ್ಯವಿಲ್ಲ. ಭಗವತಿ ಅವಳನ್ನು ಬಿಟ್ಟು ಒಂದು ದಿನವೂ ಇರೋದಿಲ್ಲ. ನೀನೇ ಅಲ್ಲಿಗೆ ಬಂದಿದ್ದರೆ ಚೆನ್ನಾಗಿತ್ತು.'

'ಇವರಿಗೆ ಊಟಕ್ಕೆ ಕಷ್ಟವಾಗತ್ತೇಂತ ನಾನು ಹಿಂದಲೇಟು ಹಾಕಿದೆ. ಇನ್ನೇನು ನನಗೆ ಯಾವ ಯೋಚನೆಯೂ ಇಲ್ಲ. ಹೇಗಿದ್ದರೂ ಅಕ್ಕ ಬಂದಿದಾಳೆ.'

ಮೂರ್ತಿ 'ಮಣೀ, ಎಲೆ ಹಾಕ್ತೀಯೋ ಅಥವಾ ಮಾತಿನಲ್ಲೇ ಹೊಟ್ಟೆ ತುಂಬಿಸಿಬಿಡ್ತೀಯೋ?' ಎಂದರು.

ಮಣಿ ಎದ್ದು ಅಡಿಗೆಯ ಮನೆಯ ಕಡೆ ಹೊರಟಳು. ಮಣಿಯ ಮನೆ ಚಿಕ್ಕದಾಗಿ ಚೊಕ್ಕಟವಾಗಿತ್ತು. ಪ್ರವೇಶ ಮಾಡುತ್ತಲೇ ಜಾಲರಿಯಿದ್ದ ಒಂದು ಸಣ್ಣ ವರಾಂಡ, ವರಾಂಡದ ಬಲಗಡೆಗೆ ಒಂದು ರೂಮು, ಸಣ್ಣ ಹಾಲು, ಅಡಿಗೆ ಮನೆ ಇಷ್ಟು ಮಾತ್ರವಿತ್ತು. ಬಚ್ಚಲುಮನೆ

ಪ್ರತ್ಯೇಕವಾಗಿತ್ತು. ಮಣಿ ಮನೆಯನ್ನು ಓರಣವಾಗಿರಿಸಿಕೊಂಡಿದ್ದಳು. ಮೈಸೂರಿನಲ್ಲಿದ್ದಾಗ ಅವಳಿಗೆ ಮನೆಗೆಲಸ ಮಾಡುವುದೆಂದರೆ ಎಲ್ಲಿಲ್ಲದ ಸೋಮಾರಿತನ. ಆದರೆ ತನ್ನ ಮನೆ, ತನ್ನ ಸಂಸಾರ ಎಂದರೆ ಎಷ್ಟೊಂದು ಆಸಕ್ತಿ !

' ಊಟಕ್ಕೆ ಬಾಕ್ಕ ' ಎಂದು ಮಣಿ ಕೂಗಿದಾಗಲೇ ನನಗೆ ಎಚ್ಚರ. ಮಣಿ ಕೋಸುಗೆಡ್ಡೆಯ ಪಲ್ಯ, ಅನ್ನ ಸಾರು ಮಾಡಿದ್ದಳು. ನನಗೆ ಕೋಸೆಂದರೆ ಪ್ರೀತಿ. ಆದರೆ ಹೆಚ್ಚು ಬೆಲೆಯ ಆ ತರಕಾರಿಯನ್ನು ನಮ್ಮ ಮನೆಯಲ್ಲಿ ವರ್ಷಕ್ಕೊಂದು ಬಾರಿಯೂ ತರುತ್ತಿರಲಿಲ್ಲ. ಮಣಿ ನನಗೆ ಪಲ್ಯ ಜಾಸ್ತಿಬಡಿಸಿ

' ಅಕ್ಕನಿಗೆ ಕೋಸೆಂದರೆ ಇಷ್ಟ. ಅದಕ್ಕೆ ಅದನ್ನೇ ತರಿಸಿ ಮಾಡಿದ್ದೇನೆ' ಎಂದಳು. ಅಪ್ಪ, ಮೂರ್ತಿ ಲೋಕಾಭಿರಾಮವಾಗಿ ಯಾವುದೋ ಮಾತನಾಡುತ್ತಿದ್ದರು. ಊಟ ಮುಗಿಯಿತು. ಮಣಿ ತನ್ನ ಗಂಡನಿಗೆ, ಅಪ್ಪನಿಗೆ ಎಲೆ ಅಡಿಕೆ ಮಡಿಸಿಕೊಟ್ಟು, ನಂತರ ಬಂದು ಊಟಕ್ಕೆ ಕುಳಿತಳು. ನಾನು ಅವಳ ಬಳಿಯೇ ಮಾತನಾಡುತ್ತಾ ತಲೆತಗ್ಗಿಸಿ ಊಟ ಮಾಡುತ್ತಿದ್ದಾಗ, ಹೂಂಗುಟ್ಟುತ್ತಾ ಅವಳನ್ನೇ ನೋಡುತ್ತಿದ್ದೆ.

ಮೊದಲೇ ರೂಪವತಿಯಾಗಿದ್ದ ಮಣಿ ಈಗಂತೂ ರೂಪಲಕ್ಷ್ಮಿಯಾಗಿದ್ದಳು. ಅವಳ ಕೈಕಾಲುಗಳು ದಂತದ ಬಣ್ಣಕ್ಕೆ ತಿರುಗಿದ್ದವು. ಈಗ ಅವಳ ಕೆನ್ನೆಗೆ ಹಿಂದೆ ಕಾಮಿನಿ ಬಳಿದಿದ್ದ ಕೆಂಪು ಬಣ್ಣದ ಅವಶ್ಯಕತೆಯಿರಲಿಲ್ಲ. ಮಣಿ ಗುಂಗುರು ಕೂದಲನ್ನು ಬಾಚಿ ಸಡಿಲವಾಗಿ ಗಂಟು ಹಾಕಿದ್ದಳು. ಕಣ್ಣುಗಳು ಎಳೆತನ, ಹೊಸತನದ ಕಾಂತಿಯಿಂದ ಮಿನುಗುತ್ತಿದ್ದವು. ಪುಷ್ಟಿಯಾದ ಆಹಾರ, ಸುಖಮಯವಾದ ದಾಂಪತ್ಯ ಜೀವನ ಹೆಣ್ಣಿಗೆ ಯಾವ ಸ್ವರೂಪ ಕೊಡಬಲ್ಲದೆಂಬುದರ ಅರಿವು ನನಗಾಯಿತು.

ಮಣಿ ಕಪ್ಪು ಬಣ್ಣದ ವಾಯಿಲ್ ಸೀರೆಯುಟ್ಟು, ಅದೇ ಬಣ್ಣದ ರವಿಕೆ ತೊಟ್ಟಿದ್ದಳು. ನಾನು ಹೊಸಬರನ್ನು ನೋಡುವಂತೆ ಮಣಿಯನ್ನು ದಿಟ್ಟಿಸಿ ನೋಡಿದೆ. ಮಣಿಯ ಗಂಟಿನಲ್ಲಿ ಹೂವಿರಲಿಲ್ಲ. ಕೂಡಲೇ ನನಗೆ ನಾನು ತಂದಿದ್ದ ಹೂವಿನ ನೆನಪಾಯಿತು. ಮಣಿ ಮಾತನಾಡುತ್ತಿದ್ದಂತೆಯೇ ನಾನು ಎದ್ದು ಹೋಗಿ ಹೂವು ತಂದು, ಅವಳು ಊಟಮಾಡು

ತ್ರಿದ್ದಂತೆಯೇ ಹೆರಳಿನ ಸುತ್ತಲೂ ಮುಡಿಸಿದೆ. ಮಣಿ ಎಡಗೈಯಿಂದ ಹೂವು ಮುಟ್ಟಿ 'ಹೂವು ಚೆನ್ನಾಗಿದೆ. ವಾಸನೆಯಂತೂ ಹುಚ್ಚು ಹಿಡಿಸುವ ಹಾಗಿದೆ' ಎಂದಳು.

'ನಿನ್ನ ಗಂಡನಿಗೋ ?'

ಮಣಿ ನಕ್ಕು ತಲೆ ತಗ್ಗಿಸಿ ಊಟ ಮುಂದುವರೆಸಿದಳು.

'ಅವರಿಗೆ ಹೂವೆಂದರೆ ತುಂಬಾ ಆಸೆ.'

'ಹೂವು ಆಸೆಯೋ ಅಥವಾ ಹೂವು ಮುಡಿಯುವವರೋ ?'

ಮಣಿ ಮಾತನಾಡಲಿಲ್ಲ.

'ದೇವರು ದಿಂಡರು ಇಟ್ಟುಕೊಂಡಿದೀಯೋ ? ಅಥವಾ ಎಲ್ಲಾನೂ ದೂರ ಇರಿಸಿಬಿಟ್ಟಿದೀಯೋ ?'

ಮಣಿ ಅಡಿಗೆ ಮನೆಯಲ್ಲಿದ್ದ ಒಂದು ಗೂಡಿನ ಕಡೆ ಕೈ ತೋರಿಸಿ 'ದೇವರನ್ನೇನೋ ಇಟ್ಟುಕೊಂಡಿದೀನಿ. ಆದರೆ ದೊಡ್ಡ ದೇವರನ್ನು ಪ್ರಸನ್ನ ಗೊಳಿಸಿ, ಇನ್ನೂ ಸಮಯವಿದ್ದರೆ ಆಗ ಈ ದೇವರಿಗೆ ದೀಪ ಹಚ್ಚೀನಿ' ಎಂದಳು.

'ದೊಡ್ಡ ದೇವರು ಯಾರೇ ?'

'ಅವರು.'

'ಅವರನ್ನ ಪ್ರಸನ್ನಗೊಳಿಸೋದೇನು ಕಷ್ಟ ? ನೀನು ಹೀಗೆ ಅಲಂ ಕಾರ ಮಾಡಿಕೊಂಡು ಹೋಗಿ ಎದುರಿಗೆ ನಿಂತರೆ, ಆ ದೇವರನ್ನ ಪ್ರಸನ್ನ ಗೊಳಿಸಿ ವರಾನೂ ಪಡೆಯಬಹುದು. ಅಲ್ಲವೇ ?'

ಮಣಿ ಮತ್ತೆ ನಕ್ಕಳು.

ಮೂರ್ತಿ ಅಡಿಗೆ ಮನೆಯ ಬಾಗಿಲಿನಲ್ಲಿ ನಿಂತು 'ಮಣಿ, ಊಟ ವಾದ ಮೇಲೆ ನಿಮ್ಮ ತಂದೆಗೆ ಹಾಸಿಗೆ, ಹೊದಿಕೆ ಹೊಂದಿಸಿ ಕೊಡು' ಎಂದರು.

ಮಾರನೆಯ ದಿನವೇ ಅಪ್ಪ ಮೈಸೂರಿಗೆ ಹೊರಟುಹೋದರು. ಹೊರಡುವುದಕ್ಕೆ ಮುಂಚೆ ನನಗೆ ಆಗಾಗ್ಗೆ ಕಾಗದ ಬರೆಯಲು ಹೇಳಿ, ನನ್ನ ಕೈಗೆ ಐದು ರೂಪಾಯಿನ ನೋಟೊಂದನ್ನು ಕೊಟ್ಟು ಹೊರಟುಹೋದರು.

ಮೂರ್ತಿ ಬೆಳಗ್ಗೆ ತಿಂಡಿ ಕಾಫಿ ಮುಗಿಸಿ ಮಿಲ್ಲಿಗೆ ಹೊರಟುಹೋದರೆ

ಮಧ್ಯಾಹ್ನ ಒಂದು ಗಂಟೆಗೆ ಮನೆಗೆ ಬರುತ್ತಿದ್ದರು. ಊಟಮಾಡಿ ಸ್ವಲ್ಪ ಹೊತ್ತು ಮಲಗಿದ್ದು ಕಾಫಿ ತೆಗೆದುಕೊಂಡು ಹೊರಟುಹೋದರೆ ರಾತ್ರಿ ಎಂಟು ಗಂಟೆಯ ಮೇಲೆ ಮನೆಗೆ ಬರುತ್ತಿದ್ದರು. ಭಾನುವಾರ ಮಿಲ್ಲಿರುತ್ತಿರಲಿಲ್ಲ.

ಮೂರ್ತಿ ಬೆಳಗ್ಗೆ ಮಿಲ್ಲಿಗೆ ಹೋಗಿ ಊಟಕ್ಕೆ ಮನೆಗೆ ಬರುವಷ್ಟರಲ್ಲಿ ಮಣಿ ಒಂದು ನಿದ್ದೆ ಮಾಡಿ ಏಳುತ್ತಿದ್ದಳು. ರಾತ್ರಿ ಅವರು ಮನೆಗೆ ಬರುವಷ್ಟರಲ್ಲಿ ಮತ್ತೊಂದು ನಿದ್ದೆ ತೆಗೆಯುತ್ತಿದ್ದಳು. ನಾನು ಆಶ್ಚರ್ಯದಿಂದ 'ಅದು ಹೇಗೆ ಇಷ್ಟೊಂದು ನಿದ್ದೆ ಮಾಡ್ತೀಯಾ ?' ಎಂದೆ.

'ಅಭ್ಯಾಸವಾಗಿ ಹೋಗಿದೆ. ಮಧ್ಯಾಹ್ನ ಅವರು ಮಿಲ್ಲಿಗೆ ಹೋದ ಮೇಲೆ ನಿದ್ದೆ ಮಾಡಿ ಎದ್ದು ರಾತ್ರಿ ಅಡಿಗೆ ಮುಗಿಸಿ ಇವರು ಮನೆಗೆ ಬರುವ ಹೊತ್ತಿಗೆ ತಲೆಬಾಚಿಗೊಂಡು ನಾನು ಸಿದ್ಧವಾಗಿರ್ತೀನಿ. ಆಮೇಲೆ ಎಲ್ಲಾದರೂ ಒಂದು ಸುತ್ತು ಹೋಗಿ ಬಂದು ಊಟಮಾಡುತ್ತೇವೆ.'

ಹಾಗೆ ಮಲಗಿ ನಿದ್ದೆ ಮಾಡುವುದಕ್ಕೂ ಪುಣ್ಯ ಮಾಡಿರಬೇಕು ಎನಿಸಿತು ನನಗೆ. ಮಧ್ಯಾಹ್ನ ನಿದ್ದೆ ಮಾಡುವ ಅಭ್ಯಾಸ ನನಗಿರಲಿಲ್ಲ. ರಾತ್ರಿಯ ಬಹು ಭಾಗವನ್ನೂ ಅಶಾಂತಿಯಿಂದ ಹಾಸಿಗೆಯ ಮೇಲೆ ಹೊರಳುತ್ತಾ ಕಳೆಯುತ್ತಿದ್ದೆ.

ಮೂರ್ತಿ ಮನೆಯಲ್ಲಿದ್ದಾಗ ನಾನು ಏನಾದರೂ ಒಂದು ಕೆಲಸ ಹಚ್ಚಿಕೊಂಡು ಅಡಿಗೆ ಮನೆಯಲ್ಲಿ ಕಾಲ ಕಳೆಯುತ್ತಿದ್ದೆ. ಭಾನುವಾರದ ದಿವಸ ದಂಪತಿಗಳು ಸಿನಿಮಾ, ಪಾರ್ಕಿಗೆ ಹೊರಟಾಗ ನಾನು ಏನಾದರೊಂದು ನೆಪ ಹೇಳಿ ತಪ್ಪಿಸಿಕೊಂಡು ಬಿಡುತ್ತಿದ್ದೆ. ನಾನು ಒಂಟಿಯಾಗಿ ಮನೆಯಲ್ಲುಳಿಯುವುದನ್ನು ನೋಡಿ ಮಣಿ ಮೊದಲು ಕೋಪಿಸಿಕೊಂಡಳು. ನಾನು ಒಂದು ದಿನ

'ನಾನು ಇಲ್ಲಿಗೆ ಬಂದಿರೋದು ನಿನಗೆ ಬಾಣಂತನ ಮಾಡೋಕೇ ಹೊರತು ನಿಮ್ಮಿಬ್ಬರೊಡನೆ ಅಲೆದಾಡೋಕಲ್ಲ' ಎಂದು ಖಂಡಿತವಾಗಿ ಹೇಳಿಬಿಟ್ಟೆ. ಅಂದಿನಿಂದ ಮಣಿ ನನ್ನನ್ನು ತನ್ನೊಡನೆ ಕರೆಯಲಿಲ್ಲ.

ನಾನು ಬೆಂಗಳೂರಿಗೆ ಬಂದ ಒಂದು ವಾರದ ನಂತರ ಒಂದು ದಿನ ಬೆಳಗ್ಗೆ ಆರು ಗಂಟೆಗೆ ಬಚ್ಚಲು ಮನೆಯ ಒಲೆಯನ್ನು ಹಚ್ಚಿಸಲು ಎದ್ದು

ಹೊರಗೆ ಬಂದಾಗ ಹಿಂಭಾಗದ ನಲ್ಲಿಯ ಬಳಿ ತರುಣನೊಬ ,ಬ್ರಷ್ಷಿನಿಂದ ಹಲ್ಲುಜ್ಜುತ್ತಾ ನಿಂತಿದ್ದ. ನಾನು ಆವನನ್ನು ಬಂದ ಒಂದು ವಾರವಾದರೂ ನೋಡಿರಲಿಲ್ಲ.

ಅವನು ಗೀರುಗೀರಿನ ಪಾಯಿಜಾಮ, ನೆಟ್‌ಬನಿಯನ್ ಮಾತ್ರ ಹಾಕಿಕೊಂಡಿದ್ದ. ಅದೇ ತಾನೆ ಎದ್ದು ಬಂದುದರಿಂದಲೋ ಏನೋ ತಲೆಯ ಕೂದಲು ಕೆದರಿತ್ತು. ನಾನು ಮತ್ತೊಮ್ಮೆ ತಲೆ ಎತ್ತಿ ಅವನ ಉಕ್ಕಿನಂತಹ ತೋಳುಗಳನ್ನೂ, ಚೆಲುವಾದ ಮುಖವನ್ನೂ ನೋಡಿ ತಲೆ ತಗ್ಗಿಸಿ ಹೋಗಿ, ಬಚ್ಚಲು ಮನೆಯ ಬೀಗವನ್ನು ತೆಗೆದು ಒಲೆ ಹೊತ್ತಿಸ ತೊಡಗಿದೆ. ಹೊಗೆಯಿಂದಾಗಿ ನನ್ನ ಕಣ್ಣು ಕೆಂಪಾಗಿ ನೀರು ಸುರಿಯಿತು. ನಾನು ಒಲೆ ಹೊತ್ತಿಸಿ ಬಂದಾಗಲೂ ಆ ಯುವಕ ಅಲ್ಲಿಯೇ ನಿಂತು ಮುಖಕ್ಕೆ ಸೋಪು ಹಾಕಿ ತೊಳೆದುಕೊಳ್ಳುತ್ತಿದ್ದ.

ನನ್ನ ಕಾಲುಗಳು ಏಕೋ ಏನೋ ಒಂದು ಕ್ಷಣ ತಡೆದವು. ಅಶಾಂತಿಯ ಅಲೆಯೊಂದು ನನ್ನ ದೇಹದಲ್ಲೆಲ್ಲಾ ಹರಿದಾಡಿತು. ನಾನು ಹುಬ್ಬುಗಂಟಿಕ್ಕಿ ವೇಗವಾಗಿ ಮನೆಗೆ ಬಂದೆ. ಮಣಿ ಅದೇ ತಾನೇ ಎದ್ದು ಹೊರಗೆ ಬಂದಿದ್ದಳು. ನಾನು ಮಣಿಯನ್ನು ಕೇಳಿದೆ

'ಯಾರೇ ಆ ಹುಡುಗ........ನಲ್ಲಿ ಹತ್ತಿರ....'

'ಮುಂದುಗಡೆ ಮನೆಯ ಒಂದು ರೂಮಿನಲ್ಲಿ ಬಾಡಿಗೆಗಿದ್ದಾನೆ. ಕಾಲೇಜಿನಲ್ಲಿ ಓದುತ್ತಿದಾನೇಂತ ಕಾಣುತ್ತೆ.'

'ಒಂದು ವಾರದಿಂದ ಕಾಣಿಸಲಿಲ್ಲ.'

'ಊರಿಗೆ ಏನಾದರೂ ಹೋಗಿದ್ದನೋ ಏನೋ. ಒಲೆ ಹತ್ತಿಸಾಯಿತಾ ?'

'ಹೂಂ. ಈಗ ತಿಂಡಿ ಏನು ಮಾಡೋಣ ?'

'ಈರುಳ್ಳಿ ಸುಲೀತಿರು. ನಾನು ಹೋಗಿ ಮುಖ ತೊಳೆದುಕೊಂಡು ಬಂದುಬಿಡುತ್ತೇನೆ' ಎನ್ನುತ್ತಾ ಮಣಿ ಟವಲನ್ನು ಕೈಗೆ ತೆಗೆದುಕೊಂಡಳು.

# ೨

ನಮ್ಮ ಅಜ್ಜಿಗೆ ಆರೋಗ್ಯ ಚೆನ್ನಾಗಿಲ್ಲವೆಂದು ನಮ್ಮೂರಿನಿಂದ ಕಾಗದ ಬಂತು. 'ನಿನ್ನ ನೋಡಬೇಕೂಂತ ಅಮ್ಮ ತುಂಬ ಹಂಬಲಿಸುತ್ತಿದ್ದಾಳೆ. ಈ ಕಾಗದ ಕಂಡ ಕೂಡಲೇ ಬಾ' ಎಂದು ನಮ್ಮ ತಂದೆ ನನಗೆ ಕಾಗದ ಬರೆದಿದ್ದರು. ನಾನು ಕಾಲೇಜಿಗೆ ಒಂದು ವಾರಕ್ಕೆ ರಜದ ಚೀಟಿ ಕಳುಹಿಸಿ ತಿಪಟೂರಿಗೆ ಹೊರಟೆ.

ಅಜ್ಜಿಗೆ ಅಂತಹದೇನೂ ಗಾಬರಿಯಾಗುವಂತಹ ಖಾಯಿಲೆಯಾಗಿರ ಲಿಲ್ಲ. ಅವಳಿಗೆ ಒಂದು ತಲೆನೋವಿನ ಜ್ವರವಾದರೂ, ತಾನು ಸತ್ತೇ ಹೋಗ್ತೀನೇನೋ ಎನ್ನುವಷ್ಟು ಮನೆಯವರಿಗೆಲ್ಲಾ ಗಾಬರಿ ಮಾಡಿಬಿಡು ತ್ತಿದ್ದಳು.

ನಾನು ಸಂಜೆ ಮನೆ ತಲುಪಿದಾಗ, ನನ್ನ ತಂದೆ ಮನೆಯ ಮುಂದು ಗಡೆ ರೈತನೊಬ್ಬನ ಕೈಲಿ ಮಾತನಾಡುತ್ತಾ ಕುಳಿತಿದ್ದರು. ತಂದೆಯ ಮುಖ ವನ್ನು ಕಂಡ ಕೂಡಲೇ ನಾನು ಕೇಳಿದೆ

'ಅಜ್ಜಿ ಹೇಗಿದಾಳೆ?'

'ಈಗ ವಾಸಿ. ಕಾಲೇಜಿಗೆ ರಜದ ಚೀಟಿ ಕಳಿಸಿದಿ ತಾನೆ?'

'ಹೂಂ' ಎಂದು ಹೇಳಿ ನಾನು ಒಳಗೆ ಹೋದೆ. ತಂದೆಯೊಡನೆ ನಾನು ಮಾತನಾಡಿದ ದನಿಯನ್ನು ಕೇಳಿ ಅಮ್ಮ ಒಳಬಾಗಿಲಿನ ಬಳಿ ಬಂದು ನಿಂತಿದ್ದಳು. ನಾನು ಒಳಗೆ ಹೋದೊಡನೆ

'ಬಾಪ್ಪ ಶಿವೂ. ನಿಮ್ಮಜ್ಜೀನ ನೋಡು ಬಾ' ಎಂದಳು.

ನಾನು ಕಾಲಿನ ಬೂಟ್ಸು ಕಳಚಿ, ಕೋಟು ತೆಗೆದು ಗೂಟದ ಮೇಲೆ ಹಾಕಿ, ಅಜ್ಜಿ ಮಲಗಿದ್ದ ರೂಮಿಗೆ ಹೋದೆ. ಅಜ್ಜಿ ಹಾಸಿಗೆಯ ಮೇಲೆ ನರಳುತ್ತಾ ಮಲಗಿದ್ದಳು. ನಾನು ಹೋಗಿ ಹತ್ತಿರ ಕುಳಿತು

'ಹೇಗಿದೀಯಾ ಅಜ್ಜಿ?' ಎಂದೆ.

'ಬಾಪ್ಪಾ ಶಿವು. ನಾನು ಯಮನಿಗೂ ಬೇಡವಾಗಿದೀನಿ. ನೀನು ಯಾಕೆ ಬಡವಾಗಿರುವ ಹಾಗಿದೆಯಲ್ಲಾ' ಎನ್ನುತ್ತಾ ಅಜ್ಜಿ ವಾತ್ಸಲ್ಯದಿಂದ ನನ್ನ ತಲೆಯ ಮೇಲೆ ಕೈಯಾಡಿಸಿ ಸೊಸೆಗೆ

'ಮಗೂಗೆ ಕಾಫಿ ತಂದುಕೊಡು' ಎಂದು ಕೂಗಿದಳು.

'ನಾನೇ ಒಳಗೆ ಹೋಗಿ ತಗೋತೀನಿ.'

'ಕಾಲೇಜಿಗೆ ಸರಿಯಾಗಿ ಹೋಗ್ತಿದೀಯಪ್ಪಾ? ಹೋದ ಸಲದ ಹಾಗೆ ಮಾಡಿಕೋಬೇಡ. ಈ ಸಲ ಚೆನ್ನಾಗಿ ಓದಿ ಪ್ಯಾಸು ಮಾಡಪ್ಪಾ ನಿನ್ನ ಮದುವೆಯೊಂದನ್ನು ನಾನು ನೋಡಿಬಿಟ್ಟರೆ ಧನ್ಯ....'

'ಮದುವೆ' ಎಂದ ಕೂಡಲೇ ನನ್ನ ಮನಸ್ಸು ಸೆಕೆಂಡ್ ಆನರ್ಸಿನಲ್ಲಿ ಓದುತ್ತಿದ್ದ ಚಂದ್ರಮುಖಿಯನ್ನು ನೆನೆಯಿತು. ಚಂದ್ರಮುಖಿಯ ಮೇಲಿನ ಹುಚ್ಚಿನಿಂದಲೇ ನಾನು ಜೂನಿಯರ್ ಬಿ.ಎಸ್‌ಸಿ. ಯಲ್ಲಿ ಹೋದ ಸಲ ಫೆಯಿಲಾಗಿದ್ದೆ. ನಾನು ಕ್ಲಾಸಿನಲ್ಲಿರಬೇಕಾದ ಸಮಯದಲ್ಲಿ ಚಂದ್ರಮುಖಿಯ ಹಿಂದೆ ತಿರುಗಾಡುತ್ತಿದ್ದುದರಿಂದ ಹಾಜರಾತಿ ಸಾಲದೇ ಬಂದು ಕೊನೆಗೆ ಅದೇ ತರಗತಿಯಲ್ಲಿ ನಿಲ್ಲಬೇಕಾಯಿತು.

ಚಂದ್ರಮುಖಿಯನ್ನು ಸೆಂಟ್ರಲ್ ಕಾಲೇಜಿನ 'ಬ್ಯೂಟಿ ಕ್ವೀನ್' ಎಂದು ಎಲ್ಲರೂ ಕರೆಯುತ್ತಿದ್ದರು. ಅವಳ ಅಲಂಕಾರ, ಬೆಡಗು, ಬಿನ್ನಾಣ, ಥಳುಕಿಗೆ ಇಡೀ ಕಾಲೇಜೇ ಬೆರಗಾಗಿತ್ತು. ಒಂದು ದಿನವಾದರೂ ಅವಳು ತುಟಿಗೆ ರಂಗು ಹಚ್ಚದೇ, ಮುಖಕ್ಕೆ ಬಣ್ಣ ಬಳಿಯದೇ ಬರುತ್ತಿರಲಿಲ್ಲ. ಬೆಡಗು, ವೈಯಾರ, ಷೋಕಿ ನೋಡಿದರೆ ಯಾವ ಸಿನಿಮಾ ತಾರೆಯಾದರೂ ಅವಳೆದುರಿಗೆ ನಾಚಿ ತಲೆ ತಗ್ಗಿಸುತ್ತಿದ್ದಳು.

ಹೂವಿನ ಸುತ್ತಲೂ ಹಲವಾರು ದುಂಬಿಗಳು ಸುಳಿದಾಡುವಂತೆ, ಚಂದ್ರಮುಖಿಯ ಸುತ್ತಲೂ ಅವಳ ಪ್ರೇಮಿಗಳು ಹಲವರು ಸುತ್ತಾಡುತ್ತಿದ್ದರು. ಅವರುಗಳ ಪೈಕಿ ನಾನೂ ಒಬ್ಬ. ಆದರೆ ಚಂದ್ರಮುಖಿ ನನ್ನ ಕಡೆ ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ನಮ್ಮ ಪೈಕಿ ಶ್ರೀಮಂತನಾದ ವಿಜಯಕುಮಾರ್‌ನೊಡನೆ ಚಂದ್ರಮುಖಿ ಹೆಚ್ಚು ಓಡಾಡುತ್ತಿದ್ದಳು. ಸಂಜೆಯಾದರೆ ವಿಜಯಕುಮಾರನ ಕಾರಿನಲ್ಲಿ ಕುಳಿತು ಇಬ್ಬರೂ ಸಿನಿಮಾ, ಪಾರ್ಕು, ಹೋಟಲು ಎಲ್ಲಿಗಾದರೂ ಹೋಗಿ ಬರುತ್ತಿದ್ದರು. ನಮಗಾರಿಗೂ ಇಲ್ಲದ ಭಾಗ್ಯ ವಿಜಯಕುಮಾರನಿಗೆ ಸಿಕ್ಕಿರುವುದನ್ನು ನೋಡಿ ನಾವು ಕರುಬುತ್ತಿದ್ದೆವು. ನಾನು ಚಂದ್ರಮುಖಿಯೊಬ್ಬಳೇ ಸಿಕ್ಕಿದಾಗ ನನ್ನ ಪ್ರೇಮವನ್ನು ನಿವೇದಿಸಬೇಕೆಂದು ಸಮಯವನ್ನು ಕಾಯತೊಡಗಿದೆ. ಕಾಲೇಜಿ

ನಲ್ಲಿ ಚಂದ್ರಮುಖಿಯೊಬ್ಬಳೇ ಸಿಕ್ಕುವುದು ಸಾಧ್ಯವೇ ಇರಲಿಲ್ಲ. ಕಾಲೇಜು ಮುಗಿದು ಅವಳು ಮನೆಗೆ ಹೊರಟಾಗ, ಅವಳನ್ನು ಹಿಂಬಾಲಿಸಿ ಮಾತ ನಾಡಿಸಲು ಪ್ರಯತ್ನಿಸಿದೆ. ಒಂದು ದಿನ ಚಂದ್ರಮುಖಿ ಮನೆಗೆ ಒಬ್ಬಳೇ ಹೊರಟಳು. ನಾನೂ ಅವಳನ್ನು ಹಿಂಬಾಲಿಸಿದೆ. ಸ್ವಲ್ಪ ದೂರ ಹಿಂಬಾ ಲಿಸಿ ಕೊನೆಗೆ ಧೈರ್ಯಮಾಡಿ

'ಮಿಸ್....ಒಂದು ನಿಮಿಷ' ಎಂದೆ. ಅಷ್ಟು ಮಾತನಾಡಿದ್ದಕ್ಕೇ ನನ್ನ ಗಂಟಲೊಣಗಿ ನಾಲಿಗೆ ತೊದಲಿತು.

ಚಂದ್ರಮುಖಿ ತಟ್ಟನೆ ನಿಂತು 'ಏನು' ಎಂದಳು.

ನಾನು ಆವಳಿಗೆ ಹೇಳಬೇಕಾದುದು ಸಾವಿರವಿತ್ತು. ಆದರೆ ಅವಳ ಎದುರಿಗೆ ನಿಂತಾಗ ಧೈರ್ಯ ಪಲಾಯನ ಮಾಡಿತ್ತು. ನನ್ನಂತಹ ಹುಡುಗ ರೆಲ್ಲಾ ಹೇಡಿಗಳೆಂದು ತೋರುತ್ತದೆ. ನಾವು ಗುಂಪಿನಲ್ಲಿರುವಾಗ ಹುಡುಗಿಯ ರನ್ನು ರೇಗಿಸಿ ಕೀಟಲೆ ಮಾಡುತ್ತೇವೆ. ನಾಯಿ ಬೆಕ್ಕುಗಳಂತೆ ಕೂಗುತ್ತೇವೆ, ಪೇಪರಿನ ಚೆಂಡುಗಳನ್ನು ಮಾಡಿ ಅವರ ಮೇಲೆ ಎಸೆಯುತ್ತೇವೆ, ಮನೆ ಯವರೆವಿಗೆ ಹಿಂಬಾಲಿಸುತ್ತೇವೆ–ಆದರೆ ಹುಡುಗಿಯ ಎದುರಿಗೆ ನಾವೊಬ್ಬರೇ ನಿಂತು ಮಾತನಾಡುವಾಗ ಕಣ್ಣು ಕತ್ತಲಿಟ್ಟು ಬಾಯೊಣಗಿ ಕಾಲು ನಡಗು ತ್ತದೆ.

ಚಂದ್ರಮುಖಿ ಸಿಕ್ಕಿದಾಗ ನಾನು ಏನೇನೋ ಹೇಳಬೇಕೆಂ ನಾಯಿ ಪಾಠ ಮಾಡಿದ್ದೆ. ಮೊದಲು ನನ್ನ ವಿರಹವೇದನೆ, ಅವಳ ರೂಪ ವರ್ಣನೆ ಮಾಡಿ ನಂತರ ನನ್ನ ಪ್ರೇಮವನ್ನು ನಿವೇದಿಸಬೇಕೆಂದು ನಾನು ಮನಸ್ಸು ಮಾಡಿದ್ದೆ. ನಾನು ಅವಳನ್ನು ಕಂಡಾಗ ಏನೇನು ಮಾತನಾಡಬೇಕೆಂಬು ದನ್ನು ಬರೆದು ಗಟ್ಟುಮಾಡಿದ್ದೆ. ಆದರೆ ನಾನು ಅವಳ ಎದುರಿಗೆ ನಿಂತಾಗ ನನಗೆ ಎಲ್ಲವೂ ಮರೆತುಹೋಯಿತು. ನಾನು ಸುಮ್ಮನೆ ಅವಳ ಮುಖ ನೋಡುತ್ತಾ ನಿಂತುದನ್ನು ನೋಡಿ ಕಿರುನಗೆ ಅವಳ ತುಟಿಯಂಚಿನಲ್ಲಿ ಮಿನುಗಿ ಮಾಯವಾಯಿತು.

'ಏನು ಹೇಳಬೇಕೋ ಹೇಳಿ. ನನಗೆ ಬೀದೀಲಿ ಹೀಗೆ ಸುಮ್ಮನೆ ನಿಂತುಕೊಳ್ಳೋಕಾಗುವುದಿಲ್ಲ.'

'ಮತ್ತೇ....ಮತ್ತೇ.... 'ಪ್ಯಾರಡೈಸ್ ಲಾಸ್ಟ್'ನ ನೋಟ್ಸ್ ಕೊಡ್ತೀರಾ?'

'ನಾನು ನೋಟ್ಸ್ ಬರೆದುಕೊಳ್ಳುವ ಅಭ್ಯಾಸವೇ ಇಟ್ಟಿಲ್ಲ. ಕ್ಷಮಿಸಿ' ಎನ್ನುತ್ತಾ ಚಂದ್ರಮುಖಿ ಹೊರಟುಹೋದಳು. ಅವಳು ಹೋದ ಎಷ್ಟೋ ಹೊತ್ತಿನ ಮೇಲೆ ನಾನು ಎಚ್ಚರಗೊಂಡೆ.

ಚಂದ್ರಮುಖಿಯ ಮೇಲಿನ ಹಂಬಲದಿಂದ ನನಗೆ ಕಾಲೇಜು, ಪಾಠ, ಊಟ, ನಿದ್ದೆ ಯಾವುದೂ ಬೇಡವಾಯಿತು. ನನ್ನ ಪುಸ್ತಕಗಳಲ್ಲಿ ಅವಳ ಹೆಸರನ್ನು ಗೀಚಿದೆ. ಚಂದ್ರಮುಖಿ ಕುಳಿತುಕೊಳ್ಳುವ ಸ್ಥಳದಲ್ಲಿ ಡೆಸ್ಕಿನ ಮೇಲೆ 'ಡಿಯರ್ ಚಂದ್ರಾ, ಡಾರ್ಲಿಂಗ್....ಒಂದೇ ಒಂದು....' ಎಂದು ಮುಂತಾಗಿ ಹುಚ್ಚುಚ್ಚಾಗಿ ಕೆತ್ತಿದೆ. ಅವಳ ಮೇಲೆ ಹಲವು ಕತೆ, ಕವಿತೆಗಳನ್ನು ರಚಿಸಿ ಪತ್ರಿಕೆಗಳಿಗೆ ಕಳುಹಿಸಿದೆ. ಆದರೆ ಯಾವ ಪತ್ರಿಕೆಯೂ ನನ್ನ ಕವಿತೆಯ ಯೋಗ್ಯತೆಯನ್ನು ತಿಳಿಯಲಿಲ್ಲ. ಆದುದರಿಂದ ಕವಿತೆಗಳು ನನಗೆ ವಾಪಸ್ಸು ಬಂದವು.

ಇವುಗಳೆಲ್ಲದರ ಪರಿಣಾಮವಾಗಿ ನನಗೆ ಜೂನಿಯರ್ ತರಗತಿಯಲ್ಲಿ ಫೇಲಾಯಿತು.

ನಾನು ಫೇಲಾದ ಸುದ್ದಿ ತಿಳಿದು ನನ್ನ ತಂದೆಗೆ ತುಂಬಾ ವ್ಯಥೆಯಾಯಿತು. ಅವರು ನನ್ನನ್ನು ಕರೆದು 'ಯಾಕೋ ಸರಿಯಾಗಿ ಓದಲಿಲ್ಲವೇ ?' ಎಂದರು. ನಾನು ತಲೆ ತಗ್ಗಿಸಿ

'ಹಾಸ್ಟಲಿನಲ್ಲಿ ಸರಿಯಾಗಿ ಓದೋಕಾಗೋದಿಲ್ಲ. ಬಾಕಿ ಹುಡುಗರೆಲ್ಲಾ ಬಂದು ತುಂಬಾ ಗಲಾಟೆ ಮಾಡ್ತಾರೆ' ಎಂದೆ.

ತಂದೆ ನನ್ನ ಮಾತನ್ನು ನಂಬಿದರು.

ಆದುದರಿಂದಲೇ ಈ ವರ್ಷ ಮತ್ತೆ ಕಾಲೇಜಿಗೆ, ಸೇರಿದಾಗ ತಂದೆ ನನ್ನನ್ನು ಹಾಸ್ಟೆಲಿನಲ್ಲಿ ಬಿಡದೆ ಮನೆಯೊಂದರ ಮುಂಭಾಗದ ರೂಮನ್ನು ಕೊಡಿಸಿ, ಹೋಟಲಿನಲ್ಲಿ ಊಟ ತಿಂಡಿ, ಸ್ನಾನದ ಏರ್ಪಾಡು ಮಾಡಿ ಹೊರಟುಹೋಗಿದ್ದರು. ಈ ವರ್ಷ ಚಂದ್ರ ಸೆಕೆಂಡ್ ಆನರ್ಸಿಗೆ ಹೊರಟು ಹೋಗಿದ್ದುದರಿಂದ ನನಗೆ ಅವಳ ಮೇಲಿನ ವ್ಯಾಮೋಹ ಕಡಿಮೆಯಾಗಿತ್ತು. ಆದರೆ ಈ ವರ್ಷ ಹೊಸದಾಗಿ ಸೆಂಟ್ರಲ್ ಕಾಲೇಜಿಗೆ ಸೇರಿದ್ದ ಚೆಲುವೆಯರ ನೋಟರು ಮತ್ತೆ ನನ್ನ ಮನಸ್ಸನ್ನು ಅಪಹರಿಸಿದರು.

ಹುಡುಗಿಯರೆಂದರೆ ನನ್ನ ಹೃದಯ ಮೇಣಕ್ಕಿಂತಲೂ ಮೃದುವಾಗಿ

ಬಿಡುತ್ತಿತ್ತು. ಅವರನ್ನು ಮೆಚ್ಚಿಸಲು, ಅವರ ದೃಷ್ಟಿಯಲ್ಲಿ 'ಹೀರೋ' ಆಗಲು ನಾನು ಸರ್ವ ಸಾಹಸ ಮಾಡುತ್ತಿದ್ದೆ. ನಾನು ಮನಸಾರೆ ಪ್ರೇಮಿಸಿದ ಹುಡುಗಿಯನ್ನೇ ಮದುವೆಯಾಗುವುದಾಗಿ ಶಪಥ ಮಾಡಿದ್ದೆ.

ಅಜ್ಜಿ 'ಮದುವೆ' ಎಂದ ಕೂಡಲೇ, ಕಾಲೇಜಿನ ಚೆಲುವೆಯರೆಲ್ಲಾ ಕೈಲಿ ಹೂವಿನ ಹಾರಗಳನ್ನು ಹಿಡಿದು ನನಗೆ ಹಾಕಲು ಬಂದಂತಾಯಿತು. ನಾನು ಕನಸು ಕಾಣುತ್ತಿದ್ದಾಗ ಅಜ್ಜಿ ಒಂದೇ ಸಮನೆ ಮಾತನಾಡುತ್ತಿದ್ದಳು. ನಾನು ಅವಳ ಮಾತಿಗೆ ಸರಿಯಾಗಿ ಉತ್ತರ ಕೊಡದಿರುವುದನ್ನು ಕಂಡು ಅವಳು ಅಕ್ಕರೆಯಿಂದ

'ಯಾಕಪ್ಪಾ ಶಿವು ಹುಷಾರಾಗಿದಿ ತಾನೆ?' ಎಂದಳು.

'ಹೂಂ.'

'ಹೋಗು. ಕೈಕಾಲು ತೊಳೆದುಕೊಂಡು ತಿಂಡಿ ಕಾಫಿ ತಗೋ' ಎಂದು ಅಜ್ಜಿ ನನ್ನ ಬೆನ್ನು ಸವರಿ ಕಳುಹಿಸಿದಳು.

ನನ್ನ ತಾಯಿ, ತಂದೆಗೆ ನಾನೊಬ್ಬನೇ ಮಗ. ಯಾರ ಅಂಕೆ ಅಜ್ಞೆಯೂ ಇಲ್ಲದೆ ನಾನು ಬೆಳೆದೆ. ನಮ್ಮ ತಂದೆ ಜಮೀನುದಾರರು. ಅವರು ನನಗೆ ಕೈತುಂಬಾ ಹಣ ಕೊಡುತ್ತಿದ್ದರು. ಅವರು ಕಳುಹಿಸಿದ ಹಣವನ್ನೆಲ್ಲಾ ನಾನು ಸಿಗರೇಟು, ಸಿನಿಮಾ, ಹೋಟಲು, ಸೂಟುಗಳಿಗಾಗಿ ಖರ್ಚು ಮಾಡುತ್ತಿದ್ದೆ.

'ಕೈತುಂಬಾ ಕಾಸಿದ್ದಾಗ ಲೈಫ್‌ನ ಎಂಜಾಯ್ ಮಾಡಬೇಕು ಕಣೋ' ಎಂದು ಕೈಲಿ ಕಾಸಿಲ್ಲದ ರಂಗರಾಜು ನನಗೆ ಬುದ್ಧಿವಾದ ಹೇಳುತ್ತಿದ್ದ. ನಾನೂ, ಅವನೂ ಕಾಲೇಜಿನಲ್ಲಿ ಪ್ರಾಣಸ್ನೇಹಿತರಾಗಿದ್ದೆವು. ಹೆಣ್ಣು ಹುಡುಗಿಯರ ಬಗ್ಗೆ ಅಶ್ಲೀಲವಾದ ಹಾಸ್ಯ ಚಟಾಕಿಗಳನ್ನು ಹಾರಿಸುವುದರಲ್ಲಿ ರಂಗರಾಜುವಿನ ಸಮಾನ ಯಾರೂ ಇರಲಿಲ್ಲ. ಅವನ ಸಿಗರೇಟಿನ ಖರ್ಚು, ಸಿನಿಮಾ, ಹೋಟಲಿನ ಖರ್ಚನ್ನೂ ನಾನೇ ವಹಿಸಿಕೊಂಡಿದ್ದೆ.

ರಂಗರಾಜುವಿನ ಸ್ನೇಹ, ಕಾಲೇಜು ಇವುಗಳನ್ನು ಬಿಟ್ಟು ತಿಪಟೂರಿಗೆ ಬಂದಾಗ ನನ್ನ ಹೃದಯ ಭಾರವಾಗಿತ್ತು. ಬೆಂಗಳೂರಿನ ಸುತ್ತಾಟ,

ಹುಡುಗಿಯರನ್ನು ಹಿಂಬಾಲಿಸುವಿಕೆ, ಹಾಲಿವುಡ್ಡಿನ ಚಿತ್ರಗಳು ತಿಪಟೂರಿನಲ್ಲಿ ಎಲ್ಲಿಂದ ಬರಬೇಕು ?

ಒಂದು ವಾರ ಕಷ್ಟಪಟ್ಟು ಹಳ್ಳಿಯಲ್ಲಿ ಕಾಲ ಕಳೆದು, ನಾನು ಬೆಂಗಳೂರಿಗೆ ಹಿಂತಿರುಗಿ ಬಂದೆ.

ಬೆಂಗಳೂರಿಗೆ ಹಿಂತಿರುಗಿ ಬಂದ ಮೂರನೆಯ ದಿನ ನಾನು ನಲ್ಲಿಯ ಬಳಿ ಮುಖ ತೊಳೆಯುತ್ತಿದ್ದಾಗ, ಔಟ್‌ಹೌಸಿನ ಬಾಗಿಲು ತೆಗೆದು ಹುಡುಗಿಯೊಬ್ಬಳು ಈಚೆಗೆ ಬಂದಳು. ಹೊರಗೆ ಬಂದವಳು ಮನೆಯಾತನ ಮಡದಿಯಲ್ಲ. ಯಾರೋ ಅವರ ಮನೆಗೆ ಬಂದಿರುವ ನೆಂಟರಿರಬೇಕೆಂದು ನಾನು ಭಾವಿಸಿದೆ. ಹೊರಗೆ ಬಂದ ಹುಡುಗಿ ಕಪ್ಪಗಿದ್ದುದರಿಂದ ನಾನು ಅವಳ ಕಡೆ ಅಷ್ಟು ಗಮನ ಕೊಡಲಿಲ್ಲ. ಆ ಹುಡುಗಿ ನಲ್ಲಿಯನ್ನು ದಾಟಿ ಹೋಗುವಾಗ ನಾನು ನೇರವಾಗಿ ತಲೆ ಎತ್ತಿ ಅವಳ ಕಡೆ ನೋಡಿದೆ. ಆ ಹುಡುಗಿಯೂ ನನ್ನನ್ನೇ ನೋಡುತ್ತಾ ಒಳಗೆ ಹೋದಳು.

ಹುಡುಗಿ ಕಪ್ಪಗಿದ್ದರೂ ಕಣ್ಣು, ಮೂಗು, ಬಾಯಿ ಇವುಗಳು ಮಾಟವಾಗಿ ಲಕ್ಷಣವಾಗಿದ್ದವು. ಅವಳ ಆರೋಗ್ಯವಾದ, ದುಂಡು ದೇಹ ನನ್ನ ಮನಸ್ಸನ್ನು ಆಕರ್ಷಿಸಿತು. ಕಾಲೇಜಿಗೆ ಬರುತ್ತಿದ್ದ ಹುಡುಗಿಯರಲ್ಲಿ ಮುಕ್ಕಾಲು ಪಾಲು ಜನ ಮೂಳೆ ಮೂಳೆಯಾಗಿ ಬಡಕಲಾಗಿದ್ದರು. ಆದರೆ ಆ ಹುಡುಗಿ ರಸವಾಗಿದ್ದಳು. ಕೃತಕವಾದ ಅಲಂಕಾರ, ಬೆಡಗು ಇವುಗಳಿಂದ ಅವಳು ದೂರವಾಗಿದ್ದಂತೆ ತೋರಿತು. ಅವಳ ನಡಿಗೆ ಗಂಭೀರವಾಗಿತ್ತು. ನಾನು ಅವಳನ್ನು ಮತ್ತೊಂದು ಬಾರಿ ನೋಡಲೆಂದೇ ಸಾವಕಾಶವಾಗಿ ಮುಖ ತೊಳೆಯುತ್ತಾ ನಿಂತುಕೊಂಡೆ. ಅವಳು ಸ್ವಲ್ಪ ಹೊತ್ತಿನ ನಂತರ ಹಿಂತಿರುಗಿ ಬಂದು, ಒಂದು ಕ್ಷಣ ನಿಂತು ಮತ್ತೆ ನನ್ನ ಕಡೆ ನೋಡಿ ತಲೆ ತಗ್ಗಿಸಿ ಹೊರಟುಹೋದಳು.

ಅವಳು ನನ್ನ ಕಡೆ ಎರಡನೆಯ ಬಾರಿ ತಲೆ ಎತ್ತಿ ನೋಡಿದಾಗ ನಾನು ಅವಳನ್ನು ಸರಿಯಾಗಿ ಅರ್ಥಮಾಡಿಕೊಂಡೆ. ಅವಳೊಂದು ನೇರಿಳದ ಹಣ್ಣು.

ನಾನು ಜ್ವಾಲೆ—ಅವಳು ಪತಂಗ.

ಸಾವಕಾಶವಾಗಿ ಗಾಳ ಹಾಕಿದರೆ ಈ ಮೀನು ಗಾಳಕ್ಕೆ ಸಿಕ್ಕಿಹಾಕಿ

ಕೊಳ್ಳುವುದರಲ್ಲಿ ನನಗೆ ಯಾವ ಸಂಶಯವೂ ಉಳಿಯಲಿಲ್ಲ.

ಅದೇಕೋ ನನ್ನ ಹೃದಯ ಡವಡವನೆ ಹೊಡೆದುಕೊಂಡಿತು. ಕೊನೆಗೂ ಹೆಣ್ಣೊಂದರ ಮೇಲೆ ನಾನು ವಿಜಯ ಸಾಧಿಸಿದೆನಲ್ಲಾ ಎಂಬ ಹೆಮ್ಮೆಯಿಂದ ನನ್ನ ಹೃದಯ ತುಂಬಿ ಬಂತು.

ಕನ್ನಡಿಯ ಮುಂದೆ ನಿಂತು ಕ್ರಾಪು ತೀಡಿ, ಕಾಫಿ ಕುಡಿದು ಬರಲು ರೂಮಿಗೆ ಬೀಗ ಹಾಕಿಕೊಂಡು ಹೋಟಲಿಗೆ ಹೊರಟೆ. ನಾನು ಹೋಟಲಿನಲ್ಲಿ ತಿಂಡಿ, ಕಾಫಿ ಮುಗಿಸಿಕೊಂಡು ಹಿಂತಿರುಗಿ ಬಂದಾಗ ಮುಂಭಾಗದ ಗೇಟಿನ ಬಳಿ ಆ ಹುಡುಗಿ ತರಕಾರಿ ವ್ಯಾಪಾರ ಮಾಡುತ್ತಾ ನಿಂತಿದ್ದಳು. ಅವಳೊಡನೆ ಔಟ್‌ಹೌಸಿನ ಒಡತಿಯೂ ನಿಂತಿದ್ದಳು. ಆಕೆಯ ಹೆಸರು ಮಣಿ ಎಂದು ನನಗೆ ತಿಳಿದಿತ್ತು. ಆಕೆಯ ಗಂಡ ಹೆಂಡತಿಯನ್ನು 'ಮಣೀ' ಎಂದು ಕೂಗಿದ್ದನ್ನು ನಾನು ಹಲವು ಬಾರಿ ಕೇಳಿದ್ದೆ.

ಮಣಿಯ ರೂಪನ್ನು ನಾನು ಮೆಚ್ಚಿದ್ದೆ. ಆದರೆ ಮದುವೆಯಾದ ಹುಡುಗಿಯರಲ್ಲಿ ನನಗೆ ಆಸಕ್ತಿಯಿರಲಿಲ್ಲ. ಆದುದರಿಂದ ನಾನು ಮಣಿಯ ಕಡೆ ನನ್ನ ಗಮನವನ್ನು ಹರಿಸಿರಲಿಲ್ಲ. ಮಣಿಯೂ ನನ್ನನ್ನು ಲಕ್ಷಿಸಿರಲಿಲ್ಲ. ಯಾವಾಗಲೂ ಆಕೆ ತಾನು, ತನ್ನ ಗಂಡ, ತನ್ನ ಸಂಸಾರ ಇವುಗಳಲ್ಲಿ ಮಗ್ನಳಾಗಿದ್ದಂತೆ ತೋರಿತು. ಮೂರ್ತಿ, ಮಣಿ ಅನ್ಯೋನ್ಯವಾಗಿರುವುದನ್ನು ನೋಡಿದಾಗಲೆಲ್ಲಾ ನನಗೆ ನಾನೂ, ಚಂದ್ರಳೂ ಮದುವೆಯಾಗಿ ಹಾಗೇ ಇರಬೇಕೆಂಬ ಚಪಲವಾಗುತ್ತಿತ್ತು. ಮರುಗಳಿಗೆಯೇ ಚಂದ್ರಮುಖಿ ನನ್ನ ಕೈಗೆ ಸಿಗದ ಹಕ್ಕಿ ಎಂಬುದು ಅರಿವಿಗೆ ಬಂದು ನನಗೆ ವ್ಯಥೆಯಾಗುತ್ತಿತ್ತು.

ಅವರಿಬ್ಬರೂ ತರಕಾರಿ ವ್ಯಾಪಾರ ಮಾಡುತ್ತಾ ಬಾಗಿಲಿಗೆ ಅಡ್ಡವಾಗಿ ನಿಂತರು. ನಾನು ಒಳಗೆ ಹೋಗಲು ದಾರಿಯಿಲ್ಲದೆ ನನ್ನ ನಡಿಗೆಯನ್ನು ನಿಧಾನಮಾಡಿ ಬಾಗಿಲಿನ ಬಳಿ ಬಂದು ಎಡಗೈಯಿಂದ ನನ್ನ ಕ್ರಾಪನ್ನು ಸರಿಮಾಡಿಕೊಳ್ಳುತ್ತಾ ಆ ಹುಡುಗಿಯ ಕಡೆ ನೋಡಿದೆ.

ಮಣಿ ತಲೆ ತಗ್ಗಿಸಿ ವ್ಯಾಪಾರ ಮಾಡುತ್ತಿದ್ದಳು. ಆ ಹುಡುಗಿ ಕೈಲಿ ಸೊಪ್ಪಿನ ಕಂತೆಗಳನ್ನು ಹಿಡಿದು ನನ್ನ ಕಡೆ ನೋಡಿದಳು. ನಂತರ ಅವಳು ಬಗ್ಗಿ ಮಣಿಯ ಕಿವಿಯಲ್ಲಿ ಪಿಸುಗುಟ್ಟಿದಳು. ಅವರಿಬ್ಬರೂ ಪಕ್ಕಕ್ಕೆ ಸರಿದು

ಒಳಗೆ ಹೋಗಲು ನನಗೆ ಜಾಗ ಬಿಟ್ಟರು. ನಾನು ಅವರ ನಡುವೆ ನುಸುಳಿ ರೂಮಿನ ಬಳಿಗೆ ಬಂದು ಬಾಗಿಲಿನ ಬೀಗ ತೆಗೆದೆ.

ಕಾಲೇಜಿಗೆ ಹೋಗುವ ಸಮಯ ಸಮೀಪಿಸಿದಂತೆ, ನಾನು ನನ್ನ ಫ್ಲ್ಯಾನಲ್ ಶರಾಯಿ, ಬಿಳಿಯ ಶರಟು ಹಾಕಿ ದಿಲೀಪ್‌ಕುಮಾರನಂತೆ ಕ್ರಾಪು ಬಾಚಿ ಹೊರಟೆ. ಔಟ್‌ಹೌಸಿನ ಬಾಗಿಲಿನಲ್ಲಿ ಪತಂಗ ಮಣಿಯೊಡನೆ ಮಾತನಾಡುತ್ತಾ ನಿಂತಿದ್ದಳು. ನಾನು ಬಾಗಿಲಿನ ಚಿಲಕ ಹಾಕುವ ನೆಪದಲ್ಲಿ ಅವಳ ಕಡೆ ನೋಡಿ ಸಣ್ಣಗೆ ಸಿಳ್ಳೆ ಹಾಕುತ್ತಾ ಕಾಲೇಜಿಗೆ ಹೊರಟೆ.

ನನ್ನ, ಅವಳ ಭೇಟಿ ಆಗಾಗ್ಗೆ ನಲ್ಲಿಯ ಬಳಿ, ಕಾಂಪೌಂಡಿನ ಗೇಟಿನ ಬಳಿ, ಒಗೆಯುವ ಕಲ್ಲಿನ ಹತ್ತಿರ ಆಗುತ್ತಿತ್ತು. ಆಗ ಕಣ್ಣುಗಳ ಸಮಾಗಮವಾಗುತ್ತಿತ್ತು. ಒಂದು ದಿನ ಅವಳು ಬಟ್ಟೆ ಒಗೆಯುತ್ತಿದ್ದಾಗ, ನಾನು ಮುಖ ತೊಳೆಯುವ ನೆಪ ಹಾಕಿಕೊಂಡು ನಲ್ಲಿಯ ಬಳಿಗೆ ಹೋದೆ. ಅವಳು ಒಂದು ಸಲ ನನ್ನ ಕಡೆ ನೋಡಿ ಪುನಃ ಬಟ್ಟೆಗಳಿಗೆ ಸೋಪು ಹಾಕತೊಡಗಿದಳು. ಅವಳು ಮತ್ತೊಂದು ಸಾರಿ ತಲೆ ಎತ್ತಿದಾಗ, ನಾನು ಧೈರ್ಯ ಮಾಡಿ ಅವಳ ಮುಖವನ್ನು ನೋಡಿ ನಕ್ಕೆ.

ನನ್ನ ನಗುವನ್ನು ನೋಡಿ ಅವಳು ಗಾಬರಿಯಾಗಿ ಸುತ್ತಲೂ ನೋಡಿದಳು. ಯಾರೂ ಕಣ್ಣಿಗೆ ಬೀಳದಿರುವುದನ್ನು ನೋಡಿ ಅವಳ ಮನಸ್ಸಿಗೆ ಸ್ವಲ್ಪ ಸಮಾಧಾನವಾಗಿರಬೇಕು. ನನ್ನ ನಗುವಿನಲ್ಲಡಗಿದ್ದ ಅರ್ಥ ತಿಳಿದು ಅವಳ ಚಿತ್ತ ಚಂಚಲವಾಗಿರಬೇಕು. ಅವಳ ಕೈ ನಡುಗಿ ಸೋಪು ಜಾರಿ ನೆಲದಮೇಲೆ ಬಿತ್ತು. ಅವಳು ಹುಬ್ಬು ಗಂಟಿಕ್ಕಿ ಸೋಪು ತೆಗೆದುಕೊಳ್ಳಲು ಬಗ್ಗಿದಳು. ಒದ್ದೆಯಾಗಿದ್ದ ಸೋಪು ಅವಳ ಕೈಗೆ ಸಿಕ್ಕದೆ ಮತ್ತೆ ಜಾರಿಕೊಂಡಿತು. ನಾನು ಮುಂದೆ ಬಂದು ಬಗ್ಗಿ ಸೋಪನ್ನು ಕೈಗೆ ತೆಗೆದುಕೊಂಡು

'ತಗೊಳ್ಳಿ' ಎಂದೆ.

'...............'

ನಾನು ಕಲ್ಲಿನ ಮೇಲೆ ಸೋಪನ್ನಿಡಬಹುದೆಂದು ಅವಳು ಭಾವಿಸಿದ್ದಳೇನೋ ? ಆದರೆ ನಾನು ಅವಳ ಎಣಿಕೆಯಂತೆ ಕಲ್ಲಿನ ಮೇಲೆ ಸೋಪ

ನ್ನಿಡಲಿಲ್ಲ. ಅವಳನ್ನು ನೋಡುತ್ತಾ ನನ್ನ ಕೈಲಿ ಸೋಪು ಹಿಡಿದು ನಿಂತೇ ಇದ್ದೆ.

ಅವಳು ಮಣಿಯ ಪ್ರತಿರೂಪವಾಗಿದ್ದಳು. ಆದರೆ ಬಣ್ಣದಲ್ಲಿ ಮಾತ್ರ ಎಂತಹ ವ್ಯತ್ಯಾಸ ! ಮಣಿ ದಂತದ ಪ್ರತಿಮೆಯಿಂದ ನಿರ್ಮಿಸಿದ್ದಂತಿದ್ದಳು. ಇವಳು ಕಪ್ಪು ಬಣ್ಣದ ಮೇಲಿದ್ದಳು. ಆದರೆ ಕೆನ್ನೆ, ಕಣ್ಣುಗಳು ಆರೋಗ್ಯದಿಂದ ಮಿನುಗುತ್ತಿದ್ದವು. ಕೈಗಳು ದುಂಡಗಿದ್ದವು. ಅಂಗಾಂಗಗಳು ಯೌವನದಿಂದ ವಿಕಸಿತವಾಗಿದ್ದವು. ನಾನು ಅವಳನ್ನೇ ನೋಡುತ್ತಾ ನಿಲ್ಲಲ್ಲು, ಅವಳು ಹಿಂಜರಿಯುತ್ತಾ ಕೈ ನೀಡಿದಳು. ನಾನು ಸೋಪನ್ನು ಅವಳ ಅಂಗೈ ಮೇಲಿಟ್ಟು, ನಲ್ಲಿಯಲ್ಲಿ ಕೈ ತೊಳೆದುಕೊಂಡು ನನ್ನ ರೂಮಿನ ಕಡೆ ಹೊರಟೆ. ರೂಮಿನೊಳಗೆ ಹೋಗುವಾಗ ನಾನು ಹಿಂತಿರುಗಿ ನೋಡಿದೆ. ಅವಳು ಬಟ್ಟೆಗೆ ಸೋಪು ಹಾಕುತ್ತಿರಲಿಲ್ಲ. ತನ್ನ ಅಂಗೈ ಮೇಲಿದ್ದ ಸೋಪನ್ನೇ ನೋಡುತ್ತಾ ನಿಂತಿದ್ದಳು. ಮುಖದ ಮೇಲೆ ಅಸಹಾಯಕತೆ, ದೈನ್ಯ, ಏನೋ ಒಂದು ಬಗೆಯ ಹೋರಾಟ ಒಡೆದು ಮೂಡಿದ್ದವು. ನಾನು ಬಾಗಿಲಿನ ಬಳಿ ನಿಂತು ಅವಳನ್ನೇ ದಿಟ್ಟಿಸಿ ನೋಡಿದೆ. ಅವಳು ಎರಡು ಕ್ಷಣ ಹಾಗೆಯೇ ನಿಂತಿದ್ದು, ಏನೋ ಒಂದು ನಿರ್ಧಾರಕ್ಕೆ ಬಂದವಳಂತೆ ತುಟಿ ಕಚ್ಚಿ ಸೋಪನ್ನು ರಭಸದಿಂದ ಬಟ್ಟೆಗೆ ಹಾಕತೊಡಗಿದಳು. ಮಣಿ ಒಳಗಿನಿಂದ ಕೂಗುತ್ತಿದ್ದಳು ' ಅಕ್ಕಾ......... ಅಕ್ಕಾ.........' ಅವಳಿಗೆ ಮಣಿ ಕೂಗಿದುದು ಕೇಳಲಿಲ್ಲವೆಂದು ತೋರುತ್ತದೆ. ಮಣಿ ಮತ್ತೊಮ್ಮೆ ಜೋರಾಗಿ ಕೂಗಿದಾಗ ಅವಳು ಬೆಚ್ಚಿ ಸುತ್ತಲೂ ನೋಡಿ, ನಂತರ ಮನೆಯೊಳಗೆ ಹೋದಳು.

ಹಾಗಾದರೆ ಇವಳು ಮಣಿಗೆ ಅಕ್ಕನೇ ? ಮಣಿಗೆ ಅಕ್ಕನಾಗಬೇಕಾದರೆ ಮದುವೆ ಆಗಿರಬಹುದು. ಆದರೆ ಇವಳಿಗೆ ಮದುವೆ ಆದಂತೆ ನನಗೆ ತೋರಲಿಲ್ಲ. ಅವಳ ಗಲ್ಲ, ಕೆನ್ನೆಗಳು ಪುರುಷನ ಸಂಪರ್ಕದಿಂದ ದೂರವಾಗಿದ್ದಂತೆ ನನಗೆ ತೋರಿತು. ಹಾಗಾದರೆ ತಂಗಿಗೆ ಮದುವೆಯಾಗಿ ಅಕ್ಕನಿಗೆ ಮದುವೆಯಾಗಿಲ್ಲವೇ ? ಅಥವಾ ಚಿಕ್ಕ ವಯಸ್ಸಿನಲ್ಲಿ ಮದುವೆಯಾಗಿ ಈಗ ವಿಧವೆಯಾಗಿರಬಹುದೇ ? ಇರಲಾರದು. ಹಣೆಯಲ್ಲಿ ಕುಂಕುಮವಿತ್ತು. ಮುಡಿಯಲ್ಲಿ ಹೂವಿತ್ತು. ಕಣ್ಣಿನಲ್ಲಿ ಕಾಡಿಗೆಯಿತ್ತು. ಅಥವಾ

ಯಾವುದಾದರೂ ಕಾರಣದಿಂದ ತಂಗಿಗೆ ಮೊದಲು ಮದುವೆ ಮಾಡಿದ್ದರೂ ಮಾಡಿರಬಹುದು..........

ರಂಗರಾಜು ಬಂದು ನನ್ನನ್ನು ಕೂಗಿದಾಗ ನನ್ನ ಯೋಚನಾಸರಣಿ ಕತ್ತರಿಸಿತು.

'ಶಿವ್ರೂ, 'ಗ್ಲೋಬ್'ಲಿ 'ಬೇತಿಂಗ್ ಬ್ಯೂಟಿ' ಬಂದಿದೆ. ಹೋಗೋಣವೇನು?'

'ಅದನ್ನು ನಾನು ಆಗಲೇ ಒಂದು ಸಲ ನೋಡಿದ್ದೀನಿ'

'ಎಷ್ಟು ಸಲ ನೋಡಿದರೂ ಇನ್ನೊಂದು ಸಲ ನೋಡಬೇಕೆನ್ನಿಸುವ ಚಿತ್ರ ಅದು. ಹೋಗಿ ಬರೋಣ ಬಾ'

ನಾನು ಮರುಮಾತನಾಡದೇ ಅವನೊಡನೆ ಹೊರಟೆ. ನಾನೇ ಹಣ ಕೊಟ್ಟು ಎರಡು ಟಿಕೇಟುಗಳನ್ನು ಪಡೆದೆ. ಈ ದಿನ ಚಿತ್ರದಲ್ಲಿ ನನ್ನ ಮನಸ್ಸು ಅಷ್ಟಾಗಿ ನಾಟಲಿಲ್ಲ. ಈಜುವ ತೊಡಿಗೆಯಲ್ಲಿ ಎಸ್ತರ್ ವಿಲಿಯಂಮ್ಸ್ ಕಾಣಿಸಿಕೊಂಡಾಗಲೆಲ್ಲಾ ನನಗೆ ಆ ಹುಡುಗಿಯ ನೆನಪು ಬರುತ್ತಿತ್ತು. ಏನಾದರೂ ಮಾಡಿ ಅವಳನ್ನು ಮಾತನಾಡಿಸಲೇಬೇಕು ಎಂದು ನಾನು ನಿರ್ಧರಿಸಿದೆ.

ನಾನು ಚೆಲುವ ಎಂಬುದು ನನಗೆ ತಿಳಿದಿತ್ತು. ಆದುದರಿಂದಲೇ ನಾನು ಚಂದ್ರಮುಖಿಯ ಬೆನ್ನ ಹಿಂದೆ ಅಲೆದಾಡುವ ಧೈರ್ಯಮಾಡಿದ್ದೆ. ಆದರೆ ಆಕೆಗೆ ಚೆಲುವಾದ ಯುವಕನಿಗಿಂತಲೂ ಶ್ರೀಮಂತ ಯುವಕನಲ್ಲಿ ಹೆಚ್ಚು ಮೋಹವಿದ್ದಂತೆ ತೋರಿತು. ಕಾಲೇಜಿನ ಇತರ ಹುಡುಗಿಯರು ನನ್ನನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಂಡಿರಲಿಲ್ಲ. ನಾನಾಗಿಯೇ ಭಂಡತನ ಮಾಡಿಕೊಂಡುಹೋಗಿ ಮಾತನಾಡಿಸಿದರೆ ನನ್ನ ಪಾಲಿಗೆ ಸಿಕ್ಕುತ್ತಿದ್ದುದು ಒಂದು ಓರೆನೋಟ, ಸಿಹಿನಗೆ ಮಾತ್ರ. ಇವಕ್ಕೂ ಹೆಚ್ಚಿನ ಸಲಿಗೆಯನ್ನು ಪಡೆಯುವುದು ನನಗೆ ಸಾಧ್ಯವಾಗಿರಲಿಲ್ಲ.

ನನ್ನ ರೂಮಿನಬಳಿ ನನ್ನಷ್ಟೇ ದಾಹದಿಂದಿರುವ ಹುಡುಗಿಯನ್ನು ನೋಡಿದಾಗ ನನಗೆ ತುಂಬಾ ಸಂತೋಷವಾಯಿತು. ಅವಳು ಸ್ವಭಾವತಃ ಸ್ವಲ್ಪ ಸಂಕೋಚ ಪ್ರಕೃತಿಯವಳೆಂದು ತೋರಿದುದರಿಂದ ಅವಳಾಗಿಯೇ ಮುಂದು ವರಿಯುವ ಸೂಚನೆಗಳಿರಲಿಲ್ಲ. ಆದುದರಿಂದ ನಾನಾಗಿಯೇ ಅವಳ ಬಳಿ

ಹೋಗಬೇಕೆಂದು ಮನಸ್ಸಿನಲ್ಲಿ ಮಾಡಿಕೊಂಡೆ.

ಒಂದು ದಿನ ರಾತ್ರಿ ಎಂಟೂವರೆಯ ಸಮಯದಲ್ಲಿ ನನಗೆ ತುಂಬಾ ಸೆಕೆಯಾಯಿತು. ನಾನು ರೂಮಿನ ದೀಪ ಆರಿಸಿ, ಬಾಯಲ್ಲಿ ಸಿಗರೇಟು ಕಚ್ಚಿ ರೂಮಿನಿಂದ ಹೊರಗೆ ಬಂದೆ.

ಬೆಳದಿಂಗಳು ಭೂಮಿಯನ್ನು ತಬ್ಬಿ ಮಲಗಿತ್ತು. ನಾನು ಹಿಂಭಾಗದ ಮನೆಯಕಡೆ ನೋಡಿದೆ. ಆ ಹುಡುಗಿ ಬೀದಿ ಬಾಗಿಲನ್ನೊರಗಿ ಕುಳಿತಿದ್ದಳು. ಮನೆಯಲ್ಲಿ ಬೇರಾರೂ ಇದ್ದಂತೆ ತೋರಲಿಲ್ಲ. ಅವಳು ಗಲ್ಲದ ಮೇಲೆ ಕೈಯೂರಿ ಏನೋ ಆಲೋಚನೆ ಮಾಡುತ್ತಿರುವಂತೆ ತೋರಿತು. ಷ್ಟು ವಿಶಾಲ ಪ್ರಪಂಚದಲ್ಲಿ ಅವಳು ಏಕಾಂಗಿ ಎಂದು ನನಗನ್ನಿಸಿತು. ಅವಳ ಮುಖದ ಮೇಲೆ ಏಕಾಂಗಿತನದ ಶೂನ್ಯಛಾಯೆಯಿತ್ತು. ಕಣ್ಣುಗಳು ಏನನ್ನೋ ನಿರೀಕ್ಷಿಸಿ, ಬಯಸಿ ಬಳಲಿದ್ದವು. ಬಳಲಿಕೆಯ ಹಿಂದೆ ವಿಲಾಸದ ತೀಕ್ಷ್ಣದಾಹ ಅವಳನ್ನು ಸಜೀವವಾಗಿ ಸುಡುತ್ತಿತ್ತು.

ನಾನು ಎವೆಯಿಕ್ಕದೇ ಅವಳನ್ನೇ ದಿಟ್ಟಿಸಿ ನೋಡಿದೆ. ಬಾಗಿಲೊರಗಿ ಒಂಟಿಯಾಗಿ ಕುಳಿತಿದ್ದ ಕಪ್ಪು ಚಲುವೆ ನನ್ನ ಕಣ್ಣಿಗೆ ತುಂಬಾ ಆಕರ್ಷಣೀಯವಾಗಿ ಕಂಡಳು. ಇದು ಬಾರದ ನಲ್ಲನ ನಿರೀಕ್ಷೆಯೋ ?

ಬಯಕೆಯ ಭಾರದಿಂದ ಅವಳ ಕಣ್ಣುಗಳು ನಿಧಾನವಾಗಿ ಮುಚ್ಚಿಕೊಂಡವು. ನಾನು ಸದ್ದುಮಾಡದೇ ಅವಳು ಕುಳಿತಿದ್ದ ಬಳಿ ನಿಂತು

‘ ದಯವಿಟ್ಟು ಗಂಟೆ ಎಷ್ಟಾಗಿದೆ ಹೇಳುತ್ತೀರಾ ? ನನ್ನ ಗಡಿಯಾರ ನಿಂತುಹೋಗಿದೆ ’ ಎಂದೆ.

ಅವಳು ಬೆಚ್ಚಿಬಿದ್ದು ಕಣ್ಣುಗಳನ್ನು ಅಗಲವಾಗಿ ತೆರೆದು ನನ್ನಕಡೆ ನೋಡಿದಳು. ನನ್ನ ಕೆದರಿದ ಗುಂಗರುಕೂದಲು, ಚಲುವಾದ ಮುಖ ಅವಳ ಕಣ್ಣಿಗೂ ಮೋಹಕವಾಗಿ ಕಂಡಿರಬೇಕು. ಅವಳು ಮೆಚ್ಚುಗೆಯಿಂದ ನನ್ನಕಡೆ ಒಂದುಕ್ಷಣ ನೋಡಿದಳು. ಮರುಗಳಿಗೆ ಮೆಚ್ಚುಗೆ ಅವಳ ಕಣ್ಣಿನಿಂದ ಮರೆಯಾಗಿ ಭಯ, ಕಳವಳ ಇಣುಕಿ ನೋಡಿದವು. ಅವಳ ಹುಬ್ಬುಗಳು ಸಂಕುಚಿತವಾದವು. ಅವಳು ತುಟಿಕಚ್ಚಿ ಎದ್ದು ನಿಂತಳು. ಮರುಗಳಿಗೆಯೇ ಬಾಗಿಲು ರಪ್ಪೆಂದು ಹಾಕಿಕೊಂಡಿತು.

ನನಗೆ ಮುಖಕ್ಕೆ ಹೊಡೆದಂತಾಯಿತು. ನಾನು ಸೋತೆ ಎಂದು

ಕೊಂಡು ಹಿಂತಿರುಗಿ ನನ್ನ ರೂಮಿನ ಬಳಿಗೆ ಬಂದೆ. ಮಣಿ, ಮೂರ್ತಿ ಬೆಳದಿಂಗಳಿನ ವಾಯುವಿಹಾರ ಮುಗಿಸಿಕೊಂಡು ಆದೇತಾನೆ ಒಳಗೆ ಬರುತ್ತಿದ್ದರು. ನಾನು ಸಿಗರೇಟಿನ ಚೂರನ್ನು ಕಿಟಕಿಯಿಂದಾಚೆ ಎಸೆದು ಮಲಗಿಕೊಂಡೆ. ಅವಳ ಚಿತ್ರ ಮತ್ತೆ ನನ್ನೆದುರಿಗೆ ನಿಂತಿತು. ಅವಳ್ಳು ಬಾಗಿಲೇಕೆ ಹಾಗೆ ಹಾಕಿಕೊಂಡಳು ? ಅವಳಿಗೆ ನನ್ನಲ್ಲಿ ವಿಶ್ವಾಸವಿರ ಲಿಲ್ಲವೇ ? ಅಥವಾ ತನ್ನಲ್ಲೇ ನಂಬಿಕೆ ಸಾಲದಾಯಿತೇ ? ಇದು ನನ್ನ ಸೋಲೇ ಅಥವಾ ಗೆಲುವಿನ ಪ್ರಥಮ ಹೆಜ್ಜೆಯೇ ? ನಾಳೆ ಮೂರ್ತಿ ಈ ವಿಷಯವಾಗಿ ನನ್ನನ್ನು ತರಾಟೆಗೆ ತೆಗೆದುಕೊಂಡರೆ ನಾನು ಇನ್ನು ಅವಳ ತಂಟೆಗೆ ಹೋಗುವುದಿಲ್ಲ. ಅವಳು ಮೂರ್ತಿಗೆ ಯಾವ ವಿಷಯವನ್ನೂ ತಿಳಿಸದಿದ್ದರೆ ಒಂದಲ್ಲ ಒಂದುದಿನ ನಾನು ಅವಳನ್ನು ಗೆಲ್ಲುತ್ತೇನೆ.

ಮರುದಿನ ಬೆಳಗ್ಗೆ ನಾನು ಎದ್ದಾಗ ನನ್ನ ಹೃದಯ ಅಧೀರವಾಗಿತ್ತು. ಯಾವ ಗಳಿಗೆಯಲ್ಲಿ ಮೂರ್ತಿ ಬಂದು ನನ್ನೊಡನೆ ಜಗಳ ಕಾಯುವರೋ ಎಂಬ ಭಯ ನನ್ನಲ್ಲಿತ್ತು. ನಾನು ಅನುಮಾನ, ದಿಗಿಲಿನಿಂದಲೇ ನಲ್ಲಿಯ ಬಳಿ ಹೋದೆ.

ಮೂರ್ತಿ ಮನೆಯ ಮುಂಬಾಗಿಲಿನಲ್ಲಿ ನಿಂತಿದ್ದರು. ಅವಳು ನಲ್ಲಿಯ ಬಳಿ ಕೊಡವೊಂದನ್ನಿರಿಸಿ ನೀರು ಹಿಡಿಯುತ್ತಿದ್ದಳು. ನನ್ನ ಮುಖ ಕಂಡೊಡನೆ ಮೂರ್ತಿ ರುದ್ರಮೂರ್ತಿಯಾಗುವರೆಂದು ನಾನು ಭಾವಿಸಿದ್ದೆ. ಆದರೆ ನನ್ನ ಭಾವನೆ ಸುಳ್ಳಾಯಿತು. ಮೂರ್ತಿ ನನ್ನ ಮುಖ ನೋಡಿ

' ಶಿವಸ್ವಾಮಿಗಳಿಗೆ ಬೆಳಗಾಯಿತೇನೋ ?' ಎಂದರು.

' ಹೂಂ. ಗಂಟೆ ಎಷ್ಟು ಮೂರ್ತಿಗಳೇ ? ನನ್ನ ಗಡಿಯಾರ ನಿಂತು ಹೋಗಿದೆ ' ಮರೆತ ವಿಷಯವನ್ನು ಜ್ಞಾಪಿಸುವವನಂತೆ ನಾನು ಕೇಳಿದೆ. ಮೂರ್ತಿ ಹಿಂತಿರುಗಿ ನೋಡಿ

' ಏಳೂಮುಕ್ಕಾಲಾಗಿದೆ ' ಎಂದರು.

ನಾನು ಗೆಲುವಿನಿಂದ ನೀರು ಹಿಡಿಯುತ್ತಾ ನಿಂತಿದ್ದ ಹುಡುಗಿಯ ಕಡೆ ನೋಡಿದೆ. ಅದುವರೆವಿಗೂ ನನ್ನನ್ನು ನೋಡುತ್ತಿದ್ದ ಹುಡುಗಿ ನಾನು ಅವಳ ಕಡೆ ತಿರುಗಿದ ಕೂಡಲೇ ತಲೆ ಬಗ್ಗಿಸಿ ಕೊಡದ ಕಡೆ ನೋಡಿದಳು. ಕೊಡ ತುಂಬಿ ನೀರು ಕೊಡದಿಂದ ಹರಿದು ಹೋಗುತ್ತಿತ್ತು. ಅವಳು

ಎಚ್ಚರಗೊಂಡು ನಲ್ಲಿಯನ್ನು ನಿಲ್ಲಿಸಿ, ಕೊಡವನ್ನೆತ್ತಿ ಸೊಂಟದ ಮೇಲಿರಿಸಿ ಕೊಂಡು ಬಚ್ಚಲು ಮನೆಯ ಕಡೆ ಹೊರಟಳು. ಹಾಗೆ ಹೋಗುವಾಗ ಮತ್ತೆ ನನ್ನ ಕಡೆ ನೋಡುವುದನ್ನು ಮರೆಯಲಿಲ್ಲ. ನಯನಮಿಲನಕ್ಕಾಗಿಯೇ ಕಾದಿದ್ದ ನಾನು ನಗೆಬಾಣವೊಂದನ್ನು ಅವಳ ಕಡೆಗೆ ಎಸೆದೆ.

ಒಂದು ಕ್ಷಣ ಅವಳ ಮುಖ ಕೆಂಪೇರಿ ತಟ್ಟನೆ ಬೆಳ್ಳಗಾಯಿತು. ನಡಿಗೆಯ ಅಸ್ಥಿರತೆಯಿಂದಾಗಿ ಕೊಡದ ನೀರು ತುಳುಕಿ ಅವಳ ಸೀರೆಯೆಲ್ಲ ಒದ್ದೆಯಾಯಿತು. ಈಜುವ ತೊಡಿಗೆಯಲ್ಲಿನ ಎಸ್ತರ್ ವಿಲಿಯಂಸ್ ನನ್ನ ಕಣ್ಣಮುಂದೆ ತೇಲಿ ಬಂದಳು.

ಅವಳೇ ಸೋತಿರುವವಳು ಎಂಬುದು ನನಗೆ ಈಗ ಖಚಿತವಾಯಿತು. ನಾಲ್ಕುಕಡೆ ನಿಟ್ಟಿಸುತ್ತಾ ಹೆಜ್ಜೆ ಹೆಜ್ಜೆಗೂ ನನ್ನನ್ನೇ ಪರೀಕ್ಷಿಸಿಕೊಂಡು, ಅವಳನ್ನೂ ಪರೀಕ್ಷಿಸುತ್ತಾ ನಾನು ಒಂದೊಂದು ಹೆಜ್ಜೆಯಾಗಿ ಅವಳ ಕಡೆ ಮುಂಬರಿದೆ. ಮೊದಲು ಅವಳು ಹಿಂಜರಿಯುವಂತೆ ತೋರಿತು. ತಾನು ಹಿಂದೆ ಸರಿದರೆ ನಾನು ನನ್ನ ಪ್ರಯತ್ನವನ್ನು ಬಿಟ್ಟುಕೊಡಬಹು ದೆಂದು ಅವಳು ಭಾವಿಸಿದ್ದಳೇನೋ ? ಆದರೆ ಅವಳ ಹಿಂಜರಿಯುವಿಕೆ ಯಲ್ಲಿ ಅಸಮ್ಮತಿ ಇರಲಿಲ್ಲ. ಅವಳು ಹಿಂದೆ ಸರಿದಾಗ ಅದರಲ್ಲಿ ನನಗೆ ಇತರರ ಭಯ, ದಿಗಿಲಿದ್ದಂತೆ ತೋರಿತೇ ಹೊರತು ಅವಳು ನನ್ನ ವರ್ತನೆ ಯನ್ನು ಸ್ವಲ್ಪವೂ ಒಪ್ಪಿಲ್ಲ ಎಂಬ ಕುರುಹು ಸಹ ಇದ್ದಿರಲಿಲ್ಲ. ಅದು ದರಿಂದ ನಾನು ಅತ್ಯಂತ ಎಚ್ಚರಿಕೆಯಿಂದ ಒಂದು ಹುಲ್ಲುಕಡ್ಡಿಯಷ್ಟು ಮಾತ್ರ ಮುಂದುವರಿದು ಅವಳನ್ನು ಪರೀಕ್ಷಿಸಿದೆ. ನಾನು ಮುಂದೆ ಸರಿ ದಂತೆ ಅವಳು ಹಿಂಜರಿಯಲಿಲ್ಲ. ಬದಲು ನಿಂತ ಸ್ಥಳದಲ್ಲಿಯೇ ನಿಂತು ನನ್ನನ್ನು ಹೆದರಿಸಿ ಓಡಿಸಲು ಪ್ರಯತ್ನಿಸಿದ್ದಳು. ನಾನು ಅವಳನ್ನು ನೋಡಿ ನಕ್ಕಾಗ, ಅವಳು ಸುಳಿದೆಡೆಯಲ್ಲಿ ಸುಳಿದು ಕೆಮ್ಮಿದಾಗ, ಒಂದೆ ರಡು ಬಾರಿ ಮಾತನಾಡಿಸಲು ಪ್ರಯತ್ನಿಸಿದಾಗ ಅವಳು ಹುಬ್ಬುಗಂಟಿ ಕ್ಕಿಯೋ, ಮುಖ ತಿರುಗಿಸಿಯೋ, ಹಲ್ಲುಮುಡಿ ಕಚ್ಚಿಯೋ, ಬಾಗಿಲನ್ನು ರಪ್ಪೆಂದು ಹಾಕಿಯೋ ನನ್ನನ್ನು ಹಿಂದೂಡಲು ಪ್ರಯತ್ನಿಸಿದಳು. ಆದರೆ ಕ್ಷಣಕ್ಷಣಕ್ಕೂ ಅವಳು ಸೋಲುತ್ತಿದ್ದಾಳೆ ಎಂದು ತಿಳಿದಿದ್ದ ನಾನು ಧೈರ್ಯವಾಗಿ ಅವಳನ್ನು ಎದುರಿಸಲು ಮನಸ್ಸುಮಾಡಿದೆ. ಅವಳ

ಹುಬ್ಬುಗಂಟಿಗೆ ನಾನು ಹೆದರದಿರುವುದನ್ನು ನೋಡಿ ಅವಳು ನನ್ನನ್ನು ಹೆದರಿಸುವ ಪ್ರಯತ್ನವನ್ನು ಬಿಟ್ಟಳು. ಅನಂತರ ಅವಳು ನನ್ನನ್ನು ಪ್ರೋತ್ಸಾಹಿಸಲೂ ಇಲ್ಲ, ನಿರುತ್ಸಾಹಗೊಳಿಸಲೂ ಇಲ್ಲ. ಅವಳು ನಿಂತ ಸ್ಥಳದಲ್ಲಿಯೇ ನಿಂತು, ನನ್ನ ನಡವಳಿಕೆಯನ್ನು ಕಂಡೂ ಕಾಣದವಳಂತೆ ಇದ್ದುಬಿಟ್ಟಳು.

ನಾನು ಮಾತನಾಡಿಸಲು ಪ್ರಯತ್ನಿಸಿದಾಗ ಅವಳು ನನ್ನ ಮಾತಿಗೆ ಉತ್ತರವನ್ನೂ ಕೊಡುತ್ತಿರಲಿಲ್ಲ, ಬಾಗಿಲನ್ನು ಮುಖದ ಮೇಲೆ ಹೊಡೆಯುವ ಹಾಗೆ ಹಾಕಿಕೊಳ್ಳುತ್ತಲೂ ಇರಲಿಲ್ಲ. ಅವಳ ಔದಾಸೀನ್ಯದಿಂದ ಮೊದಲು ನಾನು ನಿರಾಶನಾದೆ. ನಾನು ಅವಳನ್ನು ಹಿಡಿಯಲು ಹೊರಟಿರುವ ದಾರಿಯೇ ತಪ್ಪೇನೋ ಎಂದು ನನಗೆ ಭ್ರಮೆಯುಂಟಾಯಿತು.

ಒಂದು ದಿನ ಮೂರ್ತಿ ತಮ್ಮ ಮಿಲ್ಲಿನ ಕೆಲಸಕ್ಕೆ ಹೋಗಿದ್ದ. ಅವನು ಮಧ್ಯಾನ ಒಂದು ಗಂಟೆಯ ಮೇಲೆ ಮನೆಗೆ ಹಿಂತಿರುಗಿ ಬರುವರೆಂಬುದು ನನಗೆ ತಿಳಿದಿತ್ತು. ನಾನು ತಲೆನೋವಿನ ನೆಪ ಹಾಕಿಕೊಂಡು ಕಾಲೇಜಿಗೆ ಹೋಗಿರಲಿಲ್ಲ.

ಅವಳು ಬಾಗಿಲಿನ ಬಳಿ ಕುಳಿತು ಅಕ್ಕಿಯಾರಿಸುತ್ತಿದ್ದಳು. ನಾನು ಏನಾದರೂ ಕಾರಣ ಹುಡುಕಿ ಅವಳನ್ನು ಮಾತನಾಡಿಸಲೇಬೇಕೆಂದು ನಿಶ್ಚಯ ಮಾಡಿದೆ. ರೂಮಿನಲ್ಲಿ ಕುಳಿತು ಸ್ವಲ್ಪ ಹೊತ್ತು ಯೋಚಿಸಿದ ಮೇಲೆ, ಅವಳನ್ನು ಮಾತನಾಡಿಸಲು ನೆಪವೊಂದು ಸಿಕ್ಕಿತು.

ನಾನು ಎದ್ದು ರೂಮಿನ ಬಾಗಿಲನ್ನು ಹಾಗೆಯೇ ಮುಂದಕ್ಕೆಳೆದುಕೊಂಡು ಅವರ ಮನೆಯ ಬಳಿ ನಿಂತು

'ಮೂರ್ತಿಗಳೇ' ಎಂದು ಕೂಗಿದೆ.

ಅವಳು ಚಕಿತಳಾಗಿ ತೊಡೆಯ ಮೇಲೆ ಮೊರವಿದ್ದುದನ್ನೂ ಮರೆತು ಎದ್ದುನಿಂತಳು. ಮೊರ ನೆಲದ ಮೇಲೆ ಬಿದ್ದು ಅದರಲ್ಲಿದ್ದ ಅಕ್ಕಿ ಚೆಲ್ಲಿತು. ಅವಳು ನೆಲದ ಮೇಲೆ ಚೆಲ್ಲಿದ ಅಕ್ಕಿಯ ಕಡೆ ದೃಷ್ಟಿ ಹಾಯಿಸಿ ಮತ್ತೆ ಪ್ರಶ್ನಾರ್ಥಕವಾಗಿ ನನ್ನ ಕಡೆ ನೋಡಿದಳು.

'ಮೂರ್ತಿ ಇದಾರೆಯೇ ?'

ಅವಳು ಬಾಗಿಲು ಹಾಕಬಹುದು, ನನಗೆ ಉತ್ತರ ಕೊಡದೇ

ಹೊರಟು ಹೋಗಬಹುದು ಎಂದು ನಾನು ನಿರೀಕ್ಷಿಸಿದ್ದೆ. ಅವಳು ಆದಾವುದನ್ನೂ ಮಾಡದೆ ಪ್ರತಿಮೆಯಂತೆ ಸುಮ್ಮನೆ ನಿಂತುಕೊಂಡಳು. ನಿಶ್ಚಲವಾಗಿ ನಿಂತಿದ್ದ ದೇಹದೊಳಗೆ ಜ್ವಾಲಾಮುಖಿಯೊಂದು ಹೊಗೆಯಾಡುತ್ತಿತ್ತು, ಸಾಗರವೊಂದು ಭೋರ್ಗರೆಯುತ್ತಿತ್ತು, ಪ್ರವಾಹವೊಂದು ಕಟ್ಟೆಯನ್ನೊಡೆಯುವುದರಲ್ಲಿತ್ತು. ಪ್ರವಾಹದ ರಭಸಕ್ಕೆ ಹೋರಾಟ, ಪ್ರತಿಭಟನೆಯ ದಡ ಕುಸಿದು ಬೀಳುವುದರಲ್ಲಿತ್ತು.

'ಮೂರ್ತಿ ಇದಾರೆಯೇ?'

ನಾನು ಅತ್ಯಂತ ಮೃದುವಾಗಿ ಕೇಳಿದೆ. ಇನ್ನೇನು ನಿದ್ದೆ ಹೋಗಲಿರುವ ಮಗುವನ್ನು ತಾಯಿ ತಟ್ಟುವಂತೆ, ತೂಗುವಂತೆ ನಾನು ಅವಳನ್ನು ಮಾತನಾಡಿಸಿದೆ. ಕಪ್ಪು ಮುಖದಲ್ಲಿ ಅವಳ ಕಣ್ಣುಗಳು ಮಿಂಚಿನ ಉಂಡೆಗಳಂತೆ ಪ್ರಕಾಶಿಸುತ್ತಿದ್ದವು. ಕಪ್ಪಾದರೂ ಏನು ಕೋಮಲ ಕಾಯ! ಎಂಥ ಲಾಲಿತ್ಯ!

'ಮೂರ್ತಿಯವರನ್ನು ನೋಡಬೇಕಾಗಿದೆ.'

ಅವಳು ಮಿಂಚುಗಣ್ಣಿನ ಮೇಲೆ ನೀಳ್ರೆಪ್ಪೆಯ ತೆರೆ ಎಳೆದು

'ಅವರಿಲ್ಲ' ಎಂದಳು.

'ಒಂದು ಸಾರಿಡಾನ್ ಇದ್ದಿದ್ದರೆ ಬೇಕಾಗಿತ್ತು. ಮನೆಯವರು....'

'ಮಣಿ ನಿದ್ದೆ ಮಾಡ್ತಿದಾಳೆ.'

ಈ ಮಾತಿನ ಅರ್ಥವೇನು? ಮೂರ್ತಿ ಮನೆಯಲ್ಲಿಲ್ಲ, ಮಣಿ ನಿದ್ದೆ ಮಾಡ್ತಿದಾಳೆ. ಸಮಯ ಸರಿಯಾಗಿದೆ ಎಂಬರ್ಥವೇ?

'ಮೂರ್ತಿ ಎಷ್ಟು ಹೊತ್ತಿಗೆ ಬರ್ತಾರೆ?'

'ಗೊತ್ತಿಲ್ಲ........ಇನ್ನೇನು ಬರಬಹುದು.'

'ಸುಮ್ಮನೆ ನಿಮಗೆ ತೊಂದರೆ ಕೊಟ್ಟ ಹಾಗಾಯಿತು' ಎನ್ನುತ್ತಾ ನಾನು ಚೆಲ್ಲಿದ ಆಕ್ಕಿಯನ್ನೊಂದು ಬಾರಿ ನೋಡಿ, ಮತ್ತೆ ಅವಳ ಕಡೆ ತಿರುಗಿ ಅರ್ಥಗರ್ಭಿತವಾಗಿ ನಕ್ಕೆ.

ನಗೆಮೊಗ್ಗೊಂದು ಅವಳ ತುಟಿಯಂಚಿನಲ್ಲಿ ಮೂಡಿ ಅರೆಬಿರಿದು, ಮತ್ತೆ ಮುದುಡಿ ಮರೆಯಾಯಿತು.

'ಹಾಗಾದರೆ ಮೂರ್ತಿ ಬಂದ ಮೇಲೆ ಬರುತ್ತೇನೆ........' ಎನ್ನುತ್ತಾ

ನಾನು ಹೊರಡಲು ಸಿದ್ಧನಾದೆ.

ಏನೋ ಹೇಳುವಂತೆ ಅವಳ ತುಟಿ ಚಲಿಸಿತು. ಹೊರಟು ನಿಂತಿದ್ದ ನನ್ನನ್ನು ತಡೆದು ನಿಲ್ಲಿಸುವಂತೆ ಅವಳು ಒಂದು ಹೆಜ್ಜೆ ಮುಂದೆ ಬಂದಳು. ಆದರೆ ಗಂಟಲಿನಿಂದ ಸದ್ದು ಹೊರಡಲಿಲ್ಲ. ಕಾಲು ಮತ್ತೊಂದು ಹೆಜ್ಜೆ ಮುಂದೆ ಬರಲಿಲ್ಲ. ಆದರೆ ಅಂತರಂಗದ ಸಂದೇಶವನ್ನು ಅವಳ ಕಣ್ಣುಗಳು ಕೂಗಿ ಹೇಳಿದವು–'ನಾನು ನಿನ್ನ ಬಂದಿ.'

ಅವಳು ಯಾವಾಗ ಬೇಕಾದರೂ ನನ್ನ ವಶಳಾಗಬಲ್ಲಳೆಂದು ನನಗೆ ಖಾತ್ರಿಯಾಯಿತು. ಆದರೆ ನಾನು ಸರಿಯಾದ ಸಮಯಕ್ಕಾಗಿ ಹೊಂಚು ಹಾಕತೊಡಗಿದೆ.

ಈ ಬಗೆಯ ಕಣ್ಣಾಮುಚ್ಚಾಲೆಯಾಟ ಸುಮಾರು ಎರಡು ತಿಂಗಳು ನಡೆಯಿತು. ಅವಳ ಸಂಗಕ್ಕಾಗಿ ನನ್ನ ಮನಸ್ಸು ಕಾತರಗೊಂಡಷ್ಟೂ, ರಂಗ ರಾಜುವಿನ ಸ್ನೇಹ ನನಗೆ ಬೇಕಿಲ್ಲವಾಯಿತು. ನಾನು ಸಿನಿಮಾ, ಕಾಲೇಜು ಇವುಗಳಿಂದ ದೂರವಾಗಿ ಯಾವಾಗಲೂ ನನ್ನ ರೂಮಿನಲ್ಲಿರಲು ಬಯಸು ತ್ತಿದ್ದೆ. ಕಾರಣ ನನ್ನ ರೂಮಿನ ಕಿಟಕಿಯಿಂದ ಹಿಂಭಾಗದಲ್ಲಿದ್ದ ಮನೆ ಚೆನ್ನಾಗಿ ಕಾಣುತ್ತಿತ್ತು. ಆ ಹುಡುಗಿ ಬಳುಕುತ್ತಾ ಮನೆಯಲ್ಲಿ ಓಡಾಡು ವುದು, ಕೆಲಸ ಮಾಡುವುದೆಲ್ಲಾ ನನ್ನ ಕಣ್ಣಿಗೆ ಕಾಣಿಸುತ್ತಿತ್ತು. ಅವಳೂ ಆಗಾಗ್ಗೆ ನನ್ನ ರೂಮಿನ ಕಿಟಕಿಯ ಕಡೆ ನೋಡುತ್ತಿದ್ದಳು. ನನ್ನ ರೂಮಿನ ಕಡೆ ನೋಡಿ ನಂತರ ತುಟಿ ಕಚ್ಚಿ, ಸುತ್ತಲೂ ನೋಡಿ ಪುನಃ ಕಿಟಕಿಯನ್ನು ದಿಟ್ಟಿಸುತ್ತಿದ್ದಳು. ಅವಳ ಶರೀರದೊಳಗೆ ಕಿಡಿ ಪ್ರವೇಶ ಮಾಡಿತ್ತು. ಅದು ನಿಧಾನವಾಗಿ ಅಂತರಂಗ, ಶರೀರವನ್ನೆಲ್ಲಾ ವ್ಯಾಪಿಸಿ ಬರುತ್ತಿದ್ದುದು ಅವಳ ಚಲನವಲನಗಳಿಂದ ನನಗೆ ತಿಳಿಯಿತು. ಯಾಕೆಂದರೆ ಅದೇ ಕಿಡಿಯಿಂದ ನಾನೂ ದಹಿಸಿಹೋಗುತ್ತಿದ್ದೆ.

ಹಗಲುಗನಸಿನಲ್ಲಿ ನಾನು ತನ್ಮಯನಾಗಿದ್ದ ರಂಗರಾಜು ಬಂದು ನನ್ನ ಏಕಾಂತಕ್ಕೆ ಭಂಗ ತರುತ್ತಿದ್ದ. ಸ್ವಪ್ನಭಂಗವಾದಾಗ ನನಗೆ ಅವನ ಮೇಲೆ ತುಂಬಾ ಕೋಪ ಬರುತ್ತಿತ್ತು.

ಒಂದು ಭಾನುವಾರ ಮಧ್ಯಾಹ್ನ ನಾನು ಕಿಟಕಿಯ ಬಳಿ ಓದುವ ಸೋಗು ಹಾಕಿ, ಕೈಲೊಂದು ಪುಸ್ತಕ ಹಿಡಿದು ಕುಳಿತಿದ್ದೆ. ಅವಳು ಹಿಂಭಾ

ಗದಲ್ಲಿದ್ದ ಮಾವಿನ ಮರದ ಕೆಳಗೆ ಏನನ್ನೋ ಕೇರುತ್ತಾ ನಿಂತಿದ್ದಳು. ನಮ್ಮಿಬ್ಬರ ಕಣ್ಣುಗಳ ಸಮಾಗಮವಾಗಿತ್ತು.

ನಾನು ಮುಗುಳುನಗೆಯೊಂದನ್ನು ಬೀರಿ ಅವಳನ್ನು ಆಹ್ವಾನಿಸಲು ಪ್ರಯತ್ನಿಸುತ್ತಿದ್ದೆ. ಅಷ್ಟರಲ್ಲಿ ನನ್ನ ರೂಮಿನ ಬಾಗಿಲು ತಟ್ಟಿದ ಸದ್ದಾಯಿತು. ಸದ್ದಿನ ಹಿಂದೆಯೇ ರಂಗರಾಜುವಿನ ದನಿ ಕೇಳಿಸಿತು.

'ಶಿವೂ.........ಶಿವಸ್ವಾಮೀ........'

ನನಗೆ ರಂಗರಾಜುವಿನ ಮೇಲೆ ಕೋಪ ಬಂತು. ಅವನ ಕರೆಗೆ ಉತ್ತರ ಕೊಡಬಾರದೆಂದು ಮನಸ್ಸು ಮಾಡಿ ಸುಮ್ಮನೆ ಕುಳಿತೆ. ಆದರೆ ಆ ಮಹರಾಯ ಸುಮ್ಮನಾಗಬೇಕಲ್ಲ? ಅವನು ನನ್ನ ಹೆಸರು ಹಿಡಿದು ಕೂಗುತ್ತಾ, ಬಾಗಿಲನ್ನು ಧಬಧಬನೆ ಬಡಿಯತೊಡಗಿದ. ಹಾಳಾದ ಪೀಡೆಯನ್ನು ಏನಾದರೂ ನೆಪ ಹಾಕಿ ತೊಲಗಿಸೋಣವೆಂದುಕೊಂಡು ಎದ್ದು ಬಾಗಿಲನ್ನು ತೆಗೆದೆ.

'ಏನಯ್ಯಾ ಕುಂಭಕರ್ಣ, ಎಷ್ಟು ಸಲ ನಿನ್ನ ಕೂಗಬೇಕು?'

'ಚೆನ್ನಾಗಿ ನಿದ್ದೆ ಬಂದುಬಿಟ್ಟಿತ್ತು ಕಣೋ'

'ಕನಸಿನಲ್ಲಿ ಯಾರು ಬಂದಿದ್ದರು?'

'ನಿನಗೆ ಯಾವಾಗಲೂ ಹಾಸ್ಯ. ಅದಿರಲಿ ಏನು ಸಮಾಚಾರ?'

'ರೋಮನ್ ಹಾಲಿಡೇ'ಯ ರಾಜಕುಮಾರಿ ಸ್ಯಾಬ್ರಿನಾ'ಳಾಗಿ ಬಂದಿದಾಳೆ.'

'ನಾನು ಬರೋದಿಲ್ಲಪ್ಪ. ತುಂಬಾ ತಲೆ ನೋಯುತ್ತಿದೆ.'

'ಪಿಕ್ಚರ್ ನೋಡಿದರೆ ತಲೆ ನೋವು ಹೊರಟು ಹೋಗುತ್ತದೆ.'

'ನನಗೇನೋ ಆ ನಟಿಯೆಂದರೆ ಆಗದು. ಅಸ್ಥಿಪಂಜರ ನೋಡೋಕೆ ಕಾಸು ಕೊಟ್ಟು ಹೋಗಬೇಕೆ? ಇನ್ನೂ ಮೇರಿಲಿನ್ ಮನ್ರೋ ಆಗಿದ್ದರೆ....'

'ನಿನ್ನ ತಲೆ. ನಿನಗೆ ಸೌಂದರ್ಯಜ್ಞಾನ ಇದ್ದಿದ್ದರೆ ಎಷ್ಟೋ ಆಗಿತ್ತು. ಅವಳ ಕಣ್ಣು ನೋಡೋಕೆ ನಮ್ಮೆರಡು ಕಣ್ಣು ಸಾಲದು.'

'ನಾನಂತೂ ಬರೋದಿಲ್ಲ.'

ನನ್ನ ಮಾತು ಕೇಳಿ ರಂಗರಾಜುವಿಗೆ ಆಶ್ಚರ್ಯವಾಯಿತು. ಸಿನಿಮಾ

ನೋಡಲು ನಾನೆಂದೂ ಬೇಡವೆಂದವನಲ್ಲ. ರಂಗರಾಜು ನನ್ನ ಭುಜದ ಮೇಲೆ ಕೈಯೂರಿ

'ಲೋ ನಿನಗೆ ಏನಾಗಿದೆಯೋ ? ಇಷ್ಟು ದಿವಸ ಸರಿಯಾಗಿದ್ದೆ. ಈಗ ಏನಾಯಿತು ?' ಎಂದು ಕೇಳಿದ.

'ನನಗೆ ನಿಜವಾಗಿಯೂ ತಲೆನೋವು ಬಂದಿದೆ. ನಾನು ಬರೋದಿಲ್ಲ.'

ರಂಗರಾಜು ಜೇಬಿನಿಂದ ಸಿಗರೇಟು ಪ್ಯಾಕನ್ನು ತೆಗೆದು ನನ್ನ ಮುಂದೆ ಹಿಡಿದು 'ಒಂದು ಸಿಗರೇಟು ಸೇದಿಬಿಡು. ತಲೆನೋವು ಹೊರಟು ಹೋಗುತ್ತದೆ' ಎಂದ. ನಾನು ಅಸಹನೆಯಿಂದ

'ಬೇಡ' ಎಂದು ಸಿಡುಕಿದೆ.

ರಂಗರಾಜು ಮಂಚದ ಮೇಲೆ ದೊಪ್ಪನೆ ಕುಳಿತು 'ಡಾಕ್ಟರ ಹತ್ತಿರ ಹೋಗೋಣ ಬಾ' ಎಂದ.

'ಯಾವ ಡಾಕ್ಟರು ?'

'ನಿನಗೆ ಬುದ್ಧಿ ಸರಿಯಾಗಿದೆಯೋ ಇಲ್ಲವೋ ತಿಳಿದುಕೋಬೇಕು.'

'ನನ್ನ ಬುದ್ಧಿ ಚೆನ್ನಾಗೇ ಇದೆ.'

'ಸಿಗರೇಟು, ಸಿನಿಮಾ ಬೇಡಾಂತ ಹೇಳೋ ಎದೆಗಾರಿಕೆ ನಿನಗೆ ಎಂದಿನಿಂದ ?'

ನನಗೆ ಅವನು ಎದ್ದುಹೋದರೆ ಸಾಕೆನಿಸಿತು. ಆದರೆ ರಂಗರಾಜು ನನ್ನ ಕ್ರಾಪನ್ನು ತಾನೇ ಬಾಚಿ, ಕೋಟು ತಗುಲಿ ಹಾಕಿ, ಬಾಯೊಳಗೆ ಸಿಗರೇಟು ತುರುಕಿ, ಕಡ್ಡಿ ಕೊರೆದು ಹಚ್ಚಿ, ನನ್ನನ್ನು ರೂಮಿನಿಂದ ಹೊರಗೆ ದಬ್ಬಿ ಬೀಗ ಹಾಕಿ

'ಈಗ ನಡಿ.' ಎಂದ.

ನಾನು ಕಾಲು ಎಳೆದು ಹಾಕುತ್ತಾ ಅವನ ಹಿಂದೆ ಹೊರಟೆ.

ಮಾರನೆಯ ದಿನ ಯಾವುದೋ ಹಬ್ಬದ ಕಾರಣದಿಂದಾಗಿ ಕಾಲೇಜಿಗೆ ರಜೆಯಿತ್ತು. ಮಧ್ಯಾಹ್ನ ಊಟ ಮಾಡಿಕೊಂಡು ಬಂದು ಮಲಗಿದ್ದೆ. ಸಂಜೆ ನಾಲ್ಕು ಗಂಟೆಯಾಗಿದ್ದರೂ ಏಳುವ ಮನಸ್ಸಿಲ್ಲದೇ ಹೊರಳಾಡುತ್ತಿದ್ದೆ. ಅಷ್ಟರಲ್ಲಿ ಬಾಗಿಲನ್ನು ತಟ್ಟಿದ ಸದ್ದಾಯಿತು. ನಾನು ಆಲಸ್ಯ

ದಿಂದ ಮಲಗಿದಲ್ಲಿಂದಲೇ 'ಯಾರು ?' ಎಂದೆ.

ಹೊರಗಿನಿಂದ ಉತ್ತರ ಬರಲಿಲ್ಲ. ಆದರೆ ಮತ್ತೆ ಜೋರಾಗಿ ಬಾಗಿಲನ್ನು ಬಡಿದ ಸದ್ದು ಕೇಳಿಸಿತು. ನಾನು ಬೇಸರದಿಂದ

'ಯಾರಪ್ಪಾ ಅದೂ....' ಎನ್ನುತ್ತಾ ಎದ್ದು ಬಾಗಿಲು ತೆಗೆದೆ.

ಹೊಸಲಿನಾಚೆ ಅವಳು ನಿಂತಿದ್ದಳು. ಗಾಬರಿ ಮುಖದ ಮೇಲೆ ತಾನೇ ತಾನಾಗಿದ್ದಿತು. ಓಡಿ ಬಂದಿದ್ದುದರಿಂದಲೋ ಏನೋ ಎದೆ ಏರಿಳಿಯುತ್ತಿತ್ತು.

ನನ್ನ ಬೇಸರ ಮಾಯವಾಯಿತು. ನನಗೆ ಅವಳೊಡನೆ ಏನು ಮಾತನಾಡಬೇಕೋ ತಿಳಿಯದಾಯಿತು.

'ದಯವಿಟ್ಟು ಈಗಲೇ ಹೋಗಿ ಮೂರ್ತೀನ ಕರೆದುಕೊಂಡು ಬರ್‍ತೀರಾ ? ಮಣೀಗೆ ನೋವು ಶುರುವಾಗಿದೆ. ಮೂರ್ತಿ ಮಿಲ್ಲಿಗೆ ಹೊರಟಾಗ ಹುಷಾರಾಗಿದ್ದಳು. ಈಗ ಇದ್ದಕ್ಕಿದ್ದಹಾಗೆ ನೋವು....'

'ಆಗಲಿ. ನಾನು ಕರೆದುಕೊಂಡು ಬರುತ್ತೇನೆ. ನೀವು ಗಾಬರಿಯಾಗಬೇಡಿ' ಎನ್ನುತ್ತಾ ನಾನು ರೂಮಿಗೆ ಬೀಗ ಹಾಕುವುದನ್ನೂ ಮರೆತು ಹಿಟ್ಟಿನ ಮಿಲ್ಲಿನ ಕಡೆ ಧಾವಿಸಿದೆ.

ಅದೇ ಸಂಜೆ ಮಣಿಯನ್ನು ಆಸ್ಪತ್ರೆಗೆ ಸೇರಿಸಿದರು. ಮನೆಗೆ ಬೀಗ ಹಾಕಿಕೊಂಡು ಮೂರ್ತಿ, ಅವಳು ಮಣಿಯೊಡನೆ ಆಸ್ಪತ್ರೆಗೆ ಹೊರಟರು. ರಾತ್ರಿ ಒಂಭತ್ತು ಗಂಟೆಯ ವೇಳೆಗೆ ಮೂರ್ತಿ ಮನೆಗೆ ಹಿಂತಿರುಗಿ ಬಂದ. ಅವನ ಮುಖ ಸಂಜೆಮಲ್ಲಿಗೆಯಂತೆ ಅರಳಿತ್ತು. ರೂಮಿನ ಬಾಗಿಲಿನಲ್ಲಿ ನಿಂತಿದ್ದ ನಾನು

'ಹೇಗಿದಾರೆ ನಿಮ್ಮ ಮಿಸೆಸ್ ?' ಎಂದೆ.

'ಹುಷಾರಾಗಿದಾಳೆ. ಗಂಡು ಮಗುವಾಯಿತು.'

'ಕ್ರಂಗ್ರಾಚುಲೇಷನ್ಸ್. ಸಕ್ಕರೆ ಯಾವಾಗ ?'

'ನಿಧಾನವಾಗಿ ಕೊಡಿಸುತ್ತೇನೆ.'

'ಈಗ ಪುನಃ ಆಸ್ಪತ್ರೆಗೆ ಹೋಗುತ್ತೀರಾ ?'

'ಇಲ್ಲ. ರಾತ್ರಿ ಆಸ್ಪತ್ರೇಲಿ ಮಣಿ ಜೊತೆಗೆ ನನ್ನ ನಾದಿನಿಯಿರುತ್ತಾರೆ. ನಾಳೆ ಬೆಳಗ್ಗೆ ನಾನು ಕಾಫಿ ತೆಗೆದುಕೊಂಡು ಹೋಗುತ್ತೇನೆ.'

'ಸರಿ. ಮಿಲ್ಲಿನ ಕೆಲಸ?'

'ಅವಳಿಗೆ ಕಾಫಿ ಕೊಟ್ಟು, ನಮ್ಮ ನಾದಿನಿಯನ್ನು ಕರೆದುಕೊಂಡು ಬಂದು ಮನೆಗೆ ಬಿಟ್ಟು ನಾನು ಮಿಲ್ಲಿಗೆ ಹೋಗುತ್ತೇನೆ.'

'ನಿಮ್ಮ ನಾದಿನಿ ಬಂದುಬಿಟ್ಟರೆ ತಾಯಿ, ಮಗೂನ ನೋಡಿಕೊಳ್ಳೋರು ಯಾರು?'

'ಆಸ್ಪತ್ರೇಲಿ ನರ್ಸುಗಳಿದಾರಲ್ಲಾ ಅವರು ನೋಡಿಕೋತಾರೆ.'

'ಹಾಗಾದರೆ ಎಲ್ಲಾ ಅನುಕೂಲವಾಗಿದೆ ತಾನೆ?'

'ಹೂಂ. ನೀವು ನಿನ್ನೆ ಸಂಜೆ ನನಗೆ ಬೇಗ ಸುದ್ದಿ ಮುಟ್ಟಿಸಿ ತುಂಬ ಉಪಕಾರ ಮಾಡಿದಿರಿ' ಮೂರ್ತಿ ಕೃತಜ್ಞತೆಯಿಂದ ನುಡಿದರು.

ನಾನು ಸಂಕೋಚದಿಂದ 'ಇಷ್ಟು ಹತ್ತಿರವಿದ್ದ ಮೇಲೆ ಅಷ್ಟೂ ಮಾಡದಿದ್ದರೆ ಹೇಗೆ' ಎಂದೆ.

'ಬರ್ತೀನಿ ಸ್ವಾಮಿ' ಎನ್ನುತ್ತಾ ಮೂರ್ತಿ ಹೊರಟುಹೋದರು.

ಮಾರನೆಯ ದಿನ ಸಂಜೆ ನಾನು ಕಾಲೇಜಿನಿಂದ ಮನೆಗೆ ಬಂದಾಗ, ಅವಳು ಮನೆಯ ಬಾಗಿಲಿನಲ್ಲಿ ನಿಂತಿದ್ದಳು. ಅವಳು ಕಾಣುತ್ತಿದ್ದ ಕನಸನ್ನು ಭಂಗಗೊಳಿಸಿ ನಾನು ಕೇಳಿದೆ.

'ಹೇಗಿದಾರೆ ನಿಮ್ಮ ತಂಗಿ?'

ಅವಳು ಬೆಚ್ಚಿ ನನ್ನ ಕಡೆ ತಿರುಗಿ 'ಆಂ?' ಎಂದಳು.

'ನಿಮ್ಮ ತಂಗಿ ಹೇಗಿದಾರೆ?'

'ಹುಷಾರಾಗಿದಾಳೆ.'

'ಮಗು?'

'ಚೆನ್ನಾಗಿದೆ.'

'ಯಾರ ಹಾಗಿದೆ?'

'ಮಣಿ ಹಾಗೇ ಇದೆ.'

'ಮೂರ್ತಿ ಆಸ್ಪತ್ರೆಗೆ ಹೋಗಿದಾರೇನು?'

'ಇಲ್ಲ. ಮಿಲ್ಲಿಗೆ ಹೋಗಿದಾರೆ.'

ಅವಳನ್ನು ಮತ್ತೇನು ಮಾತನಾಡಿಸಬೇಕೋ ನನಗೆ ತಿಳಿಯದಾಯಿತು. ಪ್ರಶ್ನೆಗಳನ್ನು ಹುಡುಕಿ ಮತ್ತೆ ಕೇಳಿದೆ.

'ರಾತ್ರಿ ಆಸ್ಪತ್ರೆಗೆ ಹೋಗ್ತೀರಾ?'

'ಇಲ್ಲ. ನರ್ಸುಗಳು ನೋಡಿಕೋತಾರೆ. ನಿಮ್ಮ ಹತ್ತಿರ ಥರ್ಮಾಸ್ ಫ್ಲಾಸ್ಕ್ ಇದ್ದಿದ್ದರೆ ಬೇಕಾಗಿತ್ತು. ಮಣಿಗೆ ಕಾಫಿ....'

'ನನ್ನ ಹತ್ತಿರ ಇದೆ. ಕೊಡುತ್ತೇನೆ ಬನ್ನಿ' ಎನ್ನುತ್ತಾ ನಾನು ರೂಮಿನ ಬೀಗ ತೆಗೆದೆ. ಅವಳು ಅಳುಕುತ್ತಾ ನನ್ನ ಹಿಂದೆ ಬಂದು ಹೊಸ ಲಿನ ಆಚೆ ನಿಂತಳು. ನಾನು ಪುಸ್ತಕಗಳನ್ನು ಮೇಜಿನ ಮೇಲಿರಿಸಿ ಫ್ಲಾಸ್ಕನ್ನು ಅಲ್ಲಲ್ಲಿ ಹುಡುಕಿದಂತೆ ನಟಿಸಿ

'ಇಲ್ಲೇ ಇಟ್ಟಿದ್ದೆ. ಎಲ್ಲೋ ಕಾಣ್ತಾನೇ ಇಲ್ಲ' ಎಂದೆ.

'ಎಲ್ಲಿಟ್ಟಿದ್ದೀರಿ?' ಎನ್ನುತ್ತಾ ಅವಳು ರೂಮಿನೊಳಗೆ ಬಂದಳು.

'ಮೇಜಿನ ಮೇಲೆ ಇಟ್ಟಿದ್ದೆ. ಎಲ್ಲಿ ಹೋಯಿತೋ....'

ಅವಳು ನನ್ನ ಮಾತುಗಳನ್ನು ಕೇಳಿಸಿಕೊಳ್ಳುತ್ತಿರಲಿಲ್ಲ. ಗೋಡೆಯ ಮೇಲಿದ್ದ ಅರೆನಗ್ನ ನಟಿಯೊಬ್ಬಳ ಚಿತ್ರವನ್ನು ತದೇಕಚಿತ್ತದಿಂದ ನೋಡುತ್ತಾ ನಿಂತಿದ್ದಳವಳು. ನಾನು ಅವಳನ್ನು ನೋಡುತ್ತಾ ನಿಂತೆ.

'ಯಾರವಳು?'

'ಎಸ್ತರ್ ವಿಲಿಯಂಸ್.'

'ಥೂ....ಅದೇಕೆ ಹಾಗೆ ಫೋಟೋ ತೆಗೆಸಿಕೊಂಡಿದ್ದಾಳೆ?'

'ದುಡ್ಡು ಕೊಡ್ತಾರೆ. ಅದರಿಂದ ಹಾಗೆ ಫೋಟೋ ತೆಗೆಸಿಕೊಂಡಿದ್ದಾಳೆ.'

'ನಾಚಿಕೆ ಆಗೋದಿಲ್ಲವೇ?'

'ನಾಚಿಕೆ ಯಾಕೆ ಆಗಬೇಕು? ಜೀವನೋಪಾಯಕ್ಕೆ ನಾನಾ ಮಾರ್ಗಗಳಿವೆ. ಅವುಗಳಲ್ಲಿ ಇದೂ ಒಂದು.'

'ಇವಳು ಯಾರು?'

'ಮೆರೀಲಿನ್ ಮನ್ರೋ.'

'ತಲೆಕೂದಲೆಲ್ಲಾ ಬೆಳ್ಳಗಾಗಿದೆ....'

ನಾನು ನಕ್ಕು ನುಡಿದೆ 'ಹೊನ್ನಗೂದಲಿನ ಚೆಲುವೆ ಅವಳು. ಅವಳ ಪಾದ ಸೇವೆ ಮಾಡಲಿಕ್ಕೆ ನನ್ನಂಥ ಯುವಕರು ಸಾವಿರಾರು ಜನ ಈಗಲೂ ಸಿದ್ಧರಾಗಿದಾರೆ....'

ರೂಮಿನ ಬಾಗಿಲು ಗಾಳಿಗೆ ಧಡೀರನೆ ಮುಚ್ಚಿಕೊಂಡಿತು. ನಾವಿಬ್ಬರೂ ತಿರುಗಿ ಮುಚ್ಚಿದ ಬಾಗಿಲಿನ ಕಡೆ ನೋಡಿದೆವು. ಆದರೆ ಯಾರೂ ಬಾಗಿಲನ್ನು ತೆಗೆಯಲು ಮುಂದುವರಿಯಲಿಲ್ಲ. ಅವಳ ಮುಖದ ಮೇಲೆ ಬೆವರಿನ ಹನಿಗಳು ಮೂಡಿದವು. ನಾನು ಸಿಗರೇಟು ತೆಗೆದು ಬಾಯಲ್ಲಿ ಕಚ್ಚಿಕೊಂಡು ಕಡ್ಡಿಯಿಂದ ಹತ್ತಿಸಿದೆ. ನನ್ನ ಕೈಗಳೂ ನಡುಗುತ್ತಿದ್ದವು.

'ಥೂ ವಾಸನೆ ...' ಅವಳು ಸೆರಗಿನಿಂದ ಮೂಗು ಮುಚ್ಚಿಕೊಂಡಳು.

'ಹಾಗಾದರೆ ಆರಿಸಿಬಿಡಲೇನು ?'

'ಹೂಂ.'

ನಾನು ಸಿಗರೇಟನ್ನು ಆರಿಸಿ ಕಿಟಕಿಯಿಂದಾಚೆ ಎಸೆದು

'ಕುಳಿತುಕೊಳ್ಳಿ. ನಿಂತೇ ಇದೀರಲ್ಲಾ....' ಎಂದೆ. ಅವಳು ಮೇಜಿನ ಮುಂದಿದ್ದ ಕುರ್ಚಿಯಲ್ಲಿ ಕುಳಿತುಕೊಂಡು, ಹಾಲಿವುಡ್ಡಿನ ಚಲನಚಿತ್ರಗಳ ಮಾಸಪತ್ರಿಕೆಯೊಂದನ್ನು ಕೈಗೆ ತೆಗೆದುಕೊಂಡು ನಟಿಯೊಬ್ಬಳ ಕಡೆ ಕೈ ತೋರಿಸಿ 'ಇವಳು ಯಾರು ?' ಎಂದಳು.

'ರೀಟಾ ಹೇವರ್ತ್. ಇವಳು ನಾಲ್ಕುಸಲ ಮದುವೆ ಮಾಡಿಕೊಂಡಿದ್ದಾಳೆ. ಮೊದಲನೆಯ ಗಂಡ................'

ಅವಳು ನಸುನಕ್ಕು 'ನಿಮಗೆ ಪಾಠಕ್ಕಿಂತಲೂ ಸಿನಿಮಾದವರ ವಿಚಾರ ಚೆನ್ನಾಗಿ ತಿಳಿದಿರುವ ಹಾಗಿದೆ' ಎಂದಳು.

'ನೀವು ಹೇಳೋದು ನಿಜ. ನನಗೆ ನಟನಟಿಯರ ಚರಿತ್ರೆಯೆಲ್ಲಾ ಬಾಯಿ ಪಾಠವಾಗಿಹೋಗಿದೆ. ಆದರೆ ನಮ್ಮ ದೇಶದ ಚರಿತ್ರೆ ಮಾತ್ರ ಏನೇನೂ ಗೊತ್ತಿಲ್ಲ.'

ಅವಳು ಕಿಟಕಿಯಿಂದಾಚೆ ನೋಡಿ

'ಓ ಆಗಲೇ ಕತ್ತಲಾಗುತ್ತಿದೆ. : ನಾನಿನ್ನು ಬರ್‍ತೀನಿ. ಫ್ಲಾಸ್ಕು....' ಎನ್ನುತ್ತಾ ಎದ್ದು ನಿಂತಳು. ನಾನು ಅವಳ ಬಳಿಗೆಹೋಗಿ

'ಹೋಗಲೇಬೇಕೆ ?' ಎಂದೆ.

'ಹೂಂ.'

‘ ಖಂಡಿತವಾಗಿ ? ’

‘ ಹೌದು. ಇನ್ನೂ ಅಡಿಗೆಮಾಡಿಲ್ಲ........ ’ ಅವಳ ಮಾತು ಮುಗಿಯುವುದಕ್ಕೆ ಮುಂಚೆ ನಾನು ಅವಳನ್ನು ನನ್ನ ತೋಳುಗಳಲ್ಲಿ ಬಂಧಿಸಿ

‘ ಇದಕ್ಕಾಗಿ ಎಷ್ಟು ದಿನದಿಂದ ಕಾಯಬೇಕಾಯಿತು ? ’ ಎಂದೆ.

ನಾನು ಅನಿರೀಕ್ಷಿತವಾಗಿ ಹೀಗೆ ಆಕ್ರಮಣ ಮಾಡಬಹುದೆಂದು ಅವಳು ನೆನಸಿರಲಿಲ್ಲ. ಅವಳೂ ಬಹಳ ದಿನಗಳಿಂದ ಈ ಸಮಯಕ್ಕಾಗಿ ಕಾಯುತ್ತಿದ್ದಳು. ಆದರೆ ಆ ಸಮಯ ತಾನಾಗಿಯೇ ಒದಗಿದಾಗ ಅವಳು ಹೆದರಿದಳು.

‘ ಬಿಡಿ. ನಾನು ಹೋಗ್ತೀನಿ ’ ಎನ್ನುತ್ತಾ ಅವಳು ನನ್ನ ತೋಳಿನಿಂದ ಜಾರಲು ಯತ್ನಿಸಿದಳು. ನಾನು ಬಂಧನವನ್ನು ಮತ್ತಷ್ಟು ಬಿಗಿ ಮಾಡಿ

‘ ಹಾಗಾದರೆ ನನ್ನ ಎದುರಿಗೆ ನೀವು ಸುಳಿದಾಡುತ್ತಿದ್ದುದೇಕೆ ? ನನ್ನ ಕಡೆ ಓರೆನೋಟ ಬೀರುತ್ತಿದ್ದುದೇಕೆ ? ನಾನು ಮಾತನಾಡಿಸಿದಾಗ ಮೂರ್ತಿಗೆ ಹೇಳದೇ ನನ್ನ ಪ್ರೋತ್ಸಾಹಿಸಿದ್ದೇಕೆ ? ’ ಎಂದೆ

‘ ನಾನು ಮಾಡಿದ್ದು ತಪ್ಪಾಯಿತು. ’

‘ ಅಂತೂ ನೀವು ನನ್ನ ಪ್ರೋತ್ಸಾಹಿಸಿದ್ದುಂಟು ಎಂದು ಒಪ್ಪಿಕೊಳ್ಳುತ್ತೀರಾ ? ’

‘ ಹೂಂ. ಆದರೆ ಈಗ ನಾನು ಹಾಗೆ ಮಾಡಬಾರದಿತ್ತು ಎನಿಸುತ್ತಿದೆ. ದಯವಿಟ್ಟು ನನ್ನ ಬಿಡಿ. ನನಗೆ ಬುದ್ಧಿಯಿಲ್ಲದೇ ನಿಮ್ಮನ್ನು ಉತ್ತೇಜನಗೊಳಿಸಿದೆ. ಆದರೆ ಈಗ ಹೆದರಿಕೆಯಾಗುತ್ತಿದೆ.... ’

‘ ಹೆದರಿಕೆ ಯಾಕೆ ? ’

‘ ಏನಾದರೂ ತೊಡಕಾದರೆ ? ’

‘ ಆಗ ಮದುವೆ ಮಾಡಿಕೊಂಡರಾಯಿತು. ’

‘ ಮದುವೆ ! ’ ಅವಳು ಕಣ್ಣಗಲಿಸಿ ನನ್ನ ಕಡೆ ನೋಡಿದಳು.

‘ ಹೂಂ. ಯಾಕಾಗಬಾರದು ? ನಾನು ನಿನ್ನನ್ನು ಪ್ರೀತಿಸುತ್ತೇನೆ. ನೀನು ? ’

ಅವಳು ಬಳಲಿದವಳಂತೆ ನನ್ನೆದೆಗೊರಗಿ 'ನಾನೂ ಕೂಡಾ' ಎಂದಳು.

'ಹಾಗಾದರೆ ಇನ್ನು ಹೆದರಿಕೆ ಯಾಕೆ? ನಾವಿಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸುತ್ತೇವೆ. ನಾನು ನಿನ್ನನ್ನ ಮದುವೆಯಾಗುತ್ತೇನೆ....'

'ಆದರೆ ನಿಮ್ಮ ಮಾತಿನಲ್ಲಿ ನನಗೆ ನಂಬಿಕೆ ಇಲ್ಲ. ಎಷ್ಟಾಗಲಿ ನಿಮ್ಮದು ಗಂಡಸುಜಾತಿ. ಏನಾದರೂ ಹೆಚ್ಚುಕಮ್ಮಿಯಾಗಿ ನೀವು ನನ್ನ ಕೈ ಬಿಟ್ಟರೆ?'

ನಾನು ಅಸಮಾಧಾನಗೊಂಡವನಂತೆ ತಟ್ಟನೆ ಅವಳನ್ನು ಬಿಟ್ಟು ದೂರ ಸರಿದೆ. ನನ್ನನ್ನು ಆಶ್ರಯಿಸಿ ನಿಂತಿದ್ದ ಅವಳು ನನ್ನ ತೋಳ ಆಸರೆ ತಪ್ಪಿ ತತ್ತರಿಸಿ ನಿಂತಳು.

ಮೊದಲಬಾರಿ ಮದ್ಯದ ರುಚಿನೋಡಿ 'ಥೂ ಕಹಿ' ಎಂದು ಮುಖ ತಿರುಗಿಸಿದವನು ನಿಧಾನವಾಗಿ ಅದರ ಅಮಲಿಗೆ ಮನಸೋತವನಂತಿತ್ತು ಅವಳ ಮುಖಭಾವ.

'ನನ್ನಲ್ಲಿ ನಿಮಗೆ ನಂಬಿಕೆ ಇಲ್ಲವೇ?'

'ಇಲ್ಲ.'

'ನಾನು ಹೇಗೆ ಹೇಳಿದರೆ, ಏನು ಮಾಡಿದರೆ ನಿನಗೆ ನಂಬಿಕೆ ಯಾದೀತು?'

ಅವಳು ಮೇಜಿನ ಮೇಲಿದ್ದ ಹಣ್ಣು ಹೆಚ್ಚುವ ಚಾಕುವಿನ ಕಡೆ ನೋಡಿ 'ಆ ಚಾಕುವಿನಿಂದ ಬೆರಳು ಕುಯ್ದುಕೊಂಡು ತೋರಿಸಿದರೆ....' ಎನ್ನುವಷ್ಟರಲ್ಲಿ ನಾನು ಚಾಕುವನ್ನು ಕೈಗೆತ್ತಿಕೊಂಡು ನನ್ನ ಎದುರಿಗೆ ಚುಚ್ಚಿಕೊಳ್ಳುವವನಂತೆ ಹಿಡಿದು

'ನನ್ನ ಎದೆಗೆ ಚುಚ್ಚಿಕೊಳ್ಳುತ್ತೇನೆ. ಆಗ ನಿನಗೆ ನನ್ನಲ್ಲಿ ನಂಬಿಕೆ ಬರಬಹುದು' ಎಂದೆ. ಅವಳು ಸುಮ್ಮನೆ ನಿಂತಿದ್ದಳು. ನಾನು ಎದೆಗೆ ಚುಚ್ಚಿಕೊಳ್ಳುವವನಂತೆ ನಟಿಸಿದೆ. ಅವಳು ಮೆಲ್ಲನೆ ಚೀರಿ ನನ್ನ ಬಳಿಗೆ ಓಡಿಬಂದು ಚಾಕುವನ್ನು ಕಿತ್ತೆಸೆದು ನನ್ನನ್ನು ಅಪ್ಪಿಕೊಂಡಳು.

'ಈಗ ನಂಬಿಕೆ ಬಂತೇ?'

'ಹೂಂ. ಆದರೆ ನನ್ನ ಕೈ ಬಿಡಬೇಡಿ.'

'ಇಲ್ಲ.'

'ಇದುವರೆವಿಗೂ ನಾನು ಬಹಳ ನೊಂದಿದ್ದೇನೆ. ಜೀವನದಲ್ಲಿ ಸುಖ ಎನ್ನುವುದನ್ನು ಒಂದು ದಿನವೂ ಕಾಣಲಿಲ್ಲ. ಹುಟ್ಟಿದಾಗಿನಿಂದ ಬಡತನ' ದುಡಿಮೆ ಇವರಡೇ ನನ್ನ ಪಾಲಿಗೆ ಬಂದಿದೆ........' ಅವಳು ಮಾತನಾಡು ತ್ತಿದ್ದಂತೆ ನನ್ನ ಕ್ರಾಪನ್ನು ಸವರಿದಳು. ನಾನು ಅವಳ ಕೈ ಎಳೆದು ಕೊಂಡು ಮುತ್ತಿಟ್ಟೆ

'ಇದೇನು ಕೈ ಮೇಲೆ ಕಲೆ ಇರುವ ಹಾಗಿದೆ ?' ಎಂದೆ.

'ನಾನು ಚಿಕ್ಕವಳಾಗಿದ್ದಾಗ ಒಂದು ಸಲ ಒಲೇಲಿದ್ದ ಬೆಂಕೀನ ನೋಡಿ, ಅದು ಸುಡುತ್ತದೆ ಎಂದು ತಿಳಿಯದೇ ಮುಟ್ಟಿ ಸುಟ್ಟುಕೊಂಡೆ ನಂತೆ. ಆಗ ಸುಟ್ಟ ಗಾಯದ ಕಲೆ ಇನ್ನೂ ಹೋಗಿಲ್ಲ.'

ಅವಳ ಮಾತು ಕೇಳಿ ನನಗೆ ನಾನು ಬೆಂಕಿ, ಅವಳು ಮಗು ಎನಿಸಿತು. ನಾನು ಮಾತು ಮರೆಸಲೆಂದು

'ನೀನು ಇಲ್ಲಿಗೆ ಯಾಕೆ ಬಂದಿದೀಯಾ ?' ಎಂದೆ

'ನನ್ನ ತಂಗೀಗೆ ಬಾಣಂತನ ಮಾಡೋಕೆ ಬಂದಿದೀನಿ.'

'ಮಣಿ ನಿನ್ನ ತಂಗೀನಾ ?'

'ಹೂಂ. ಅವಳು ನನ್ನ ತಂಗಿ.'

'ಮತ್ತೆ ನಿನ್ನ ಮದುವೆಗೆ ಮುಂಚೆ........'

'ಅವಳು ನನಗಿಂತ ಚೆನ್ನಾಗಿದಾಳೆ. ಆದುದರಿಂದ ಅವಳಿಗೆ ಮೊದಲು ಮದುವೆಯಾಯಿತು. ಸಾಲದುದಕ್ಕೆ ನೀವು ಈಗ ಸಿಕ್ಕಿದೀರಿ....'

'ನಾನು ?'

'ಹೂಂ. ನನ್ನ, ನಿಮ್ಮ ಭೇಟಿ ಮೊದಲೇ ಆಗಿದ್ದರೆ ಮುಂಚೆ ಮದುವೆಯಾಗಬಹುದಿತ್ತು.'

'ಹಾಗೋ' ಎನ್ನುತ್ತಾ ನಾನು ಒಣನಗೆ ನಕ್ಕೆ.

ಈ ಕಪ್ಪು ಹುಡುಗೀನ ನನ್ನ ಹೆಂಡತೀಂತ ಹೇಳಿಕೊಳ್ಳಲೇ ? ಇವಳ ಜೊತೆ ಬೀದೀಲಿ ಓಡಾಡಬಹುದೇ ? ಹಾಯ್ ಚಂದ್ರಮುಖೀ..........

'ಏನು ಯೋಚನೆ ಮಾಡ್ತಿದೀರಿ ?'

'ಏನೂ ಇಲ್ಲ. ನಾಳೆ ಬರ್ತೀಯಾ ?'

'ಊಹೂಂ.'

'ಯಾಕೆ ?'

'ಮದುವೆ ಆಗುವವರೆಗೆ ಇನ್ನು ನಾನು ನಿಮ್ಮ ಹತ್ತಿರ ಬರೋದಿಲ್ಲ.'

'ನನ್ನಲ್ಲಿ ನಿನಗೆ ಇನ್ನೂ ನಂಬಿಕೆ ಬಂದಿಲ್ಲವಾ ?'

'ನಾವಿಬ್ಬರೂ ಈಗ ತಪ್ಪು ಮಾಡಿದ್ದೇವೆ. ಆದರೆ ಸಿಕ್ಕಿಹಾಕಿಕೊಳ್ಳುವವಳು ನಾನೇ ತಾನೇ ? ಆದುದರಿಂದ ನನಗೆ ಭಯ'

'ಹಾಗಾದರೆ ನಾಳೆ ಬರೋದಿಲ್ಲವಾ ?'

'ಇಲ್ಲ'

'ನೀನು ಮಲಗಿದ್ದ ಕಡೆ ನಾನೇ ಬಂದು ನಿನ್ನ ಹಾರಿಸಿಕೊಂಡು ಬಂದುಬಿಡುತ್ತೇನೆ. ಆಗ ?'

'ಕೂಗಿಕೊಳ್ಳುತ್ತೇನೆ.'

'ಬಾಯಿಗೆ ಬಟ್ಟೆ ತುರುಕಿ ಎತ್ತಿಕೊಂಡು ಬರುತ್ತೇನೆ. ಆಗ ?'

'ಆಗ ಇನ್ನೇನು ಮಾಡುವುದು ? ಸುಮ್ಮನೆ ಬರುತ್ತೇನೆ.'

'ನಾಳೆ ಬರುತ್ತೀಯಾ ?'

'ನಾನು ಬರಲಾರೆ. ಬಾರದಿರಲಾರೆ.'

'ಹಾಗೆಂದರೆ ?'

'ಹೆಂಡ ಕುಡಿಯೋದು ಅಭ್ಯಾಸವಾದ ಮೇಲೆ, ಕೈಲಿ ಕಾಸಿಲ್ಲದಿದವರ ಸ್ಥಿತಿ ಹೇಗಿರುತ್ತದೆ ಯೋಚಿಸಿ. ಬಡತನ, ಕಷ್ಟ ಮರೆಯೋಕೆ ಹೆಂಡ ಕುಡಿಯಲೇಬೇಕು. ಆದರೆ ಕೈಲಿ ಕಾಸಿರೋದಿಲ್ಲ........'

'ಹಾಗಾದರೆ ನಾನು ಹೆಂಡ, ನೀನು ಬಡವಳು ಎಂದಾಯಿತು.'

'ಛೀ, ನೀವು ನನ್ನ ದೇವರು. ನಾನು ನಿಮ್ಮ ದಾಸಿ.'

ಅವಳ ಹುಚ್ಚು ಮಾತುಗಳನ್ನು ಕೇಳಿ ನನಗೆ ಹೆದರಿಕೆಯಾಯಿತು. ನಾನೇನೋ ಕುತೂಹಲಗೊಂಡು ಹಕ್ಕಿಯನ್ನು ನನ್ನ ಬಲೆಗೆ ಬೀಳಿಸಿದ್ದೆ, ಆದರೆ ಹಕ್ಕಿ ನನ್ನಲ್ಲಿಯೇ ಶಾಶ್ವತವಾಗಿ ನಿಲ್ಲಲು ಬಯಸಿ, ಏನೋ ಹುಚ್ಚು ಆದರ್ಶ, ಕಲ್ಪನೆಯ ಮಾತುಗಳನ್ನಾಡಿದಾಗ ಇದಕ್ಕೆ ಕೊನೆ ಯಾವುದು ಎಂದು ನನಗೆ ಗಾಬರಿಯಾಯಿತು. ಪ್ರೇಮದ ಮರುಳು ಮಾತುಗಳನ್ನು ಕೇಳಿ ನನ್ನ ಮೇಲೆ ಕುದಿಯುವ ನೀರು ಬಿದ್ದಂತಾಯಿತು.

ದೇವರು, ದಾಸಿ ಯಾರಿಗೆ ಬೇಕಾಗಿತ್ತು ?

ನಾನು ಕಾಮಿ, ಅವಳು ಕಾಮಿನಿ.

ಈ ಭಾವನೆಗಳನ್ನು ಬಿಟ್ಟು ಅವಳು ದೇವರು,–ದಾಸಿ ಎಂಬ ಭಾವನೆ ಬೆಳಸಿಕೊಂಡರೆ ನನ್ನ ಗತಿಯೇನು ? ನನ್ನ, ಅವಳ ಸಂಬಂಧ ಕ್ಷಣಿಕ. ಆದರೆ ಅವಳೇಕೆ ಹುಚ್ಚಿಯಂತೆ ಮಾತನಾಡುತ್ತಾಳೆ ?

'-ನಾನು ದೇವರು, ನೀನು ದಾಸಿಯೇ ? '

' ಹೌದು  ನಿಮಗೆ ಮೊದಲು ದೇಹ ಸಮರ್ಪಣೆ ಮಾಡಿದೆ. ಈಗ ಆತ್ಮವನ್ನೂ ಸಮರ್ಪಿಸಿದ್ದೇನೆ. ನನ್ನ ಕೈ ಬಿಟ್ಟು ವ್ಯಭಿಚಾರಿಯನ್ನಾಗಿ ಮಾಡಬೇಡಿ. ಹೆಂಗಸಿನ ಜೀವನದಲ್ಲಿ ಒಬ್ಬ ಪುರುಷನಿಗೆ ಮಾತ್ರ ಪ್ರವೇಶ ಮಾಡಲು ಅಧಿಕಾರವುಂಟು. ಇದುವರೆವಿಗೂ ನಾನು ಆತನಿಗಾಗಿ ಕಾದಿದ್ದೆ. ಇನ್ನುಮೇಲೆ ನಾನು ಕಾಯಬೇಕಾಗಿಲ್ಲ........

' ಹುಚ್ಚಿ ನೀನು. '

' ನನ್ನ ಹಾಸ್ಯ ಮಾಡಬೇಡಿ. ನಿಜವಾಗಿ ಹೇಳುತ್ತಿದ್ದೇನೆ. ಮೊದಲು ನಾನು ನಿಮ್ಮನ್ನು ಕಾಮಿಸಿ ಬಂದೆ. ಆದರೆ ಈಗ ನನ್ನ ಮನಸ್ಸನ್ನೂ ನಿಮಗೆ ಅರ್ಪಿಸಿದ್ದೇನೆ. ನನ್ನ ದೂರಮಾಡಬೇಡಿ....'

' ಈಗ ನಾವಿಬ್ಬರೂ ಹತ್ತಿರವೇ ಇದೀವಲ್ಲಾ ? '

' ನಿಮಗೆ ಎಲ್ಲಾ ಹಾಸ್ಯ '

' ನಾಳೆ ಬರುತ್ತೀಯಾ ? '

ರೋದಿಲ್ಲ.'

' ನಾನು ನಿನ್ನ ದೇವರು ಎಂದು ಈಗ ತಾನೇ ಹೇಳಿದೆ. ದೇವರು ಹೇಳಿದ ಹಾಗೆ ದಾಸಿ ಕೇಳಬೇಕಲ್ಲವೇ ?'

' ಹೌದು.'

' ಹಾಗಾದರೆ ಬರಲು ಅಡ್ಡಿ ಏನು ?'

' ಭಕ್ತೆ ತಾನಾಗಿಯೇ ಒಲಿದು ಬಂದು ಪೂಜೆ ಮಾಡಿದಾಗ ಭಗವಂತ ಪೂಜೆ ಮಾಡಿಸಿಕೊಳ್ಳಬೇಕು. ಅದು ಬಿಟ್ಟು 'ನಂಗೆ ಪೂಜೆ ಮಾಡು' ಎಂದು ತಾನಾಗಿಯೇ ಕೇಳಿಕೊಂಡರೆ ಏನು ಚೆನ್ನ ?'

' ಭಗವಂತನಿಗೆ ಪೂಜೆ ಮಾಡಿಸಿಕೊಳ್ಳೋದು ಇಷ್ಟಾಂತ ತಿಳಿದ

ಮೇಲೆ ಯಾವ ಭಕ್ತೆಯೂ ಸುಮ್ಮನಿರುವುದಿಲ್ಲ. ನೀನು ನಾಳೆ ಬರದಿದ್ದರೆ....?'

'ಏನು ಮಾಡ್ತೀರಿ?'

'ವಿಷ ತಗೊಂಡು ಪ್ರಾಣ ಬಿಡ್ತೀನಿ.'

'ನನಗೂ ಸ್ವಲ್ಪ ಮಿಗಿಸಿಟ್ಟಿರಿ. ನಾನೂ ನಿಮ್ಮ ಹಿಂದೆ ಬರ್ತೀನಿ.'

'ನಾಳೆ ನಿನಗಾಗಿ ನಾನು ಕಾಯಲೇ ?'

'ಬೇಡ. ನಾನು ಖಂಡಿತ ಬರೋದಿಲ್ಲ. ಮದುವೆ ಆಗುವವರೆಗೆ ನಾನು ಬರೋದಿಲ್ಲ.'

'ನಿಜವಾದ ಪ್ರೇಮಕ್ಕೆ ಮದುವೆ ಯಾಕೆ ಬೇಕು? ನಾವಿಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸುತ್ತೇವೆ. ನಮ್ಮ ಪ್ರೀತಿ ಶಾಶ್ವತವಾಗಿದ್ದರೆ ಸಾಕು.'

'...............'

'ಚಂದ್ರಮುಖೀ....ಮಾತಾಡೋದಿಲ್ಲವೇ ?'

ಅವಳು ಹುಬ್ಬು ಗಂಟಿಕ್ಕಿ 'ನನ್ನ ಹೆಸರು ಚಂದ್ರಮುಖಿಯಲ್ಲ' ಎಂದಳು.

'ಏನು ! ಈಗ ನಾನು ನಿನ್ನ ಚಂದ್ರಮುಖಿ ಎಂದು ಕೂಗಿದೆನೇ?'

'ಹೌದು. ಅವಳು ಯಾರು ?'

'ನೀನೇ. ನಾನು ಮುದ್ದಿಗಾಗಿ ನಿನ್ನ ಹಾಗೆ ಕೂಗಿದೆ.'

ನಾನು ಅವಳನ್ನು ಹಾಗೆ ಕೂಗಿದೆನೆಂದು ಕೇಳಿ ಆಶ್ಚರ್ಯವಾಯಿತು. ಹಾಗಾದರೆ ನನ್ನ ಮನಸ್ಸಿನಲ್ಲಿ ಇವಳಿಗೆ ಬದಲು ಚಂದ್ರಮುಖಿಯೇ ಇದಾಳೇನು ? ನನ್ನ ತೋಳಲ್ಲಿರುವವಳು ಕಪ್ಪು ಹುಡುಗಿ. ಮನಸ್ಸಿನಲ್ಲಿರುವವಳು ಕಾಲೇಜಿನ ಬೆಡಗಿ ಚಂದ್ರಮುಖಿ.

'ನಾನಿನ್ನು ಬರ್ತೀನಿ. ಮೂರ್ತಿ ಬರುವ ಸಮಯವಾಯಿತು.'

'ನಾಳೆ ನಾನು ನಿನಗಾಗಿ ಕಾಯುತ್ತಿರುತ್ತೇನೆ. ಖಂಡಿತ ಬರ್ತೀಯಾ ?'

'ಇಲ್ಲ.'

'ನನಗೆ ಗೊತ್ತು. ನೀನು ಬಂದೇ ಬರ್ತೀಯ. ನೀನು ಬರ್ತೀಯಾಂತ

ನನಗೆ ಖಾತ್ರಿಯಿದೆ, ನಾಳೆ ಪೂರ್ಣಿಮೆ. ನಾಳೆ ನಾನು ನಿನಗಾಗಿ....

'ಇಲ್ಲ. ಇಲ್ಲ, ಇಲ್ಲ....' ಎನ್ನುತ್ತಾ ಅವಳು ಎರಡು ಕೈಗಳಿಂದಲೂ ಕಿವಿ ಮುಚ್ಚಿಕೊಂಡಳು. ನಾನು ಅವಳ ಕೈ ಕಿತ್ತು ಕಿವಿಯಲ್ಲಿ ಪಿಸು ಗುಟ್ಟಿದೆ.

'ನಾನು ಕಾದಿರುತ್ತೇನೆ.'

ಅವಳು ಪ್ರತಿಭಟಿಸಲು ಬಳಲಿದವಳಂತೆ ತಲೆ ಅಲುಗಿಸಿ ಹೊರಟು ಹೋದಳು. ಅವಳು ಬರುವಳೆಂದು ನನಗೆ ತಿಳಿದಿತ್ತು.

ನಾನು ಹಾವಾಡಿಗ, ನನ್ನ ಪುಂಗಿಯ ನಾದಕ್ಕೆ ಅನುಸಾರವಾಗಿ ತಲೆ ದೂಗುವ ಸರ್ಪ ಅವಳು.

ಮಾರನೆಯ ದಿನ ನಾನು ಅವಳನ್ನು ನಿರೀಕ್ಷಿಸುತ್ತಾ ಕುಳಿತಿದ್ದೆ. ಹೊರಗೆ ಹಾಲು ಚೆಲ್ಲಿದಂತೆ ಬೆಳದಿಂಗಳು ಹರಡಿತ್ತು. ರೂಮಿನ ಹತ್ತಿರವೇ ಇದ್ದ 'ರಾತ್ರಿರಾಣಿ' ಪೊದೆಯಿಂದ ಸೌರಭದ ಹುಚ್ಚು ಹೊಳೆ ನನ್ನ ರೂಮಿಗೆ ನುಗ್ಗಿ ಬರುತ್ತಿತ್ತು.

ಮೂರ್ತಿ ಮಿಲ್ಲಿನಿಂದ ಮನೆಗೆ ಬರುವುದು. ರಾತ್ರಿ ಒಂಭತ್ತು ಗಂಟೆಯಾಗುತ್ತತ್ತು. ಅಷ್ಟರಲ್ಲಿ ಬರುವಂತೆ ನಾನು ಅವಳಿಗೆ ತಿಳಿಸಿದ್ದೆ. ಗಂಟೆ ಎಂಟೂವರೆಯಾದರೂ ಅವಳು ಸುಳಿಯಲಿಲ್ಲ. ನನಗೆ ನಿರಾಶೆಯಾಯಿತು. ಹಾಗಾದರೆ ನಾನು ಅವಳ ಮೆದುಮನಸ್ಸಿನಲ್ಲಿ ಬಲವಾಗಿ ನಾಟಿದ ಸಲಹೆ ಪೊಳ್ಳಾಯಿತೇ ?

'ನಾಳೆ ಪೂರ್ಣಿಮೆ. ನಾನು ನಿನಗಾಗಿ ಕಾದಿರುತ್ತೇನೆ' ಎಂದು ಕೊನೆಯ ಬಾರಿ ನಾನು ಪಿಸುಗುಟ್ಟಿದುದು ವ್ಯರ್ಥವಾಯಿತೇ ? ನಾನು ಊಟಕ್ಕಾಗಿ ಹೋಟಲಿಗೆ ಹೊರಟುಹೋದರೆ, ಅವಳಿಲ್ಲಿ ಬಂದು ರೂಮಿಗೆ ಬೀಗ ಹಾಕಿರುವುದನ್ನು ನೋಡಿ ಹೊರಟುಹೋಗುತ್ತಾಳೋ ಎಂದು ನಾನು ಊಟಕ್ಕೂ ಹೋಗಲಿಲ್ಲ. ಅವಳು ಹೋಗುವಾಗ ತಲೆ ಅಲುಗಿಸಿ ಹೋಗಿದ್ದಳು. ಆದರೂ ಬರಲಿಲ್ಲವೇಕೆ ?

ನಾನು ರೂಮಿನ ದೀಪವಾರಿಸಿ ಹಾಸಿಗೆಯ ಮೇಲೆ ಬಿದ್ದುಕೊಂಡೆ. ಅವಳು ಬಾರದಿರುವುದನ್ನು ನೋಡಿ ನನಗೆ ಕೋಪ ಬಂತು. ನರಿ ಕೈಗೆಟಕದಿರುವ ದ್ರಾಕ್ಷಿ ಹಣ್ಣು ಹುಳಿ ಎಂದುಕೊಂಡಂತೆ ನಾನು

'ಬರದಿದ್ದರೆ ಹಾಳಾಗಲಿ. ನಾನೇನು ಕಪ್ಪು ಹುಡುಗೀನ ಮದುವೆ ಮಾಡ್ಕೊಳ್ತೀನೆಯೇ ? ಸುಲಭವಾಗಿ ಕೈಗೆ ಸಿಕ್ಕಿದ ಹೆಣ್ಣು ಎಂದು ಸ್ವಲ್ಪ ಆಟವಾಡಿದೆ.' ಎಂದು ಸಮಾಧಾನ ಮಾಡಿಕೊಂಡು ನಿದ್ರಿಸಲು ಪ್ರಯತ್ನಿಸಿದೆ. ಆದರೆ ನಿದ್ರೆ ಬರಲಿಲ್ಲ.

ನಾನು ಅಶಾಂತಿಯಿಂದ ಹಾಸಿಗೆಯ ಮೇಲೆ ಎಷ್ಟು ಹೊತ್ತು ಹೊರಳಾಡಿದೆನೋ ಗೊತ್ತಿಲ್ಲ. ಹಾಗೆಯೇ ಸ್ವಲ್ಪ ಮಂಪರು ಬಂದಂತಾಯಿತು. ಆಗ ಯಾರೋ ಬಾಗಿಲನ್ನು ಮೃದುವಾಗಿ ತಟ್ಟಿದ ಸದ್ದು ಕೇಳಿಸಿತು. ನಾನು ಜಗ್ಗನೆ ಹಾಸಿಗೆಯ ಮೇಲೆ ಎದ್ದು ಕುಳಿತೆ.

ನಾನು ಕನಸು ಕಾಣುತ್ತಿಲ್ಲವಷ್ಟೆ ?

ಬಾಗಿಲನ್ನು ಮತ್ತೊಮ್ಮೆ ತಟ್ಟಿದಂತಾಯಿತು. ನಾನು ಎದ್ದು ಬಾಗಿಲನ್ನು ತೆಗೆದೆ. ಅವಳನ್ನು ನೋಡಿದೊಡನೆ ನನ್ನ ನಿದ್ದೆ, ಅಶಾಂತಿ, ಅಸಮಾಧಾನ ಎಲ್ಲವೂ ಹಾರಿಹೋಯಿತು. ನಾನು ಅವಳ ಕೈ ಹಿಡಿದು ಒಳಗೆ ಎಳೆದುಕೊಂಡೆ.

'ಯಾಕಿಷ್ಟು ಹೊತ್ತು ?'

'ನಂಗೆ ನಾಳೆ ಬರೋಕಾಗೋದಿಲ್ಲ. ಆದ್ದರಿಂದ ಇವತ್ತು ಈಗ....'

'ಮೂರ್ತಿ ಬಂದರೇನು ?'

'ಹೂಂ. ಅವರಿಗೆ ನಿದ್ದೆ ಬಂದಮೇಲೆ ನಾನು....,

'ಹಾಗಾದರೆ ರಾತ್ರಿಯೆಲ್ಲಾ ಇಲ್ಲೇ ಇರಬಹುದು.'

'ಖಂಡಿತ ಸಾಧ್ಯವಿಲ್ಲ. ಇನ್ನುಮೇಲೆ ನನಗೆ ಬರೋಕಾಗೋದಿಲ್ಲಾಂತ ಹೇಳೋಕೆ ಬಂದೆ.'

'ಯಾಕೆ ಬರೋಕಾಗೋದಿಲ್ಲ ?'

'ನಾಳೆ ನಮ್ಮ ತಾಯಿ, ತಂಗಿ, ತಂದೆ ಬರ್ತಾರೆ.'

'ನಿಜವಾಗಿ ?,

'ಹೂಂ. ಇನ್ನುಮೇಲೆ ನಾನು ಬರಲಾರೆ.'

'ನೀನು ನನ್ನ ಪ್ರೀತಿಸೋದಿಲ್ಲವೇನು ?'

'ಇದೇ ಪ್ರಶ್ನೇನ ನಾನು ಕೇಳಬೇಕೆಂದಿದ್ದೇನೆ.'

'ನಾನು ತುಂಬಾ ಅಂದರೆ ಬಹಳ ಪ್ರೀತಿಸುತ್ತೀನಿ.'

ಪ್ರೀತಿ ! ನನ್ನ ಮಾತಿನಿಂದಾಗಿ ನನಗೆ ನಗು ಬರುತ್ತಿತ್ತು. ಈ ಕಪ್ಪು ಮುಖ ನೋಡಿದರೆ ಪ್ರೀತಿಸಲು ಸಾಧ್ಯವೇ ?

' ಹಾಗಾದರೆ ನಾಳೆ ನಮ್ಮ ತಂದೆಗೆ ನೀವು ನನ್ನ ಮದುವೆ ಮಾಡಿಕೊಳ್ಳುವುದಾಗಿ ಹೇಳಿ.'

' ನಾಳೆಯೇ ಹೇಳಬೇಕೆ ?'

' ಹೂಂ. ನಾನು ನಿಮ್ಮನ್ನು ಬಿಟ್ಟು ಬಹಳ ದಿನವಿರಲಾರೆ.'

' ನಾನು ನಿಮ್ಮ ತಂದೆಗೆ ಏನೆಂದು ಹೇಳಲಿ ?'

ನಾನು ನಿಮ್ಮ ಮಗಳನ್ನು ಮದುವೆ ಮಾಡ್ಕೋತೀನೀಂತ ಹೇಳಿ. ಮೂರ್ತಿಯೂ ಮಣೀನ ನೋಡಿದಾಗ ತಾವಾಗಿಯೇ ಬಂದು ಹಾಗೆ ಕೇಳಿ ಮದುವೆ ಮಾಡಿಕೊಂಡರು.'

' ನೋಡೋಣ.'

' ನೋಡೋಣವೆಂದರೆ ಆಗೋದಿಲ್ಲ. ಈ ವಿಷಯ ನಿಮಗೆ ತಿಳಿಸೋಣವೆಂದೇ ನಾನು ಬಂದೆ. ನಾನಿನ್ನು ಬರ್ತೀನಿ.'

ಅವಳು ಬಾಯಲ್ಲಿ ಹಾಗೆ ಹೇಳಿದರೂ ಹೊರಡುವಂತೆ ತೋರಲಿಲ್ಲ.

' ಹೋಗಲೇ ಬೇಕೆ ?'

ಅವಳು ದಿಕ್ಕುಗಾಣದವಳಂತೆ ನನ್ನ ಬಳಿ ಬಂದು 'ಈಗ ನಾನೇನು ಮಾಡಲಿ? ' ಎಂದು ಕೈ ಕೈ ಹಿಸುಕಿಕೊಂಡಳು.

' ಈಗ ಏನಾಯಿತು ?'

' ನನ್ನನ್ನು ನೀವು ಮುಳುಗಿಸುವುದಿಲ್ಲ ತಾನೇ ? ನಿನ್ನೆಯಿಂದ ನಾನು ಒಂದು ಗಳಿಗೆ ನಿದ್ದೆ ಮಾಡಿಲ್ಲ. ಏನಾದರೂ ಅಪಚಾರವಾದರೆ, ನೀವು ನನ್ನ ಕೈಬಿಟ್ಟರೆ ಎಂಬ ಯೋಚನೆ ನನ್ನ ಜೀವಂತ ಸುಡುತ್ತಿದೆ. ನನಗೆ ಏನು ಮಾಡಬೇಕೋ ತಿಳೀತಿಲ್ಲ.'

' ನಿಮ್ಮ ತಂದೆ ನನ್ನ ಮಾತಿಗೆ ಒಪ್ಪದಿದ್ದರೆ ?'

' ನಾನು ನಿಮ್ಮನ್ನು ಹಿಂಬಾಲಿಸಿ ಬರಲು ಸಿದ್ಧಳಾಗಿದ್ದೇನೆ. ನೀವು ನನ್ನ ಮದುವೆ ಮಾಡಿಕೊಳ್ಳುವುದಾದರೆ ನಾನು ನಿಮ್ಮೊಡನೆ ಎಲ್ಲಿಗೆ ಬೇಕಾದರೂ ಬರುತ್ತೇನೆ.'

ನನಗಂತೂ ಅವಳನ್ನು ಮದುವೆಯಾಗುವ ಉದ್ದೇಶವೇ ಇರಲಿಲ್ಲ.

ಇವಳೇಕೆ 'ಮದುವೆ' ಎಂದು ಕುಣಿಯುತ್ತಾಳೋ ? ಜೊತೆಯಲ್ಲಿ ಎರಡು ದಿನವಿದ್ದ ಮಾತ್ರಕ್ಕೇ ಮದುವೆಯಾಗಬೇಕೆ ? ಹುಡುಗಿಯರೆಲ್ಲಾ ಚಂದ್ರಮುಖಿಯಂತೇಕಿರಬಾರದು ? ಅವಳು ಎರಡು ದಿನ ಒಬ್ಬೊಬ್ಬ ಹುಡುಗನೊಡನೆ ತಿರುಗಾಡುತ್ತಾಳೆ. ಇಷ್ಟಾದರೂ 'ಮದುವೆ' ಅಭಿಪ್ರಾಯವೇ ಅವಳ ತಲೆಗೆ ಬಂದಿಲ್ಲ. ಆದರೂ ಅವಳು ನನ್ನ ಯಾಕೆ ದೂರ ಮಾಡಿದಳೋ ? ವಿಜಯಕುಮಾರನ ಹತ್ತಿರವಾದರೆ ಕಾರಿದೆ....

'ನಮ್ಮ ತಂದೇನ ಕೇಳ್ತೀರಾ ?'

—ಥೂ, ಇದೆಲ್ಲೋ ಶುದ್ಧ ಹಳ್ಳಿ ಗುಗ್ಗು. ಮಾನ, ಮರ್ಯಾದೆ, ಪಾವಿತ್ರ್ಯ ಅಂತ ಕೆಲಸಕ್ಕೆ ಬಾರದ ವಿಷಯ ಕಟ್ಟಿಕೊಂಡು ಆಗಿನಿಂದ ಗೋಳಾಡ್ತಿದಾಳೆ.

'ಆಗಲಿ. ಆದರೆ ಒಂದು ಪಕ್ಷ ನನಗೇ ನಿನ್ನ ಮದುವೆ ಮಾಡಿ ಕೊಳ್ಳೋಕೆ ಇಷ್ಟವಿಲ್ಲದಿದ್ದರೆ ?' 'ನಾನು ವಿನೋದಗೊಂಡವನಂತೆ ಕೇಳಿದೆ. ಅವಳು ಗಾಬರಿಯಿಂದ ನನ್ನ ಬಾಯಿ ಮುಚ್ಚಿ

'ತಮಾಷಿಗೋಸ್ಕರವಾಗಿಯೂ ಹಾಗೆ ಹೇಳಬೇಡಿ' ಎಂದಳು.

ಅವಳು ರೂಮು ಬಿಟ್ಟು ಹೋದಾಗ ರಾತ್ರಿ ಒಂದು ಗಂಟೆಯಾಗಿತ್ತು. ಅವಳು ಕೊನೆಯ ಗಳಿಗೆಯವರೆವಿಗೆ ತನ್ನನ್ನು ತಿರಸ್ಕರಿಸಬಾರದಾಗಿ ಪದೇ ಪದೇ ಬೇಡಿಕೊಂಡಳು. ಕೊನೆಗೆ ನನಗಂತೂ ಅವಳ ದೈನ್ಯ, ಬೇಡಿಕೆ, ಪ್ರಾರ್ಥನೆ ಇವುಗಳನ್ನು ಕೇಳಿ ಕೇಳಿ ಮನಸ್ಸು ರೋಸಿಹೋಗಿ, ಇವಳು ರೂಮಿನಿಂದ ಹೊರಗೆ ಹೋದರೆ ಸಾಕೆನಿಸಿಬಿಟ್ಟಿತು. ಹೇಳಿದ ಮಾತನ್ನೇ ಹೇಳುವುದು ಹೆಂಗಸರ ಅಭ್ಯಾಸವೆಂದು ತೋರುತ್ತದೆ.

ಮಾರನೆಯ ದಿನ ನಾನು ಕಾಲೇಜಿಗೆ ಹೋಗಲಿಲ್ಲ. ಯೋಚನೆಯಿಂದಾಗಿ ರಾತ್ರಿಯೆಲ್ಲಾ ನಿದ್ದೆ ಬರಲಿಲ್ಲ. ಅವಳ ತಂದೆಯನ್ನು ಕೇಳುವ ಅಭಿಪ್ರಾಯವೇ ನನ್ನ ಮನಸ್ಸಿಗೆ ಬಂದಿರಲಿಲ್ಲ. ಯಾಕೆಂದರೆ ನಾನವಳನ್ನು ಮದುವೆಯಾಗಲು ತಯಾರಿರಲಿಲ್ಲ. ಬಯಕೆ, ಕುತೂಹಲದಿಂದ ನಾನವಳನ್ನು ನನ್ನ ಬಳಿಗೆ ಎಳೆದುಕೊಂಡಿದ್ದೆನೇ ಹೊರತು ಪ್ರೇಮದಿಂದಲ್ಲ.

ಹಿಟ್ಟು ಹಳಸಿತ್ತು. ನಾಯಿ ಹಸಿದಿತ್ತು.

* * * * *

ಒಂದಾದ ಮೇಲೊಂದು ಸಿಗರೇಟು ಸುಡುತ್ತಾ ನಾನು ಹುಚ್ಚನಂತೆ ಕುಳಿತಿದ್ದಾಗ, ಮನೆಯ ಮುಂಬಾಗಿಲಿನಲ್ಲಿ ಗಾಡಿ ನಿಂತ ಸದ್ದಾಯಿತು. ನಾನು ಕಿಟಕಿಯಿಂದ ನೋಡಿದೆ. ಅವಳ ತಾಯಿ, ತಂದೆ, ಚಿಕ್ಕತಂಗಿ— ಮೂವರೂ ಗಾಡಿಯಿಂದಿಳಿದರು. ಮೂರ್ತಿ ಮೆಲುನಗೆಯೊಡನೆ 'ಬನ್ನಿ' ಎಂದು ಸ್ವಾಗತಿಸುತ್ತಿದ್ದರು. ಅವಳು ಮರದ ನೆರಳಿನಲ್ಲಿ ತಲೆ ತಗ್ಗಿಸಿ ನಿಂತಿದ್ದಳು. ಅವಳ ಕಣ್ಣುಗಳೆರಡೂ ಕೆಂಪಾಗಿದ್ದವು. ರಾತ್ರಿಯೆಲ್ಲಾ ನಿದ್ರಿಸಲಿಲ್ಲವೋ ಏನೋ? ಎಲ್ಲರೂ ಮನೆಯೊಳಗೆ ಹೋದರು. ಅವಳು ಭಾರವನ್ನು ಹೊತ್ತವಳಂತೆ ಕಾಲುಗಳನ್ನು ಎಳೆದು ಹಾಕುತ್ತಾ ಎಲ್ಲರ ಹಿಂದೆ ಹೋದಳು. ಮನೆಯೊಳಗೆ ಪ್ರವೇಶಿಸುವುದಕ್ಕೆ ಮುಂಚೆ ಕಿಟಕಿಯ ಕಡೆ ತಿರುಗಿ ನನ್ನನ್ನೊಂದು ಬಾರಿ ನೋಡಿ ಹೊರಟುಹೋದಳು.

ನಾನು ಚಿಕ್ಕವನಾಗಿದ್ದಾಗ ನಾಯಿ ಮರಿಯೊಂದನ್ನು ಸಾಕಿದ್ದೆ. ನಮ್ಮ ಮನೆಯ ಹಿಂಭಾಗದಲ್ಲಿ ದೊಡ್ಡ ಕಲ್ಲು ತೊಟ್ಟಿಯೊಂದಿತ್ತು. ಬಟ್ಟೆ ಒಗೆಯಲು, ದನಕರುಗಳಿಗೆ ನೀರು ಕುಡಿಸಲೆಂದು ತೊಟ್ಟಿಯಲ್ಲಿ ಯಾವಾಗಲೂ ನೀರನ್ನು ತುಂಬಿರುತ್ತಿದ್ದರು. ಒಂದು ದಿನ ನಾನು ಮರಿಯೊಡನೆ ಆಟವಾಡುತ್ತಿದ್ದೆ. ಇದ್ದಕ್ಕಿದ್ದಂತೆಯೇ ನನಗೊಂದು ಯೋಚನೆ ಹೊಳೆಯಿತು. ನಾನು ಕೂಡಲೇ ಮರಿಯನ್ನೆತ್ತಿಕೊಂಡು ಹೋಗಿ ನೀರು ತುಂಬಿದ್ದ ತೊಟ್ಟಿಯೊಳಗೆ ಎಸೆದು 'ಈಜು. ಈಜುತ್ತೀಯಾ?' ಎಂದು ಕೂಗಾಡುತ್ತಾ ಚಪ್ಪಾಳೆ ತಟ್ಟಿದೆ.

ನಾಯಿಮರಿ ನೀರಿನಲ್ಲಿ ಮುಳುಗುವುದಕ್ಕೆ ಮುಂಚೆ ನನ್ನ ಕಡೆ ದೈನ್ಯದಿಂದ ನೋಡಿ ಮುಳುಗಿತು. ಅದರ ನೋಟ ನೋಡಿ ನನಗೆ ಹೆದರಿಕೆಯಾಗಿ ಗಟ್ಟಿಯಾಗಿ ಕಿರುಚಿಕೊಂಡೆ. ಜವಾನರು ಓಡಿ ಬಂದು

'ಏನಾಯಿತು ಶಿವಪ್ಪ?' ಎಂದರು.

'ನಾಯಿ ಮರಿ ಈಜಲೀಂತ ತೊಟ್ಟಿ ಒಳಗೆ ಹಾಕಿದೆ. ಅದು ಮುಳುಗಿಹೋಯಿತು' ಎಂದೆ.

ಮರಿಯನ್ನು ಈಚೆಗೆ ತೆಗೆದಾಗ ಅದಕ್ಕೆ ಪ್ರಾಣವಿರಲಿಲ್ಲ. ಆದರೆ ಅದು ಮುಳುಗುವುದಕ್ಕೆ ಮುಂಚೆ ನನ್ನ ಕಡೆ ನೋಡಿದುದನ್ನು ಮಾತ್ರ ಎಂದಿಗೂ ಮರೆಯಲಾರೆ.

ಅವಳು ನನ್ನ ಕಡೆ ದೃಷ್ಟಿ ಬೀರಿ ಒಳಗೆ ಹೋದಾಗ ನನಗೆ ನಾಯಿ ಮರಿಯ ನೆನಪು ಬಂತು.

ಇನ್ನು ಮೇಲೆ ಅದೇ ರೂಮಿನಲ್ಲಿ ವಾಸಮಾಡುವುದು ಸರಿಯಲ್ಲವೆಂದು ನನಗೆ ತೋರಿತು. ಪ್ರಪಂಚವೇ ತಲೆಕೆಳಗಾದರೂ ಆ ಕಪ್ಪು ಹುಡುಗಿಯನ್ನು ನನ್ನ 'ಹೆಂಡತಿ'ಯಾಗಿ ಸ್ವೀಕರಿಸಲು ನಾನು ಸಿದ್ಧನಿರಲಿಲ್ಲ. ನನ್ನ ಕನಸಿನ ಪ್ರೇಯಸಿಯಾದ ಚಂದ್ರಮುಖಿಯೆಲ್ಲಿ ? ಇವಳೆಲ್ಲಿ ? ಅಮಾವಾಸ್ಯೆಯನ್ನೂ, ಪೂರ್ಣಿಮೆಯನ್ನೂ ಹೋಲಿಸಲು ಸಾಧ್ಯವೇ ?

ನಮ್ಮ ತಾಯಿ ಆಗಾಗ್ಗೆ ಹೇಳುತ್ತಿದ್ದರು 'ನಮ್ಮ ಶಿವೂ ಮನ್ಮಥನ ಹಾಗಿದಾನೆ. ಅವನಿಗೆ ರತಿಯಂತಹ ಹುಡುಗಿಯನ್ನೇ ಆರಿಸಿ ತರುತ್ತೇನೆ'

ನಾನು ಮನ್ಮಥನಲ್ಲದಿದ್ದರೂ ಗೌರವರ್ಣದ ಸುಂದರ ಯುವಕ. ಆದರೆ ಅವಳು ? ರತಿಯೇ ?

ನನಗೆ ತುಂಬಾ ನಗು ಬಂತು.

ರತಿಯ ಹೆಸರಿನೊಡನೆ ಇವಳ ಹೆಸರು ಹೇಳಿದರೂ ರತಿಗೆ ಅವಮಾನ.

ಅದೇ ಸಂಜೆ ನಾನು ರೂಮನ್ನು ಖಾಲಿ ಮಾಡಲು ಯೋಚಿಸಿ ರಂಗರಾಜುವಿಗೆ ನನ್ನ ಉದ್ದೇಶವನ್ನು ತಿಳಿಸಿದೆ.

ಮಾರನೆಯ ದಿನದಿಂದಲೇ ನಾವಿಬ್ಬರೂ ರೂಮಿಗಾಗಿ ಬೆಂಗಳೂರನ್ನು ಸುತ್ತತೊಡಗಿದೆವು.

೩

ನಾನು ಮೈ ಮುರಿದು ಆಕಳಿಸಿ ಕುರ್ಚಿಯ ಮೇಲೆ ಕುಳಿತೆ. ಕಣ್ಣು ಗಳು ತಾವಾಗಿಯೇ ಬಾಗಿಲ ಕಡೆ ಹೊರಳಿದವು. ಬಾಗಿಲಿನಾಚೆ ಯಾರೂ ಕಾಣಲಿಲ್ಲ. ಸಧ್ಯ, ಇಪತ್ತಿನ ಹೆರಿಗೆ ಕೇಸುಗಳೆಲ್ಲಾ ಮುಗಿದವು ಎಂದು ನನಗೆ ಸಂತೋಷವಾಯಿತು. ಡ್ಯೂಟಿಯ ಮೇಲಿದ್ದಾಗ ಲೇಬರ್ ವಾರ್ಡನ್ನು ಬಿಟ್ಟು ಒಂದು ನಿಮಿಷ ಆಚೀಚೆ ಹೋಗುವುದು ಸಹ ಸಾಧ್ಯ ವಿರಲಿಲ್ಲ. ಯಾಕೆಂದರೆ ಯಾವ ಗಳಿಗೆಯಲ್ಲಿ ಬೇಕಾದರೂ ಹೆರಿಗೆ ಕೇಸು ಬರಬಹುದಲ್ಲವೇ ? ಇನ್ನು ಬರುವ ಪುಣ್ಯಾತಗಿತ್ತಿಯರೋ ! ತಾಯಿಯ ಪದವಿಗೇರಲಿರುವ ಹುಡುಗಿಯರಿಂದ ಹಿಡಿದು ಮೊಮ್ಮಕ್ಕಳನ್ನು ಕಂಡಿ ರುವ ಅಜ್ಜಿಯರವರೆವಿಗೆ ನಮ್ಮ ವಾರ್ಡಿಗೆ ಬರುತ್ತಾರೆ.

ತಾಯಿ ಪದವಿಗೇರಲಿರುವ ಹುಡುಗಿಯರು ಬಂದುಬಿಟ್ಟರಂತೂ ನಮ್ಮ ಪಾಡು ನಾಯಿಪಾಡಾಗಿ ಬಿಡುತ್ತದೆ.

ಒಂದು ಸಲ ಮಧ್ಯಮ ವರ್ಗದ ಹುಡುಗಿಯೊಬ್ಬಳನ್ನು ನೋವು ಶುರುವಾದ ಕೂಡಲೇ ಆಕೆಯ ತಾಯಿ ಕರೆದುಕೊಂಡು ಬಂದರು. ಹುಡು ಗಿಗೆ ಸುಮಾರು ಇಪ್ಪತ್ತು ವರ್ಷಗಳಿರಬಹುದು. ನೋವಿನಿಂದ, ಹೆದರಿಕೆ ಯಿಂದ ಅವಳ ಮುಖ ಸುಟ್ಟ ಬದನೆಕಾಯಿಯಂತಾಗಿತ್ತು. ಹುಡುಗಿ ಯನ್ನು ವಾರ್ಡಿನೊಳಗೆ ಕಳುಹಿಸಿ ಅವಳ ತಾಯಿ ಹೊರಗಿದ್ದ ಬೆಂಚಿನ ಮೇಲೆ ಕುಳಿತಳು. ಹುಡುಗಿಯ ಗಾಬರಿಯ ಮುಖವನ್ನು ನೋಡಿದ ಕೂಡಲೇ ಚೊಚ್ಚಲು ಹೆರಿಗೆಯಿರಬೇಕೆಂದು ನಾನು ಊಹಿಸಿದೆ. ತಾಯಿ ಮರೆ ಯಾದ ಕೂಡಲೇ ಹುಡುಗಿ ಬಿಕ್ಕಿ ಬಿಕ್ಕಿ ಅಳಲು ಮೊದಲು ಮಾಡಿದಳು. ನಾನು ಅವಳ ಕೈ ಹಿಡಿದು

'ಅಳಬೇಡಮ್ಮ. ಇಲ್ಲಿ ಬಾ' ಎಂದು ಕರೆದೆ. ಅವಳು ಕೂಡಲೇ ನನ್ನ ಕೈ ಬಿಗಿಯಾಗಿ ಹಿಡಿದು

'ನರ್ಸ್, ನನಗೆ ತುಂಬಾ ಹೆದರಿಕೆಯಾಗುತ್ತಿದೆ. ಏನು ಮಾಡಲಿ ? ನಾನು ಸತ್ತುಹೋಗುತ್ತೇನೇಂತ ಕಾಣುತ್ತದೆ. ನನಗೆ ಏನು ಗತಿ ?' ಎಂದಳು. ಹೆದರಿಕೆಯಿಂದ ಅವಳ ದೇಹವೆಲ್ಲಾ ನಡುಗುತ್ತಿತ್ತು. ನಾನು

ಅವಳಿಗೆ ಧೈರ್ಯ ನೀಡಲು

'ಹೆದರಿಕೋಬೇಡಮ್ಮಾ. ನಿನ್ನ ಹತ್ತಿರ ನಾನಿರುತ್ತೇನೆ. ನಿನಗೇನೂ ಆಗುವುದಿಲ್ಲ' ಎಂದೆ.

ಅವಳು ಮತ್ತಷ್ಟು ನಡುಗುತ್ತಾ 'ಹೆದರಿಕೆಯಿಂದ ನನಗೇನೂ ತೋಚೋದಿಲ್ಲ. ಹೆರಿಗೆಯಾಗುವಾಗ ತುಂಬಾ ನೋವಾಗುತ್ತದೆಯೇ ನರ್ಸ್? ನಾನಿನ್ನು ಬದುಕೋದಿಲ್ಲ. ತುಂಬಾ ಕಷ್ಟವಾಗುತ್ತದೆಯೇ?' ಎಂದಳು.

ನಾನು ಅವಿವಾಹಿತಳಾದ ನರ್ಸ್. ಹೆರಿಗೆಯ ನೋವು, ಕಷ್ಟ ನನಗೇನು ಗೊತ್ತು? ಇದುವರೆವಿಗೂ ನೂರಾರು ಹೆರಿಗೆಗಳನ್ನು ಮಾಡಿಸಿದ್ದೇನೆ. ಆದರೆ ಆಗ ನೋವಾಗುತ್ತದೆಯೇ ಎಂದರೆ ನಾನೇನು ಹೇಳಲಿ?

ಆದರೂ ಅವಳಿಗೆ ಭರವಸೆ ಕೊಡುವುದು ನನ್ನ ಕರ್ತವ್ಯವಾಗಿತ್ತು. ನಾನು ಹೆದರಿದ ಮಗುವನ್ನು ಸಂತಯಿಸುವಂತೆ

'ಏನೂ ಕಷ್ಟವಾಗೋದಿಲ್ಲಮ್ಮ. ಎಲ್ಲೋ ಸ್ವಲ್ಪ ತೊಂದರೆ ಆಗತ್ತೆ ಅಷ್ಟೆ' ಎಂದು ಸಮಾಧಾನ ಹೇಳುತ್ತಿದ್ದಂತೆಯೇ ಸ್ಕ್ರೀನಿನ ಆಚೆಯಿದ್ದ ಮತ್ತೊಬ್ಬ ಹೆರಿಗೆ ಪೇಷಂಟು ನೋವಿನಿಂದ ಚಿಟ್ಟನೆ ಚೀರಿದಳು. ಹುಡುಗಿ ಅರಳಿಯೆಲೆಯಂತೆ ನಡುಗಿ ನನ್ನ ತೋಳನ್ನು ಬಿಗಿಯಾಗಿ ಹಿಡಿದು

'ಅವಳೇಕೆ ಹಾಗೆ ಕಿರುಚಿದಳು? ಅಷ್ಟೊಂದು ಜೋರಾಗಿ ಕಿರಿಚುವಷ್ಟು ನೋವಾಗುತ್ತದೆಯೇ? ಅಯ್ಯೋ ದೇವರೇ, ನಾನೇಕೆ ಮದುವೆ ಮಾಡಿಕೊಂಡೆ? ಮದುವೆ ಮಾಡಿಕೊಳ್ಳದಿದ್ದರೆ ಹಾಯಾಗಿರಬಹುದಾಗಿತ್ತು. ನರ್ಸ್, ನನ್ನ ಗತಿಯೇನು' ಎಂದು ಅತ್ತಳು.

'ಏನೂ ಗಾಬರಿಯಾಗಬೇಕಾಗಿಲ್ಲಮ್ಮ. ಹೆಂಗಸೂಂದ ಮೇಲೆ ಸಹನೆ ಇರಬೇಕು. ನಿನಗೆಂತಹ ಮಗು ಬೇಕು?' ನಾನು ಮಾತು ಮರೆಸಲು ಪ್ರಯತ್ನಿಸಿದೆ.

'ಅಯ್ಯೋ, ನನಗೆಂತಹ ಮಗುವೂ ಬೇಡ. ನಾನು ಮದುವೆಯಾಗಲೇಬಾರದಾಗಿತ್ತು....' ಎನ್ನುತ್ತಾ ಅವಳು ಕೈ ಕಾಲುಗಳನ್ನು ಒದರಿ ಎಳೆಯ ಮಗುವಿನಂತೆ ಮತ್ತಷ್ಟು ಅತ್ತಳು. ನಾನು ಅವಳನ್ನು ನಗಿಸಲು

'ಇದೊಂದು ಮಗುವಾದ ಮೇಲೆ ನೀನೇ ಹೇಳ್ತೀಯ, ಇಷ್ಟೇನೇ!

ಹಾಗಾದರೆ ಪ್ರತಿವರ್ಷವೂ ನಾನಿಲ್ಲಿಗೆ ಬರಲು ತಯಾರಾಗಿದೀನಿ ಎಂತ.'

'ಈ ಸಲ ನಾನು ಉಳಿಯುವುದೇ ಇಲ್ಲ. ಸ್ಕ್ರೀನಿನ ಆಚೆ ಇರುವ ವಳ ಚೀರಾಟ, ನರಳೋದು ನಾನು ಕೇಳಲಾರೆ' ಎನ್ನುತ್ತಾ ಅವಳು ಮುಖ ಹಿಂಡಿ ಚಿಟ್ಟನೆ ಚೀರಿದಳು. ಅವಳ ಕಣ್ಣಿನಿಂದ ನೀರು ಹರಿಯುತ್ತಿತ್ತು. ದೇಹ ಹೆದರಿಕೆಯಿಂದ ನಡುಗುತ್ತಿತ್ತು. ತಲೆಗೂದಲು ಕೆದರಿ ಚಪ್ಪರವಾಗಿತ್ತು. ನೋವಿನಿಂದ ಮಲಗಲಾರದೇ, ಕೂರಲಾರದೇ ಅವಳು ನನ್ನ ಕೈಗಳನ್ನು ತಳ್ಳಿ ಓಡಿಹೋಗಲು ಯತ್ನಿಸಿದಳು. ನಾನು 'ಆಯಾ'ನ ಕೂಗಿ ಅವಳನ್ನು ಮಲಗಿಸಿ ಹಿಡಿದುಕೊಂಡಿರುವಂತೆ ಹೇಳಿದೆ. 'ಆಯಾ' ಹುಡುಗಿಯನ್ನು ಬಲವಂತದಿಂದ ಮಲಗಿಸಿದಳು. ಅವಳು ನೋವಿನಿಂದ ಚೀರುತ್ತಾ, ಗಾಳಿಯನ್ನು ಗುದ್ದುತ್ತಾ, ತನ್ನ ದೇಹವನ್ನೇ ಪರಚಿಕೊಂಡಳು. ದೇಹದ ರಕ್ತವನ್ನು ಹೆಪ್ಪುಗಟ್ಟಿಸುವಂತಹ ಅವಳ ಚೀತ್ಕಾರ ಅಡಗುವಷ್ಟರಲ್ಲಿ ಎಳೆಯ ಮಗುವಿನ ಆಕ್ರಂದನ ಲೇಬರ್ ವಾರ್ಡಿನಲ್ಲಿ ತುಂಬಿಕೊಂಡಿತು.

ರಣರಂಗದಿಂದ ಮರಳಿ ಬಂದ ಯೋಧನಂತೆ ಹುಡುಗಿ ಬಳಲಿ ಮಲಗಿದ್ದಳು. ಅವಳ ಮುಖ ಗೋಡೆಯಂತೆ ಬೆಳ್ಳಗಾಗಿತ್ತು. ದೇಹವೆಲ್ಲಾ ಬೆವತುಹೋಗಿತ್ತು. ಆಯಾ ಮಗುವನ್ನು ತೊಳೆಯಲು ತೆಗೆದುಕೊಂಡು ಹೋಗಿದ್ದಳು. ಅವಳು ಒಣಗಿದ ತುಟಿಯನ್ನು ನಾಲಿಗೆಯಿಂದ ಸವರಿಕೊಂಡು

'ಎಂತಹ ಮಗು ?' ಎಂದು ಕೇಳಿದಳು.

'ಎಂತಹದಾದರೆ ನಿಮಗೇನು ? ಸ್ವಲ್ಪ ಹೊತ್ತಿನ ಹಿಂದೆ ಮದುವೇನೇ ಮಾಡಿಕೋಬಾರದಾಗಿತ್ತು ಅಂತ ಪಶ್ಚಾತ್ತಾಪ ಪಡುತ್ತಿದ್ದಿರಿ. ಈಗ ಎಂತಹ ಮಗೂಂತ ಆತುರ ತೋರಿಸ್ತೀರಿ' ಎಂದು ನಾನು ಕೀಟಲೆ ಮಾಡಿದೆ.

ಅವಳು ಸಂಕೋಚ, ಸಂತೋಷದಿಂದ ನಕ್ಕು 'ಕೀಟಲೆ ಮಾಡಬೇಡಿ ನರ್ಸ್. ನೋವಿನಲ್ಲಿ ನಮಗೆ ಸಾಕಪ್ಪಾ ಮದುವೆ, ಮಕ್ಕಳು ಎನಿಸಿಬಿಟ್ಟಿರುತ್ತದೆ. ಎಂತಹ ಮಗು ?' ಎಂದು ಮತ್ತೆ ಕೇಳಿದಳು.

'ಗಂಡು ಮಗು.'

ಬತ್ತಿಹೋದ ಅವಳ ಮುಖ ಮಂದಹಾಸದಿಂದ ಪ್ರಜ್ವಲಿತವಾಯಿತು.

' ಸಕ್ಕರೆ ಕೊಡ್ತೀರಿ ತಾನೆ ? '

' ಓಹೋ....ಆಫೀಸಿನ ಕೆಲಸ ಮುಗಿದ ಕೂಡಲೇ ಆಸ್ಪತ್ರೆಗೆ ಬರ್ತೀನೀಂತ ಇವರು ಹೇಳಿದ್ದರು. ಇನ್ನೂ ಯಾಕೆ ಬಂದಿಲ್ಲವೋ ?'

' ಇನ್ನು ಬಂದರೂ ಪರವಾಗಿಲ್ಲ. ಈಗ ಸ್ವಲ್ಪ ಹೊತ್ತಿನ ಹಿಂದೆ ಬಂದಿದ್ದರೆ ಅವರನ್ನ ಜೀವ ಸಹಿತ ನೀವು ಉಳಿಸುತ್ತಿರಲಿಲ್ಲಾಂತ ತೋರುತ್ತದೆ. ಅಲ್ಲವೇ ?'

' ಹೋಗಿ ನರ್ಸ್' ಅವಳು ನಸುಮುನಿಸಿನಿಂದ ನುಡಿದಳು. ಅವಳ ಕಣ್ಣುಗಳು ತೃಪ್ತಿ, ಶಾಂತಿಯ ಪ್ರತಿಬಿಂಬದಂತಿದ್ದವು.

ಏಳು, ಎಂಟನೆಯ ಹೆರಿಗೆಗಾಗಿ ಬಂದವರಿಗೆ ನಮ್ಮ ಲಕ್ಷ್ಯವೇ ಇರುವುದಿಲ್ಲ. 'ಹೀಗೆ ಮಾಡಿ, ಹಾಗೆ ಮಾಡಿ' ಎಂದು ಅವರು ನಮಗೇ ಪಾಠ ಹೇಳಿಕೊಡಲು ಬರುತ್ತಾರೆ.

ನಾನು ಆಕಳಿಸಿ ಮತ್ತೊಮ್ಮೆ ಮೈ ಮುರಿದು ಬಾಗಿಲ ಕಡೆ ನೋಡಿದೆ. ಮುಖ್ಯ ಡಾಕ್ಟರಿಬ್ಬರು ಆತುರಾತುರವಾಗಿ ವಾರ್ಡಿನ ಕಡೆ ಬಂದರು. ಅವರ ಹಿಂದೆಯೇ ಸ್ಟ್ರೆಚರಿನ ಮೇಲೆ ಶ್ರೀಮಂತರ ಹುಡುಗಿಯೊಬ್ಬಳನ್ನು ಹೊತ್ತುಕೊಂಡು ಬಂದರು. ಮುಖ್ಯ ಡಾಕ್ಟರು ನನ್ನ ಬಳಿಗೆ ಬಂದು

' ಈ ಹುಡುಗಿ ಮಂತ್ರಿಗಳ ಮಗಳು—ಅಂಬ್ಯುಲೆನ್ಸ್ ಕರೆಸಿಕೊಂಡು ಕರೆತಂದಿದ್ದಾರೆ. ಎಲ್ಲಿ ಇನ್ನಿಬ್ಬರು ನರ್ಸುಗಳನ್ನು ಬರಹೇಳು....' ಎನ್ನುತ್ತಾ ಸೋಪು ಹಾಕಿ ಕೈ ತೊಳೆಯತೊಡಗಿದರು.

ಪ್ರೇಮಳಿಗೆ ನೋವು ಶುರುವಾಗಿತ್ತು. ನಾನು ಅವಳನ್ನು ಮೇಜಿನ ಮೇಲೆ ಮಲಗಿಸಿ ಮತ್ತಿಬ್ಬರು ನರ್ಸುಗಳನ್ನು ಕರೆಯಲು ಹೋದೆ. ವಾರ್ಡಿನ ಹೊರಗೆ ಜವಾನರು ಸಡಗರದಿಂದ ಅಲ್ಲಿಂದಿಲ್ಲಿಗೆ ಓಡಾಡುತ್ತಿದ್ದರು. ಮಂತ್ರಿಗಳ ಸಂಸಾರ, ಬಂಧು ಬಳಗ, ಸ್ನೇಹಿತರೆಲ್ಲಾ ವಾರ್ಡಿನ ಹೊರಗೆ ಮುಳ್ಳಿನ ಮೇಲೆ ಕುಳಿತವರಂತೆ ಕುಳಿತಿದ್ದರು. ಅವರ ಮುಖದಲ್ಲಿ ಅತುರಕಾತುರ, ಕಳವಳವಿತ್ತು. ನಾನು ಆಚೆ ಬಂದೊಡನೆ ಮಂತ್ರಿಗಳು

' ಇನ್ನೂ ಎಷ್ಟು ಹೊತ್ತಾಗಬಹುದು ?' ಎಂದರು.

' ಇನ್ನೂ ಸ್ವಲ್ಪ ಹೊತ್ತಾಗಬಹುದೂಂತ ಕಾಣತ್ತೆ. ಅರ್ಧ ಗಂಟೆ

ಗೊಂದು ಸಲ ನೋವು ಬರುತ್ತಾ ಇದೆ' ಎನ್ನುತ್ತಾ ನಾನು ಹೊರಟು ಹೋದೆ. ಹೆಚ್ಚಿಗೆ ಇಬ್ಬರು ನರ್ಸುಗಳನ್ನು ನಾನು ಕರೆದುತಂದೆ.

ಪ್ರೇಮ ನೋವಿನಿಂದ ನರಳುತ್ತಿದ್ದಳು. ಆಸ್ಪತ್ರೆಯ ಮುಖ್ಯ ವೈದ್ಯರು, ನರ್ಸುಗಳೆಲ್ಲಾ ಅವಳ ಮೇಜಿನ ಸುತ್ತಲೂ ಪ್ರೋತ್ಸಾಹ, ಭರವಸೆಯ ಮಾತುಗಳನ್ನು ಆಡುತ್ತಾ ನಿಂತಿದ್ದರು.

ನನ್ನ ದೃಷ್ಟಿ ಬಾಗಿಲಿನ ಕಡೆ ಹರಿಯಿತು. ಕಪ್ಪು ಹುಡುಗಿಯೊಬ್ಬಳು ನೋವಿನಿಂದ ಮುಖವನ್ನು ವಕ್ರಮಾಡುತ್ತಾ ಬಾಗಿಲೊರಗಿ ನಿಂತಿದ್ದಳು. ಅವಳ ಬಟ್ಟೆಗಳು ಅವ್ಯವಸ್ಥೆಯಾಗಿದ್ದವು. ಅವಳುನೋವನ್ನು ನುಂಗಲು ತುಟಿ ಕಚ್ಚುತ್ತಾ, ಸೋತವಳಂತೆ ಬಾಗಿಲೊರಗಿನಿಂತಿದ್ದಳು. ಅವಳೊಡನೆ ಕಾತುರದಿಂದ ವೈದ್ಯರ, ನರ್ಸಳ ಮುಖವನ್ನು ನೋಡಿ ದೈನ್ಯದಿಂದ

'ನನ್ನ ಮಗಳನ್ನ ಕಾಪಾಡಬೇಕು' ಎಂದು ಸೆರಗೊಡ್ಡಿ ಕೇಳಿಕೊಳ್ಳುವ ತಾಯಿಯಿರಲಿಲ್ಲ. ಹೆಂಡತಿಗಾಗುತ್ತಿರುವ ಹೆರಿಗೆ ನೋವನ್ನು ತಾನೇ ಅನುಭವಿಸುತ್ತಿರುವಂತೆ ಚಡಪಡಿಸುತ್ತಿದ್ದ ಪತಿ ಅವಳೊಡನಿರಲಿಲ್ಲ ನೋವಿನಿಂದ ಒದ್ದಾಡುವ ಮಗಳನ್ನು ಅಕ್ಕರೆಯ ಮಾತುಗಳಿಂದ ಸಂತಯಿಸುವ ತಂದೆಯಿರಲಿಲ್ಲ.

ಅವಳ ಸೀರೆ ಹರಿದು ಚಿಂದಿಯಾಗಿತ್ತು. ತಲೆಯ ಮೇಲೆ ನಾಲ್ಕಂಗುಲ ಧೂಳಿತ್ತು. ಅವಳು ಊಟ ಮಾಡಿ ಎಷ್ಟು ದಿನಗಳಾಗಿದ್ದವೋ?

ಹೆರಿಗೆಯ ನೋವಿನಿಂದ ಸಂಕಟಪಡುತ್ತಾ ಬಾಗಿಲೊರಗಿ ನಿಂತಿದ್ದ ಅವಳನ್ನು ಯಾರೂ ಗಮನಿಸಿರಲಿಲ್ಲ. ಎಲ್ಲರೂ ಪ್ರೇಮಳ ಆರೈಕೆಯಲ್ಲಿ ಮೈಮರೆತಿದ್ದರು. ಪ್ರೇಮಳ ಶುಶ್ರೂಷೆಗಾಗಿ ಗಡಿಬಿಡಿಯಿಂದ ಓಡಾಡುತ್ತಿದ್ದ ನರ್ಸುಗಳನ್ನು ಮಂತ್ರಿಗಳ ತಂಡದವರು ತಡೆದು

'ಹೇಗಿದಾಳೆ ? ಇನ್ನೂ ಎಷ್ಟು ಹೊತ್ತು ಬೇಕು ?' ಎಂದು ಪ್ರಶ್ನಿಸುತ್ತಿದ್ದರು.

ನಾನು ಪ್ರೇಮಳ ಬಳಿಗೆ ಹೋದೆ. ಅವಳ ಸುತ್ತ ನಾಲ್ಕಾರು ವೈದ್ಯರು, ನರ್ಸುಗಳು ನಿಂತಿದ್ದರು. ನಾನು ಬಾಗಿಲೊರಗಿ ದೈನ್ಯದಿಂದ ನಿಂತಿದ್ದ ಕಪ್ಪು ಹುಡುಗಿಯ ಕಡೆ ಹೋಗಿ

'ನೋವು ಶುರುವಾಗಿದೆಯಲ್ಲವೇ ?' ಎಂದೆ.

ಅವಳು ಮಾತನಾಡದೇ ತಲೆ ಅಲುಗಿಸಿ, ಉಮ್ಮಳಿಸಿ ಬಂದ ನೋವನ್ನು ನುಂಗಿ ಮುಖವನ್ನು ವಿಕಾರ ಮಾಡಿದಳು. ಅವಳಿಗೆ ಐದು ನಿಮಿಷದಲ್ಲಿ ಹೆರಿಗೆಯಾಗುವಂತಿತ್ತು. ನಾನು ಅವಳನ್ನು ಕರೆದೊಯ್ದು ಮೇಜಿನ ಮೇಲೆ ಮಲಗಿಸಿದೆ.

'ಇದು ಎಷ್ಟನೇ ಹೆರಿಗೆ ?'

ಅವಳು ಶೂನ್ಯವಾಗಿ ಎತ್ತಲೋ ನೋಡುತ್ತಾ 'ಮೊದಲನೆಯದು' ಎಂದಳು. ಮೇಜಿನ ಮುಂದೆ ಕುಳಿತು ಲೇಬರ್ ವಾರ್ಡಿನೊಳಗೆ ಅಡ್ಮಿಟ್ ಆದವರ ಹೆಸರು, ವಿಳಾಸವನ್ನು ಬರೆದುಕೊಳ್ಳುತ್ತಿದ್ದ ನರ್ಸ್ 'ಅವಳ ಹೆಸರೇನು ಕೇಳು ಶಾರದ' ಎಂದಳು.

'ನಿನ್ನ ಹೆಸರೇನು ?'

ಅವಳು ತಕ್ಷಣ ಉತ್ತರ ಕೊಡಲಿಲ್ಲ. ಅವಳ ಮುಖ ಯಾವುದೋ ಗಾಢವಾದ ಯೋಚನೆಯ ಸುಳಿಗೆ ಸಿಕ್ಕಿದಂತೆ ತೋರಿತು. ನಾನು ಮತ್ತೆ ಕೇಳಿದೆ

'ನಿನ್ನ ಹೆಸರೇನಮ್ಮ ?'

ಅವಳು ಅನುಮಾನಿಸುತ್ತಾ ತನ್ನ ಹೆಸರು ಹೇಳಿದಳು.

ಅವಳು ತನ್ನ ನಿಜವಾದ ಹೆಸರನ್ನು ಹೇಳುತ್ತಿಲ್ಲವೆಂದು ನನಗೆ ಅನುಮಾನವಾಯಿತು. ನಾನು ಗದರಿಸಿ ಕೇಳಿದೆ

'ನಿನ್ನ ನಿಜವಾದ ಹೆಸರನ್ನು ಹೇಳು. ಸುಳ್ಳು ಹೇಳಬೇಡ'

ಅವಳು ನೀರಿನಲ್ಲಿ ತೇಲುತ್ತಿದ್ದ ಕಣ್ಣುಗಳನ್ನು ನನ್ನ ಕಡೆ ತಿರುಗಿಸಿ 'ನನ್ನ ನಿಜವಾದ ಹೆಸರೇ ಅದು' ಎಂದಳು.

'ನಿನ್ನ ವಿಳಾಸ ?'

ಅವಳು ನೋವಿನಿಂದ ಮುಖ ಹಿಂಡಿ ನನ್ನ ಪ್ರಶ್ನೆ ಕೇಳಿಸಲಿಲ್ಲ ವೆಂಬಂತೆ ನಟಿಸಿದಳು.

'ನಿನ್ನ ಗಂಡನ ಹೆಸರೇನು ? ನಿಮ್ಮ ಮನೆ ಎಲ್ಲಿದೆ ?'

'......................'

'ಮಾತನಾಡೋಕೆ ಬರೋದಿಲ್ಲವೇನು ?'

ಅವಳು ನೋವಿನಿಂದ ಒದ್ದಾಡತೊಡಗಿದಳು. ನಾನು ಪ್ರಶ್ನೆ

ಕೇಳುವುದನ್ನು ನಿಲ್ಲಿಸಿದೆ. ಅವಳು ಇತರ ಪೇಷಂಟುಗಳಂತೆ ಚೀರಾಡಿ, ನರಳಾಡಿ, ಕೈ ಕಾಲುಗಳನ್ನು ಒದರಲಿಲ್ಲ. ನೋವು ಮಿತಿಮೀರಿದಾಗ ಅವಳ ಹುಬ್ಬುಗಳು ಗಂಟಿಕ್ಕುತ್ತಿದ್ದವು. ಕೈ ಬೆರಳಗಳು ಮಡಿಸಿ ಕೊಂಡು ಮತ್ತೆ ನೇರವಾಗುತ್ತಿದ್ದವು. ಹಲ್ಲುಗಳು ತುಟಿಯನ್ನು ಕಚ್ಚಿ ಹಿಡಿಯುತ್ತಿದ್ದವು. ಇಷ್ಟಾದರೂ ಅವಳು ಒಂದು ಬಾರಿಯೂ ನರಳಲಿಲ್ಲ.

'ತುಟಿ ಕಚ್ಚಬೇಡ. ನಿನ್ನ ಕಚ್ಚಾಟದಿಂದ ತುಟಿಯಲ್ಲಿ ಗಾಯ ವಾಗಿ ರಕ್ತ ಬರುತ್ತಿದೆ.'

ನನ್ನ ಮಾತು ಕೇಳಿ ಅವಳು ಸೀರೆಯ ಸೆರಗಿನಿಂದ ತುಟಿಯನ್ನು ಒರಸಿ ಕೊಂಡಳು. ತಲೆಯನ್ನು ಮೇಜಿನ ಮೇಲೆ ಹೊರಳಾಡಿಸಿ ಉಸಿರು ಬಿಗಿ ಹಿಡಿದಳು.

ಅವಳು ಕಪ್ಪಗಿದ್ದರೂ ಮಗು ಬೆಳ್ಳಗೆ ಸುಂದರವಾಗಿತ್ತು. 'ಆಯಾ' ಮಗುವನ್ನು ತೊಳೆಯಲು ತೆಗೆದುಕೊಂಡು ಹೋದಳು. ಇತರ ತಾಯಂದಿರಂತೆ ಅವಳು ಆಸೆ, ಆತುರದಿಂದ, 'ಎಂಥ ಮಗು' ಎಂದು ಕೇಳಲಿಲ್ಲ. ಕಣ್ಣುಗಳು ಮಗುವನ್ನು ನೋಡುವ ಆಸೆಯನ್ನು ವ್ಯಕ್ತಪಡಿಸಲಿಲ್ಲ.

'ಆಯಾ' ಮಗುವನ್ನು ತೊಳೆದು ತಂದು ತಾಯಿಯ ಪಕ್ಕದಲ್ಲಿ ಮಲಗಿಸಿದಳು. ಅವಳು ಇತರರಂತೆ ಅಳುತ್ತಿದ್ದ ಮಗುವನ್ನು ತನ್ನೆದೆಗೆ ಅಪ್ಪಿಕೊಳ್ಳಲಿಲ್ಲ. ಮಗುವಿಗೂ, ತನಗೂ ಏನೇನೂ ಸಂಬಂಧವಿಲ್ಲದವ ಳಂತೆ ಎಲ್ಲೋ ನೋಡುತ್ತಾ ಮಲಗಿದ್ದಳು. ಮಗು ಕೈ ಕಾಲುಗಳನ್ನು ಒದರಿ ಚೀರಾಡಿತು. ಆದರೆ ಅವಳು ಮಾತ್ರ ಮರದ ಗೊಂಬೆಯಂತೆ ಮಲಗಿದ್ದಳು.

ನಾನು ಸೋಪು ಹಾಕಿ ಕೈ ತೊಳೆದುಕೊಂಡು ವಾರ್ಡಿನ ಬಾಗಿಲಿನ ಬಳಿಗೆ ಬಂದೆ. ಪ್ರೇಮಳ ತಾಯಿ, ತಂದೆ, ಬಂಧು ಬಳಗವೆಲ್ಲಾ ಏಕ ಕಂಠದಿಂದ ಕೇಳಿದರು.

'ಏನಾಯಿತು ? ಎಂತಹ ಮಗು ?'

'ಅವರಿಗಿನ್ನೂ ಹೆರಿಗೆಯಾಗಿಲ್ಲ.'

ಪ್ರೇಮಳ ತಾಯಿ ನಿರಾಶೆಯಿಂದ

'ಮಗು ಅತ್ತ ಸದ್ದು ಕೇಳಿಸಿತಲ್ಲಾ' ಎಂದರು. ಮೊಮ್ಮಗುವಿನ ಅಳುವಿನ ಸದ್ದು ಕೇಳಲು ಆಕೆ ತುದಿಗಾಲಿನಲ್ಲಿ, ಕಿವಿ ನಿಮಿರಿಸಿ ನಿಂತಿದ್ದರು.

'ಬೇರೆ ಪೇಷಂಟಿಗೆ ಹೆರಿಗೆಯಾಯಿತು. ಆ ಪೇಷಂಟಿನ ಮನೆಯವರು ಯಾರೂ ಬಂದಿಲ್ಲವೇನು ?'

ವಾರ್ಡಿನ ಹೊರಗೆ ಪ್ರೇಮಳ ಬಳಗದ ಹೊರತು ಬೇರಾರೂ ನಿಂತಿರಲಿಲ್ಲ. ಎಂತಹ ಮಗು, ಅವಳು ಹೇಗಿದ್ದಾಳೆ ಎಂದು ಸಂಕೋಚದಿಂದ ಪ್ರಶ್ನಿಸಬೇಕಾದ ಅವಳ ಗಂಡ ಅಲ್ಲಿರಲಿಲ್ಲ.

'ಇನ್ನೂ ಎಷ್ಟು ಹೊತ್ತಾಗುವುದು ? ಪ್ರೇಮಳ ತಂದೆ ಕೇಳಿದರು.

'ಇನ್ನೂ ಕೊಂಚ ಹೊತ್ತಾಗಬಹುದು.'

'ದೇವರೇ, ಮಗೂಗೆ ಸುಖವಾಗಿ ಹೆರಿಗೆ ಆದರೆ ನಿನಗೆ ಬೆಳ್ಳಿಯ ನಂದಾದೀಪ ಮಾಡಿಸಿ ಕೊಡುತ್ತೇನೆ' ಎಂದು ಪ್ರೇಮಳ ತಾಯಿ ಭಕ್ತಿಯಿಂದ ದೇವರಿಗೆ ಹರಸಿಕೊಂಡರು.

'ಗಂಡು ಮಗುವಾದರೆ ನಿನಗೆ ಮುಡಿಕೊಡುತ್ತೀವಿ' ತಂದೆ ಬೇಡಿಕೊಂಡರು.

ಪ್ರೇಮಳ ಅಜ್ಜಿ 'ಸುಖವಾಗಿ ಹೆರಿಗೆಯಾದರೆ ನಿನಗೆ ಲಕ್ಷದೀಪ ಹಚ್ಚುತ್ತೇನೆ' ಎಂದು ಕುಳಿತಲ್ಲಿಂದಲೇ ಹಿಮಗಿರಿಯೊಡೆಯನನ್ನು ಪ್ರಾರ್ಥಿಸಿಕೊಂಡರು.

ಅವರ ಮಾತು ಕೇಳಿ ನನಗೆ ಪದ್ಯವೊಂದು ನೆನಪಿಗೆ ಬಂತು

'ಮರಣದ ಭೀತಿಯು ತಲೆದೋರಲು
ದೀಪವ ಹಚ್ಚಿಸಿ 'ಶಿವ ಪೊರೆಯೆಂದರೆ,'
'ಆ ಪರಮಗೆ ಕತ್ತಲೆಯಿಲ್ಲ.'

ವೈದ್ಯರೊಬ್ಬರು ಆಗಾಗ್ಗೆ ಪ್ರೇಮಳ ತಂದೆಯ ಬಳಿಗೆ ಬಂದು ಧೈರ್ಯದ ಮಾತುಗಳನ್ನು ಹೇಳಿ ಹೋಗುತ್ತಿದ್ದರು.

ಕಪ್ಪುಹುಡುಗಿಗೆ ಹೆರಿಗೆಯಾದ ಮುಕ್ಕಾಲು ಗಂಟೆಯ ನಂತರ ಪ್ರೇಮ ಗಂಡು ಮಗುವೊಂದರ ತಾಯಿಯಾದಳು. ಮಗುವಿನ ಅಳು ಕೇಳಿ ಹೊರಗಿದ್ದವರೆಲ್ಲಾ ಸಲೀಸಾಗಿ ಉಸಿರಾಡಿದರು. ಮುಖ್ಯ ವೈದ್ಯರು ಸ್ವತಃ ಹೋಗಿ ಪ್ರೇಮಳ ತಂದೆಗೆ ಮೊಮ್ಮಗನ ಜನನದ ಶುಭವಾರ್ತೆಯನ್ನು ತಿಳಿಸಿ,

ಪ್ರೇಮಳ ಪತಿಯನ್ನು ಅಭಿನಂದಿಸಿದರು.

ನಾನು ಜವಾನರನ್ನು ಕರೆದು, ಕಪ್ಪು ಹುಡುಗಿಯನ್ನು ಸ್ಟ್ರೆಚರಿನ ಮೇಲೆ ಕರೆದೊಯ್ದು ಜನರಲ್ ವಾರ್ಡಿನಲ್ಲಿ ಮಲಗಿಸುವಂತೆ ಹೇಳಿದೆ. ಅವಳ ಉಡಿಗೆ, ತೊಡಿಗೆ, ಏಕಾಂಗಿಯಾಗಿ ಬಂದ ರೀತಿ, ಅವಳವರೆನಿಸಿ ಕೊಳ್ಳುವವರು ಯಾರೂ ಇಲ್ಲದಿರುವುದನ್ನು ಗಮನಿಸಿದ್ದ ಜವಾನರು 'ಈಗ ಬಂದೆ ಕೊಂಚ ಕೆಲಸವಿದೆ' ಎಂದು ನೆಪ ಹೇಳಿ ಒಬ್ಬೊಬ್ಬ ರಾಗಿ ತಪ್ಪಿಸಿಕೊಂಡು ಹೋದರು.

ಪ್ರೇಮಳಿಗಾಗಿ ದಿನಕ್ಕೆ ಹತ್ತು ರೂಪಾಯಿನ ವಾರ್ಡು ಸಿದ್ಧವಾಯಿತು. ನರ್ಸಿಬ್ಬರು ವಾರ್ಡಿನ ಮೇಜನ್ನು ಹೂದಾನಿ, ರಂಗು ರಂಗಿನ ಹೂವುಗಳಿಂದ ಅಲಂಕರಿಸಿದರು. ಸಿದ್ಧತೆಗಳೆಲ್ಲಾ ಮುಗಿದ ಮೇಲೆ ಮುಖ್ಯ ವೈದ್ಯರು ಸ್ಪೆಷಲ್ ವಾರ್ಡಿಗೆ ಹೋಗಿ, ಎಲ್ಲವನ್ನೂ ಪರಾಮರ್ಶಿಸಿ 'ಎಲ್ಲಾ ಸರಿಯಾಗಿದೆ' ಎಂದು ತೀರ್ಪಿತ್ತು, ಲೇಬರ್ ವಾರ್ಡಿಗೆ ಮರಳಿ ಬಂದು

'ಸ್ಟ್ರೆಚರು ತನ್ನಿ' ಎಂದರು.

ನಾಲ್ಕು ಜನ ಎತ್ತಿಕೊಂಡು ಹೋಗುವ ಸ್ಟ್ರೆಚರನ್ನು ಹಿಡಿಯಲು ಎಂಟುಜನ ಜವಾನರಿಗೆ ಬಡಿದಾಟವಾಯಿತು. ಸ್ಟ್ರೆಚರು ಬರುವುದು ತಡವಾಗಲು, ಮುಖ್ಯ ವೈದ್ಯರು ನಿಂತಲ್ಲಿಂದಲೇ ಮತ್ತೊಮ್ಮೆ ಕೂಗಿದರು. ಕೂಡಲೇ ನಾಲ್ಕು ಜನ ಓಡಿಬಂದರು. ಪ್ರೇಮಳನ್ನು ಸ್ಟ್ರೆಚರಿಗೆ ಸರಿಸಿ, ತಾಯಿ, ಮಗುವನ್ನು ಹೊತ್ತುಕೊಂಡು ಸ್ಪೆಷಲ್ ವಾರ್ಡಿನಕಡೆ ನಡೆದರು. ವೈದ್ಯರು ಅವರೊಡನೆ ಹೋಗಿ ಪ್ರೇಮಳನ್ನು ಸರಿಯಾಗಿ ಮಲಗಿಸಿ, ಪ್ರೇಮಳ ತಂದೆಯ ಕಡೆ ತಿರುಗಿ ನಗುತ್ತಾ

'ಬಾನಿ ಬೇಬಿ' ಎಂದು ಕೇವಲ ಐದು ಪೌಂಡಿದ್ದ ಪ್ರೇಮಳ ಮಗುವಿನ ಕೆನ್ನೆ ಸವರಿ ಹೊಗಳಿ ನುಡಿದರು.

ಸ್ಟ್ರೆಚರನ್ನು ತಂದ ಜವಾನರು ಕೈ ಕಟ್ಟಿ ಹಲ್ಲು ಕಿರಿಯುತ್ತಾ, ವಾರ್ಡಿನ ಒಂದು ಮೂಲೆಯಲ್ಲಿ ಭಯ ಭಕ್ತಿಯಿಂದ ನಿಂತರು. ಪ್ರೇಮಳ ತಂದೆ ಪರ್ಸು ತೆಗೆದು ಅವರ ಕೈಗೆ ಒಂದು ರೂಪಾಯನ್ನು ಹಾಕಿ

" ಕಾಫಿ ಕುಡಿಯಿರಿ " ಎಂದರು.

ಜವಾನರು ಕೈ ಮುಗಿದು ಹೊರಗೆ ಹೋದರು.

' ಈಗ ಯಾರೂ ಪೇಷಂಟನ್ನ ತೊಂದರೆ ಮಾಡೋದು ಬೇಡ. ಅವರು ಚೆನ್ನಾಗಿ ನಿದ್ದೆ ಮಾಡಲಿ ' ಎಂದು ಮುಖ್ಯ ವೈದ್ಯರು ಸಲಹೆ ಸೂಚಿಸಿ, ಪ್ರೇಮಳ ತಂದೆಗೆ ಕೈ ಮುಗಿದು ಹೋದರು. ಅವರ ಹಿಂದೆಯೇ ನಾನೂ ವಾರ್ಡಿನಿಂದ ಹೊರಗೆ ಬಂದು, ಲೇಬರ್ ವಾರ್ಡಿನ ಕಡೆ ನಡೆದೆ.

ಅವಳು ಲೇಬರ್ ವಾರ್ಡಿನಲ್ಲಿಯೇ ಒರಟಾದ ಮರದ ಮೇಜಿನ ಮೇಲೆ ಮಲಗಿದ್ದಳು. ನಾನು ಹತ್ತಿರದಲ್ಲಿದ್ದ ಜವಾನನ್ನು ಕೂಗಿ ರೇಗಿ ಹೇಳಿದೆ

' ಎಷ್ಟು ಸಲ ನಿಮಗೆ ಹೇಳಬೇಕು—ಈ ತಾಯಿ, ಮಗೂನ ಜನರಲ್ ವಾರ್ಡಿಗೆ ಸೇರಿಸಿ ಬನ್ನಿ. ಈಗಲೇ ಸ್ಟ್ರೆಚರು ತರದಿದ್ದರೆ ಅಮ್ಮಾವರಿಗೆ ಹೇಳುತ್ತೇನೆ. '

ಅವನು ' ಇನ್ನು ಮೂರು ಜನರನ್ನ ಕರೆದು ತರುತ್ತೇನೆ ' ಎಂದು ಹೇಳಿ ಹೋದ ಅರ್ಧ ಗಂಟೆಯ ನಂತರ ಇನ್ನು ಮೂವರೊಡನೆ ಬಂದ.

ಅಂತೂ ಅವಳನ್ನು ಲೇಬರ್ ವಾರ್ಡಿನಿಂದ ಹೊರಗೆ ಸಾಗಿಸಿದ್ದಾಯಿತು. ಸಂಜೆ ಯಾವ ಕೇಸೂ ಬಾರದಿದ್ದುದರಿಂದ ಒಂದೇ ಕಡೆ ಕುಳಿತು ಬೇಸರವಾಯಿತು. ಬೆಳಿಗ್ಗೆ ಹೆರಿಗೆಯಾದ ಪ್ರೇಮಳನ್ನು ನೋಡಿಕೊಂಡು ಬರಲು ನಾನು ಸ್ಪೆಷಲ್ ವಾರ್ಡಿಗೆ ಹೋದೆ. ವಾರ್ಡಿಗೆ ಪ್ರವೇಶಿಸುವುದಕ್ಕೆ ಮುಂಚೆಯೇ ಈವಿನಿಂಗ್ ಇನ್ ಪ್ಯಾರಿ, ಮೈಸೂರು ಮಲ್ಲಿಗೆಯ ಸುಗಂಧ ನನ್ನ ಮೂಗನ್ನು ಮುತ್ತಿದವು. ನಾನು ಓರೆಯಾಗಿದ್ದ ಬಾಗಿಲನ್ನು ಸರಿಸಿ ಒಳಗೆ ಹೋದೆ. ಪ್ರೇಮಳ ಹಾಸಿಗೆಯ ಸುತ್ತ ನಾಲ್ಕು ಜನ ಶ್ರೀಮಂತ ಮಹಿಳೆಯರು ಕುಳಿತಿದ್ದರು. ಅವರುಟ್ಟಿದ್ದ ಮೈಸೂರು ಜಾರ್ಜೆಟ್ ಸೀರೆ, ಒಡವೆಗಳನ್ನು ನೋಡಿ ನಾನು ಬೆರಗಾದೆ. ಮುತ್ತು, ಕೆಂಪಿನ ಒಡವೆಗಳನ್ನು ನಾನು ಕನಸಿನಲ್ಲಿಯೂ ಕಂಡಿರಲಿಲ್ಲ. ಅವರು ಕಿಲಕಿಲನೆ ನಗುತ್ತಾ ಪ್ರೇಮಳೊಡನೆ ಸರಸವಾಗಿ ಮಾತನಾಡುತ್ತಿದ್ದರು. ಪ್ರೇಮ ತಲೆಗೆ ಮಫ್ಲರ್ ಕಟ್ಟಿಕೊಂಡು, ತುಂಬುದೋಳಿನ

ಹಸಿರು ಸ್ವೆಟರು ಹಾಕಿಕೊಂಡು ಹಾಸಿಗೆಯ ಮೇಲೆ ಮಲಗಿದ್ದಳು.

ತಾಯಿ, ಮಗುವನ್ನು ನೋಡಿಕೊಳ್ಳಲು ಪ್ರೇಮಳ ತಂದೆ ಸ್ಪೆಷಲ್ ನರ್ಸ್ ಒಬ್ಬಳನ್ನು ನೇಮಿಸಿದ್ದರು.

ನಾನು ಪ್ರೇಮಳ ಮಂಚದ ಬಳಿ ನಿಂತು

' ಹುಷಾರಾಗಿದ್ದೀರಾ ? ' ಎಂದೆ

' ಹೂಂ '

' ರಾತ್ರಿ ಮನೆಯಿಂದ ಯಾರಾದ್ರೂ ಬರ್ತಾರೇನು ? '

' ಹೂಂ. ನಮ್ಮ ತಂದೆ ಅಮ್ಮನ್ನ ಕಾರಿನಲ್ಲಿ ಕರ್ಕೊಂಡು ಬಂದು ಬಿಟ್ಟು ಹೋಗ್ತಾರೆ. '

' ಅವರೇ ಮಗೂನ ನೋಡಿಕೋತಾರೆಯೇ ? '

' ಇಲ್ಲ. ರಾತ್ರಿ ಮಗೂನ ನೋಡಿಕೊಳ್ಳಲು ಬೇರೊಬ್ಬ ನರ್ಸ್‌ನ ಗೊತ್ತುಮಾಡಿದಾರೆ.'

ನಾನು ಕಣ್ಣು ಬಾಯಿ ಬಿಟ್ಟುಕೊಂಡು ಪ್ರೇಮಳ ಗೆಳತಿಯರ ಒಡವೆ, ವಸ್ತ್ರವನ್ನು ನೋಡಿ, ನಂತರ ವಾರ್ಡಿನಿಂದ ಹೊರಗೆ ಬಂದೆ. ಹಾಗೆಯೇ ವಾರ್ಡಿಂದ ವಾರ್ಡಿಗೆ ಸುತ್ತಾಡುತ್ತಾ ಜನರಲ್ ವಾರ್ಡಿನ ಕಡೆ ಬಂದೆ.

ಬೆಳಗ್ಗೆ ನಾನು ಹೆರಿಗೆ ಮಾಡಿಸಿದ ಹುಡುಗಿ ಜನರಲ್ ವಾರ್ಡಿನಲ್ಲಿ ಮಲಗಿದ್ದಳು. ವಿಸಿಟರ್ಸ್ ಬರುವ ಸಮಯವಾಗಿದ್ದುದರಿಂದ ಪ್ರತಿಯೊಂದು ಬೆಡ್ಡಿನ ಸುತ್ತಲೂ ನೆಂಟರು, ಸ್ನೇಹಿತರು ಗುಂಪು ಕಟ್ಟಿ ನಿಂತು ಪೇಷಂಟುಗಳೊಡನೆ ಮಾತನಾಡುತ್ತಿದ್ದರು. ಆದರೆ ಆ ಹುಡುಗಿಯ ಹಾಸಿಗೆಯ ಬಳಿ ಯಾರೂ ಇರಲಿಲ್ಲ. ನಾನು ನಿಧಾನವಾಗಿ ಅವಳ ಬಳಿಗೆ ಹೋದೆ.

ಅದೇ ಶೂನ್ಯ ದೃಷ್ಟಿ, ಅದೇ ಭಾವರಹಿತ ಮುಖ.

ಮಗು ಶ್ವಾಸಕೋಶಗಳು ಒಡೆದು ಹೋಗುವವೇನೋ ಎನ್ನುವ ಹಾಗೆ ಚೀರುತ್ತಿತ್ತು. ಆದರೆ ಕಂದನ ಕರೆ ತಾಯಿಯ ಹೃದಯವನ್ನು ಸ್ಪರ್ಶಿಸಿರಲಿಲ್ಲ. ಅವಳು ಏನನ್ನೂ ಕೇಳದವಳಂತೆ, ಯಾರನ್ನೂ ನೋಡದವಳಂತೆ,ಜೀವರಹಿತಳಂತೆ, ಹೃದಯಹೀನಳಂತೆ ಮಲಗಿದ್ದಳು.

ಮಗುವಿನ ಚೀರಾಟ ಕೇಳಿ ನಾನು ಅವಳನ್ನು ಗದರಿಸಿದೆ.

' ಮಗು ಅಳುತ್ತಾ ಇದೆ. ಎತ್ತಿಕೊಳ್ಳಬಾರದೇನು ?

ಅವಳು ನನ್ನ ಕಡೆ ನೋಡಿ ' ಏನು ' ಎನ್ನುವಂತೆ ತಲೆ ಅಲುಗಿಸಿದಳು. ನಾನು ತೊಟ್ಟಿಲಿನ ಕಡೆ ಬೆರಳು ತೋರಿಸಿದೆ. ಅವಳು ಎದ್ದು ಕುಳಿತು, ಮಗುವನ್ನು ತೊಡೆಯ ಮೇಲೆ ಮಲಗಿಸಿಕೊಂಡಳು.

ಎಂತಹ ಸುಂದರವಾದ ಮಗು ! ಈ ಮಗುವಿಗೆ 'ಬಾನಿ ಬೇಬಿ' ಎಂದು ಹೇಳಿದರೆ ಒಪ್ಪುತ್ತದೆ. ಅದು ಬಿಟ್ಟು, ಪ್ರೇಮಳ ಸಾಲಿಗ್ರಾಮ ಶಿಲೆಯಂತಹ ಐದು ಪೌಂಡಿನ ಮಗುವನ್ನು 'ಬಾನಿ ಬೇಬಿ' ಎಂದರೆ ?

ಗೌರವ ವರ್ಣದ ಗುಂಗುರು ಕೂದಲಿನ ಮಗು ನಿಜವಾಗಿಯೂ ಮುದ್ದಾಗಿತ್ತು. ಇವಳ ಗಂಡ ಬೆಳ್ಳಗಿರಬಹುದು. ಆದರೆ ಇವಳನ್ನ ನೋಡೋದಕ್ಕೆ ಯಾಕೆ ಯಾರೂ ಬರಲಿಲ್ಲ ? ಬೆಳಿಗ್ಗೆ ಸಹ ಇವಳೊಡನೆ ಯಾರೂ ಬಂದಿರಲಿಲ್ಲ.

' ನಿನ್ನ ನೋಡೋಕೆ ಮನೆಯಿಂದ ಯಾರೂ ಬರಲಿಲ್ಲವೇ ?'

' ಇಲ್ಲ.'

' ಯಾರೂ ಬರೋದಿಲ್ಲವೇ ?'

' ................ '

' ನಿನಗೆ ಯಾರೂ ಇಲ್ಲವೇ ?'

' ಇಲ್ಲ.'

' ತಾಯಿ, ತಂದೆ, ಗಂಡ ?'

' ಇಲ್ಲ.'

' ಬಂಧುಗಳು ?'

' ಇಲ್ಲ.'

' ಸ್ನೇಹಿತರು ?'

' ಇಲ್ಲ.'

ನಾನು ಸನ್ನಿವೇಶವನ್ನು ಊಹಿಸಿಕೊಂಡೆ. ಅವಳನ್ನು ಕಂಡು ನನಗೆ ಮರುಕವಾಯಿತು. ನಾನವಳ ಬೆನ್ನು ತಟ್ಟಿ

' ಏನೂ ಯೋಚನೆ ಮಾಡಬೇಡ. ಮನುಷ್ಯರೆಂದ ಮೇಲೆ ಎಲ್ಲರೂ

ತಪ್ಪು ಮಾಡುತ್ತಾರೆ. ನೀನು ದುಡುಕಿದೀಯ. ಒಬ್ಬ ಗಂಡಸಿನ ಹೇಡಿತನದಿಂದಾಗಿ ನೀನು ಈ ಶಿಕ್ಷೆ ಅನುಭವಿಸಬೇಕಾಗಿದೆ. ಇನ್ನು ಮುಂದೆ ಎಚ್ಚರಿಕೆಯಿಂದಿರು. ಗಂಡಸರನ್ನು ಸುಲಭವಾಗಿ ನಂಬಬೇಡ. ತನ್ನ ಕೆಲಸವಾಗುವವರೆಗೆ ಗಂಡಸು ಹೆಣ್ಣಿನ ದಾಸ. ಅನಂತರ ತನಗೂ, ಹೆಣ್ಣಿಗೂ ಏನೇನೂ ಸಂಬಂಧವಿಲ್ಲದಂತೆ ವರ್ತಿಸುತ್ತಾನೆ. ಗಂಡಸರು ಬೆಂಕಿಯ ಹಾಗೆ. ಅವರನ್ನು ಮುಟ್ಟಿದರೆ ನಮ್ಮ ಕೈ ಸುಡುತ್ತದೆ. ಸುಟ್ಟಗಾಯದ ಕಲೆ ಸಾಯುವವರೆಗೂ ಮಾಸುವುದಿಲ್ಲ....'

ಅವಳು ತಲೆ ತಗ್ಗಿಸಿದಳು ಸ್ವಲ್ಪ ಹೊತ್ತು ಹಾಗೆಯೇ ಕುಳಿತಿದ್ದು, ತಗ್ಗಿದ ದನಿಯಲ್ಲಿ ಅವಳು ನಿಧಾನವಾಗಿ ಉತ್ತರ ಕೊಟ್ಟಳು.

'ಈ ಬಗೆಯ ಸಹಾನುಭೂತಿಯ ಮಾತುಗಳು ನನಗೆ ಹೊಸದು. ಮುಳ್ಳಿನ ನಾಲಿಗೆ, ಜೋಡು ಮೆಟ್ಟಿದ ಕಾಲುಗಳ ಪರಿಚಯ ನನಗಿದೆಯೇ ಹೊರತು ಜೇನಿನ ಹೃದಯ ನನಗೆ ತೀರಾ ಹೊಸದು ಬೈಗಳನ್ನು ನಾನು ಸೈರಿಸಬಲ್ಲೆ. ಆದರೆ ಮರುಕವನ್ನು ನನ್ನ ದುರ್ಬಲ ಹೃದಯ ತಡೆದುಕೊಳ್ಳಲಾರದು. ಬೆಳಕು ಕಾಣದಷ್ಟು ಕತ್ತಲಲ್ಲಿ ನಾನು ಮುಳುಗಿದ್ದೇನೆ. ಆದರೆ ನೀವು....' ಮಾತನಾಡುತ್ತಾ ಅವಳಿಗೆ ನಾಲಿಗೆ ತೊದಲಿತು.

ನಾನು ಬಗ್ಗಿ ಮತ್ತಷ್ಟು ಮೃದುವಾಗಿ ಕೇಳಿದೆ

'ಜನ ನಿನ್ನನ್ನು ಬಹಳ ಹಿಂಸಿಸಿದರೇನು ? '

'ನಾನಿನ್ನೂ ಬದುಕಿದ್ದೇನೆ. ಅದೇ ಆಶ್ಚರ್ಯ.'

'ಅಪ್ಪ, ಅಮ್ಮ ನಿನ್ನ ಮನೆ ಬಿಟ್ಟು ಕಳಿಸಿದರೇನು ?'

'ಇಲ್ಲ. ನನ್ನ ಸ್ಥಿತಿಯ ಅರಿವಾದೊಡನೆ ಅವರಿಗೆ ಮುಖ ತೋರಲು ಹೆದರಿ, ನಾನೇ ಮನೆ ಬಿಟ್ಟು ಹೊರಟು ಬಂದೆ.'

'ಹಾಗಾದರೆ ನೀನು ಎಲ್ಲಿದೀಯ, ಹೇಗಿದೀಯ ಎನ್ನುವುದು ಅವರಿಗೆ ತಿಳಿದಿಲ್ಲವೇ ?'

'ಇಲ್ಲ.'

'ಅವರು ನಿನ್ನನ್ನು ಹುಡುಕಿಸಲು ಪ್ರಯತ್ನಿಸಲಿಲ್ಲವೇ ?'

'ನನಗೆ ಗೊತ್ತಿಲ್ಲ.'

'ನೀನು ಮನೆ ಬಿಟ್ಟು ಬಂದಾಗ ನಿನಗೆಷ್ಟು ತಿಂಗಳಾಗಿತ್ತು ?'

'ಮೂರು ತಿಂಗಳಾಗಿತ್ತು.'

'ಇದುವರೆವಿಗೆ ಹೇಗೆ ಜೀವನ ಮಾಡಿದೆ ?'

'ಕೂಲಿ ಮಾಡಿದೆ. ಭಿಕ್ಷೆ ಬೇಡಿದೆ. ಯಾವುದೂ ಸಿಕ್ಕದಿದ್ದ ದಿನ ಉಪವಾಸ ಮಾಡಿದೆ. ನಾಯಿ ನರಿಗಳಿರುವುದಿಲ್ಲವೇ ?'

'ಆದರೂ ನಿನ್ನ ಮಗಳು ಚೆನ್ನಾಗಿಯೇ ಬೆಳೆದಿದ್ದಾಳೆ. ಹುಟ್ಟಿದಾಗ ಏಳೂವರೆ ಪೌಂಡಿದ್ದಳು. ಆದರೆ ಒಂಭತ್ತು ತಿಂಗಳಾಗುವವರೆಗೆ ಹಾಲು, ಹಣ್ಣು, ಟಾನಿಕ್ಕು, ಮೊಸರು, ತುಪ್ಪದಲ್ಲಿಯೇ ಇದ್ದ ಪ್ರೇಮನ ಮಗು ಬಡಕಲಾಗಿಯೇ ಇದೆ.'

'ಪ್ರೇಮ ಯಾರು ?'

'ಇವತ್ತು ಬೆಳಿಗ್ಗೆ ನಿನ್ನ ಜೊತೆ....'

'ಓ ಸರಿ.'

'ಮಂತ್ರಿಯ ಮಗಳು.'

'ಪುಣ್ಯವಂತೆ.'

'ನಿನ್ನ ಮಗುವಿನ ತಂದೆಗೆ ನಿನ್ನ ಸ್ಥಿತಿ ಗೊತ್ತೇ ?'

'ನನ್ನನ್ನು ಈ ಸ್ಥಿತಿಗೆ ತಂದು, ಮದುವೆಯಾಗಲು ಹೆದರಿ ಅವರು ರೂಮು ಬದಲಾಯಿಸಿ, ವಿಳಾಸ ತಿಳಿಸದೆ ಹೊರಟು ಹೋದರು. ಅವರು ಈ ಭೂಮಿ ಮೇಲಾದರೂ ಇರುವರೋ, ಇಲ್ಲವೋ ಅದು ಸಹ ನನಗೆ ತಿಳಿಯದು.'

'ನೀನು ದುಡುಕಿದೆ ಅಲ್ಲವೇ ?'

'ಹೌದು. ಅದರ ಫಲ ಈಗ ಅನುಭವಿಸುತ್ತಿದ್ದೇನೆ.'

'ಹೊಲಸು ತಿಂದು ಹಸಿವನ್ನು ಅಡಗಿಸುವ ಯತ್ನ ಮಾಡಬಾರದಮ್ಮ.'

ನನ್ನ ಮಾತುಗಳನ್ನು ಕೇಳಿ ಅವಳು ಮತ್ತೆ ತಲೆ ತಗ್ಗಿಸಿದಳು. ನಾನು ಅವಳು ತಲೆ ಎತ್ತುವಳೇನೋ ಎಂದು ಸ್ವಲ್ಪ ಹೊತ್ತು ಅಲ್ಲಿಯೇ ನಿಂತಿದ್ದೆ. ಆದರೆ ಅವಳು ಬಗ್ಗಿಸಿದ ತಲೆಯನ್ನು ಎತ್ತಲಿಲ್ಲ. ತೊಡೆಯ ಮೇಲೆ ಮಲಗಿದ್ದ ಮಗು ಹಸಿವಿನಿಂದ ಅಳುತ್ತಿತ್ತು. ಅವಳು ಅದನ್ನು ಸಮಾಧಾನ ಪಡಿಸುವ ಯತ್ನ ಮಾಡಲಿಲ್ಲ.

ನಾನು ನಿಧಾನವಾಗಿ ಅಲ್ಲಿಂದ ಸರಿದು ಹೋದೆ.

ನಾನು ಆಗಾಗ್ಗೆ ಅವಳನ್ನು ನೋಡಿಕೊಂಡು ಬರುತ್ತಿದ್ದರೂ ಅವಳೊಡನೆ ಪುನಃ ಮಾತನಾಡಿರಲಿಲ್ಲ.

ಹನ್ನೊಂದನೆಯ ದಿನ ಪ್ರೇಮ ಮಗುವಿನೊಡನೆ ಮನೆಗೆ ಹೊರಟಳು.

ಪ್ರೇಮಳ ತಂದೆ ಆಸ್ಪತ್ರೆಯ ಪೋರ್ಟಿಕೋದಲ್ಲಿ ಕಾರನ್ನು ತಂದು ನಿಲ್ಲಿಸಿದರು. ಪ್ರೇಮ ಮನೆಯಿಂದ ತಂದಿದ್ದ ರೇಷ್ಮೆ ಸೀರೆಯನ್ನುಟ್ಟು ಕೊಂಡು, ಮಗುವಿಗೆ ಸಿಲ್ಕಿನ ಅಂಗಿಯನ್ನು ಹಾಕುತ್ತಿದ್ದಳು. ನರ್ಸುಗಳು, ಆಯಾಗಳು, ಜವಾನರು ಎಲ್ಲರಿಗೂ ಅವರವರ ದರ್ಜೆಗನುಸಾರವಾಗಿ ಭಕ್ಷೀಸು ಕೊಡಲಾಯಿತು. ಮುಖ್ಯವೈದ್ಯರು ಸ್ವತಹ ಪ್ರೇಮಳನ್ನು ಕಾರಿನವರೆವಿಗೆ ಕರೆದು ತಂದರು. ಡವಾಲಿ ಜವಾನ ಕಾರಿನ ಬಾಗಿಲನ್ನು ತೆಗೆದ. ಪ್ರೇಮಳ ತಂದೆ ವೈದ್ಯರಿಗೆ ನಮಸ್ಕಾರ ಮಾಡಿ

' ಮಗುವಿನ ನಾಮಕರಣಕ್ಕೆ ಹೇಳಿ ಕಳುಹಿಸುತ್ತೇನೆ. ಖಂಡಿತ ದಯಮಾಡಿಸಬೇಕು ' ಎಂದರು.

' ಆಗತ್ಯವಾಗಿ ಆಗಲಿ. ಬರ್‍ತಿಯಾಮ್ಮಾ ಪ್ರೇಮಾ ?'

' ಹೂಂ. ' ಶಾಲನ್ನು ಮತ್ತಷ್ಟು ಸುತ್ತಿಕೊಂಡು ಪ್ರೇಮ ಹೇಳಿದಳು. ತಂದೆ, ಮಗಳು ಕಾರುಹತ್ತಿದರು. ಜವಾನ ಬಾಗಿಲನ್ನು ಮುಚ್ಚಿದ. ಸೊಗಸಾದ ಬ್ಯೂಕ್ ಕಾರು ಟಾರು ರಸ್ತೆಯ ಮೇಲೆ ತೇಲಿಕೊಂಡು ಹೋಗುತ್ತಿತ್ತು. ಕಾರು ಕಣ್ಮರೆಯಾಗುವವರೆವಿಗೆ ನಾವೆಲ್ಲರೂ ಪೋರ್ಟಿಕೋದಲ್ಲಿ ನಿಂತಿದ್ದೆವು. ಕಾರು ಕಣ್ಣಿಗೆ ಕಾಣಿಸದಾಗಲು ಎಲ್ಲರೂ ಒಳಗೆ ಹಿಂದಿರುಗಿದರು. ನಾನು ತಲೆ ಬಗ್ಗಿಸಿ ಲೇಬರ್ ವಾರ್ಡಿನ ಕಡೆ ಹೊರಟಾಗ, ಅವಳು ತನ್ನ ಹನ್ನೊಂದು ದಿನದ ಮಗುವಿನೊಡನೆ ಹೊರಟಿದ್ದಳು.

ಅವಳೊಡನೆ ಯಾರೂ ಇರಲಿಲ್ಲ. ಅವಳು ಆಸ್ಪತ್ರೆಯ ಲಂಗವನ್ನು ಕಳಚಿ, ಮೊದಲ ದಿನ ತಾನುಟ್ಟುಕೊಂಡು ಬಂದಿದ್ದ ಹರಕು ಸೀರೆಯನ್ನೇ ಧರಿಸಿದ್ದಳು. ಮಗು ಅವಳ ಹೆಗಲ ಮೇಲೆ ಮಲಗಿ ನಿದ್ರಿಸುತ್ತಿತ್ತು.

ಅವಳನ್ನು ನೋಡಿ ನಾನು ಅಲ್ಲಿಯೇ ನಿಂತು ಕೇಳಿದೆ

' ಹೊರಟುಬಿಟ್ಟೆಯಾ ? '

'ಹೂಂ.'

'ಎಲ್ಲಿಗೆ ಹೋಗ್ತೀಯಾ?'

'ಹೀಗೇ........' ಅವಳು ತಡೆದು ನುಡಿದಳು.

ನಾನು ಅವಳನ್ನು ಕೇಳುವುದು ಏನೂ ಉಳಿದಿರಲಿಲ್ಲ. ಆದರೂ ನನಗೆ ಅಲ್ಲಿಂದ ಹೋಗಲು ಮನಸ್ಸು ಬರಲಿಲ್ಲ. ಅವಳ ಮುಖದ ಮೇಲೆ ಧೃಡ ನಿರ್ಧಾರವಿತ್ತು. ತನ್ನ ವ್ಯಥೆ, ಸಂಕಟ, ನೋವನ್ನೆಲ್ಲಾ ಅವಳು ಹೃದಯದಲ್ಲಿ ಅದುಮಿಟ್ಟು ಬಾಯಿಯನ್ನು ಭದ್ರವಾಗಿ ಮುಚ್ಚಿಕೊಂಡಿದ್ದಳು. ಆದರೆ ಕೆಚ್ಚು, ಛಲ ಕಣ್ಣುಗಳಿಂದ ನುಗ್ಗಿ ಬರುತ್ತಿದ್ದವು. ನನಗೆ ಅವಳ ಮುಖಭಾವ, ಶಾಂತ ರೀತಿಯನ್ನು ನೋಡಿ ಅನುಮಾನವುಂಟಾಗಿ ಹೇಳಿದೆ

'ತಪ್ಪು ಮಾಡಿದವಳು ನೀನು, ಮಗುವಲ್ಲ. ಜ್ಞಾಪಕವಿರಲಿ.'

ಅವಳು ಉದಾಸೀನದಿಂದ ನನ್ನ ಕಡೆ ನೋಡಿ ಮಾತನಾಡದೇ ಹೊರಟುಹೋದಳು.

ಕ್ರಮೇಣ ಅವಳ ನೆನಪು ನನಗೆ ಮಾಸುತ್ತಾ ಬಂದಿತು. ಒಂದು ದಿನ ಕೆಲಸವೇನೂ ಇಲ್ಲದಿದ್ದರಿಂದ ಕೈಲಿ ಪೇಪರು ಹಿಡಿದು ಓದುತ್ತಾ ಕುಳಿತಿದ್ದೆ. 'ಮಾನ್ಯ ಮಂತ್ರಿಗಳ ಮನೆಯಲ್ಲಿ ಆರತಕ್ಷತೆ' ಎಂಬ ಶಿರೋನಾಮೆಯನ್ನು ನೋಡಿ ಕುತೂಹಲದಿಂದ ಓದಿದೆ.

'ಮಾನ್ಯ ಮಂತ್ರಿಗಳು ತಮ್ಮ ಮೊಮ್ಮಗುವಿನ ನಾಮಕರಣ ಮಹೋತ್ಸವದ ಸಂದರ್ಭದಲ್ಲಿ ಆರತಕ್ಷತೆಯನ್ನು ತಮ್ಮ ಭವನದಲ್ಲಿ ಏರ್ಪಡಿಸಿದ್ದರು. ನಗರದ ಗಣ್ಯ ವ್ಯಕ್ತಿಗಳು ಸಮಾರಂಭಕ್ಕೆ ದಯಮಾಡಿಸಿ ತಾಯಿ, ಮಗುವನ್ನು ಹರಸಿದರು. ಮಾನ್ಯ ಮಂತ್ರಿಗಳು ಅತಿಥಿಗಳನ್ನು ಸ್ವಾಗತಿಸಿ ಸತ್ಕರಿಸಿದರು........'

ಈ ಸುದ್ದಿಯ ಪಕ್ಕದಲ್ಲೇ ಮತ್ತೊಂದು ಸುದ್ದಿ ಪ್ರಕಟವಾಗಿತ್ತು. 'ಶಿಶುಹತ್ಯೆ' ಎಂಬ ಶಿರೋನಾಮೆ ನನ್ನ ಗಮನವನ್ನು ಸೆಳೆಯಿತು.

'ನಗರದ ಚರಂಡಿಯೊಂದರ ಬಳಿ ಸುಮಾರು ಹದಿನೈದು ದಿನದ ಹೆಣ್ಣು ಮಗುವಿನ ಶವ ಸಿಕ್ಕಿತು. ಬೆಳಗಿನ ಜಾವದಲ್ಲಿ ಮಗುವಿನ ತಾಯಿ ಮಗುವನ್ನು ಕುತ್ತಿಗೆ ಹಿಸುಕಿ ಸಾಯಿಸುತ್ತಿದ್ದಳೆಂದೂ, ಮಗುವಿನ ಚೀತ್ಕಾರ ಕೇಳಿ ಅಲ್ಲಿಯೇ ಬೀಟು ತಿರುಗುತ್ತಿದ್ದ ಪೋಲೀಸಿನವನು ತಾಯಿಯನ್ನು

ಕೊಲೆ ಮಾಡಿದ ಸ್ಥಳದಲ್ಲಿಯೇ ಶವದ ಸಮೇತವಾಗಿ ಸೆರೆ ಹಿಡಿದನೆಂದೂ ವರದಿಯಾಗಿದೆ. ತನಿಖೆ ಕ್ರಮ ನಡೆಯುತ್ತಿದೆ........ ’

ಅವಳ ಮುಖ ಮಸುಕಾಗಿ ತೇಲಿ ಬಂತು. ಪೇಪರು ನನ್ನ ಕೈಯಿಂದ ಜಾರಿತು.

# ೪

ಐದು ವರ್ಷ ಕಠಿಣ ಶಿಕ್ಷೆ ! ಮಗುವನ್ನು ಕೊಂದ ತಪ್ಪಿಗಾಗಿ ನನಗೆ ಐದು ವರ್ಷ ಕಠಿಣ ಶಿಕ್ಷೆ. ಆದರೆ ಅವನಿಗೆ ? ಅವನನ್ನು ಶಿಕ್ಷಿಸುವವರು ಯಾರೂ ಇಲ್ಲವೇ ? ನಾನು ತಪ್ಪು ಮಾಡಿದ್ದೇನೆ. ನಿಜ. ಆದರೆ ಅವನೂ ನನ್ನಂತೆಯೇ ತಪ್ಪು ಮಾಡಿದ್ದಾನೆ. ನಾನು ಮಗುವನ್ನು ಕತ್ತು ಹಿಸುಕಿ ಸಾಯಿಸಿರಬಹುದು. ಆದರೆ ಅವನು ನನ್ನನ್ನು ಬದುಕಿದ್ದೂ ಸತ್ತವಳಂತೆ ಮಾಡಲಿಲ್ಲವೇ? ನನ್ನಂತೆ ಬದುಕುವುದಕ್ಕಿಂತ ಸಾವು ನೂರುಪಾಲು ಉತ್ತಮ. ನಾಯಿಗಳೊಡನೆ ಹೊಡೆದಾಡಿ, ಎಂಜಲೆಲೆಯ ಅನ್ನ ತಿಂದು ನಾನು ಎಷ್ಟೋ ದಿನಗಳನ್ನು ಕಳೆದಿದ್ದೇನೆ. ಕುರುಡಿ, ಕುಂಟಿ, ಮೂಕಿಯಂತೆ ನಟಿಸಿ ಭಿಕ್ಷೆ ಬೇಡಿದ್ದೇನೆ. ಬೀದಿಯ ನಲ್ಲಿಯ ನೀರು ಕುಡಿದು ಹೊಟ್ಟೆ ತುಂಬಿಸಿ ಕೊಂಡಿದ್ದೇನೆ. ಚಳಿ, ಮಳೆ, ಗಾಳಿ, ಬಿಸಿಲಿನಲ್ಲಿ ಒಂದು ತುತ್ತು ಅನ್ನ ಕ್ಕಾಗಿ ಅಲೆದಾಡಿದ್ದೇನೆ. ಮದುವೆಯಾಗದವಳಿಗೆ ಹುಟ್ಟಿದ ಮಗುವಿಗೆ ಸಮಾಜದಲ್ಲಿ ಯಾವ ಸ್ಥಾನವಿದೆಯೆಂಬುದು ನನಗೆ ಗೊತ್ತು. ನಾಯಿ ಯಂತೆ ಬಾಳುವುದಕ್ಕಿಂತ ಸಾವು ಮೇಲೆಂದು ಮಗುವಿನ ಕತ್ತು ಕಿವುಚಿ ಕೊಂದೆ. ಮಗುವಿನ ಮೇಲಿನ ಪ್ರೀತಿ, ಮರುಕದಿಂದ ನಾನು ಹಾಗೆ ವರ್ತಿಸಿದೆನೆಂದರೆ ಯಾರಾದರೂ ನಂಬುವರೆ ? ಮಗು ಬದುಕಿದ್ದರೆ ನಾನೇನು ತಾನೇ ಕೊಡಬಲ್ಲೆ ?

ಬೆಚ್ಚಗಿನ ಮನೆಯೇ ? ಹೊಟ್ಟೆ ತುಂಬುವಷ್ಟು ಅನ್ನವೇ ? ಒಳ್ಳೆಯ ವಿದ್ಯಾಭ್ಯಾಸವೇ, ಅನುರೂಪನಾದ ಗಂಡನೇ ? ಕೊನೆಗೆ ತಂದೆ ಯಾರೆಂ ಬುದು ಸಹ ತಿಳಿಯದೆ ಪಿತೃಹೀನಳಾಗಿ, ಎಲ್ಲರಿಂದಲೂ ತೆಗಳಿಸಿಕೊಳ್ಳುತ್ತಾ ಎಲ್ಲರ ಕಾಲ ಕಸವಾಗಿ, ಹರುಕು ಚಿಂದಿಯುಟ್ಟು, ಅರೆಹೊಟ್ಟೆ ಊಟ ಮಾಡಿ ಕಾಲ ಕಳೆಯಬೇಕಾಗುತ್ತಿತ್ತು ನನ್ನ ಮಗು. ಇವೆರಡರಲ್ಲಿ ಯಾವುದು ಉತ್ತಮ ? ನನಗೆ ಯಾವುದು ಸರಿಯೆಂದು ತೋರಿತೋ ಆ ಕೆಲಸವನ್ನು ನಾನು ಮಾಡಿದೆ.

ನನಗೆ ಸರಿಯಾಗಿ ಕೊಲೆ ಮಾಡಲು ಸಹ ಬರುವುದಿಲ್ಲ. ಕೊಲೆ ಮಾಡುವ ಕಲೆಯಲ್ಲಿ ಚತುರರಾಗಿರುವವರು ಎಂದಿಗೂ ಸಿಕ್ಕಿಹಾಕಿಕೊಳ್ಳು

ವುದಿಲ್ಲ. ಆದರೆ ನಾನಾದರೋ ಆ ಕ್ಷಣವೇ ಸಿಕ್ಕಿಕೊಂಡೆ.

ಬೆಳಗಿನ ಜಾವದಲ್ಲಿ ಗಸ್ತು ತಿರುಗುತ್ತಿದ್ದ ಪೋಲೀಸಿನವನಿಗೆ ಮಗು ಅಳುವ ಸದ್ದು ಕೇಳಿ, ಸದ್ದನ್ನು ಅನುಸರಿಸಿ ನನ್ನ ಬಳಿಗೆ ಬಂದ. ಅಳುವಿನ ಸದ್ದು ಅವನನ್ನು ನನ್ನಲ್ಲಿಗೆ ಕರೆದುತಂದಿತು. ಅಷ್ಟರಲ್ಲಿ ನಾನು ಮಗುವಿನ ಕತೆ ಪೂರಯಿಸಿದ್ದೆ.

ವಿಚಾರಣೆ ಮೊದಲಾಯಿತು. ನಾನು ನನ್ನ ತಪ್ಪನ್ನು ಒಪ್ಪಿಕೊಳ್ಳಲೂಇಲ್ಲ, ತಿರಸ್ಕರಿಸಲೂ ಇಲ್ಲ. ಪರಿಣಾಮ:ವಾಗಿ ಐದು ವರ್ಷ ಶಿಕ್ಷೆ ಅನುಭವಿಸಬೇಕೆಂಬ ತೀರ್ಪು ನನ್ನ ಪಾಲಿಗೆ ಕಾದಿತ್ತು.

ಅಪರಾಧಿಯ ಕಟಕಟೆಯಲ್ಲಿ ನಿಂತು ನಾನು ನ್ಯಾಯಾಧೀಶರ ತೀರ್ಪನ್ನು ಕೇಳಿದೆ. ತೀರ್ಪನ್ನು ಕೇಳಿ ನನಗೆ ದುಃಖವಾಗಲಿಲ್ಲ. ಬದಲಾಗಿ ನಗು ಬಂತು.

ಇನ್ನು ಮೇಲೆ ಅನ್ನಕ್ಕಾಗಿ ಬೀದಿ ಬೀದಿ ಅಲೆದಾಡಬೇಕಾಗಿಲ್ಲ! ಮಲಗಿಕೊಳ್ಳಲು ಅಂಗಡಿಯ ಜಗುಲಿಗಳನ್ನು ಹುಡುಕಬೇಕಾಗಿಲ್ಲ!

ಚಳಿ, ಗಾಳಿ, ಮಳೆಯಲ್ಲಿ ಒದ್ದಾಡಬೇಕಾಗಿಲ್ಲ! ಕಾಮುಕರ ಕಣ್ಣು ತಪ್ಪಿಸಿ ಓಡಾಡಬೇಕಾಗಿಲ್ಲ! ನಾನು ಕಪ್ಪಗಿದ್ದರೂ, ಭಿಕ್ಷೆ ಬೇಡಿ, ಕೂಲಿ ಮಾಡಿದರೂ ಪ್ರಾಯದ ಹೆಂಗಸಾದುದರಿಂದ ಹಲವರ ಕಣ್ಣುಗಳನ್ನು ಸೆಳೆದಿದ್ದೆ. ಇವೆಲ್ಲ ತೊಂದರೆಗಳಿಗಿಂತಲೂ ಜೈಲು ಎಷ್ಟೋ ವಾಸಿ.

ಎಂಥ ವಿಮೋಚನೆ!

ಜೈಲಿನಲ್ಲಿ ಹೊತ್ತಿಗೆ ಸರಿಯಾಗಿ ಊಟ ಸಿಕ್ಕುತ್ತದೆ. ಚಳಿ, ಮಳೆಯಿಂದ ನಮ್ಮನ್ನು ದೂರವಿರಿಸಿ, ಚೆನ್ನಾಗಿ ಕಾಯುತ್ತದೆ ಜೈಲು.

ಸ್ವತಂತ್ರಳಾಗಿ ಬೀದಿ ಬೀದಿ ತಿರುಗುವುದಕ್ಕಿಂತಲೂ ಸೆರೆಮನೆ ವಾಸವೇ ನನಗೆ ಎಷ್ಟೋ ಹಿತವೆನಿಸಿತು.

ನ್ಯಾಯಾಲಯದಿಂದ ಹೊರಗೆ ಬಂದೊಡನೆ ಇಬ್ಬರು ಪೋಲೀಸಿನವರು ನನ್ನ ಅಕ್ಕಪಕ್ಕಗಳಲ್ಲಿ ನಿಂತರು. ಪೋಲೀಸಿನವನೊಬ್ಬ ತನ್ನ ಕೈಲಿದ್ದ ತುಂಡುಕೋಲಿನಿಂದ ನನ್ನ ತಿವಿದು 'ನಡಿ. ವ್ಯಾನು ಹತ್ತು' ಎಂದ.

ನಾನು ತಲೆ ತಗ್ಗಿಸಿ ಮೌನವಾಗಿ ಪೋಲೀಸ್ ವ್ಯಾನಿನ ಕಡೆ ನಡೆದೆ. ಪೋಲೀಸಿನವನು ವ್ಯಾನಿನ ಬಾಗಿಲನ್ನು ತೆಗೆದ. ನಾನು ಒಳಗೆ ಕುಳಿತೆ.

ನನ್ನ ಹಿಂದೆಯೇ ಅವರಿಬ್ಬರೂ ಹತ್ತಿಕೊಂಡರು. ಡ್ರೈವರು ವ್ಯಾನನ್ನು ಹತ್ತಿ ಕುಳಿತ.

'ಎಲ್ಲಿಗೆ ಹೋಗ್ತೀವಿ ಈಗ ?' ನಾನು ಕೇಳಿದೆ.

'ನಿನ್ನ ಅತ್ತೇ ಮನೆಗೆ' ಪೋಲೀಸಿನವನು ನಕ್ಕು ಹೇಳಿದ. ಡ್ರೈವರ್ ಕೇಳಿದ 'ಎಷ್ಟು ವರ್ಷಾಪ್ಪ ಸಜ ?'

'ಐದು ವರ್ಷ ಹಾಕಿದಾರೆ' ಪೋಲೀಸಿನವನು ಹೇಳಿದ.

'ಎಂತಹ ಕೇಸು ?'

'ಖೂನಿ ಕೇಸು.'

'ಏನು !' ಡ್ರೈವರ್ ವ್ಯಾನನ್ನು ಬಿಡುತ್ತಿದ್ದಂತೆಯೇ ಅರ್ಧ ಹಿಂತಿರುಗಿ ನನ್ನ ಕಡೆ ನೋಡಿದ. ಅವನ ಕಣ್ಣುಗಳಲ್ಲಿ ತಿರಸ್ಕಾರವಿತ್ತು.

'ಸರಿಯಪ್ಪ ಹಾಗಾದರೆ ಭಾರಿ ಇಸಂ ಇವಳು. ಯಾರನ್ನ ಕೊಂದದ್ದು ? ಗಂಡನ್ನೇ, ಮಿಂಡನ್ನೇ ?'

'ಮಗುವನ್ನ ಕೊಂದಿದಾಳೆ.'

'ಯಾರ ಮಗು ?'

'ಅವಳ ಮಗೂನೆ.'

'ಯಾಕೆ ?'

'ನಿಂದು ಒಳ್ಳೇ ಪ್ರಶ್ನೆ. ಕದ್ದು ಹೆತ್ತರೆ ಇನ್ನೇನು ಮಾಡೋದು ? ಇವಳಿಗಿನ್ನೂ ಮದುವೆಯಾಗಿಲ್ಲ. ಕೊಬ್ಬು ಹೆಚ್ಚಾಗಿ ಕೆಟ್ಟ ಕೆಲಸ ಮಾಡಿದಳು. ಹುಟ್ಟಿದ ಮಗೂನ ಕೊಂದು ಈಗ ಅತ್ತೇ ಮನೆಗೆ ಹೋಗ್ತಿದಾಳೆ'

ಡ್ರೈವರ್, ಇನ್ನೊಬ್ಬ ಪೋಲೀಸಿನವನು ಅವನ ಮಾತು ಕೇಳಿ ನಕ್ಕರು. ಡ್ರೈವರ್ ಅಪಹಾಸ್ಯ ಮಾಡುವವನಂತೆ ಹೇಳಿದ. 'ಹಾಳಾದೋರಿಗೆ ಏನು ಬುದ್ಧಿ ಬರುತ್ತದೋಪ್ಪ. ಹೆಂಗಸರು ಕೊಲೆ ಮಾಡೋದೇ ಗಂಡನ್ನ, ಇಲ್ಲವೇ ಮಿಡಗಿಕೊಂಡವನ್ನ, ಇಬ್ಬರೂ ಅಲ್ಲದಿದ್ರೆ ಮಗೂನ. ಐದು ವರ್ಷಕ್ಕೆ ಬದಲು ಹತ್ತು ವರ್ಷ ಶಿಕ್ಷೆ ಹಾಕಬೇಕಾಗಿತ್ತು.'

ಅವರ ಮಾತುಗಳು ನನಗೆ ಕೇಳಿಸಲಿಲ್ಲವೆಂಬಂತೆ ನಟಿಸಿ ನಾನು ಕಿಟಕಿಯಿಂದಾಚೆ ನೋಡುತ್ತಾ ಕುಳಿತೆ. ವ್ಯಾನು ಮಾರ್ಕೆಟ್ಟಿನ ಮೂಲಕ ಹಾದು ಹೋಗುತ್ತಿತ್ತು.

ಗಂಡ, ಹೆಂಡತಿ ಅನ್ಯೋನ್ಯವಾಗಿ ಮಾತನಾಡುತ್ತಾ ವ್ಯಾಪಾರಕ್ಕೆ ಹೊರಟಿದ್ದರು. ಸಮಾಚಾರ ಪತ್ರಿಕೆಗಳನ್ನು ಮಾರುವ ಹುಡುಗರು 'ಪೇಪರ್' ಎನ್ನುತ್ತಾ ಗಲಾಟೆ ಮಾಡುತ್ತಿದ್ದರು. ತಾಯಿಯೊಬ್ಬಳು ತನ್ನ ಮಗುವಿನ ಕೈ ಹಿಡಿದು ಎಚ್ಚರಿಕೆಯಿಂದ ರಸ್ತೆ ದಾಟುತ್ತಿದ್ದಳು.

ಹಾಗಾದರೆ ಇವರು ಯಾರೂ ಮಾಡಿಲ್ಲದೇ ಇರುವ ತಪ್ಪು ನಾನು ಮಾಡಿದೀನೆಯೇ ?

ವ್ಯಾನು ಜೈಲಿನ ಹೆಬ್ಬಾಗಿಲಿನ ಬಳಿ ನಿಂತಿತು. ಪೋಲೀಸಿನವರಿಬ್ಬರೂ ಇಳಿದನಂತರ ನಾನು ಇಳಿದೆ. ಹೆಬ್ಬಾಗಿಲಿನ ಬಳಿ ಬಂದೂಕು ಹಿಡಿದು ನಿಂತಿದ್ದ ಪೋಲೀಸಿನವನನ್ನು ನನ್ನನ್ನು ಕರೆತಂದಿದ್ದವನು ಕೇಳಿದ

'ಜೈಲರ್ ಇದಾರೆಯೇ ?'

'ಇಲ್ಲ.'

'ಸೂಪರಿಡೆಂಟರು ?'

'ಅವರೂ ಇಲ್ಲ. ಐದು ಗಂಟೆಗೆ ಇಬ್ಬರೂ ಹೊರಟು ಹೋದರು. ವಾರಂಟು, ಜಡ್ಜ್‌ಮೆಂಟ್ ಷೀಟು ತಂದಿದೀಯಾ ?'

'ಹೂ.'

ಮೇಜಿನ ಮುಂದೆ ಕುಳಿತಿದ್ದ ಮತ್ತೊಬ್ಬ ಪೋಲೀಸಿನವನು ವಾರಂಟನ್ನು ಓದಿಕೊಂಡು

'ಸರಿ . ಇವತ್ತು ಒಳಗೆ ಕಳಿಸೋಣ. ಗೃಹಪ್ರವೇಶವಾಗಲಿ, ಆಮೇಲೆ ವಿಚಾರಣೆ' ಎನ್ನುತ್ತಾ ಬಂದು ಹಸಿರು ಬಾಗಿಲಿಗೆ ಹಾಕಿದ್ದ ದಪ್ಪ ಬೀಗವನ್ನು ತೆಗೆದ.

ನಾನು ಅಳುಕುತ್ತಾ ಒಳಗೆ ಕಾಲಿಟ್ಟೆ.

ಕಪ್ಪು ಗೆರೆ ಬಂದಿದ್ದ ಮಾಸಲು ಬಿಳಿಯ ಚಡ್ಡಿ, ಶರಟು ಹಾಕಿದ್ದ ಇಬ್ಬರು ಕೈದಿಗಳು ಮಾತನಾಡುತ್ತಾ ನಿಂತಿದ್ದರು. ನಾನು ಜೈಲಿನ ಆವರಣವನ್ನು ಪ್ರವೇಶಿಸಿದೊಡನೆ ಅವರಿಬ್ಬರೂ ಮಾತು ನಿಲ್ಲಿಸಿ ನನ್ನ ಕಡೆ ನೋಡಿದರು.

ಅಬ್ಬ ! ಅವರ ನೋಟ ನೋಡಿ ನಾನು ನಡುಗಿ ಹೋದೆ ಅವರಿಬ್ಬರೂ ಕಣ್ಣಿನಿಂದಲೇ ನನ್ನನ್ನು ತಿಂದುಬಿಡುವ ಹಾಗೆ ನೋಡಿದರು. ಹೆಂಗ

ಸರನ್ನು ಕಂಡು ಎಷ್ಟು ದಿನಗಳಾಗಿದ್ದವೋ ? ನಾನು ಹೆದರಿಕೆಯಿಂದ ದೇಹವನ್ನು ಕುಗ್ಗಿಸಿಕೊಂಡು ಪೋಲೀಸಿನವನ ಹಿಂದೆ ಮರೆಯಾದೆ.

ಪೋಲೀಸಿನವನು ಮಹಿಳಾ ಕೈದಿಗಳನ್ನಿರಿಸಿದ್ದ ಕಾಂಪೌಂಡಿನ ಮುಚ್ಚಿದ ಬಾಗಿಲನ್ನು ಎರಡು ಸಾರಿ ತಟ್ಟಿದ.

ನೂಲಿನ ನೀಲಿ ಬಣ್ಣದ ಸೀರೆಯುಟ್ಟಿದ್ದು ಕಪ್ಪು ಹೆಂಗಸೊಬ್ಬಳು ಬಂದು ಬಾಗಿಲನ್ನು ತೆಗೆದಳು. ನಾನು ಹಿಂಜರಿಯದೆ ಒಳಗೆ ಹೋದೆ.

'ನಾಳೆ ಬೆಳಿಗ್ಗೆ ಸಾಹೇಬರ ಮುಂದೆ ಹಾಜರ್ಮಾಡಬೇಕು' ಎಂದು ಹೇಳಿ ಪೋಲೀಸಿನವನು ಹೊರಟು ಹೋದ. ನಾನು ಸುತ್ತಲೂ ನೋಡಿದೆ. ಒಳಭಾಗದ ವಿಸ್ತಾರವಾದ ಕಾಂಪೌಂಡಿನಲ್ಲಿ ಬಾಳೆ ಗಿಡಗಳು, ಫರಂಗಿ ಗಿಡಗಳು, ಬದನೆ, ಬೆಂಡೆ, ಹುರುಳಿ ಸಸಿಗಳಿದ್ದವು. ನಾನು ಸುತ್ತಲೂ ನೋಡುತ್ತಿದ್ದಾಗ ಬಾಗಿಲಿಗೆ ಬೀಗ ತಗುಲಿಸಿದ ಸದ್ದಾಯಿತು. ನಾನು ಹಿಂತಿರುಗಿ ನೋಡಿದೆ. ಮಹಿಳಾ ವಾರ್ಡರ್ ಒಳಭಾಗದಿಂದ ಬಾಗಿಲಿಗೆ ಬೀಗ ಹಾಕುತ್ತಿದ್ದಳು.

ನನಗೆ ಬೆಳಗಿನಿಂದ ಊಟವಿರಲಿಲ್ಲವಾದುದರಿಂದ ಹಸಿವಾಗುತ್ತಿತ್ತು. ನಾನು ಅಲ್ಲಿಯೇ ಇದ್ದ ಕಲ್ಲು ಚಪ್ಪಡಿಯೊಂದರ ಮೇಲೆ ಕುಸಿದು ಕುಳಿತೆ. ನೀಲಿ ಸೀರೆಯುಟ್ಟಿದ್ದ ವಾರ್ಡರ್ ಬಂದು ನನ್ನ ಪಕ್ಕದಲ್ಲಿಯೇ ಕುಳಿತು ಕುತೂಹಲದಿಂದ ಕೇಳಿದಳು.

'ಏನು ತಪ್ಪು ಮಾಡಿ ಸಿಕ್ಕಿಹಾಕಿಕೊಂಡೆಯವ್ವಾ ?'

ನಾನು ಒಣಗಿದ ತುಟಿಗಳನ್ನು ನಾಲಿಗೆಯಿಂದ ಸವರಿಕೊಂಡು

'ಊಟ ಎಷ್ಟು ಹೊತ್ತಿಗೆ ಕೊಡ್ತಾರೆ ?' ಎಂದೆ. ವಾರ್ಡರ್ ಕೇಳಿದ ಪ್ರಶ್ನೆ ನನ್ನ ಕಿವಿಗೆ ಬಿದ್ದಿರಲಿಲ್ಲ.

'ಊಟ ! ಇನ್ನೆಲ್ಲಿಯ ಊಟ. ನಾಳೆ ಮಧ್ಯಾಹ್ನ ಹನ್ನೆರಡು ಗಂಟೆಗೇ ಪುನಃ ಊಟ.'

ಹಸಿವು, ನಿರಾಶೆಯಿಂದ ನನಗೆ ಅಳು ಬಂತು. ಮೊಳಕಾಲ ಮೇಲೆ ತಲೆಯಿಟ್ಟು ಮನಃಪೂರ್ತಿಯಾಗಿ ಅತ್ತೆ. ಒಬ್ಬ ಮನುಷ್ಯನನ್ನೇ ಕಡಿದು ತಿನ್ನುವಷ್ಟು ನನಗೆ ಹಸಿವಾಗಿತ್ತು. ಇನ್ನು ನಾಳೆ ಹನ್ನೆರಡು ಗಂಟೆಯವರೆಗೆ ನಾನು ಹಸಿವನ್ನು ಹೇಗೆ ತಡೆಯಲಿ ?

' ರಾತ್ರಿ ಊಟ ಕೊಡೋದಿಲ್ಲವೇ ?'

' ರಾತ್ರಿ ಒಂದು ದಫ ಊಟ ಕೊಡೋಕೆ ಇದ್ದೇನು ನಿನ್ನಮ್ಮನ ಮನೆ ಕೆಟ್ಟೋಯಿತಾ ? ಸಂಜೇಗೇ ಊಟ ಕೊಟ್ಟು ಆಗಿಹೋಯ್ತು.'

ನಾನು ಕಾಲಿನಿಂದ ನೆಲವನ್ನು ಕೆರೆಯುತ್ತಾ ಅಳುವನ್ನು ನುಂಗಿ ಕೊಂಡೆ. ವಾರ್ಡರ್ ಕನಿಕರದಿಂದ ಕೇಳಿದಳು.

' ತುಂಬಾ ಹಸಿವಾಯ್ತದಾ ?'

' ಹೂಂ.'

' ಚೌಡಿ ಊಟ ತಟ್ಟೇಲಿ ಹಾಗೇ ಇದೆ. ಅವಳಿಗೆ ಹೊಟ್ಟೆನೋ ವಂತೆ. ಅದಕ್ಕೆ ಅವಳು ಊಟಾನೇ ಮಾಡಿಲ್ಲ. ತಟ್ಟೇನ ಹಂಗೇ ಮಡ ಗಿದಾಳೆ.'

ನಾನು ತಟ್ಟನೆ ಎದ್ದು ನಿಂತು ' ಎಲ್ಲಿದೆ ತಟ್ಟೆ ? ' ಎಂದೆ.

' ಚೌಡಿ ಹತ್ತಿರ ಕರ್ರೊಂಡು ಓಯ್ತೀನಿ. ಅವಳನ್ನ ಕೇಳಿ ಈಸ್ಕೊಳ್ಳೋವಂತೆ. ಬಾ. '

ನಾನು ಕೃತಜ್ಞತೆಯಿಂದ ನನಗೆ ಊಟ ಕೊಡಿಸಲು ಒಪ್ಪಿಕೊಂಡವ ಳನ್ನು ನೋಡಿದೆ. ಅವಳು ಮಾಸಲು ಬಣ್ಣದ ಬಿಳಿಯ ಒರಟು ನೂಲಿನ ಸೀರೆಯುಟ್ಟಿದ್ದಳು. ಒರಟೊರಟಾದ ಬಾಯಿ, ವಕ್ರವಾದ ಮೂಗು, ಹಳದೀ ಬಣ್ಣದ ಕಣ್ಣು, ಸೊಟ್ಟ ಹಲ್ಲು, ಕೆದರಿದ ತಲೆಯ ಆ ಹೆಂಗಸು ನನ್ನನ್ನು ಒಳಗೆ ಕರೆದುಕೊಂಡು ಹೋದಳು.

' ನಿನ್ನ ಹೆಸರೇನು ? '

' ವಲ್ಲಿ. ನಂಬರ್ ೨೦೪. '

' ನಂಬರು ಅಂದರೆ ? '

' ಒಬ್ಬೊಬ್ಬ ಕೈದಿಗೂ ಒಂದೊಂದು ನಂಬರು ಕೊಡ್ತಾರೆ. ಈಗ ಇಲ್ಲಿ ಪೋಲೀಸಪ್ನೋರು, ಸಾಹೇಬರು, ಡಾಕ್ತಾರು ನನ್ನ ವಲ್ಲಿ ಅಂತ ಕೂಗೋದಿಲ್ಲ. ನಂಬರ್ ೨೦೪ ಅಂತಾನೇ ಕರೀತಾರೆ. '

' ನೀನು ಯಾಕೆ ಇಲ್ಲಿದೀಯಾ ?'

' ಅದೊಂದು ಕತೆ ಕಣಕ್ಕ. ಲೇಸನ್ಸ್ ಇಲ್ಲದೆ ಕಳ್ಳು ಇಳಿಸುತ್ತಿದ್ದೆ. ಒಂದು ದಿನ ಸಿಕ್ಕಿಹಾಕಿಕೊಂಡೆ. ಮೂರು ತಿಂಗಳು ಶಿಕ್ಷೆ ಹಾಕಿದಾರೆ.'

‘ ನಿಮ್ಮೂರು ಯಾವುದು ?’

‘ ಶಿವಮೊಗ್ಗಾ ತಾವು ಒಂದು ಹಳ್ಳಿ ನಮ್ಮೂರು. ಶಿವಮೊಗಾ ಜೈಲಿಂದ ಇಲ್ಲಿಗೆ ನನ್ನ ಕಳ್ಸಿದಾರೆ.’

‘ ನೀನು ಬಂದು ಎಷ್ಟು ದಿನ ಆಯಿತು ?’

‘ ಎರಡು ತಿಂಗಳಾಯಿತು. ’

ವಲ್ಲಿ ನನ್ನನ್ನು ಚೌಡಿಯ ಬಳಿಗೆ ಕರೆದುಕೊಂಡು ಹೋದಳು. ಚೌಡಿ ಹೊಟ್ಟೆ ನೋವಿನಿಂದ ನರಳುತ್ತಾ, ಈಚಲು ಚಾಪೆಯ ಮೇಲೆ ಕಂಬಳಿಯೊಂದನ್ನು ಹೊದ್ದುಕೊಂಡು ಮಲಗಿದ್ದಳು.

ವಲ್ಲಿ ಮೃದುವಾಗಿ ‘ ಚೌಡವ್ವ ’ ಎಂದಳು.

‘ ಏನು ?’

ವಲ್ಲಿ ನನ್ನ ಕಡೆ ಕೈ ತೋರಿಸಿ ‘ ಇವಳನ್ನು ಈಗ ತಾನೇ ‘ ಅಡ್ಮಿಟ್’ ಮಾಡಿಕೊಂಡವ್ರೆ. ತುಂಬಾ ಹಸಿವಂತೆ. ನಿನ್ನ ಅನ್ನ ಇವಳಿಗೆ ಕೊಟ್ಟೇಯಾ ?’ ಎಂದಳು.

ಚೌಡಿ ಮಾತನಾಡದೇ ನೊಣ ಮುತ್ತಿದ್ದ ತನ್ನ ತಟ್ಟೆಯನ್ನು ನನ್ನ ಮುಂದೆ ತಳ್ಳಿದಳು. ಅವಳು ತಟ್ಟೆ ತಳ್ಳಿದ ಕೂಡಲೇ ನೊಣಗಳೆಲ್ಲಾ ಹಾರಿದವು. ನಾನು ಆತುರದಿಂದ ತಟ್ಟೆಯನ್ನು ನನ್ನ ಮುಂದೆ ಎಳೆದು ಹಿಟ್ಟಿನ ಮುದ್ದೆಗೆ ಕೈ ಹಾಕಿದೆ.

ಅಕ್ಕಿನುಚ್ಚು ಬೆರೆತಿದ್ದ ತಂಗಳು ರಾಗಿಯ ಮುದ್ದೆ ಹಸಿದೊಡಲಿಗೆ ರುಚಿಯಾಗಿಯೇ ಇತ್ತು. ಸಾರಿನೊಳಗೆ ಇರುವೆಗಳು ಬಿದ್ದು ಸತ್ತು ತೇಲಾಡುತ್ತಿದ್ದವು. ನಾನು ಕಣ್ಣಿಗೆ ಬಿದ್ದ ಇರುವೆಯನ್ನು ತೆಗೆದು ಹಾಕಿ, ಹಿಟ್ಟಿನ ಗುಳಿಗೆಯನ್ನು ಸಾರಿನಲ್ಲಿ ಮುಳುಗಿಸಿ ನುಂಗಿದೆ. ಸಾರಿನಲ್ಲಿ ಆಗಾಗ್ಗೆ ಆಲೂಗೆಡ್ಡೆ ಚೂರುಗಳು ಸಿಕ್ಕಿದಾಗಲಂತೂ ನನ್ನ ಆನಂದಕ್ಕೆ ಪಾರವೇ ಇರಲಿಲ್ಲ. ಹಿಟ್ಟು ಗಂಟಲಿಗೆ ಸಿಕ್ಕಿಕೊಳ್ಳುವುದನ್ನೂ ಲಕ್ಷಿಸದೇ ನಾನು ತಟ್ಟೆಯನ್ನು ಎರಡು ನಿಮಿಷಗಳಲ್ಲಿ ಬರಿದು ಮಾಡಿದೆ

ವಲ್ಲಿ ಕನಿಕರದಿಂದ ನನ್ನನ್ನೇ ನೋಡುತ್ತಾ ನಿಂತಿದ್ದಳು. ಊಟ ಮುಗಿದ ಮೇಲೆ ನಾನು ತಟ್ಟೆಯನ್ನು ಕೈಗೆತ್ತಿಕೊಂಡು

‘ ನಲ್ಲಿ ಎಲ್ಲಿದೆ ? ’ ಎಂದು ಕೇಳಿದೆ.

ನಾನು ತಲೆ ಎತ್ತಿದಾಗ ವಲ್ಲಿಯಲ್ಲದೆ ಇನ್ನೂ ಮೂರು ಜನ ನಿಂತಿದ್ದರು.

'ನಡಿ. ನಲ್ಲಿ ತೋರ್‍ಸ್ತೀನಿ.'

ನಾನು ವಲ್ಲಿಯನ್ನು ಹಿಂಬಾಲಿಸಿದೆ. ನಲ್ಲಿಯ ನೀರಿನಲ್ಲಿ ತಟ್ಟೆಯನ್ನು ತೊಳೆದು ಮತ್ತೆ ಚೌಡಿಯ ಬಳಿಗೆ ಬಂದೆ.

'ತಟ್ಟೆ ಎಲ್ಲಿಡಲಿ?'

'ತಲೆದಸೀಲಿ ಮಡಗು.'

'ಹೊಟ್ಟೇನೋವಿಗೆ ಡಾಕ್ಟರು ಔಷಧಿ ಕೊಡಲಿಲ್ಲವಾ?'

'ಕೊಟ್ಟವ್ರೆ. ಆದ್ರೂ ನೋವು ಓಗ್ನಿಲ್ಲ........'

ನಾನು ವಲ್ಲಿಯ ಕಡೆ ತಿರುಗಿ

'ಚೌಡಿ ಇಲ್ಲಿಗೆ ಯಾಕೆ ಬಂದಿದ್ದಾಳೆ?' ಎಂದೆ. ವಲ್ಲಿ ನಗುತ್ತಾ ನನ್ನ ಹತ್ತಿರವಿದ್ದ ಮತ್ತೊಬ್ಬಳನ್ನೂ ತೋರಿಸಿ

'ಚೌಡಿ, ರಾಮಿ ವ್ಯಾಪಾರ ಮಾಡ್ತಿದ್ದರು. ಅದಕ್ಕೆ ಪೋಲೀಸಪ್ನೋರು ಕರ್‍ಕೊಂಡು ಬಂದವ್ರೆ' ಎಂದಳು.

'ವ್ಯಾಪಾರ! ವ್ಯಾಪಾರ ಮಾಡೋರನ್ನೆಲ್ಲಾ ಜೈಲಿಗೆ ಹಾಕ್ತಾರಾ?' ನಾನು ಮುಗ್ಧತೆಯಿಂದ ಕೇಳಿದೆ.

ರಾಮಿ ಗಟ್ಟಿಯಾಗಿ ನಗುತ್ತಾ 'ವ್ಯಾಪಾರಾಂದ್ರೆ ಸಾಧಾರಣವಾದ ವ್ಯಾಪಾರವಲ್ಲ. ನಮ್ಮ ದೇಹದ ವ್ಯಾಪಾರ' ಎಂದಳು.

'ಎಲ್ಲಿ ಮಾಡ್ತಾ ಇದ್ದಿರಿ?'

'ಗಲ್ಲೀಲಿ ಒಂದು ಹೋಟಲಿದೆ. ರಾತ್ರಿ ಒಂಭತ್ತು ಗಂಟೆಯ ಮೇಲೆ ನಾನು, ಚೌಡಿ ಗಲ್ಲೀಲಿ ಹೋಗ್ತಾ ಇದ್ದೋರನ್ನೆಲ್ಲಾ' 'ಬನ್ರಣ್ಣಾ, ಒಂದೇ ರೂಪಾಯಿ' ಎಂದು ಕೂಗ್ತಾ ಇದ್ವಿ. ಆಗ ಪೋಲೀಸಿನವರು ಬಂದು ನಮ್ಮನ್ನು ಹಿಡಿದುಕೊಂಡು ಹೋದರು.'

'ನೀನು ಕನ್ನಡ ಚನ್ನಾಗಿ ಮಾತಾಡ್ತೀಯ. ಎಲ್ಲಿ ಕಲಿತುಕೊಂಡೆ?'

'ನಾನು ಹುಟ್ಟಿದ್ದು, ಬೆಳದದ್ದು ಎಲ್ಲಾ ದೊಡ್ಡೋರ ಮನೆಯಲ್ಲಿ. ನಮ್ಮ ತಾಯಿ ಅವರ ಮನೇಲಿ ಕೆಲಸ ಮಾಡುತ್ತಿದ್ದಳು. ಅವರ

ಮಕ್ಕಳ ಜೊತೆ ಮಾತು ಕತೆಯಾಡ್ತಿದ್ದೆ. ಚೆನ್ನಾಗಿ ಮಾತಾಡೋಕೆ ಬಂತು.'

'ನೀವಾಗೇ ಗಲ್ಲೀಲಿ ಹೋಗ್ತಿದ್ದವರನ್ನೆಲ್ಲಾ ಕೂಗ್ತಿದ್ದಿರಾ ?'

'ಹೂಂ.'

'ಯಾಕೆ ?'

ರಾಮಿ ತನ್ನ ಹೊಟ್ಟೆ ಬಡಿದು ತೋರಿಸಿ 'ಯಾಕೇಂದ್ರೆ ಹೊಟ್ಟೆ ತುಂಬಿಸಿಕೊಳ್ಳೋಕೆ. ಎರಡು ದಿನದಿಂದ ವ್ಯಾಪಾರ ಇರಲಿಲ್ಲ. ಆದರಿಂದ ಮೂರನೇ ದಿನ ನಾವೇ ಗಿರಾಕಿಗಳನ್ನು ಕೂಗಿದೆವು. ನಮಗೇನು ಮಾನವಾ, ಮರ್ಯಾದೆಯಾ ?'

'ಎಷ್ಟು ದಿನ ಸಜ ಹಾಕಿದಾರೆ ?'

'ಒಂದು ವಾರ. ನಾಡಿದ್ದು ಬಿಡುಗಡೆಯಾಗತ್ತೆ. ಇಲ್ಲಿಂದ ಹೋಗಿ ಪುನಃ ವ್ಯಾಪಾರ ಮಾಡ್ತೀವಿ. ಸಿಕ್ಕಿಬಿದ್ದರೆ ಜೈಲಿಗೆ ಬರ್‍ತೀವಿ. ಇಲ್ಲಿ ಒಂದು ವಾರ ನಿರಾತಂಕವಾಗಿ ಊಟ ಕಳ್ಕೊಂಡು ಮತ್ತೆ ಕಸುಬಿಗೆ ಇಳೀತೀವಿ. ಈಗ ಐದು ದಿನದಿಂದ ವ್ಯಾಪಾರ ಇಲ್ಲದೆ ಬಹಳ ಬೇಜಾರಾಗಿ ಹೋಗಿದೆ. ಅಲ್ಲವೇನೆ ಚೌಡಿ ?'

ಚೌಡಿ ರಾಮಿಗಿಂತ ವಯಸ್ಸಾದವಳು. ಸಾಲದುದಕ್ಕೆ ಹೊಟ್ಟೆ ನೋವಿನಿಂದ ನರಳುತ್ತಿದ್ದಳು. ಅವಳು ರಾಮಿಯ ಮಾತು ಕೇಳಿ 'ನೀನೂ, ನಿನ್ನ ಮಿಂಡ ಹಾಳಾಗಿ ಹೋಗಿ. ನನ್ನ ವಸಿ ಮನೀಕೊಳಕ್ಕೆ ಬಿಡು ತಾಯಿ' ಎಂದು ರೇಗಿದಳು.

'ನಾಡಿದ್ದಿನಿಂದ ಕಸುಬಿಗೆ ಇಳೀಬೇಕಲ್ಲಾ, ಆಗಲೂ ನೀನು ಹಿಂಗೇ ಇದ್ದರೆ ಆಗುತ್ತದಾ ?'

ರಾಮಿ ಎಲ್ಲೋ ನೋಡುತ್ತಾ ಕೇಳಿದಳು. ಅವಳಾಗಲೇ ತನ್ನ ಮನಸ್ಸಿನಲ್ಲಿ ಜೈಲಿನಿಂದ ಬಿಡುಗಡೆ ಹೊಂದಿ ವಿಟರ ನಡುವೆ ಸರಸ ಸಲ್ಲಾಪ ಮಾಡುತ್ತಿದ್ದಂತೆ ತೋರಿತು.

ಇದ್ದಿಲನ್ನೂ ನಾಚಿಸುವ ಮೈ ಬಣ್ಣ ರಾಮಿಯದು. ಅವಳ ಮುಖದಲ್ಲಿ ಕಣ್ಣು, ಹಲ್ಲು ಪ್ರಧಾನವಾಗಿ ಕಾಣುತ್ತಿದ್ದವು. ಅವಳಲ್ಲಿ ಸುಂದರವಾದುದು ದೊಡ್ಡ ಹೆರಳು, ಮಾಟವಾದ ದೇಹ. ಬೇಲೂರಿನ ಶಿಲಾ

ಬಾಲಿಕೆಯರಂತಹ ಶರೀರದಲ್ಲಿ ಯೌವನದ ಸಂಚಾರವಾಗಿದ್ದುದರಿಂದ ರಾಮಿ ಮತ್ತಷ್ಟು ಮನೋಹರಳಾಗಿ ಕಾಣುತ್ತಿದ್ದಳು. ಕಪ್ಪು ಶಿಲೆಯಿಂದ ಕಡೆದ ವಿಗ್ರಹದಂತಿದ್ದಳು ರಾಮಿ. ಅವಳ ಕಣ್ಣುಗಳಲ್ಲಿ ಕಾಮದ ಕುಣಿತವಿತ್ತು. ತೀರದ ದಾಹ, ಆರದ ಬಯಕೆಯಿಂದ ಕಣ್ಣುಗಳು ಯಾವಾಗಲೂ ಪ್ರಜ್ವಲಿಸುತ್ತಿದ್ದವು.

ರಾಮಿ ನನ್ನೊಡನೆ ಮಾತನಾಡುವಾಗ ನನ್ನನ್ನು ತಿಂದು ಬಿಡುವಂತೆ ನೋಡುತ್ತಿದ್ದಳು.

ಅಲ್ಲಿದ್ದ ಹೆಂಗಸರ ಪೈಕಿ ನಾನು ಎಲ್ಲರಿಗಿಂತಲೂ ಎತ್ತರವಾಗಿ ಧೃಡಕಾಯಳಾಗಿದ್ದೆ. ಹಿಂದೆ ನಾನು ಅನುಭವಿಸಿದ್ದ ಕಷ್ಟಗಳಿಂದಾಗಿ, ಒರಟು ಕೆಲಸಗಳಿಂದಾಗಿ ನನ್ನ ಕೈ, ತೋಳು, ಕಾಲುಗಳು ಒರಟಾಗಿ ಗಂಡಸಿನ ಕೈ ಕಾಲುಗಳಂತಿದ್ದವು. ಬೀಸಿ ಬಂದ ಬಿರುಗಾಳಿ ಮರದಿಂದ ಹಣ್ಣೆಲೆಗಳನ್ನು ಉದುರಿಸುವಂತೆ, ನನ್ನ ಜೀವನದಲ್ಲಿ ಬೀಸಿ ಬಂದ ಬಿರುಗಾಳಿ ನನ್ನ ಮುಖದಲ್ಲಿದ್ದ ಮಾರ್ದವತೆ, ಕೋಮಲತೆ ಎಲ್ಲವನ್ನೂ ಉದುರಿಸಿತ್ತು. ಕಾಠಿಣ್ಯ, ಕೆಚ್ಚು, ರೋಷದಿಂದಾಗಿ ನನ್ನ ಮುಖ ಗಡುಸಾಗಿತ್ತು.

'ಅದೆಲ್ಲಾ ಸರಿ. ನೀನು ಯಾಕೆ ಬಂದೆ ಹೇಳಲೇ ಇಲ್ಲವಲ್ಲಾ ?'

ರಾಮಿ ನನ್ನ ಕೇಳಿದಳು ನಾನು ಒಂದು ನಿಮಿಷ ಅವಳಿಗೆ ಉತ್ತರ ಹೇಳಲಿಲ್ಲ. ನನ್ನ ಮಗುವನ್ನು ನಾನೇ ಕೈಯಾರೆ ಕೊಂದನೆಂದು ಅವಳಿಗೆ ಹೇಳುವುದಾದರೂ ಹೇಗೆ ? ಆದರೆ ರಾಮಿ ತನ್ನ ವೇಶ್ಯಾವೃತ್ತಿಯನ್ನು ನನಗೆ ಹೇಳಲಿಲ್ಲವೇ ? ತಾನು 'ಸೂಳೆ' ಎಂಬುದನ್ನು ತಿಳಿಸಿದಾಗ ಅವಳು ಸ್ವಲ್ಪವೂ ನಾಚಿದಂತೆ ತೋರಲಿಲ್ಲ. ಬದಲು ತನ್ನ ಕಸುಬಿನ ಬಗ್ಗೆ ಅವಳು ಹೆಮ್ಮೆ ತಾಳಿದ್ದಳು.

ವಲ್ಲಿ ತಾನು ಕಳ್ಳ ಸಾರಾಯಿ ಸಾಗಿಸುತ್ತಿದ್ದ ವಿಷಯ ಎಷ್ಟು ಸಲೀಸಾಗಿ ಹೇಳಿದಳು ! ನಾವೆಲ್ಲರೂ ಒಂದೇ ಬುಡಕ್ಕೆ ಸೇರಿದವರು ಇದರಲ್ಲಿ ನಾಚಿಕೆ ಏಕೆ ?

'ಕೊಲೆ ಮಾಡಿದ ತಪ್ಪಿಗೆ ಬಂದಿದೀನಿ.'

'ಕೊಲೆ ! ಯಾರನ್ನ ಕೊಂದೆ ? ನಿನ್ನ ಗಂಡನ್ನೇ ? ನೀನೆಂಥಾ ಪೆದ್ದಿ. ಕೊಲೆ ಮಾಡುವ ಎದೆಗಾರಿಕೆ ಇದ್ದಮೇಲೆ ಸಿಕ್ಕಿಹಾಕಿಕೊಳ್ಳ

ಬಾರದಾಗಿತ್ತು. ನಿನಗೆ ಬರಿ ಧೈರ್ಯ ಇದೆಯೇ ಹೊರತು ಜಾಣತನ ವಿಲ್ಲ....' ಎನ್ನುತ್ತಾ ರಾಮಿ ಸುತ್ತಲೂ ನೋಡಿ ನನ್ನ ಬಳಿ ಬಗ್ಗಿ ಮೆಲ್ಲಗೆ ಹೇಳಿದಳು.

' ನಾನು ನನ್ನ ಗಂಡನ್ನ ಕೊಲೆ ಮಾಡಿದೀನಿ. ಆದರೆ ಇದುವರೆವಿಗೂ ಅದು ಯಾರಿಗೂ ಗೊತ್ತಾಗಿಲ್ಲ.'

' ಯಾತಕ್ಕೆ ಗಂಡನ್ನ ಕೊಂದೆ ?'

' ನನ್ನ ಅಲ್ಲಿ ಇಲ್ಲಿ ಹೋಗಬೇಡಾ ಅಂತಿದ್ದ. ತನ್ನೊಬ್ಬನ ಜೊತೇನೆ ಇರಬೇಕೂಂತ ಹೇಳ್ತಿದ್ದ. ನಾನು ಅವನ ಸ್ನೇಹಿತರ ಜೊತೆ ಹೋದಾಗ ಹಿಡಿದು ಹೊಡೆಯುತ್ತಿದ್ದ. ಒಂದು ದಿನ ಅವನು ನಿದ್ದೆ ಮಾಡ್ತಿದ್ದಾಗ ಮಚ್ಚು ತಗೊಂಡು....' ಎನ್ನುತ್ತಾ ರಾಮಿ ತನ್ನ ಕೈಯನ್ನು ಕತ್ತಿನ ಮೇಲೆಳೆದು ತೋರಿಸಿ ನಕ್ಕಳು.

' ಗಲಾಟೆ ಆಗಲಿಲ್ಲವಾ ?'

' ಗಲಾಟೆ ಆಯ್ತು. ನಾನು ಊರಿನಲ್ಲೇ ಇರಲಿಲ್ಲಾ ಎನ್ನಿಸಿಕೊಂಡೆ. ಈಗ ನೋಡು ಗಂಡನ ಕಾಟವಿಲ್ಲದೆ, ಹಾಯಾಗಿ ನನಗಿಷ್ಟ ಬಂದವರ ಜೊತೆ ಓಡಾಡಿಕೊಂಡಿದೀನಿ. ನಾನು ನಿನ್ನ ಹಾಗೆ ಪೆದ್ದಿಯಲ್ಲ. ಕೊಲೆ ಮಾಡಿ ತಪ್ಪಿಸಿಕೊಳ್ಳೋಕೂ ಜಾಣತನ ಬೇಕು. ನೀನು ಯಾಕೆ ನಿನ್ನ ಗಂಡನ್ನ ಕೊಂದೆ ?'

' ನಾನು ಗಂಡನ್ನಲ್ಲ ಕೊಂದಿದ್ದು. ನನ್ನ ಮಗೂನ.'

' ಮಗು ! ಮಗೂನ ಯಾಕೆ ಕೊಂದೆ. ಮಗು ಕೊಲ್ಲೋಕೆ ಕದ್ದು ಹೆತ್ತಿದ್ದೆಯಾ ?'

ನಾನು ಮಾತನಾಡದೇ ತಲೆ ತಗ್ಗಿಸಿದೆ. ರಾಮಿ ತನ್ನ ಕೈಯಿಂದ ನನ್ನ ಬೆನ್ನಿನ ಮೇಲೆ ಹೊಡೆದು

' ಹೋದರೆ ಹೋಯಿತು ಬಿಡು. ಇನ್ನೊಂದು ಹುಟ್ಟತ್ತೆ' ಎಂದಳು.

ಕತ್ತಲು ನಿಧಾನವಾಗಿ ಕವಿಯಿತು. ಕತ್ತಲು ಕವಿದಂತೆ ಇತರರು ಮಾತನಾಡುವುದನ್ನು ಕಡಿಮೆ ಮಾಡಿದರು. ಆದರೆ ರಾಮಿ ಮಾತ್ರ ಕುಡಿದವಳಂತೆ, ಉದ್ರೇಕಗೊಂಡವಳಂತೆ ಮಾತನಾಡುತ್ತಿದ್ದಳು.

ಮೋರಿಯಮ್ಮ ರಾಮಿಯನ್ನು ಕೆಣಕಿ ಪ್ರಶ್ನಿಸುತ್ತಿದ್ದಳು.

'ಅದೆಲ್ಲಾ ಹಂಗಿರಲಿ ನೀನು ಗಂಡಸ್ರುನ್ನ ಎಂಗೆ ಕರೀತಿದ್ದೆ, ಅವೆಲ್ಲಾ ನಮುಗೆ ತೋರಿಸು' ಎಂದಳು.

ರಾಮಿ ಅಟ್ಟಹಾಸದಿಂದ ಎದ್ದು ನಿಂತು ಎಡಗೈಯನ್ನು ಬಾಯಿಯ ಹತ್ತಿರ ಹಿಡಿದು 'ಹೀಗೆ' ಎಂದಳು.

ಉಳಿದವರೆಲ್ಲಾ ಬಿದ್ದು ಬಿದ್ದು ನಕ್ಕರು.

ನಾನು ಮಾತ್ರ ನಗದೇ ಮೈಮೇಲೆ ಕುಳಿತಿದ್ದ ಸೊಳ್ಳೆಯನ್ನು ಹೊಡೆದೋಡಿಸುತ್ತಾ 'ಅಸಾಧ್ಯ ಸೊಳ್ಳೆ' ಎಂದೆ.

ರಾಮಿ 'ಸೊಳ್ಳೆ ಪರದೆ, ಮಂಚ, ಮೆತ್ತೆ ಎಲ್ಲಾ ಕೊಡ್ತಾರೇಂತ ತಿಳಿದುಕೊಂಡಿದ್ದೆಯೇನೋ ?' ಎಂದಳು.

ರಾತ್ರಿ ಹೆಚ್ಚಾದಂತೆ ಎಲ್ಲರೂ ಮೌನವಾಗಿದ್ದರು. ನನಗೆ ಕಂಬಳಿ, ಚಾಪೆ ಕೊಟ್ಟಿರಲಿಲ್ಲ. ನಾನು ನೆಲದಿಂದ ಒಂದಡಿ ಎತ್ತರವಿದ್ದ ಸಿಮೆಂಟು ಮಂಚದ ಮೇಲೆ ಒರಗಿಕೊಂಡು, ತೋಳನ್ನೇ ತಲೆಯ ಕೆಳಗಿಟ್ಟು ನಿದ್ದೆ ಮಾಡಲು ಯತ್ನಿಸಿದೆ. ಆದರೆ ಸೊಳ್ಳೆಗಳ ಸಂಗೀತ, ಕಡಿತದಿಂದಾಗಿ ನಿದ್ದೆ ಬರಲಿಲ್ಲ.

ಇನ್ನೇನು ಕಣ್ಣಿಗೆ ನಿದ್ದೆ ಹತ್ತಬೇಕು—ಅಷ್ಟರಲ್ಲಿ ಹಿಂದನಿಂದ ಯಾರೋ ಬಂದು ನನ್ನನ್ನು ಬಿಗಿಯಾಗಿ ಅಪ್ಪಿಕೊಂಡಂತಾಯಿತು. ನಾನು ಬೆಚ್ಚಿ ಎದ್ದೆ. ನನ್ನನ್ನು ಬಳಸಿದ್ದ ಕೈಗಳನ್ನು ಕಿತ್ತೆಸೆಯಲು ಪ್ರಯತ್ನಿಸಿದೆ ಅಷ್ಟರಲ್ಲಿ ಪರಿಚಿತ ದನಿ ನನ್ನ ಕಿವಿಯಲ್ಲಿ ಪಿಸುಗುಟ್ಟಿತು.

'ನಾನು ರಾಮಿ.'

'ರಾಮಿ ! ಇಲ್ಲಿಗ್ಯಾಕೆ ಬಂದೆ. ಹೋಗು.'

'ಒಬ್ಬಳೇ ಮಲಗಿ ಬೇಜಾರಾಯಿತು. ಅದಕ್ಕೇ ಬಂದೆ.'

'ಥತ್, ನಾನೇನು ನಿನ್ನ ಮಿಂಡನಲ್ಲ. ಹಾಳಾಗಿ ಹೋಗು' ನಾನು ರೇಗಿ ಹೇಳಿದೆ. ರಾಮಿ ನನ್ನ ಮಾತನ್ನು ಲಕ್ಷಿಸದೇ ನನ್ನ ಹತ್ತಿರ ಸರಿದು ನಗುತ್ತಾ 'ಸಧ್ಯಕ್ಕೆ ನೀನೇ ನನ್ನ ಮಿಂಡ' ಎಂದಳು.

ಅವಳ ಸ್ಪರ್ಶ ನನಗೆ ಅಸಹ್ಯವನ್ನುಂಟುಮಾಡಿತು. ನಾನು ಅವಳ ಕೈಯನ್ನು ಕಿತ್ತು ಅವಳನ್ನು ದೂರ ತಳ್ಳಿದೆ. ನಾನು ರಾಮಿಗಿಂತ ಎಲ್ಲ

ರೀತಿಯಿಂದಲೂ ಬಲಶಾಲಿಯಾಗಿದ್ದೆ. ರಾಮಿ ಹಿಂದಕ್ಕೆ ಬಿದ್ದು

'ಅಬ್ಬಾ! ಏನು ಬಲವಿದೆ ನಿನ್ನ ತೋಳಲ್ಲಿ! ಅದಕ್ಕೆ ತಾನೆ ನಾನು ನಿನ್ನ ಹತ್ತಿರ ಬಂದಿದ್ದು' ಎಂದಳು.

'ಇನ್ನೊಂದು ಸಲ ನನ್ನ ಹತ್ತಿರ ಬಂದರೆ ನಿನ್ನ ಸಿಗಿದುಹಾಕಿ ಬಿಡುತ್ತೇನೆ.'

'ನಾಡಿದ್ದು! ಅಲ್ಲಿಯವರೆಗೆ ನಾನೇನು ಮಾಡಲಿ?'

'ಎಲ್ಲಾದರೂ ಹೋಗಿ ಸಾಯಿ.'

ರಾಮಿ ಎದ್ದು ನಿಂತು ಸೀರೆಯನ್ನು ಸರಿಮಾಡಿಕೊಂಡಳು. ಅನಂತರ ಮೇರಿಯಮ್ಮನ ಬಳಿ ನಿಂತು ಬಗ್ಗಿ ಅವಳೊಡನೆ ಏನೋ ಪಿಸುಗುಟ್ಟಿದಳು. ಮೇರಿಯಮ್ಮ ಪಕ್ಕಕ್ಕೆ ಸರಿದು ತನ್ನ ಪಕ್ಕದಲ್ಲಿ ರಾಮಿಗೆ ಜಾಗ ಕೊಟ್ಟಳು. ಆದರೆ ರಾಮಿಯನ್ನು ಹಂಗಿಸದೇ ಬಿಡಲಿಲ್ಲ.

'ಈಗ ನಾನು ಬೇಕಾಯಿತೇನೋ? ಹೊಸಬಳು ಜೋರಾಗವ್ಳೆ ಅಂತ ಅವಳ ತಾವ ಹೋಗಿದ್ದೆ. ಅಲ್ಲಿಂದ ಒದೆ ತಿಂದು ಆಮೇಲೆ ಬಂದೆ'

'ಹೂಂ. ಅವಳಿನ್ನೂ ಎಲ್ಲಾತಕ್ಕೂ ಹೊಸಬಳು. ಸ್ವಲ್ಪ ದಿವಸವಾದ ಮೇಲೆ ಸರಿಹೋಗ್ತಾಳೆ....'

ನಾನು ಜುಗುಪ್ಸೆಯಿಂದ ಬೇರೆ ಕಡೆ ತಿರುಗಿ ಕಣ್ಣು ಮುಚ್ಚಿದೆ. ಆದರೆ ನಾನು ನೋಡಿದ ವಿಚಿತ್ರ, ಭೀಬತ್ಸ ದೃಶ್ಯದಿಂದಾಗಿ ನನಗೆ ನಿದ್ದೆ ಬರಲಿಲ್ಲ. ಎಂದಿಗೆ ಬೆಳಗಾದೀತೋ ಎಂದು ಹೊರಳಾಡುತ್ತಾ ರಾತ್ರಿಯನ್ನು ಕಳೆದೆ. ಪೂರ್ವ ದಿಕ್ಕು ತಿಳಿಯಾಗುತ್ತಲೇ ನಾನು ಎದ್ದು ನಲ್ಲಿಯ ಬಳಿಗೆ ಹೊರಟೆ. ನನ್ನ ಪಕ್ಕದಲ್ಲೇ ಮೇರಿಯಮ್ಮ, ರಾಮಿ ಒಬ್ಬರನ್ನೊಬ್ಬರು ತಬ್ಬಿಕೊಂಡು ಮಲಗಿದ್ದರು. ಅವರನ್ನು ನೋಡಿ ನನಗೆ ತಲೆ ತಿರುಗಿದ ಹಾಗಾಯಿತು.

ನಾನು ಮುಖ ತೊಳೆದುಕೊಂಡು ಬ್ಯಾರೆಕ್ಕಿಗೆ ಹೋಗದೆ ಕಾಂಪೌಂಡಿನಲ್ಲಿಯೇ ಇದ್ದ ಕಲ್ಲಿನ ಮೇಲೆ ಕುಳಿತುಕೊಂಡೆ. ಮಹಿಳಾ ಕೈದಿಗಳನ್ನು ನೋಡಿಕೊಳ್ಳುವ ನೀಲಿ ನನ್ನ ಹತ್ತಿರ ಬಂದು

'ಜೈಲರ್ ತಾವು ಹೋಗಬೇಕು. ಸಿದ್ಧವಾಗಿರಮ್ಮ' ಎಂದಳು.

ನಾನು ಬದಲು ಹೇಳಲಿಲ್ಲ. ಸುಮಾರು ಒಂಭತ್ತು ಗಂಟೆಯ

ಹೊತ್ತಿಗೆ ಹೊರಗಿನಿಂದ ಯಾರೋ ಬಾಗಿಲನ್ನು ಬಡಿದರು. ನೀಲಿ ಎದ್ದು ಬೀಗವನ್ನು ತೆಗೆದಳು. ಪೋಲೀಸಿನವನೊಬ್ಬ ಕೂಗಿದ

'ನಿನ್ನೆ ಸಂಜೆ ಕರೆದುಕೊಂಡು ಬಂದ ಕೈದೀನ ಜೈಲರ್ ಮುಂದೆ ಕರ್ಕೊಂಡು ಹೋಗು.'

ನೀಲಿ ನನ್ನ ಕಡೆ ತಿರುಗಿ 'ನಡಿ' ಎಂದಳು. ನಾನು ಮರುಮಾತ ನಾಡದೆ ಅವಳನ್ನು ಹಿಂಬಾಲಿಸಿದೆ.

ರೂಮೊಂದರಲ್ಲಿ ಮಧ್ಯವಯಸ್ಸಿನ ವ್ಯಕ್ತಿಯೊಬ್ಬರು ಯಾರ ಕೈಲೋ ಮಾತನಾಡುತ್ತಾ ಕುಳಿತಿದ್ದರು. ನಾವು ರೂಮಿನ ಹೊರಬಾಗಿಲಿನ ಬಳಿ ನಿಂತೆವು. ಜೈಲರ್ ಸಾಹೇಬರು ಒಳಗಿದ್ದವರೊಡನೆ ಸಾವಕಾಶವಾಗಿ ಮಾತನಾಡುತ್ತಿದ್ದರು. ನಾವು ಸುಮಾರು ಅರ್ಧ ಗಂಟೆಯ ಕಾಲ ಹೊರಗೆ ನಿಂತಿದ್ದೆವು.

'ಹಾಗಾದರೆ ಬರ್ತೀರಾ ? ನಮಸ್ಕಾರ' ಎಂದು ಜೈಲರ್ ಕೈ ಮುಗಿದರು. ಒಳಗಿದ್ದ ವ್ಯಕ್ತಿ ಹೊರಟುಹೋದೊಡನೆ ಆರ್ಡರ್ಲಿ ನನ್ನ ಹೆಸರು ಹಿಡಿದು ಕೂಗಿದ. ನಾನು ತಲೆ ತಗ್ಗಿಸಿ ರೂಮಿನೊಳಗೆ ಹೋಗಿ ನಿಂತೆ.

ಜೈಲರ್ ಕುರ್ಚಿಯನ್ನು ಒರಗಿ ಕುಳಿತಿದ್ದರು. ನಾನು ಒಳಗೆ ಹೋಗಿ ನಿಂತೊಡನೆ ಯಾವುದೋ ಪುಸ್ತಕವನ್ನು ನೋಡುತ್ತಿದ್ದವರು ತಲೆ ಎತ್ತಿ ಸಣ್ಣಗೆ ಗರ್ಜಿಸಿ ಕೇಳಿದರು

'ನಿನ್ನ ಹೆಸರೇನು ?' ನಾನು ಹೇಳಿದೆ. ಹೆಸರು ಹೇಳು ಹೆಸರನ್ನೆ ವಾಗ ನಾಲಿಗೆ ತೊದಲುತ್ತಿತ್ತು.

'ನಿನ್ನ ವಯಸ್ಸೆಷ್ಟು ?' ನಾನು ಅದನ್ನೂ ಹೇಳಿದೆ.

'ನಿಂಗೆ ಅಪ್ಪ, ಅಮ್ಮ ಇದಾರೋ ?'

'ಇದಾರೆ'

'ಅವರ ಹೆಸರೇನು ? ಅವರಿಗೇನು ಕೆಲಸ ? ಅವರು ಎಲ್ಲಿದಾರೆ?'

'ಅವರ ಹೆಸರು ವೆಂಕಟರಮಣಯ್ಯ. ಪ್ರೈಮರೀ ಸ್ಕೂಲಿನಲ್ಲಿ ಮೇಷ್ಟರಾಗಿದಾರೆ. ಇದೇ ಊರಿನಲ್ಲಿದಾರೆ.'

'ನೀನು ಏನು ತಪ್ಪು ಮಾಡಿದೀಯಾ ಗೊತ್ತೋ ?'

'... ............'

‘ ಮಾತಾಡೋಕೆ ಬರುತ್ತೋ ಇಲ್ಲವೋ ?’

‘ ನನ್ನ ಮಗೂನ ಕೊಲೆ ಮಾಡಿದೀನಿ.’

‘ ಎಷ್ಟು ವರ್ಷ ಶಿಕ್ಷೆ ವಿಧಿಸಿದಾರೆ ಗೊತ್ತೋ ?’

‘ ..................... ’

‘ ಐದು ವರ್ಷ ಶಿಕ್ಷೆ ಹಾಕಿದಾರೆ. ನಿಮ್ಮ ಅಪ್ಪನಿಗೆ ನೀನು ಇಲ್ಲಿಗೆ ಬಂದಿರೋದು ಗೊತ್ತಿಲ್ಲವೇ ?’

‘ ಇಲ್ಲ.’

‘ ಕದ್ದು ಮನೆಯಿಂದ ಓಡಿ ಬಂದಿದೀಯಾ ?’

‘ ಹೂಂ.’

‘ ನೀನು ಇಲ್ಲಿಗೆ ಬರುವಾಗ ಹಣ ಏನೂ ತಂದಿಲ್ಲವೇ ?’

‘ ಇಲ್ಲ.’

ಜೈಲರ್ ಸಾಹೇಬರು ಕಾಗದವೊಂದರ ಮೇಲೆ ಏನೋ ಬರೆದು ಆರ್ಡರ್ಲಿಯ ಕೈಗೆ ಕೊಟ್ಟು

‘ ಡಾಕ್ಟರ ಹತ್ತಿರ ಕರೆದುಕೊಂಡು ಹೋಗಿ ಮೆಡಿಕಲ್ ಎಕ್ಸಾಮ್ ಮಾಡಿಸಿಬಿಡು’ ಎಂದರು.

ಜೈಲಿನ ಡಾಕ್ಟರು ಹಿಂಭಾಗದಲ್ಲಿದ್ದ ತಮ್ಮ ರೂಮಿನಲ್ಲಿ ಕುಳಿತಿದ್ದರು. ಡಾಕ್ಟರು ನನ್ನ ಗಂಟಲು, ನಾಡಿ, ಹೃದಯದ ಬಡಿತ ಎಲ್ಲವನ್ನೂ ಪರೀಕ್ಷಿಸಿದರು. ನನಗೇನಾದರೂ ಖಾಯಿಲೆ ಇದೆಯೇ ಎಂದು ಕೇಳಿದರು. ನಾನು ‘ ಇಲ್ಲ ’ ಎನ್ನುವಂತೆ ತಲೆ ಅಲುಗಾಡಿಸಿದೆ.

ಡಾಕ್ಟರು ಇನಾಕ್ಯುಲೇಷನ್ ಕೊಡಲು ಸೂಜಿಯನ್ನು ಸಿದ್ಧಮಾಡಿಕೊಂಡು ನನ್ನ ಬಳಿಗೆ ಬಂದರು. ನಾನು ಸೂಜಿಯನ್ನು ನೋಡಿ ಎರಡು ಹೆಜ್ಜೆ ಹಿಂದೆ ಸರಿದು ಆರ್ತಳಾಗಿ ಕೂಗಿದೆ

‘ ನನಗೆ ಇನಾಕ್ಯುಲೇಷನ್ ಬೇಡ....ಬೇಡ....’

ಡಾಕ್ಟರು ಸಿರಿಂಜನ್ನು ಒತ್ತಿ ಸೂಜಿಯ ಮೊನೆಯಿಂದ ಔಷಧದ ನೀರು ಚಿಮ್ಮುವಂತೆ ಮಾಡಿ

‘ ವಾಕ್ಸಿನೇಷನ್ ಹಾಕಿಸಿಕೊಳ್ಳಲೇಬೇಕು. ಎಲ್ಲಿ ರವಿಕೆಯ ತೋಳು ಮೇಲೆ ಮಾಡು’ ಎಂದು ನೀಲಿಗೆ ಹೇಳಿದರು. ನೀಲಿ ನನ್ನ ರಟ್ಟೆ ಹಿಡಿದು

ತೋಳನ್ನು ಮೇಲೆ ಮಾಡಿದಳು. ಸೂಜಿ ನನ್ನ ತೋಳಿನೊಳಗೆ ಬಂದಾಗ ನಾನು ಸಣ್ಣಗೆ ಚೀರಿದೆ.

ಅಲ್ಲಿಂದ ನನ್ನನ್ನು ಸೂಪರಿಂಡೆಂಟ್ ಸಾಹೇಬರ ಬಳಿಗೆ ಕರೆದು ಕೊಂಡು ಹೋದರು. ಸಾಹೇಬರು ತಮ್ಮ ಮುಂದಿದ್ದ ಫೈಲು, ರಿಜಿಸ್ಟರು ಗಳ ರಾಶಿಯಿಂದ ಒಂದೊಂದನ್ನೇ ತೆಗೆದು ಸಹಿ ಮಾಡುತ್ತಿದರು.

ಸಾಹೇಬರಿಗೆ ಸುಮಾರು ನಲವತ್ತು ವರ್ಷಗಳಾಗಿದ್ದವು. ಅವರ ತಲೆಗೂದಲು ಅರ್ಧಕಿಂತಲೂ ಹೆಚ್ಚು ನರೆತಿತ್ತು. ಕಣ್ಣಿಗೆ ದಪ್ಪ ಕಟ್ಟಿನ ಕಪ್ಪು ಗಾಜಿನ ಕನ್ನಡಕ ಹಾಕಿ ಬಾಯಲ್ಲಿ ಸಿಗಾರನ್ನು ಕಚ್ಚಿದ್ದರು. ಬಿಳಿಯ ಶರಾಯಿ, ನೀಲಿ ಉಲ್ಲನ್ ಕೋಟು ಹಾಕಿ ಕೈಲಿ ತುಂಡುಕೋಲೊಂ ದನ್ನು ಹಿಡಿದಿದ್ದರು.

ಅವರ ತಲೆಯ ಮೇಲೆ ವಿದ್ಯುತ್ತಿನ ಬೀಸಣಿಗೆ ಗಿರಗಿರನೆ ತಿರುಗು ತ್ತಿತ್ತು.

ಸಾಹೇಬರ ಹಿಂಭಾಗದ ಗೋಡೆಯ ಮೇಲಿದ್ದ ಗಡಿಯಾರ ಹತ್ತು ಗಂಟೆಯನ್ನು ತೋರಿಸುತ್ತಿತ್ತು.

ಆರ್ಡರ್ಲಿ ಭಯ ಭಕ್ತಿಯಿಂದ ಡಾಕ್ಟರ ಸರ್ಟಿಫಿಕೇಟು, ವಾರಂಟು ಎಲ್ಲವನ್ನೂ ಸಾಹೇಬರ ಮುಂದಿರಿಸಿ ನನ್ನ ಕಡೆ ತಿರುಗಿ 'ಕೈ ಕಟ್ಟಿ ನಿಲ್ಲು' ಎಂದು ಅಪ್ಪಣೆ ಮಾಡಿದ. ಸಾಹೇಬರು ತಮ್ಮೆದುರಿಗಿದ್ದ ಕಾಗದಗಳಿಗೆ ಸಹಿ ಹಾಕಿ ಕೇಳಿದರು

'ಐದು ವರ್ಷ ಶಿಕ್ಷೆ ಹಾಕಿದಾರೆ. ನೀನು ಮಾಡಿದ ತಪ್ಪೇನು?'

ಈ ಪ್ರಶ್ನೆಗಳಿಗೆ ಉತ್ತರ ಹೇಳಿ ನನಗೆ ಬೇಸರ ಬಂದಿತ್ತು. ಆದರೆ ನನ್ನ ಬೇಸರ ಕೇಳುವವರು ಯಾರು?

'ಕೊಲೆ ಅಪಾದನೆ.........ಮಗೂದು.'

'ಅದೇನು ಪುಟ್ಟ ತಪ್ಪಲ್ಲ.'

ಹೌದು. ನಾನು ಮಗೂನ ಕೊಂದಿದ್ದು ತಪ್ಪು. ದೇಶದ ನಾಯಕರು ಯುದ್ಧದ ಹೆಸರಿನಲ್ಲಿ ಸಾವಿರಾರು ಜನರನ್ನು ಕೊಲ್ಲೋದು ತಪ್ಪಲ್ಲ. ಹೆಂಗಸರು ಮಕ್ಕಳ ಮೇಲೆ ಬಾಂಬಿನ ಮಳೆಗರೆಯುವುದು ತಪ್ಪಲ್ಲ. ಶ್ರೀಮಂತರು ಬಡವರ ರಕ್ತ ಹೀರಿ ಅವರನ್ನು ಅಂಗುಲ

ಅಂಗುಲವಾಗಿ ಬಡತನದ ಪ್ರವಾಹದಲ್ಲಿ ಮುಳುಗಿಸಿ ಸಾಯಿಸುವುದು ತಪ್ಪಲ್ಲ. ಆದರೆ ನಾನು ಜನ್ಮವಿತ್ತ ನನ್ನ ಮಗುವನ್ನು, ನನ್ನ ದೇಹದ ಒಂದು ಸಜೀವ ಭಾಗವನ್ನು ನನಗಾಗಿ, ಮಗುವಿಗಾಗಿ ನಿರ್ಮೂಲ ಮಾಡಿದರೆ ಅದು ಕೊಲೆ, ಖೂನಿ. ತಪ್ಪು........

'ಸಾಹೇಬರ ಪ್ರಶ್ನೆಗೆ ಉತ್ತರ ಕೊಡು' ಆರ್ಡರ್ಲಿ ಗರ್ಜಿಸಿದ.

'ಏನು ?' ನಾನು ತಬ್ಬಿಬ್ಬಾಗಿ ಕೇಳಿದೆ.

'ನಿಂಗೆ ಅಪ್ಪ ಇದಾರೆಯೇ ?'

'ಹೂಂ.'

'ಅವರಿಗೆ ನೀನು ಜೈಲಿಗೆ ಬಂದಿರೋದು ಗೊತ್ತಿಲ್ಲವೇ ?'

'ಇಲ್ಲ.'

'ಜೈಲಿನಲ್ಲಿ ಮೊಂಡತನ, ಹಠ ಮೂರ್ಖತನ ಮಾಡಬೇಡ. ಹೇಳಿದಹಾಗೆ ಕೇಳಿಕೊಂಡಿದ್ದು, ಒಳ್ಳೆಯವಳಾಗಿದ್ದರೆ ಶಿಕ್ಷೆ ಕಡಿಮೆ ಮಾಡಿಸ್ತೀನಿ. ತಿಳೀತಾ ?'

'ಹೂಂ.'

'ಹೋಗು' ಎಂದು ಸಾಹೇಬರು ಹೇಳಿ ಸಿಗಾರನ್ನು ಮತ್ತೆ ಬಾಯಲ್ಲಿ ಕಚ್ಚಿಕೊಂಡರು.

ನಾನು ನೀಲಿಯನ್ನು ಹಿಂಬಾಲಿಸಿದೆ.

ನಾನು ಮತ್ತೆ ಮಹಿಳಾ ಕೈದಿಗಳನ್ನಿರಿಸಿದ್ದ ಕಾಪೌಂಡಿನೊಳಗೆ ಬಂದೆ. ಮೇರಿಯಮ್ಮ, ರಾಮಿ, ಕನಕ, ಸೇತು ಗಿಡಗಳಿಗೆ ನೀರು ಹಾಕುತ್ತಿದ್ದರು. ಅವರ ಗುಂಪಿನಲ್ಲಿ ಚೌಡಿ ಕಾಣಿಸಲಿಲ್ಲ.

'ಚೌಡಿ ಕಾಣಲಿಲ್ಲ........'

'ಅವಳಿಗೆ ಹೊಟ್ಟೆ ನೋವೂಂತ ಕೆಲಸದಿಂದ ರಜಾ...........' ನೀಲಿ ಹೇಳಿದಳು. ಬಾಳೇಗಿಡಗಳಿಗೆ ನೀರು ಹಾಕುತ್ತಿದ್ದ ರಾಮಿ ನೀರು ಹಾಕುವುದನ್ನು ನಿಲ್ಲಿಸಿ ನನ್ನನ್ನು ದುರುಗುಟ್ಟಿಕೊಂಡು ನೋಡಿ ಮೇರಿಯಮ್ಮನ ಕಿವಿಯಲ್ಲೇನೋ ಪಿಸುಗುಟ್ಟಿದಳು.

'ಸತೀ ಸಿರೋಮಣಿ' ಎಂದು ಮೇರಿಯಮ್ಮ ನನ್ನಕಡೆ ನೋಡಿ ನಕ್ಕಳು.

'ಐದು ವರ್ಷ ಹೇಗಿರ್‍ತಾಳೆ ನೋಡೋಣ. ಇನ್ನೂ ನಿನ್ನೆ ತಾನೆ ಬಂದಿದಾಳೆ. ಅಷ್ಟೊಂದು ಹಸಿವಾಗಿಲ್ಲಾಂತ ಕಾಣುತ್ತೆ' ರಾಮಿ ಮೇರಿಯಮ್ಮನನ್ನು ತಿವಿದು ಹೇಳಿದಳು

ನನಗೆ ಅವರ ಮಾತುಗಳು ಕೇಳಿಸಲಿಲ್ಲವೆಂಬತೆ ನಟಿಸಿದೆ. ಬಿಂದಿಗೆಯೊಂದನ್ನು ಕಂಕುಳಿಗೇರಿಸಿ ನೀರು ಹಿಡಿಯಲು ನಲ್ಲಿಯ ಬಳಿಗೆ ಹೋದೆ. ಕಾಂಪೌಂಡಿನಲ್ಲಿದ್ದ ಗಿಡಗಳಿಗೆಲ್ಲಾ ನೀರೆರದಾಯಿತು. ರಾಮಿ, ಮೇರಿಯಮ್ಮ ಒಂದು ಮೂಲೆಯಲ್ಲಿ ಜೊತೆಯಾಗಿ ಕುಳಿತರು. ನಾನು ವಲ್ಲಿಯನ್ನು ಅನುಸರಿಸಿ ಕೇಳಿದೆ

'ಅದೇಕೆ ಅವರಿಬ್ಬರೂ ಹಾಗಾಡ್ತಾರೆ?'

'ಕೊಬ್ಬು ಜಾಸ್ತಿಯಾಗಿದೆ. ನಾಕು ದಿನದ ಕೆಳಗೆ ಸಣ್ಣ ಹುಡುಗಿಯೊಂದು ಜೈಲಿಗೆ ಬಂದಿತ್ತು.........'

'ಸಣ್ಣ ಹುಡುಗಿಯೆಂದರೆ?'

'ಸುಮಾರು ಹದಿನೈದು ವರ್ಷವಿರಬಹುದು. ಯಾರದ್ದೋ ಮನೆಯ ಹಿತ್ತಿಲಿನಲ್ಲಿದ್ದ ಕೊಡ, ಬಕೀಟು ಕದಿಯುವಾಗ ಸಿಕ್ಕಿಕೊಂಡಿತಂತೆ. ಅದಕ್ಕೆ ಎರಡು ದಿನ ಸಜಾ ಹಾಕಿದ್ದರು. ಹುಡುಗಿ ಲಕ್ಷಣವಾಗಿ ಬೆಳ್ಳಗಿತ್ತು. ಆ ಹುಡುಗಿ ಬಂದ ದಿನ ರಾಮಿ, ಮೇರಿಯಮ್ಮ ಇಬ್ಬರೂ 'ನನಗೆ ಬೇಕು, ತನಗೆ ಬೇಕೂಂತ' ನಾಯಿ, ಬೆಕ್ಕಿನ ಹಂಗೆ ಕಚ್ಚಾಡಿದರು............'

'ಹುಡುಗೀಗೊಸ್ಕರ ಹೆಂಗಸರು........! ಹುಡುಗನಿಗೋಸ್ಕರ ಜಗಳ ಕಾಯುವ ಹುಡುಗಿಯರ ಹಾಗೆ!' ನಾನು ಅಚ್ಚರಿಯಿಂದ ಕೇಳಿದೆ. ವಲ್ಲಿ ತಲೆದೂಗಿ

'ಹೂಂ. ಹಂಗೇನೆ ಅಂತ ಇಟ್ಕೊಕೋ' ಎಂದಳು.

'ಇವರು ಜಗಳ ಕಾಯುವಾಗ ಆ ಹುಡುಗಿ ಏನ್ಮಾಡಿದಳು?'

'ಅವರ ಜಗಳ ನೋಡಿ ನಗುತ್ತಾ ನಿಂತಿದ್ದಳು. ಆಮೇಲೆ ಹತ್ತಿರಕ್ಕೆ ಬಂದ ಇಬ್ಬರ ಮುಖಕ್ಕೂ ಉಗಿದು ತನ್ನ ಪಾಡಿಗೆ ತಾನು ಮಲಗಿಕೊಂಡಳು.'

'ಕತೆ ಚೆನ್ನಾಗಿದೆ.'

‘ ಕತೆಯಲ್ಲ ಇದು. ನಿಜವಾಗಿಯೂ ನಡೆದಿದ್ದು.’

‘ ಮೇರಿಯಮ್ಮ ಯಾಕೆ ಬಂದಿದ್ದಾಳೆ ? ’

‘ ಕಳ್ಳತನ ಮಾಡಿದ ತಪ್ಪಿಗೆ ಬಂದಿದಾಳೆ. ಕಳ್ಳತನ ಮಾಡೋದ್ರಲ್ಲಿ ಯಾವ ಗಂಡಸಿಗೂ ಅವಳು ಕಡಿಮೆಯಿಲ್ಲ. ರಾತ್ರಿಹೊತ್ತು ವೀರಗಚ್ಚೆಹಾಕಿ ಸೀರೆ ಉಟ್ಕೊಂಡು ಗಂಡಸರಿಗಿಂತ ಹೆಚ್ಚಾಗಿ ಮನೆ ಮೇಲೆ ಹತ್ತಿ, ಹೆಂಚು ತೆಗೆದು, ·ಸೀರೆನ ಸೊಂಟಕ್ಕೆ ಕಟ್ಟಿ ಕೆಳಗಿಳಿದು ಕಳ್ಳತನ ಮಾಡಿದಳಂತೆ. ಒಂದು ಸಲ ಸಿಕ್ಕಿಕೊಂಡಳು. ಆರು ತಿಂಗಳು ಸಜಾ ಹಾಕಿದ್ದಾರೆ.’

‘ ಅವಳು ಬಂದು ಎಷ್ಟು ದಿನವಾಯಿತು ? ’

‘ ಎರಡು ತಿಂಗಳಾಯಿತು ? ’

‘ ಕನಕ, ಸೇತು ಯಾಕೆ ಬಂದಿದ್ದಾರೆ ? ’

ವಲ್ಲಿ ಗಟ್ಟಿಯಾಗಿ ‘ ಕನಕೀ ’ ಎಂದು ಕೂಗಿದಳು. ಕನಕ ಕೈ ಬಳೆಗಳು ಸದ್ದಾಗುವಂತೆ ಓಡಿ ಬಂದಳು. ಅವಳಿಗೆ ಸುಮಾರು ಇಪ್ಪತ್ತು ವರ್ಷಗಳಿರಬಹುದು. ಅವಳು ನಾಲ್ಕಡಿಗಿಂತಲೂ ಹೆಚ್ಚಾಗಿ ಬೆಳೆದಿರಲಿಲ್ಲ. ದುಂಡು ದುಂಡಾದ ಕಾಲಿಗೆ ಬೆಳ್ಳಿಯ ಕಡಗವನ್ನು ಹಾಕಿಕೊಂಡಿದ್ದಳು. ತಲೆಯಲ್ಲಿ ಹೇನು ಹೆಚ್ಚಾಗಿದ್ದುದರಿಂದ ಎರಡು ಕೈಗಳಿಂದಲೂ ತಲೆಯನ್ನು ಪರಪರನೆ ಕೆರೆದು ಕೊಳ್ಳುತ್ತಿದ್ದಳು. ಅವಳ ಕಿರಿದಾದ ಕಣ್ಣುಗಳು ಚೂಟಿಯಿಂದ ಹೊರಳುತ್ತಿದ್ದವು. ಕನಕ ತಲೆ ಕೆರೆದುಕೊಳ್ಳುತ್ತಿರುವುದನ್ನು ನೋಡಿ ವಲ್ಲಿ

‘ ಬಾ ಹೇನು ಕುಕ್ತೀನಿ ’ ಎಂದಳು.

ದಟ್ಟವಾದ ಮೋಟುಗೂದಲಿನ ಹೆರಳನ್ನು ಬಿಚ್ಚಿ ಬಿಸಿಲಿಗೆದುರಾಗಿ ವಲ್ಲಿಯ ಮುಂದೆ ಕನಕ ಕುಳಿತುಕೊಂಡಳು. ವಲ್ಲಿ ಹೇನನ್ನು ಆರಿಸಿ ಉಗುರಿನ ಮೇಲೆ ಕುಕ್ಕುತ್ತಾ

‘ ಯಾವೂರು ’’ ಎಂದಳು.

‘ ನಂಜನಗೂಡು.’

‘ ಇಲ್ಲಿಗೆ ಯಾಕೆ ಬಂದಿದೀಯಾ ?’

‘ ನಮ್ಮ ತೋಟದ ಪಕ್ಕದ ತೋಟಾನೇ ನಂಜೇಗೌಡಂದು. ಅವನ

ಮಗಳು ಕಾಳಿ ನಮ್ಮ ತೋಟದಿಂದ ಬಾಳೆಗೊನೆ ಕದೀತಿದ್ದಳು. ಅದಕ್ಕೆ ನಾನು ಒಂದು ಸಲ ಕೋಪ ಮಾಡ್ಕೊಂಡು ಅವಳ ಹಸೀನ ಕಾಲು ಮುರುದು ಹಾಕಿದೆ....'

ವಲ್ಲಿ ತನ್ನ ಕೈಲಿದ್ದ ಕೂದಲನ್ನು ಜುಂಗಿಸಿ 'ಥೂ ಮೂದೇವಿ ಪಾಪ! ಹಸ ಏನು ಮಾಡಿತು ?' ಎಂದಳು.

'ಅವಳು ನಮ್ಮ ತ್ವಾಟದ ಗೊನೆ ಕದ್ದ ಕೋಪದಲ್ಲಿ ನನಗೆ ಆವೇಶ ಬಂದಂಗೆ ಆಗಿತ್ತು. ಅವರ ಹಸ ಅಲ್ಲೇ ಮೇಯ್ತಿತ್ತು. ಸೌದೆ ತುಂಡು ತಗೊಂಡು ಅದರ ಕಡೇಗೆ ಎಸೆದೆ. ಕಾಲು ಮುರಿದು ಹೋಯಿತು. ನನಗೆ ಒಂದು ತಿಂಗಳು ಸಜಾ....'

ಎಲ್ಲರಿಗಿಂತಲೂ ಹೆಚ್ಚು ಶಿಕ್ಷೆಗೆ ಗುರಿಯಾಗಿದ್ದವಳು ನಾನು. ನನ್ನಷ್ಟು ದೊಡ್ಡ ತಪ್ಪನ್ನು ಯಾರೂ ಮಾಡಿರಲಿಲ್ಲ.

ಸೇತು ಎಲ್ಲರಿಗಿಂತಲೂ ಚಿಕ್ಕವಳು. ಅವಳಿಗೆ ಸುಮಾರು ಹತ್ತು ವರ್ಷಗಳಾಗಿದ್ದವು. ಮಾಸಿದ ಚೀಟಿಯ ಲಂಗ, ಗುಂಡಿಗಳಿಲ್ಲದ ಮಾಸಿದ ಗೀರುಗೀರಿನ ಬನಿಯನ್ ಹಾಕಿಕೊಂಡಿದ್ದಳು. ಕಿವಿಯಲ್ಲಿ ನಾಲ್ಕಾಣೆಯ ಲೋಲಾಕು ತೂಗಾಡುತ್ತಿತ್ತು. ಕೈಗಳಲ್ಲಿ ಬಳೆಗಳಿರಲಿಲ್ಲ. ಸೇತುವಿನಿಂದಾಗಿ ಜೈಲು ನಮಗೆ ಸಜೀವವಾಗಿರುವಂತೆ ತೋರುತ್ತಿತ್ತು. ಅವಳು ಎಲ್ಲರಿಗಿಂತಲೂ ಚಿಕ್ಕವಳಾಗಿದ್ದುದರಿಂದ ಎಲ್ಲರೂ ಅವಳನ್ನು ಪ್ರೀತಿಯಿಂದ ಕಾಣುತ್ತಿದ್ದರು. ಯಾರಿಗಾದರೂ ಬೇಸರವಾಯಿತೆಂದರೆ ಸರಿ

'ಸೇತೂ' ಎಂದು ಕೂಗುತ್ತಿದ್ದರು. ಎಲ್ಲೇ ಇರಲಿ ನಗುತ್ತಾ ಸೇತು ಪ್ರತ್ಯಕ್ಷವಾಗುತ್ತಿದ್ದಳು.

'ಜರಿ ರುಮಾಲಿನ ರಾಯರ ಪರ್ಸು ಹ್ಯಾಗೆ ಹೊಡೆದೆ ವಸಿ ತೋರಿಸು' ಎಂದು ವಲ್ಲಿ ಕೇಳುತ್ತಿದ್ದಳು.

'ನಾನು ತೋರಿಸೊಲ್ಲ' ಎಂದು ಸೇತು ರಾಗ ಎಳೆದಳು.

'ನನ್ನ ಉಪ್ಪೆಸರಿನಲ್ಲಿ ಬಂದ ಹೋಳನ್ನೆಲ್ಲಾ ನಿನಗೇ ಕೊಡ್ತಿನಿ' ಎಂದು ವಲ್ಲಿ ಲಂಚದಾಸೆ ತೋರಿಸಿದಳು.

'ನಿಜವಾಗಿ ?' ಸೇತು ಕತ್ತು ಕೊಂಕಿಸಿದಳು.

'ನಿಜವಾಗಿ ಕೊಡ್ತೀನಿ. ಕಳ್ಳಿನ ಮೇಲಾಣೆ.'

'ಸರಿ ಹಂಗಾರೆ ಇವಳೇ ರಾಯರು ಇಂತ ಇಟ್ಕೊಳ್ಳಿ' ಎಂದಳು ಸೇತು ನನ್ನ ಕಡೆ ಬೆರಳು ತೋರಿಸಿ.

ನಾನು ಅಲ್ಲಿಯೇ ಬಿದ್ದಿದ್ದ ಕಡ್ಡಿಯೊಂದನ್ನು ವಾಕಿಂಗ್ ಸ್ಟಿಕ್ಕಿನಂತೆ ಹಿಡಿದು ಬೀಸುತ್ತಾ ತಲೆ ತಗ್ಗಿಸಿ ಹೊರಟೆ.

ಸೇತು ತನ್ನ ಜಡೆಯನ್ನು ಬಿಚ್ಚಿ ಕೂದಲನ್ನು ಮುಖದ ತುಂಬಾ ಕವಿದುಕೊಂಡು ನೆಲದ ಮೇಲೆ ಏನೋ ಹುಡುಕುವವಳಂತೆ ಅನ್ಯಮನಸ್ಕಳಂತೆ ನನಗೆ ಎದುರಾಗಿ ಬಂದಳು. ಎತ್ತಲೋ ನೋಡುತ್ತಿರುವಂತೆ ಬರುತ್ತಾ ನನಗೆ ರಭಸದಿಂದ ಡಿಕ್ಕಿ ಹೊಡೆದಳು. ಅಬ್ಬ ! ಚಿಕ್ಕ ಹುಡುಗಿಯಾದರೂ ಏನು ಬಲ ! ನಾನು ತತ್ತರಿಸಿ ನಿಂತೆ. ಬೆಪ್ಪಾಗಿ ಸುತ್ತಲೂ ನೋಡಿದೆ ಅಷ್ಟರಲ್ಲಿ ಸೇತು ನನ್ನನ್ನು ದಾಟಿ ಆರು ಮಾರು ದೂರ ಹೋಗಿದ್ದಳು.

ಉಳಿದವರೆಲ್ಲಾ ನಕ್ಕರು.

'ನಿನ್ನ ಮಡಿಲು ನೋಡಿಕೋ' ವಲ್ಲಿ ಹೇಳಿದಳು.

ಮನಿಪರ್ಸಿಗೆ ಬದಲಾಗಿ ನಾನು ಊಟದ ಅಲ್ಯುಮಿನಿಯಂ ಬಟ್ಟಲನ್ನು ನನ್ನ ಮಡಿಲಿನಲ್ಲಿರಿಸಿಕೊಂಡಿದ್ದೆ. ಆದರೆ ಅದು ಮಾಯವಾಗಿತ್ತು. ಆದಾವ ಮಾಯದಲ್ಲೋ ಸೇತು ಬಟ್ಟಲನ್ನು ಎಗರಿಸಿದ್ದಳು.

'ಜೇಬು ಕತ್ತರಿಸುವ ವಿದ್ಯ ಹೇಳಿಕೊಟ್ಟಿದ್ದು ಯಾರು ?'

'ನಮ್ಮಣ್ಣ. ಅವನೂ ಹಿಂಗೆ ಜೇಬು ಕತ್ತರಿಸ್ತಾನೆ. ಆದರೆ ನನ್ನ ಹಾಗೆ ಒಂದು ಸಲವೂ ಸಿಕ್ಕಿಕೊಂಡಿಲ್ಲ. ನನ್ನ ಕೈ ಇನ್ನೂ ಪಳಗಬೇಕು.'

'ಆದರೂ ಈ ವಯಸ್ಸಿಗೇ ತುಂಬಾ ಮುಂದೆ ಬಂದಿದೀಯೆ.'

'ಸಾಲದು. ಸಾವಿರಗಟ್ಲೆ ಹಣಾನ ಲೂಟಿ ಮಾಡಿ ನಾನೂ ಆ ಹುಡುಗಿ ಹಂಗೆ ಶೋಕಿ ಮಾಡಿಕೊಂಡ ದಿನವೇ ನನಗೆ ಸಮಾಧಾನ.'

'ಯಾವ ಹುಡುಗಿ ?'

'ಒಂದು ದಿನ ಮಾರ್ಕೆಟ್ಟಿನಲ್ಲಿ ಹೋಗ್ತಿದ್ದೆ. ಗುಂಪು ಜನ ಜಾಸ್ತಿಯಾಗಿರುವ ಕಡೇನೆ ನಾವು ಯಾರಿಗಾದರೂ ಡಿಕ್ಕಿ ಹೊಡೆಯೋದು.'

'ಮುಖದ ಮೇಲೆ ಕೂದಲು ಯಾಕೆ ಹಾಕಿಕೋತೀಯಾ ?'

'ನಮ್ಮ ಗುರುತು ಯಾರಿಗೂ ಸಿಕ್ಕದಿರಲೀಂತ ಹಂಗೆ ಹಾಕ್ಕೋ

ತೀವಿ ಬಸ್ಸು ಹತ್ತುವ ಕಡೆ ತುಂಬಾ ಗಲಾಟೆ ಇತ್ತು. ಗುಂಂ ಏನೂ ಅರೀದವಳಂತೆ ನಿಂತ್ಕೊಂಡೆ. ಅಲ್ಲೊಂದು ಹುಡುಗಿ ತುಂಬಾ ಶೋಕಿ ಮಾಡ್ಕೊಂಡು ನಿಂತಿತ್ತು. ಜರತಾರಿ ಸೀರೆ, ಸಿಲ್ಕಿನ ರವಿಕೆ, ಕೈ ತುಂಬಾ ಬಳೆ, ಗಡಿಯಾರ, ಸರ ಹಾಕ್ಕೊಂಡು ಪೌಡರ್ ಹಚ್ಚಿ ಕೊಂಡು ಬಲೆ ದಿಮಾಕಿನ ಮೇಲೆ ನಿಂತಿದ್ದಳು. ಅವಳ ಕೈಲಿ ಒಂದು ಶೋಕಿ ಚೀಲ ಇತ್ತು. ಇವಳು ಇಷ್ಟೊಂದು ದಿಮಾಕಿನ ಮೇಗವಳೆ, ಅದರ ತುಂಬಾ ಕಾಸಿರಬಹುದೂಂತ ಹೋಗಿ 'ಡ್ಯಾಷ್' ಹೊಡೆದು ಚೀಲ ಕಸಿದುಕೊಂಡು ಪರಾರಿಯಾದೆ. ಆ ಹುಡುಗಿ 'ಹೋ' ಅಂತ ಕೂಗಿಕೊಂಡಳು. ಆದರೆ ನಾನು ಸಿಕ್ತೀನ? ಅಲ್ಲಲ್ಲಿ ನುಸುಳಿ ಗಲ್ಲಿ ಸೇರಿಕೊಂಡು ಚೀಲ ಬಿಚ್ಚಿದೆ. ಆದರೆ ಅಲ್ಲೇನಿದೆ ಮಣ್ಣು? ಚೀಲಾನ ಅಲ್ಲೇ ಬಿಸಾಕಿ ಹೋದೆ. ಆದರೆ ನನಗೂ ಒಂದು ದಿನ ಆ ಹುಡುಗಿ ಹಂಗೆ ಅಲಂಕಾರ ಮಾಡಿಕೊಂಡು ತಿರುಗೋಕೆ ಆಸೆ. ಆ ಹುಡುಗಿ ಭಾರಿ ವೈನಾಗಿದ್ದಳು.'

'ಆದ್ರೂ ಹಿಂಗೆ ಜೇಬು ಕತ್ತರಿಸೋದು ತಪ್ಪಲ್ಲವಾ?' ವಲ್ಲಿ ಸೇತು ವಿಗೆ ಬದ್ಧಿವಾದ ಹೇಳಲು ಯತ್ನಿಸಿದಳು.

'ನೀನು ಕದ್ದು ಕಳ್ಳು ಇಳಗಸ್ತೀಯಲ್ಲಾ ಅದು ಸರಿಯೇ?' ಸೇತು ಮಾತಿನಲ್ಲಿ ಯಾರಿಗೂ ಸೋಲುವಂತಿರಲಿಲ್ಲ.

'ಅಲ್ಲೇ ಹುಡುಗಿ, ಕಾಡಿನಾಗಿರೋ ಈಚಲು ಮರದ ಕಳ್ಳು ನಾವು ಇಳಿಸಿ ಕುಡಿಯೋಕೆ ಯಾರದ್ದೇನು ಅಪ್ಪಣೆ? ಕಾಡಿನಲ್ಲಿರೋ ಈಚಲು ಮರಗಳನ್ನು ಸರ್ಕಾರದವರು ನೆಟ್ಟವರಾ? ನೀರು ಹಾಕಿದಾರಾ? ಅದರ ಪಾಡಿಗೆ ಅದು ಹುಟ್ಕೊಂಡಿದೆ. ಭಗವಂತ ಸುರಿಸಿದ ಮಳೇ ನೀರನ್ನ ಅದು ಕಳ್ಳು ಮಾಡ್ತದೆ. ಹೊಳೆ ನೀರಿಗೆ ದೊಣ್ಣೆ ನಾಯಕನ ಅಪ್ಪಣೆಯಾಗ ಬೇಕಾ? ನಾನು ಕಳ್ಳು ಇಳಿಸೋಕೂ ನೀನು ಜೇಬು ಕತ್ತರಿಸೋಕೂ ವ್ಯತ್ಯಾಸವಿದೆ.'

'ಏನು ವ್ಯತ್ಯಾಸ?'

'ಈಚಲು ಗಿಡ ಜನರ ಹಂಗೆ ವ್ಯಥೆ ಪಡ್ತದಾ, ನನ್ನ ಕಳ್ಳು ಇಳು ಗಿಸಿಕೊಂಡರೂಂತ? ಆದರೆ ನೀನು ಜೇಬು ಕತ್ತರಿಸಿದರೆ ಜನಕ್ಕೆ ವ್ಯಥೆ

...ತ್ತದೆ—ನಾವು ಕಷ್ಟಪಟ್ಟು ಸಂಪಾದಿಸಿದ್ದನ್ನ ಎಗರಿಸಿದರಲ್ಲಾಂತ.'

'ಜೇಬು ಕತ್ತರಿಸೋದೆ ನನ್ನ ಕಸಬು. ಆ ಹಣದಲ್ಲಿ ಒಂದು ಮಹಡಿಮನೆ ಕಟ್ಟಿಸೋಣಾಂತ ಆಸೆ ಇದೆ ನನಗೆ.'

ನಾನು 'ಎಲಾ ಹುಡುಗಿ' ಎಂದುಕೊಂಡೆ.

ನಮಗೆ ಜೈಲಿನಲ್ಲಿ ಹೆಚ್ಚು ಕೆಲಸವಿರಲಿಲ್ಲ. ಬೆಳಿಗ್ಗೆ ಆರು ಗಂಟೆಗೆ ಎದ್ದು ಗಂಜಿ ಕುಡಿದು ತೋಟದ ಕೆಲಸ ಮುಗಿಸುತ್ತಿದ್ದೆವು. ಮಧ್ಯಾಹ್ನ ಹನ್ನೆರಡು ಗಂಟೆಯ ಹೊತ್ತಿಗೆ ಪೋಲೀಸಿನವರು ಹಿಟ್ಟು, ಹುಳಿಯ ಬಕೀಟುಗಳನ್ನೆತ್ತಿಕೊಂಡು ಬರುತ್ತಿದ್ದರು. ನಾವು ಸಾಲಾಗಿ ಅಲ್ಯುಮಿನಿಯಂ ತಟ್ಟೆ, ಬಟ್ಟಲನ್ನು ತೆಗೆದುಕೊಂಡು ನಿಲ್ಲುತ್ತಿದ್ದೆವು. ಅಚ್ಚಿನಲ್ಲಿ ಹಾಕಿ ತೆಗೆದಂತಿದ್ದ ಹಿಟ್ಟಿನ ಮುದ್ದೆಯನ್ನೂ, ಹುಳಿಯನ್ನೂ ನಮ್ಮ ತಟ್ಟೆ ಬಟ್ಟಲಿಗೆ ಹಾಕಿಸಿಕೊಂಡು ನಾವು ಹಿಂದಿರುಗುತ್ತಿದ್ದೆವು. ಅಪರಾಧನೆ ಇನ್ನೂ ರುಜುವಾತಾಗದೆ ಕೋರ್ಟಿನಲ್ಲಿ ಕೇಸು ನಡೆಯುತ್ತಿರುವ ಕೈದಿಗಳಿಗೆ ಹೆಚ್ಚಿನ ತೂಗದ ಹಿಟ್ಟಿನ ಮುದ್ದೆಯನ್ನು ಕೊಡುತ್ತಿದ್ದರು. ಇದರ ಜೊತೆಗೆ ಒಂದು ಬಟ್ಟಲು ನೀರುಮಜ್ಜಿಗೆ ಸಿಗುತ್ತಿತ್ತು.

ನಾವು ಊಟ ಮುಗಿಸಿ ಬ್ಯಾರೆಕ್ಕಿನಲ್ಲಿ ಕುಳಿತುಕೊಳ್ಳುತಿದ್ದೆವು. ಸಾಧಾರಣವಾಗಿ ಮಧ್ಯಾಹ್ನದ ಹೊತ್ತು ನಿದ್ದೆ ಬರುತ್ತಿರಲಿಲ್ಲ. ಬಂಧನ ನನಗೆ ಎರಡುದಿನಕ್ಕೇ ಬೇಸರವನ್ನುಂಟು ಮಾಡಿತ್ತು. ನಾನು ಹೆಚ್ಚು ಸಮಯ ನನ್ನ ತಾಯಿ, ತಂದೆ, ತಂಗಿ, ಮೂರ್ತಿ ಇವರುಗಳ ವಿಷಯವನ್ನು ಯೋಚಿಸುತ್ತಿದ್ದೆ. ಶಿವಸ್ವಾಮಿಯ ನೆನಪು ಬಂದಾಗ ನನ್ನ ಸರ್ವಾಂಗವೂ ಕೋಪ, ದ್ವೇಷದಿಂದ ನಡುಗುತ್ತಿತ್ತು. ಅವನಂತಹ ಹೇಡಿಯೆಂದು ನಾನು ತಿಳಿದಿರಲಿಲ್ಲ. ಅವನ ಚೆಲುವಾದ ಮುಖ, ಗುಂಗುರು ಕೂದಲು, ಗೌರವರ್ಣ, ಜೇನಿನಂತಹ ಮಾತುಗಳಿಗೆ ಮರುಳಾಗಿ ನಾನವನಿಗೆ ನನ್ನ ತನು, ಮನವನ್ನೇ ಅರ್ಪಿಸಿದ್ದೆ. ಆದರೂ ನಾನು ದುಡುಕಿದೆ. ತಪ್ಪು ಮಾಡಿದೆ ಎಂದು ಎನಿಸುತ್ತಿತ್ತು. ಎಷ್ಟಾಗಲಿ ಶಿವಸ್ವಾಮಿ ಗಂಡು ಜಾತಿಗೆ ಸೇರಿದವನು. ನಾನವನನ್ನು ನಂಬಬಾರದಾಗಿತ್ತು. ಆದರೂ....ಆದರೂ....ಒಳ್ಳೆಯ ಮಾತುಗಳನ್ನೇ ಕೇಳದಿದ್ದ ನಾನು ಶಿವಸ್ವಾಮಿ ನನ್ನನ್ನು 'ಚಂದ್ರಮುಖಿ' ಎಂದಾಗ, ಪ್ರೇಮದ ಅರ್ಥವಿಲ್ಲದ ಹುಚ್ಚು ಮಾತುಗಳನ್ನು ನನ್ನ ಕಿವಿಯಲ್ಲಿ

ಉಸುರಿದಾಗ, ವಿರಹದಿಂದ ತಪ್ತಳಾಗಿದ್ದ ನನ್ನನ್ನು ಸೆಳೆದಪ್ಪಿಕೊಂಡಾಗ ನಾನು ಭೂತ, ಭವಿಷ್ಯ, ವರ್ತಮಾನ ಎಲ್ಲವನ್ನೂ ಮರೆತು ಅವನ ಶೋಳೊಂದೇ ಶಾಶ್ವತವೆಂದು ಭಾವಿಸಿದ್ದೆ. ಮುಂದೇನಾಗುವುದೆಂದು ಆಲೋಚಿಸದೆ ಅವನ ಎದೆಗೊರಗಿದ್ದೆ. ಬಿಸಿರಕ್ತದ, ಏರುಪ್ರಾಯದ ಯುವತಿಯರಿಗೆ ದೇವರು ಹೆಚ್ಚು ಬುದ್ಧಿ, ಸಂಯಮ ಸಹನೆಯನ್ನೇಕೆ ಕೊಡಬಾರದು? ನನ್ನಲ್ಲೂ ತಪ್ಪಿದೆ. ಜೀವನದಲ್ಲಿ ಯಾವ ಬಗೆಯ ಸುಖವನ್ನೂ ಕಾಣದಿದ್ದ ನಾನು ಹಗಲುಗನಸಿನಲ್ಲಿ ಪ್ರೇಮದ ಬಗ್ಗೆ ಗಾಳಿಗೋಪುರಗಳನ್ನು ಕಟ್ಟಿ ಅದರಲ್ಲಿಯೇ ತನ್ಮಯಳಾಗುತ್ತಿದ್ದೆ. ಶಿವಸ್ವಾಮಿಯನ್ನು ನೋಡಿ ನನ್ನ ಕನಸಿನ ಒಡೆಯ ಎಂದು ಭಾವಿಸಿದೆ. ಅವನು ನನಗಾಗಿ ಆಸೆಪಟ್ಟಿದ್ದಾನೆ ಎಂದು ತಿಳಿದು ನಾನು ಹಲವಾರು ರೀತಿಯಲ್ಲಿ ಪ್ರೋತ್ಸಾಹಿಸಿದೆ. ಆದರೆ ನಾನೇನು ಬೇಕೆಂದು ಪ್ರೋತ್ಸಾಹಿಸಿದೆನೆ ? ಇಲ್ಲ. ಇರಲಾರದು. ಅವನು ಎದುರಿಗೆ ಸುಳಿದಾಗ ನೆಟ್ಟ ನೋಟದಿಂದ ಅವನನ್ನು ನೋಡುವುದಾಗುತ್ತಿರಲಿಲ್ಲ. ಕಣ್ಣುಗಳು ತಾವಾಗಿಯೇ ಓರೆನೋಟ ಬೀರುತ್ತಿದ್ದವು. ತುಟಿಗಳು ತಾವಾಗಿಯೇ ಅರಳಿ ಮಂದಹಾಸ ಚೆಲ್ಲುತ್ತಿದ್ದವು. ಅವನು ಮರೆಯಾದೊಡನೆ 'ಹಾಗೆ ಮಾಡಬಾರದಿತ್ತು' ಎಂದು ಪರಿತಾಪ ಪಡುತ್ತಿದ್ದೆ. ಅವನೊಡನೆ ಒಂದು ಕ್ಷಣವಿರಲು ನನ್ನ ಜೀವನ ಹಾಳಾದರೂ ಚಿಂತೆಯಿಲ್ಲ ಎಂದುಕೊಳ್ಳುವಷ್ಟು ನನ್ನ ಬಾಳು ಶೂನ್ಯವಾಗಿತ್ತು. ದೇವರು ನನ್ನಂತಹವರ ತಲೆಯಲ್ಲಿ ಮಿದುಳನ್ನೇಕೆ ಇಡಲಿಲ್ಲವೋ? ಬೆಳ್ಳಗಿರುವುದೆಲ್ಲಾ ಹಾಲು, ಹೊಳೆಯುವುದಲ್ಲಾ ಚಿನ್ನ, ಸುಂದರವಾದ ನಗುಮುಖದ ಹಿಂದಿರುವುದೆಲ್ಲಾ ವಿಶಾಲ ಹೃದಯ ಎಂದು ಭಾವಿಸಿದ್ದೆ. ಆದರೆ ಸುಣ್ಣವೂ ಬೆಳ್ಳಗಿರುತ್ತದೆ, ಕಾಗೆ ಬಂಗಾರವೂ ಹೊಳೆಯುತ್ತದೆ, ಹಾವಿನ ಹೆಡೆಯೂ ಸುಂದರವಾಗಿರುತ್ತದೆ ಎಂದು ನಾನಾಗ ತಿಳಿಯಲಿಲ್ಲ. ನಾನು ಮಣೆಗೆ ಬಾಣಂತನ ಮಾಡಲು ಹೊರಟಿದ್ದಾಗ ಸುಬ್ಬಿ,

'ಮಣೀನ ಚೆನ್ನಾಗಿ ನೋಡಿಕೋ' ಎಂದು ಎಚ್ಚರ ಹೇಳಿದ್ದಳು. ಆದರೆ ಸುಬ್ಬಿ ನೀನು ನನಗೇಕೆ ಎಚ್ಚರವಾಗಿರೆಂದು ಹೇಳಲಿಲ್ಲ ? ಗಂಡಸರೆಲ್ಲಾ ಅಪ್ಪನಂತೆ ಪಾಪಭೀರುಗಳು, ಮೃದುಸ್ವಭಾವದವರು ಎಂದು ನೀನು ತಿಳಿದಿದೇಯಾ ? ನೀನು ನನ್ನ ತಾಯಿಯಾಗಿಯೂ ಗಂಡಸರ ಬಗ್ಗೆ ಎಚ್ಚ

ವಾಗಿರೆಂದು ಒಂದು ಮಾತು ಹೇಳಬಾರದಾಗಿತ್ತೇ ?

ಅಪ್ಪನ ಜ್ಞಾಪಕ ಬಂದಾಗಲೆಲ್ಲಾ ನನ್ನ ಕಣ್ಣುಗಳಲ್ಲಿ ನೀರೂರುತ್ತಿದ್ದವು. ನನಗೆ ಸುಬ್ಬಿಗಿಂತಲೂ ಅಪ್ಪನಲ್ಲಿ ಪ್ರೀತಿಯಿತ್ತು. ಸುಬ್ಬಿಗೂ ನನ್ನಲ್ಲಿ ಅಷ್ಟು ಪ್ರೇಮವಿರಲಿಲ್ಲ. ಗುರು, ಮಣಿಗಿಂತ ನಾನು ಒಂದು ಮೆಟ್ಟಿಲು ಕಡಿಮೆ ಎಂದವಳ ಭಾವನೆ. ಆದರೆ ನಾನು ಮನೆಗೆಲಸದ ತೊತ್ತಾಗಿದ್ದುದರಿಂದ ಸುಬ್ಬಿ ನನ್ನನ್ನು ಸಹಿಸುತ್ತಿದ್ದಳು. ಆದರೆ ನಾನು ಅಪ್ಪ ಯಾವಾಗಲೂ ಹತ್ತಿರವಿರುತ್ತಿದ್ದೆವು. ಸುಬ್ಬಿಯಿಂದ ನನ್ನ ಮನಸ್ಸು ನೊಂದಾಗ ಅಪ್ಪನ ಒಂದು ಮಾತು ನನಗೆ ಅಮೃತವಾಗುತ್ತಿತ್ತು. ಆದರೆ ನಾನು, ಅಪ್ಪ ಭೇಟಿಯಾಗುತ್ತಿದ್ದುದೇ ಅಪರೂಪ. ದುಡಿಮೆಯ ಯಂತ್ರವಾಗಿದ್ದ ಅಪ್ಪನನ್ನು ಮಾತನಾಡಿಸುವುದೇ ಕಡಿಮೆ. ಹಾಗೆ ಮಾತನಾಡಿದ ದಿನ ಹಬ್ಬ ನನ್ನ ಪಾಲಿಗೆ. ನನ್ನಲ್ಲಿ ವಿಶ್ವಾಸ, ನಂಬಿಕೆಯಿರಿಸಿದ್ದ ಅಪ್ಪನಿಗೆ ನಾನು ಎಂತಹ ಮೋಸ ಮಾಡಿದೆ ? ನಾನು ದ್ರೋಹ ಮಾಡಿರುವುದು ಅವರಿಗೆ ತಿಳಿದಿರಬೇಕು. ನನ್ನ ದ್ರೋಹದ ಪೆಟ್ಟನ್ನು ಅವರು ಹೇಗೆ ಸಹಿಸುವರೋ ? 'ಹಸಿವು ಎಂದು ಹೊಲಸು ತಿನ್ನಬಾರದಾಗಿತ್ತು' ಎಂದು ಆಸ್ಪತ್ರೆಯಲ್ಲಿನ ನರ್ಸ್ ನನಗೆ ಹೇಳಿದ್ದಳು. ಅವಳ ಮಾತು ನಿಜ. ನಾನು ಅಮೃತ ಎಂದು ಭಾವಿಸಿ ಕುಡಿದಿದ್ದು ವಿಷವಾಯ್ತು.

ಯೋಚನೆಯಿಂದ, ಪಶ್ಚಾತ್ತಾಪದಿಂದ, ದ್ವೇಷದಿಂದ ನನ್ನ ಹೃದಯ ಉರಿದು ಹೋಗುತ್ತಿತ್ತು. ಕೆಲವು ಬಾರಿ ಗಟ್ಟಿಯಾಗಿ ಚೀರಿಬಿಡಲೆ ಎನಿಸುತ್ತಿತ್ತು. ಒಂದೊಂದು ದಿನ ನಿದ್ದೆಗಣ್ಣಿನಲ್ಲಿ ನಾನು ಅಳುತ್ತಿರುತ್ತೇನೆಂದು ವಲ್ಲಿ ನನಗೆ ಹೇಳಿದ್ದಳು. ಹಾಗೆ ನಾನು ಅಳುತ್ತಾ ಬೆಂಕಿಯ ಹಾಸಿಗೆಯ ಮೇಲೆ ಮಲಗಿದವಳಂತೆ ಹೊರಳಾಡುತ್ತಿದ್ದಾಗ ವಲ್ಲಿ ನನ್ನನ್ನು ತಟ್ಟಿ ಎಚ್ಚರಗೊಳಿಸಿದ್ದಾಳೆ.

'ಏನೇ ನಿದ್ದೆಗಣ್ಣಿನಲ್ಲಿ ಅಳುತ್ತಾ ನಿನಗೆ ನೀನೆ ಮಾತನಾಡಿಕೋತಿದ್ದೆ' ಎಂದವಳು ಕೇಳಿದ್ದಳು.

'ಇಲ್ಲವಲ್ಲಾ' ನಾನು ಆಶ್ಚರ್ಯಗೊಂಡು ಹೇಳುತ್ತಿದ್ದೆ.

'ನಿನ್ನ ಕೆನ್ನೆ ಮುಟ್ಟಿ ನೋಡಿಕೋ.'

ನನ್ನ ಕೆನ್ನೆ ಕಂಬನಿಯಿಂದಾಗಿ ಒದ್ದೆಯಾಗಿರುತ್ತಿದ್ದವು.

ಮೈಮರೆತು ಕುಳಿತಿದ್ದ ನನ್ನನ್ನು ವಲ್ಲಿ ತಟ್ಟಿ ಎಬ್ಬಿಸಿ 'ತಟ್ಟೆ ತಗೊಂಡು ಬಾ. ನಾಕು ಗಂಟೆ ಆಯಿತು' ಎಂದಳು.

'ಏನು ! ಆಗಲೇ ನಾಲ್ಕು ಗಂಟೆ ಆಯಿತೇ ?'

ನಾಲ್ಕು ಗಂಟೆಗೆ ಮತ್ತೆ ಊಟ. ಅದು ಮುಗಿದ ಮೇಲೆ ನಮಗೆ ಬೇರೆ ಯಾವ ಕೆಲಸವೂ ಇರಲಿಲ್ಲ.

ರಾಮಿ, ಚೌಡಿ ಒಂದು ವಾರದ ಸಜಾ ಅನುಭವಿಸಿ ಬಿಡುಗಡೆ ಹೊಂದಿದ್ದರು. ಬಿಡುಗಡೆಗೆ ಹಿಂದಿನ ರಾತ್ರಿಯಿಂದಲೇ ರಾಮಿ ತಾನು ಮಾರನೆಯ ದಿನ ಯಾರ್ಯಾರನ್ನು ನೋಡಬೇಕೆಂಬುದನ್ನು ನಿಶ್ಚಯಿಸಿದ್ದಳು.

'ಸಿದ್ದಣ್ಣ....ಹನುಮ....ಕೋಮಟಿ....'

'ಕೋಮಟಿ ಬೇಡ್ವ. ಹಣ ಸರಿಯಾಗಿ ಕೊಡೋದಿಲ್ಲ' ಎಂದಳು ಚೌಡಿ. ಅವರಿಬ್ಬರ ಉತ್ಸಾಹ ನೋಡಿ ನನಗೆ ನಗು ಬಂತು. ವಲ್ಲಿ ಮೇರಿಯಮ್ಮನ ಕಡೆ ವ್ಯಂಗ್ಯ ನಗೆ ಬೀರಿ

'ರಾಮಿ ಹೊರಟುಹೋದರೆ ಮೇರಿಯಮ್ಮನಿಗೆ ಕಷ್ಟವಾಗುತ್ತೆ' ಎಂದಳು. ರಾಮಿ ಹೆಂಡತಿಯನ್ನು ಅಪ್ಪುವ ಗಂಡನಂತೆ ಮೇರಿಯಮ್ಮನನ್ನು ತಬ್ಬಿಕೊಂಡು

'ಯೋಚನೆ ಮಾಡಬೇಡ. ನಿನ್ನ ಬಿಟ್ಟು ತುಂಬಾ ದಿನ ಇರೋದಿಲ್ಲ. ಬೇಗ ಪುನಃ ಇಲ್ಲಿಗೆ ಬರ್ತೀನಿ' ಎಂದಳು.

'ಇಲ್ಲಿಗೆ ಬರೋದೂ ಸಾಕು. ಶಿಕ್ಷೆಯೂ ಸಾಕು' ಚೌಡಿ ಬಳಲಿದವಳಂತೆ ನುಡಿದಳು.

'ಜೈಲಿಗೆ ಬರೋದೂನೆ ಒಂದು ತರಹ ತಮಾಷೆ. ಜೀವನದಲ್ಲಿ ಎಲ್ಲ ರೀತಿಯ ಅನುಭವವೂ ಇರಬೇಕು' ಎಂದು ನಕ್ಕಳು ರಾಮಿ.

ರಾಮಿ ಚೌಡಿ ಹೊರಟು ಹೋದರು. 'ಪುನಃ ಬರ್ತೀನಿ' ಎಂದು ಹೇಳಿಯೇ ರಾಮಿ ಹೋದಳು.

ತೋಟದ ಕೆಲಸ ಮುಗಿದರೆ ನಮಗೆ ಬೇರೆ ಕೆಲಸ ಹೆಚ್ಚಿಗೆ ಇರುತ್ತಿರಲಿಲ್ಲ. ಆಗಾಗ್ಗೆ ರಾಗಿ, ಅಕ್ಕಿಯನ್ನು ಆರಿಸಲು ತಂದುಕೊಡುತ್ತಿದ್ದರು. ರಾಗಿ ಬೀಸುವ ಕೆಲಸ, ಒಡೆಯುವ ಕೆಲಸ ಮೊದಲಾದ ಒರಟು ಕಾರ್ಯಗಳನ್ನು ಗಂಡಾಳುಗಳಿಂದ ಮಾಡಿಸುತ್ತಿದ್ದರು.

ನಾನು ಜೈಲಿಗೆ ಸೇರಿ ಒಂದು ವಾರವಾಗಿತ್ತು. ನಾನು ಬಾಳೆಯ ಗಿಡಗಳಿಗೆ ನೀರು ಹಾಕಿ ಸುದಾರಿಸಿಕೊಳ್ಳುತ್ತಿದ್ದೆ. ಅಷ್ಟರಲ್ಲಿ ನೀಲಿ ನನ್ನ ಬಳಿಗೆ ಬಂದು

'ನಿನ್ನ ನೋಡೋಕೆ ಅಪ್ಪ, ಅಮ್ಮ ಬಂದಿದಾರಂತೆ ಈಗಲೇ ಬರಬೇಕಂತೆ' ಎಂದಳು.

ನಾನು ಬೆಚ್ಚಿಬಿದ್ದೆ. ಆಕಾಶವೇ ಕಡಿದುಕೊಂಡು ನನ್ನ ತಲೆಯ ಮೇಲೆ ಬಿದ್ದಂತಾಯಿತು. ಅಪ್ಪ ಬಂದಿದಾರೆಂದು ಕೇಳಿ ಹೆದರಿಕೆಯಿಂದ ಮೈಮೇಲಿನ ರೋಮಗಳು ಎದ್ದು ನಿಂತವು. ನೀಲಿ ನನ್ನ ಅಲುಗಿಸಿ

'ನಾನು ಹೇಳಿದ್ದು ಕೇಳಲಿಲ್ಲವೇ ?' ಎಂದಳು.

ನನಗೆ ಅಪ್ಪನನ್ನು ನೋಡುವ ಆಸೆಯಿತ್ತು. 'ನನ್ನ ತಪ್ಪೆಲ್ಲಾ ಮರೆತು ನಾನು ಹುಟ್ಟಲಿಲ್ಲಾಂತ ತಿಳಿದುಬಿಡಿ' ಎಂದು ಹೇಳುವ ಆಸೆಯಾಯಿತು. ನಾನು ಅಪ್ಪ, ಅಮ್ಮನನ್ನು ನೋಡದೆ ಅನೇಕ ತಿಂಗಳುಗಳಾಗಿದ್ದವು. ನಾನು ಜೈಲಿನಲ್ಲಿರುವ ವಿಷಯ ಅವರಿಗೆ ತಿಳಿದುದಾದರೂ ಹೇಗೆ ? ಸಮಾಚಾರಕ್ಕೆ ರೆಕ್ಕೆ ಹುಟ್ಟಿ ಗಾಳಿಯಲ್ಲಿ ಹಾರಿಯೋಯಿತೇ ?

ನಾನು ನಾಲ್ಕು ಹೆಜ್ಜೆ ಮುಂದೆ ಬಂದೆ.

ಆದರೆ ಅಪ್ಪನಿಗೆ ಮುಖ ತೋರಿಸುವುದಾದರೂ ಹೇಗೆ ?

ನನ್ನ ಕಾಲು ತಡೆಯಿತು. ನಾನು ನೆಲದ ಮೇಲೆ ಕುಸಿದು ಬಿದ್ದು ಹೇಳಿದೆ.

'ನಾನು ಬರೋದಿಲ್ಲ.'

'ಯಾಕೆ ?'

'ನನಗೆ ಅವರನ್ನು ನೋಡಲು ಇಷ್ಟವಿಲ್ಲ. ಬಂದವರನ್ನು ನೋಡುವ ಅಪೇಕ್ಷೆ ನನಗಿಲ್ಲದಿದ್ದರೆ ಬಲವಂತವೇನಿಲ್ಲ ತಾನೆ ?'

'ಇಲ್ಲ.'

'ಹಾಗಾದರೆ ಅವರಿಗೆ ತಿಳಿಸಿ ಬಿಡಲಿ—ನಾನು ಎಂದೆಂದಿಗೂ ಅವರನ್ನ ನೋಡೋದಿಲ್ಲ. ನನ್ನ ನೋಡೋದಿಕ್ಕೆ ಅವರೂ ಇಲ್ಲಿಗೆ ಬರಬೇಕಾಗಿಲ್ಲ. ನನಗೆ ಕಾಗವೂ ಬರೆಯ ಬೇಕಾಗಿಲ್ಲ.'

'ಇದೇ ಕೊನೆಯ ಮಾತೇ ?'

' ಹೌದು ' ಎನ್ನುತ್ತಾ ನಾನು ಹಿಂತಿರುಗಿದೆ.

ಮನಸ್ಸು ಕಲ್ಲಾಗಿತ್ತು. ಕಣ್ಣಲ್ಲಿ ಕಂಬನಿಯಿತ್ತು.

ನೀಲಿ ಹೊರಗೆ ಹೋದವಳು ಸಾಹೇಬರಿಗೆ ನನ್ನ ಅಪೇಕ್ಷೆ ತಿಳಿಸಿ ಬಂದಳು. ಅವಳು ಒಳಗೆ ಬಂದೊಡನೆ ನಾನು ಕೇಳಿದೆ

' ಸಾಹೇಬರು ಏನೆಂದರು ? '

' ನಿಮ್ಮಪ್ಪನಿಗೆ ಹೇಳಿದರು ' ಅವಳಿಗೆ ನಿಮ್ಮನ್ನು ನೋಡೋದು ಬೇಕಿಲ್ಲವಂತೆ. ನಾವು ಯಾರನ್ನೂ ಬಲವಂತ ಮಾಡೋದಿಲ್ಲ. ನೀವಿನ್ನು ಹೋಗಬಹುದು ' ಅಂತ ನಿಮ್ಮಮ್ಮ ಮಾತ್ರ ತುಂಬಾ ಅಳ್ತಿದ್ದರು.'

' ಅಪ್ಪ ? '

' ಅವರು ನಿಮ್ಮ ತಾಯಿಯ ಕೈ ಹಿಡಿದು ಹೊರಗೆ ಕರೆದುಕೊಂಡು ಹೋದರು. ಹೋಗುವಾಗ ' ಅವಳಿಗೆ ಬಿಡುಗಡೆಯಾಗುವ ದಿನ ನಮಗೊಂದು ಮಾತು ತಿಳಿಸಿ ' ಎಂದರು.'

ನಾನು ನೀಲಿಯನ್ನು ಮುಂದೆ ಪ್ರಶ್ನಿಸಲಿಲ್ಲ.

ಆ ದಿನವೆಲ್ಲಾ ನನ್ನ ಮನಸ್ಸು ಸ್ವಾಧೀನದಲ್ಲಿರಲಿಲ್ಲ. ನಾನು ಮಾಡಿದುದು ಸರಿಯೇ ಎಂಬ ಪ್ರಶ್ನೆ ನನ್ನ ಮನಸ್ಸಿನಲ್ಲಿ ಆಗಾಗ್ಗೆ ಏಳುತ್ತಿತ್ತು. ತಾಯಿ ತಂದೆಯನ್ನು ನೋಡುವ ಅಪೇಕ್ಷೆ ನನಗಿತ್ತು. ಆದರೆ ಅವರನ್ನು ಎದುರಿಸಿ ನೋಡುವ ಎದೆಗಾರಿಕೆ ನನ್ನಲ್ಲಿರಲಿಲ್ಲ.

ನನಗೆ ಅವರನ್ನು ನೋಡುವ ಆಸೆಯಿತ್ತು. ಆದರೆ ಆಸೆ ಎಷ್ಟಿತ್ತೋ ಅಷ್ಟೇ ಹೆದರಿಕೆಯೂ ಇತ್ತು. ಅಪ್ಪ, ಸುಬ್ಬಿ ಬಂದು ಹೋದ ಮೂರು ನಾಲ್ಕು ದಿನಗಳವರೆವಿಗೆ ನನ್ನ ಮನಸ್ಸು ಅಲ್ಲೋಲಕಲ್ಲೋಲವಾಗಿತ್ತು.

ಜೈಲಿನಲ್ಲಿ ಮಾಡಲು ಏನೂ ಕೆಲಸವಿಲ್ಲದ್ದರಿಂದ ಸಮಯ ಹೋಗುವುದು ಕಷ್ಟವಾಗಿತ್ತು. ಒಂದೊಂದು ಬಾರಿ ನಾನು ಪುರುಷ ಕೈದಿಯಾಗಿದ್ದರೆ ಚೆನ್ನಾಗಿತ್ತು ಎಂದು ಮನಸ್ಸಿಗೆ ಬರುತ್ತಿತ್ತು. ಯಾಕೆಂದರೆ ಗಂಡಾಳುಗಳು ಸ್ವಲ್ಪವೂ ಬಿಡುವಿಲ್ಲದಂತೆ ದುಡಿಯುತ್ತಾರೆಂದು ನನಗೆ ತಿಳಿದಿತ್ತು. ಮರದ ಕೆಲಸ, ಚಿತ್ತದ ಕೆಲಸ, ಮಗ್ಗ, ನೇಯಿಗೆ, ಕಬ್ಬಿಣದ ಕೆಲಸ, ಅಡಿಗೆ ಎಲ್ಲವನ್ನೂ ಅವರ ಕೈಲೇ ಮಾಡಿಸುತ್ತಾರೆಂದು ವಾರ್ಡರ್ ನೀಲಿ ತಿಳಿಸಿದ್ದಳು. ಜೈಲಿಗೆ ಬೇಕಾದ ತರಕಾರಿಯನ್ನೂ ಸಹ ಕೈದಿಗಳಿಂದಲೇ

ಬೆಳೆಸುತ್ತಿದ್ದರು. ಆಯಾ ಕೈದಿಗಳ ಜಾತಿ, ಕಸುಬಿಗನುಸಾರವಾಗಿ ಜೈಲಿನ ಅಧಿಕಾರಿಗಳು ಅವರಿಂದ ಕೆಲಸ ತೆಗೆಸುತ್ತಿದ್ದರು. ಕೈದಿ ಜಾತಿಯಿಂದ ತೋಟಿಯಾಗಿದ್ದರೆ ಅವನಿಗೆ ಕಸಗುಡಿಸುವ ಕೆಲಸ ಒಪ್ಪಿಸುತ್ತಿದ್ದರು. ಹಾಗೆಯೇ ಕೈದಿ ನಾಯಿಂದನಾಗಿದ್ದರೆ ಇತರ ಕೈದಿಗಳಿಗೆ ಚೌರ ಮಾಡಿಸುವ ಕೆಲಸ ಬೀಳುತ್ತಿತ್ತು.

ಒಂದು ಬಾರಿ ಕೈದಿಯೊಬ್ಬ ಜೈಲಿನ ಅಧಿಕಾರಗಳ ವಿರುದ್ಧವಾಗಿ 'ಮುಷ್ಕರ' ಹೂಡಿದ್ದ ವಿಷಯವನ್ನು ನೀಲಿ ಸ್ವಾರಸ್ಯವಾಗಿ ಹೇಳಿದ್ದಳು. ಆ ಕೈದಿಗೆ ಜೈಲಿನ ಸೂಪರಿಂಟೆಂಡೆಂಟ್‌ರನ್ನು ಕಂಡರೆ ದ್ವೇಷವಿತ್ತು. ಯಾಕೆಂದರೆ, ಅವರು ಜೈಲಿನ ನಿಯಮಗಳನ್ನು ಬಹಳ ಶಿಸ್ತಿನಿಂದ ಪಾಲಿಸುತ್ತಿದ್ದರು. ಅವರ ನಿಯಮವನ್ನು ಅತಿಕ್ರಮಿಸಿದವರು ಅಧಿಕಾರಿಯ ಮೋಟು ಮರದ ಕೋಲಿನಿಂದ ಏಟು ತಿನ್ನುತ್ತಿದ್ದರು.

ಕೈದಿ ಮೊದಲು ಜೈಲಿನಲ್ಲಿ ಕೊಡುವ ಊಟ ಏನೇನೂ ಸಾಲದೆಂದು ಗಲಾಟೆಗೆ ಪ್ರಾರಂಭ ಮಾಡಿದ. ಅವನನ್ನು ಇತರ ಐದಾರು ಕೈದಿಗಳು ಪ್ರೋತ್ಸಾಹಿಸಿದರು. ಎಲ್ಲರೂ ಅನ್ನ, ನೀರು ಬಿಟ್ಟು 'ನಮಗೆ ಒಳ್ಳೆಯ ಊಟ ಕೊಡಿ' ಎಂದು ಗಲಾಟೆ ಮಾಡಿದರು. ಪರಿಣಾಮವಾಗಿ ಅಧಿಕಾರಿಯ ತುಂಡು ಬೆತ್ತದ ಸ್ಪರ್ಶಸುಖವನ್ನು ಅವರು ಅನುಭವಿಸಬೇಕಾಯಿತು. ಶಿಕ್ಷೆಯಿಂದ ರೊಚ್ಚಿಗೆದ್ದ ಕೈದಿ, ಅಧಿಕಾರಿಯಿಂದ ಆಗಾಗ್ಗೆ ಬೈಗಳ ತಿನ್ನುತ್ತಿದ್ದ ಪೋಲೀಸಿನವನೊಬ್ಬನ ಸ್ನೇಹ ಬೆಳೆಸಿ, ಅವನಿಂದ ಚಾಕುವೊಂದನ್ನು ಪಡೆದು ರಹಸ್ಯವಾಗಿ ತನ್ನ ಬಳಿ ಇರಿಸಿಕೊಂಡಿದ್ದ.

ಒಂದು ದಿನ ಎಂದಿನಂತೆ ಜೈಲಿನ ಅಧಿಕಾರಿ ತನ್ನ ಆರ್ಡರ್ಲಿಯೊಡನೆ ಕೈದಿಗಳನ್ನು ನೋಡಲು ಬಂದಾಗ ಆ ಕೈದಿ ಚಂಗನೆ ಅಧಿಕಾರಿಯ ಬಳಿ ಹಾರಿಬಂದ. ಆದರೆ ಆರ್ಡರ್ಲಿ ಚಾಕು ಹಿಡಿದಿದ್ದ ಅವನ ಬಲಗೈಯನ್ನು ಬಿಗಿಯಾಗಿ ಹಿಡಿದುಕೊಂಡ.

ಕೈದಿಯನ್ನು ಪುಟ್ಟ ಕತ್ತಲು ಕೋಣೆಯಲ್ಲಿ ತಳ್ಳಿ, ಅವನಿಂದ ಚಾಕು ಸರಬರಾಜು ಮಾಡಿದವರು ಯಾರು ಎಂದು ತಿಳಿದುಕೊಂಡರು. ಚಾಕು ಕೊಟ್ಟ ಪೋಲೀಸಿನವನಿಗೆ ಕೆಲಸ ಹೋಯಿತು. ಅಧಿಕಾರಿಯನ್ನು ಕೊಲೆ ಮಾಡಲು ಯತ್ನಿಸಿದನೆಂದು ಕೈದಿಯ ಮೇಲೆ ಆರೋಪಣೆ ಬಂದು, ಅವನ ಸೆರೆಮನೆ ವಾಸದ ಅವಧಿ ಹೆಚ್ಚಾಯಿತು.

ನೀಲಿ ಹೇಳುತ್ತಿದ್ದ ಕತೆಗಳನ್ನು ನಾವು ಆಶ್ಚರ್ಯದಿಂದ ಕೇಳುತ್ತಿದ್ದೆವು.

ಏನೂ ಕೆಲಸವಿಲ್ಲದೆ ನಾಲ್ಕು ಗೋಡೆಗಳ ನಡುವೆ ಓಡಾಡುವುದೆಂದರೆ ಮನಸ್ಸಿಗೆ ಬೇಜಾರಾಗುತ್ತಿತ್ತು. ಆದರೆ ಕಾಳಿ ಮಾತ್ರ ನಾಲ್ಕು ತಿಂಗಳ ಸೆರೆಮನೆ ವಾಸವನ್ನು ಬಹಳ ಸಂತೋಷದಿಂದ ಅನುಭವಿಸುತ್ತಿದ್ದಳು.

ಕಾಳಿ ಭಿಕ್ಷುಕರ ಹೆಣ್ಣು. ಅವಳಿಗೆ ಸುಮಾರು ಇಪ್ಪತ್ತರ ಪ್ರಾಯ. ಅವಳ ಹೆಸರಿಗನುಸಾರವಾಗಿ ಮೈ ಬಣ್ಣವೂ ಕಾಳ ಕಪ್ಪು. ಅವಳು ಜೈಲಿನ ವಾಸ ಅನುಭವಿಸಲು ಬಂದು ಸೇರಿದ ದಿನ ನನಗೆ ಚೆನ್ನಾಗಿ ನೆನಪಿದೆ. ನಾನು, ಮೇರಿಯಮ್ಮ, ಸೇತು ಮಧ್ಯಾಹ್ನದ ಊಟ ಮುಗಿಸಿ, ಸಮಯ ಕಳೆಯಲು 'ಚೌಕಾಬಾರ' ಆಡುತ್ತಿದ್ದೆವು. ಮಣ್ಣು ನೆಲದ ಮೇಲೆ 'ಚೌಕಾಬಾರ'ದ ಮನೆಯನ್ನು ಬರೆದುಕೊಂಡು, ಹುಣಿಸೇ ಬೀಜವನ್ನು ಒಡೆದು ಬೇಳೆಗಳನ್ನಾಗಿ ಮಾಡಿ, ಅವುಗಳನ್ನೇ ಕವಡೆಗೆ ಬದಲಾಗಿ ಉಪಯೋಗಿಸುತ್ತಿದ್ದೆವು.

ವಾರ್ಡರ್ ನೀಲಿ ಸ್ವಲ್ಪ ದೂರದಲ್ಲಿ ಕುಳಿತು ನಮ್ಮ ಆಟವನ್ನು ನೋಡುತ್ತಿದ್ದಳು. ಆಗ ಹೊರಗಿನಿಂದ ಬಾಗಿಲು ತಟ್ಟಿದ ಸದ್ದಾಯಿತು. ನೀಲಿ ಎದ್ದು ಹೋಗಿ ಒಳಗಿನಿಂದ ಹಾಕಿಕೊಂಡಿದ್ದ ಬಾಗಿಲಿನ ಚಿಲಕವನ್ನು ತೆಗೆದಳು. ಪೋಲೀಸಿನವನು ಕಾಳಿಯನ್ನು ಒಳಕ್ಕೆ ದಬ್ಬಿದ. ನೀಲಿ ಮೊದಲಿನಂತೆ ಬಾಗಿಲನ್ನು ಮುಚ್ಚಿ ಬೀಗ ಹಾಕಿದಳು.

ಕಾಳಿ ಒಳಗೆ ಬಂದು ಸುತ್ತಲೂ ನೋಡಿದಳು. ಅವಳ ತುಟಿಯ ಮೇಲೆ ನಸುನಗೆ ಕುಣಿಯುತ್ತಿತ್ತು. ಏನೋ ವಿಜಯ ಸಾಧಿಸಿದವಳಂತೆ ಕಾಳಿ ನಮ್ಮನ್ನು ನೋಡಿದಳು.

ವಲ್ಲಿ ನನ್ನನ್ನು ತಿವಿದು 'ಜೇಲಿಗೆ ಬಂದೇಂತ ಬಹಳ ಖುಷಿ ಪಡ್ತಿರೋ ಹಾಗಿದೆ' ಎಂದಳು.

ಮೇರಿಯಮ್ಮ 'ಬಿಮ್ಮಂಸೇಂತ ಕಾಣ್ತದೆ' ಎಂದಳು. ಕಾಳಿ ನಮ್ಮನ್ನು ನೋಡಿ ತನ್ನ ಕಪ್ಪುಮುಖದಲ್ಲಿ ಬಿಳಿಯ ಹಲ್ಲುಗಳನ್ನು ಪ್ರದರ್ಶಿಸಿದಳು. ನಾವು ಆಟ ನಿಲ್ಲಿಸಿ ಕುತೂಹಲದಿಂದ ಅವಳ ಕಡೆ ನೋಡಿದೆವು. ಕಾಳಿ ನಿಧಾನವಾಗಿ ನಮ್ಮ ಹತ್ತಿರ ಬಂದು ಕುಳಿತುಕೊಂಡಳು. ವಲ್ಲಿ ಕೇಳಿದಳು

'ಹೆಸರೇನು ?'

'ಕಾಳಿ.'

‘ ಏನು ತಪ್ಪು ಮಾಡಿದೀಯಾ ? ’

‘ ಕಳ್ಳತನ. ’

‘ ಸಿಕ್ಷೆ ಎಷ್ಟು ದಿನ ? ’

‘ ನಾಕು ತಿಂಗಳು. ’

ಮೇರಿಯಮ್ಮ ನಡುವೆ ಬಾಯಿ ಹಾಕಿ ‘ ಬಿಮ್ಸ್ಂಸೆ ಅಂಗೆ ಕಾಣ್ತದೆ. ಹೌದಾ ? ’ ಎಂದಳು.

‘ ಹೂಂ. ’

‘ ಎಷ್ಟು ತಿಂಗಳು ? ’

‘ ಏಳು ತಿಂಗಳಾಯಿತು.’

‘ ಗಂಡನಿಗೇನು ಕೆಲಸ ? ’

‘ ಏಯ್ ಗಂಡನೂ ಇಲ್ಲ. ಎಂತವನೂ ಇಲ್ಲ ’ ಕಾಳಿ ನಿರ್ಯೋಚನೆಯಿಂದ ಹೇಳಿದಳು.

ನಾನು ಆಶ್ಚರಿಯಿಂದ ಕೇಳಿದೆ ‘ ನಿಂಗೆ ಮದ್ವೆ ಆಗಿಲ್ವಾ ? ’

‘ ನಮ್ಮಂತ ಬಿಕ್ಸುಕರಿಗೆ ಮದುವೆ ಯಾಕೆ ? ಅದೆಲ್ಲಾ ದೊಡ್ಡ ಮನುಸ್ಕರಿಗೆ.’

‘ ಹಾಗಾದ್ರೆ ನಿನ್ನ ಮಗು ತಂದೆ ಯಾರು ?’

‘ ನಮ್ಮ ಗುಂಪಿನಲ್ಲಿ ಒಬ್ಬ ಕುಂಟ ಇದ್ದ. ಅವನೇ ಮಗು ತಂದೆ ಇರಬೋದೂಂತ ಕಾಣತ್ತೆ. ’

‘ ನೀನು ಹೀಗೆಲ್ಲಾ ಮಾಡಿದರೆ ನಿನ್ನ ಗುಂಪಿನಿಂದ ತೆಗೆದು ಹೊರಗೆ ಹಾಕೋದಿಲ್ಲವಾ ? ’

‘ ಯಾಕೆ ಹಾಕ್ತಾರೆ? ಇಷ್ಟರ ಮೇಲೆ ಹಾಕಿದರೆ ಹಾಕಲಿ. ನನ್ನ ಪಾಡಿಗೆ ನಾನು ಬಿಕ್ಷ ಬೇಡ್ತೀನಿ. ಹಾಯಾಗಿರ್ತೀನಿ. ’

‘ಮಗೂನ ಹೇಗೆ ಸಾಕ್ತೀಯ ?’

‘ ಅದೂ ಬಿಕ್ಷ ಬೇಡ್ತದೆ. ಅದಕ್ಕೊಂದು ಐದಾರು ವರ್ಷ ಆದ್ಮೇಲೆ ಅವರ ಪಾಡು ಅದಕ್ಕೆ, ನನ್ನ ಪಾಡು ನನಗೆ. ’

ಅಬ್ಬ ! ಅವಳ ಧೈರ್ಯ ನೋಡಿ ನಾನು ಬೆರಳು ಕಚ್ಚಿದೆ. ನಾನು ಮಾಡಿದ ತಪ್ಪನ್ನೇ ಕಾಳಿಯೂ ಮಾಡಿದ್ದಳು. ಆದರೆ ಕಾಳಿ ನನ್ನಂತೆ

ತನ್ನ ಮಗುವಿನ ಕತ್ತು ಹಿಸುಕಲು ತಯಾರಿರಲಿಲ್ಲ. ತನ್ನ ಬಸುರಿನ ಬಗ್ಗೆ ಅವಳು ಹೆಮ್ಮೆ ತಾಳಿದ್ದಂತೆ ತೋರಿತು. ಅವಳು ತನ್ನ ಭವಿಷ್ಯದ ಬಗೆಗಾಗಲಿ, ತನ್ನ ಮಗುವಿನ ಭವಿಷ್ಯದ ಬಗೆಗಾಗಲೀ ಸ್ವಲ್ಪವೂ ಚಿಂತಿಸಿದಂತೆ ತೋರಲಿಲ್ಲ. ಅನೀತಿ ವ್ಯಾಪಾರದಿಂದ ಹುಟ್ಟಿದ ಮಗುವಿಗೆ ಆಸ್ತಿ ಸಿಕ್ಕುವುದೋ ಇಲ್ಲವೋ ಎಂಬ ಯೋಚನೆಯಾಗಲಿ, ಸಮಾಜದಲ್ಲಿ ತನ್ನ, ಮಗುವಿನ ಸ್ಥಾನವೇನು ಎಂಬ ಯೋಚನೆಯಾಗಲಿ ಅವಳಿಗಿರಲಿಲ್ಲ. ಇವೆಲ್ಲಾ ಆಗಲೇಬೇಕು ಎನ್ನುವ ನಿಶ್ಚಿಂತೆ ಅವಳ ಮುಖದ ಮೇಲೆ ಒಡೆದು ಮೂಡಿತ್ತು.

'ಆ ಕುಂಟನ್ನೇ ಮದುವೆ ಮಾಡ್ಕೋಬೇಕಿತ್ತು' ನಾನು ಕಾಳಿಗೆ ಹೇಳಿದೆ.

'ಅಯ್ಯೋ ಅದೇನು ಮದುವೆ ಬಿಡು ನಮ್ಮವ್ವ. ಮನಸ್ಸೊಪ್ಪಿದರೆ ಸಾಲದಾ ?'

'ಹಾಗಲ್ಲ ಕಾಳಿ. ಮದುವೆ ಗಂಡು, ಹೆಣ್ಣು ಇಬ್ಬರಿಗೂ ಬಂಧನ, ರಕ್ಷಣೆ.'

ಕಾಳಿ ತಿರಸ್ಕಾರದಿಂದ 'ಮದುವೆಯಾಗಿ ಯೆಂಡ್ತೀರನ್ನ ಬಿಟ್ಟು ಓಡಿಹೋದೋರು ಎಷ್ಟು ಜನರಿಲ್ಲ ? ಮದುವೆಯಾಗಿ ಕೆಟ್ಟ ಕೆಲಸ ಮಾಡಿರೋರು ಎಷ್ಟು ಜನರಿಲ್ಲ ?' ಎಂದಳು.

'ಆದರೂ .... ....'

'ಅಯ್ ಸಾಕು ಬಿಡವ್ವ. ನಮ್ಮ ಗುಂಪಿನಲ್ಲಿ ಹನುಮಾಂತ ಅವ್ನೆ. ಅವನು ಲಚುಮೀನ ಕೂಡುವಳಿ ಮಾಡ್ಕಂಡವ್ನೆ. ಅವರಿಬ್ಬರೂ ಇರೋದನ್ನ ನೋಡಿದರೆ ಮದುವೆಯಾದ ಗಂಡ, ಯೆಂಡ್ರು ನಾಚ್ಕೋಬೇಕು. ಲಚುಮೀಂದ್ರೆ ಹನುಮ ಪ್ರಾಣ ಬಿಡ್ತಾನೆ. ಹನುಮಾಂದ್ರೆ ಲಚುಮಿ ಬೆಂಕಿ ಬೇಕಾದ್ರೂ ಹಾರ್ತಾಳೆ. ಮದುವೆಯಾಗದಿದ್ದರೇನಂತೆ ? ಗಂಡ, ಯೆಂಡ್ರು ಅಂದ್ರೆ ಅಂಗಿರಬೇಡವಾ ? '

ನಮ್ಮಿಬ್ಬರ ಜಗಳವನ್ನು ಕೇಳುತ್ತಿದ್ದ ವಲ್ಲಿ

'ಜಗಳ ಸಾಕಾತು. ನೀನ್ಯಾಕೆ ಇಲ್ಲಿಗೆ ಬಂದೆ ?' ಎಂದಳು.

'ಕಳ್ಳತನ ಮಾಡಿದೆ.'

'ಭಿಕ್ಷೆ ಮಾಡ್ತೀನೀಂದೆ.'

' ಭಿಕ್ಷ ಬೇಡೋೀರು ಕಳ್ತನ ಮಾಡ್ಬಾರ್ದೂಂತ ಎಲ್ಲಾರೂ ಹೇಳವ್ರು. ನಂಗೂ ಕುಂಟಿಂಗೂ ನೆಂಟಸ್ತನ ಬೆಳೀತು. ಮಗೀಗೆ ಮೂರು ತಿಂಗಳಾಗೋೀ ವರೆಗೂ ಎಂಗಿರೋೀದು ? ನನ್ನ ಕೂರಿಸಿ ಗಂಜಿ, ಅನ್ನ ಆಕೋೀರು ಯಾರು? ಮಗು ಹುಟ್ಟೋೀವರೆಗೂ ಭಿಕ್ಷೆ ಬೇಡಿ, ಮಗ ಉಟ್ಟಿದ ಗಳಿಗೆಯಿಂದ ತಿರುಗ ಭಿಕ್ಷೆ ಬೇಡಕ್ಕಾದೀತಾ? ಮನೆ ಮನೆ, ಬೀದಿ ಬೀದಿ ಅಲೆಯೋೀಕಾದೀತಾ? ಮಗೀಗೆ ಎರಡು ತಿಂಗಳು ಕಳೆಯೋೀವರೆಗೂ ಬೆಚ್ಚಗೆ ಮನೆ, ನಿರಾತಂಕ ವಾಗಿ ಊಟ ಸಿಕ್ಕಿದರೆ ಸಾಕು ಅಂತ ಯೋೀಚನೆ ಮಾಡಿದೆ. ಕೊನೆಗೆ ಸಿಕ್ಕಿಕೊಳ್ಳೋೀ ಹಾಗೆ ಕಳ್ಳತನ ಮಾಡಿ, ಸಜಾ ಹಾಕಿಸಿಕೊಂಡು ಜೇಲಿನಲ್ಲಿ ರೋೀದೆ ವಾಸಿ ಎನಿಸ್ತು.'

ಸೇತು ಕೈ ಚಪ್ಪಾಳೆ ತಟ್ಟಿ 'ಮುಂದೆ ಹೇಳಕ್ಕ. ಕತೆ ಮಜವಾಗಿದೆ' ಎಂದಳು.

' ಒಂದು ದಿನ ಐಶ್ವರ್ಯವಂತರ ಮನೀಗೆ ಭಿಕ್ಷೆ ಬೇಡೋೀಕೆ ಓಗಿದ್ದೆ. ಮನೆ ತಾವು ಯಾರೂ ಇರಲಿಲ್ಲ. ಹೊರಗೆ ನಾಕು ವರ್ಷದ ಹೆಣ್ಣುಮೊಗ ಆಟ ಆಡ್ತಾ ಕುಂತಿತ್ತು. ಅದರ ಕತ್ತಿನಾಗ ಎರಡೆಳೆ ಚಿನ್ನದ ಚೇನು ಕಾಣಿಸ್ತು. ನಾನು ಅದರ ಅತ್ತಿರ ಹೋೀಗಿ ಕತ್ತಿನಿಂದ ಚೇನು ಕಳಚಿ ಕೊಂಡೆ. ನನ್ನ ನೋೀಡಿ ಮೊಗ ಎದರಿ ಕಿರಿಚ್ಕೋೀತು. ಒಳಗ್ನಿಂದ ಅದರ ಅವ್ವ ಬಂದಳು. ನನ್ನ ಕೈಲಿ ಚೇನಿದ್ದು ನೋೀಡಿ ಬೊಂಬಡಿ ಬಜಾಯಿಸಿ ದಳು. ನಾಕು ಜನ ಸೇರಿದರು. ಕೋೀರ್ಟಿಗೆಳೆದುಕೊಂಡು ಹೋೀದರು. ನಾನು ಕದ್ದಿದ್ದು ನಿಜಾಂತ ಜಜ್ಜಿಗೋೀಳ ಮುಂದೆ ಒಪ್ಪಿಕೊಂಡೆ. ನಾಕು ತಿಂಗಳು ಸಜಾ ಬಿತ್ತು. ನನ್ನ ಮಗೀಗೆ ಎರಡು ತಿಂಗಳಾಗೋೀವರೆಗೂ ಜೇಲಲ್ಲಿ ಸುಖವಾಗಿ ಬಾಣಂತನ ಆಗ್ತದೆ.'

ಕಾಳಿಯ ಕತೆಯನ್ನು ನಾನು ಬಿಟ್ಟ ಬಾಯಿ ಮುಚ್ಚದೆ ಕೇಳಿದೆ. ಅವಳ ಕೆಲವು ಅಭಿಪ್ರಾಯಗಳನ್ನು ನಾನು ಒಪ್ಪದಿದ್ದರೂ ಅವಳ ಧೈರ್ಯ, ಸ್ಥೈರ್ಯ, ಕೆಚ್ಚು ಇವುಗಳನ್ನು ನೋೀಡಿ ನಾನು ದಂಗಾಗಿದ್ದೆ. ಅವಳಲ್ಲಿದ್ದ ಧೈರ್ಯದಲ್ಲಿ ಸಾವಿರದಲ್ಲಿ ಒಂದು ಅಂಶ ನನ್ನಲ್ಲಿದ್ದರೂ ನಾನು ನನ್ನ ಮಗು ವನ್ನು ಕೊಲ್ಲುತ್ತಿರಲಿಲ್ಲ. ಸಮಾಜ, ಸಂಸಾರ, ಪ್ರೇಮ ಇವುಗಳ ಬಗ್ಗೆ ಏನೇನೋೀ ಆದರ್ಶ ಚಿತ್ರಿಸಿಕೊಂಡು, ಆ ನಿಷ್ಪಾಪ ಜೀವಿಯನ್ನು ಪತಿತೆಯಾದ

ನಾನು ಹೊಸಗಿಹಾಕಿದ್ದೆ.

ಎಳೆಯ ಕಂದನ ಮುಗ್ಧ ಮುಖ ನನ್ನ ಕಣ್ಣೆದುರಿಗೆ ತೇಲಿಬಂತು. ಆದರ ದಟ್ಟವಾದ ಗುಂಗುರು ಕೂದಲು, ನಿರ್ಮಲವಾದ ಮೈ ಬಣ್ಣ, ಸುಂದರ ಮುಖ ಇವುಗಳನ್ನು ನಾನು ಮರೆಯುವುದು ಸಾಧ್ಯವೇ ಇರಲಿಲ್ಲ. ಕನಸಿನಲ್ಲಿಯೂ ಆ ಮುಖ ನನ್ನನ್ನು ಕಾಡಿ ನನ್ನ ನಿದ್ರಾಭಂಗ ಮಾಡುತ್ತಿತ್ತು.

ಆ ರಾತ್ರಿ ನನಗೆ ನಿದ್ದೆ ಸರಿಯಾಗಿ ಬರಲಿಲ್ಲ. ನಾನು ಮಗುವನ್ನು ಕೊಂದುದಕ್ಕಾಗಿ ಅದುವರೆವಿಗೂ ಪಶ್ಚಾತ್ತಾಪ ಪಟ್ಟಿರಲಿಲ್ಲ. ನಾನು ಹಾಗೆ ಮಾಡಿದ್ದೇ ಸರಿ ಎಂದು ನನಗೆ ನಾನೇ ಸಮಾಧಾನ ಮಾಡಿಕೊಳ್ಳುತ್ತಿದ್ದೆ. ಆದರೂ ಅಂತರಂಗದಲ್ಲಿ ಅಶಾಂತಿಯ ಹೊಗೆ ನಿಧಾನವಾಗಿ ಹಬ್ಬುತ್ತಿತ್ತು ಆದರಿಂದಾಗಿ ಆಗಾಗ್ಗೆ ನನಗೆ ಉಸಿರು ಕಟ್ಟಿದಂತಾಗುತ್ತಿತ್ತು. ಆಗ ನಾನು 'ಅದು ಬದುಕಿ ಕಟುಕ ನುಡಿ, ಬಡತನದ ಬೇಗೆಗೆ ಆಹುತಿಯಾಗುವುದಕ್ಕಿಂತಲೂ ನಾನು ಒಂದೇ ಬಾರಿಗೆ ಅದರ ಕತೆಯನ್ನು ಪೂರಯಿಸಿದುದೇ ಒಳ್ಳೆಯದಾಯಿತು' ಎಂದುಕೊಂಡಿದ್ದೆ.

ಆದರೆ ಕಾಳಿಯ ಮಾತುಗಳನ್ನು ಕೇಳಿದಾಗ, ಮದುವೆಯಾಗದೇ ತಾಯಿಯಾಗಲಿದ್ದ ಅವಳ ಧೈರ್ಯವನ್ನು ನೋಡಿದಾಗ, ನನಗೆ ನಾನು ನಿಜವಾಗಿಯೂ ಮುಗ್ಧ ಜೀವಿಯೊಂದರ ಕೊಲೆ ಮಾಡಿದೆ ಎನಿಸಿತು. ಮಗುವಿನ ಕೊಲೆ ಮಾಡಿ ನಾನು ಸಾಧಿಸಿದ್ದಾದರೂ ಏನು ? ಈಗ ನನಗೆ ಸಮಾಜದಲ್ಲಿ ಯಾವ ಸ್ಥಾನವಿದೆ ? ಜೈಲಿನಿಂದ ಬಿಡುಗಡೆಯಾಗಿ ನಾನು ಹೊರಗಿನ ಪ್ರಪಂಚಕ್ಕೆ ಕಾಲಿಟ್ಟಾಗ ಜನ ನನ್ನನ್ನು ಮೊದಲಿನಂತೆ ಕಾಣುವರೆ ? ಎಲ್ಲಾ ವ್ಯರ್ಥ. ಸುಮ್ಮನೆ ಪಾಪ ಕಟ್ಟಿಕೊಂಡಂತಾಯಿತು.

'ಯಾಕವ್ವಾ ಅಳ್ತಿಡೀಯಾ ?'

ವಲ್ಲಿ ಕೈಯನ್ನು ಮೃದುವಾಗಿ ನನ್ನ ಮೇಲಿರಿಸಿ ಕೇಳಿದಳು.

'ಅಂ ! ನಾನು ಅಳ್ತಿದೀನೆಯೇ ?'

ನಾನು ಬೆಚ್ಚಿ ನನ್ನ ಕೆನ್ನೆಯನ್ನು ಮುಟ್ಟಿ ನೋಡಿಕೊಂಡೆ. ನಿಜ, ನನ್ನ ಕೆನ್ನೆ ಒದ್ದೆಯಾಗಿತ್ತು. ಹೃದಯ ಮಂದಿರದಲ್ಲಿ ಹೆಪ್ಪುಗಟ್ಟಿದ್ದ ವೇದನೆಯ ಹಿಮ ಪಶ್ಚಾತ್ತಾಪದ ಕಾವಿನಲ್ಲಿ ಕರಗಿ, ಕಣ್ಣುಗಳಿಂದ ಹೊರಗೆ

ಹರಿದು ಬರುತ್ತಿತ್ತು.

'ಮಗೂನ ನೆನಸ್ತಿದೀಯಾ?' ವಲ್ಲಿ ಮತ್ತೆ ಕೇಳಿದಳು.

'....................'

'ಆದದ್ದು ಆಯಿತು. ಇನ್ನು ಅತ್ತರೆ ಏನು ಪ್ರಯೋಜನ?' ಎನ್ನುತ್ತಾ ವಲ್ಲಿ ಬ್ಯಾರಕ್ಕಿನ ಒಳಗೆ ಹೋದಳು.

ಸಂಜೆಯ ಪ್ರಸಂಗವೇ ರಾತ್ರಿ ನನ್ನ ಮನಸ್ಸಿನಲ್ಲಿ ಪುನಃ ಪುನಃ ಬರುತ್ತಿತ್ತು. ಕೆಟ್ಟ ಕನಸುಗಳಿಂದಾಗಿ ಆಗಾಗ್ಗೆ ಬೆಚ್ಚಿ ಏಳುತ್ತಿದ್ದೆ. ಒಂದು ಬಾರಿ ವಲ್ಲಿಯೇ ನನ್ನನ್ನು ಹಿಡಿದು ಅಲುಗಿಸಿ ಎಬ್ಬಿಸಿದಳು. ನಾನು ಅಗಲವಾಗಿ ಕಣ್ಣು ತೆರೆದು ವಲ್ಲಿಯನ್ನು ಬಿರಬಿರನೆ ನೋಡಿದೆ.

'ಎಚ್ಚರ ಮಾಡಿಕೋ. ಯಾಕೆ ಸುಮ್ಮನೆ ಕೂಗಿಕೋತೀಯ? ಏನಾದರೂ ಕನಸು ಬಿತ್ತೇನು?'

'ನಾನು ಈಗ ಚೀರಿಕೊಂಡೆನೇ?'

'ಹೂಂ. ನೋಡು ಎಲ್ಲರೂ 'ಗಾಭರಿಯಾಗಿ ಎದ್ದು ಕುಳಿತಿದಾರೆ.'

ನಾನು ಅಕ್ಕಪಕ್ಕಗಳಲ್ಲಿ ನೋಡಿದೆ. ಎಲ್ಲರೂ ಚಾಪೆಯ ಮೇಲೆ ಕುಳಿತು ಕಪ್ಪು ಕಂಬಳಿಗಳನ್ನು ಹೊದ್ದುಕೊಂಡು, ಆತಂಕದಿಂದ ನನ್ನ ಕಡೆ ನೋಡುತ್ತಿದ್ದರು.

'ಇಷ್ಟು ದಿನ ನಿದ್ದೇಲಿ ಕನವರಿಸ್ಕೋತಿದ್ದೆ. ಇವತ್ತಿಂದ ಚೀರೋಕೂ ಸುರುಮಾಡಿದ ಹಾಗಿದೆ.'

ನಾನೇಕೆ ಹೀಗಾದೆ? ನನಗೇನಾಗ್ತಿದೆ?

ನಾನು ಮಾತನಾಡದೇ ಬೇರೊಂದು ಕಡೆ ತಿರುಗಿ ಮುಸುಗು ಹಾಕಿಕೊಂಡೆ.

ಬೆಳಿಗ್ಗೆ ಆರು ಗಂಟೆಗೆ ಎಚ್ಚರವಾಯಿತು. ಗಂಜಿಯೂಟ ಮುಗಿಸಿ ಗಿಡಗಳಿಗೆ ನೀರು ಹಾಕುತ್ತಿದ್ದಾಗ ವಾರ್ಡರ್ ಬಂದು

'ಜೇಲರ್ ಸಾಹೇಬರು ನಿನ್ನ ಕರ್ಕೊಂಡು ಬರೋಕೆ ಹೇಳಿದಾರೆ' ಎಂದಳು.

ನನಗೆ ಒಂದು ಕ್ಷಣ ದಿಕ್ಕು ತೋಚದಾಯಿತು. ನಾನು ಯಾವ ತಪ್ಪೂ ಮಾಡಿದಂತೆ ತೋರಲಿಲ್ಲ. ಆದರೂ ನನಗೆ ಹೇಳಿ ಕಳುಹಿಸಲು ಕಾರಣ

ವೇನು ? ಅಥವಾ ಅಪ್ಪ, ಅಮ್ಮ ಯಾರಾದರೂ....

ನಾನು ಸಂದೇಹದಿಂದ ವಾರ್ಡರ್ ಮುಖ ನೋಡಿ ದೈನ್ಯದಿಂದ 'ನನ್ನ ಯಾರಾದರೂ ನೋಡೋಕೆ ಬಂದಿದಾರಾ ?' ಎಂದೆ.

' ಇಲ್ಲ. ಯಾಕೆ ಹೇಳಿ ಕಳಿಸಿದಾರೋ ನನಗೆ ಗೊತ್ತಿಲ್ಲ.'

ನಾನು ಮಡಕೆಯನ್ನು ಕೆಳಗಿಟ್ಟು ಅವಳೊಡನೆ ಹೊರಟೆ.

ಜೇಲರ್ ಸಾಹೇಬರು ಯಾರೊಡನೆಯೋ ಮಾತನಾಡುತ್ತಿದ್ದರು. ನಾವಿಬ್ಬರೂ ಒಂದು ಮೂಲೆಯಲ್ಲಿ ನಿಂತೆವು. ಬಂದಿದ್ದವರು ನಮಗೆ ಅರ್ಥವಾಗದ ಇಂಗ್ಲೀಷ್ ಭಾಷೆಯಲ್ಲಿ ಮಾತನಾಡುತ್ತಿದ್ದರು

ಕಾಲುಗಂಟೆಯ ಮೇಲೆ ಬಂದಿದ್ದಾತ ಸಾಹೇಬರ ಕೈ ಕುಲುಕಿ ಹೊರಟುಹೋದರು. ನಂತರ ಸಾಹೇಬರು ನನ್ನ ಕಡೆ ದೃಷ್ಟಿ ಹೊರಳಿಸಿ

' ನಿನ್ನ ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಕಳಿಸಬೇಕೂಂತ ಆರ್ಡರ್ ಬಂದಿದೆ. ಇನ್ನು ಒಂದು ವಾರದಲ್ಲಿ ಬೆಂಗಳೂರಿಗೆ ಕಳಿಸ್ತಾರೆ....'

ನನಗೇಕೋ ಹೆದರಿಕೆಯಾಯಿತು. ಇಲ್ಲಿಯ ಜೈಲಿನ ಅಧಿಕಾರಿಗಳು, ಜೈಲಿನ ಗೆಳತಿಯರಲ್ಲಿ ನನಗೆ ಒಂದು ಬಗೆಯ ಸ್ನೇಹ, ಆತ್ಮೀಯ ಭಾವನೆ ಬೆಳೆದಿತ್ತು. ಬೆಂಗಳೂರಾದರೋ ಬಹಳ ದೊಡ್ಡ ಊರು. ದಿನ ದಿನಕ್ಕೆ ಬೃಹದಾಕಾರವಾಗಿ ಬೆಳೆಯುತ್ತಿರುವ ಮಹಾನಗರವೆಂದು ಯಾರೋ ನನಗೆ ಹೇಳಿದ್ದರು. ಅಲ್ಲಿನ ಜೈಲು, ಅಲ್ಲಿಯ ಅಧಿಕಾರಿಗಳು, ದೊರೆಕಬಹುದಾಗಿದ್ದ ಗೆಳತಿಯರು ಎಂತಹವರೋ ಏನೋ ?

ನಾನು ನೆಲದ ಮೇಲೆ ಕುಸಿದು ಬಿದ್ದು ಕೈ ಮುಗಿಯುತ್ತಾ ' ಬೇಡಿ ಸ್ವಾಮಿ. ನನ್ನ ಅಲ್ಲಿಗೆ ಕಳಿಸಬೇಡಿ. ನಾನಿಲ್ಲಿಯೇ ಇರುತ್ತೇನೆ' ಎಂದು ಅಂಗಲಾಚಿದೆ.

'ಸರಕಾರದಿಂದ ಆರ್ಡರ್ ಬಂದಿದೆಯಲ್ಲಾ ? ಇಲ್ಲಿ ನಿನಗಾಗಿರುವಷ್ಟು ವರ್ಷ ಸಜಾ ಬೇರೆ ಯಾವ ಹೆಂಗಸಿಗೂ ಆಗಿಲ್ಲ. ಬೆಂಗಳೂರಿನಲ್ಲಾದರೆ ನಿನ್ನ ಜೊತೆಗೆ ಇಪ್ಪತ್ತು ವರ್ಷ ಸಜಾ ಆಗಿರುವ ಹೆಂಗಸರೂ ಸಿಕ್ತಾರೆ.'

ನನಗೆ ಮಾತು ಬರಲಿಲ್ಲ. ಕಣ್ಣೀರು ಸುಲಭವಾಗಿ ಬಂತು.

' ಅತ್ತರೆ ಏನು ಮಾಡೋಕಾಗತ್ತೆ ? ನೀನು ಇಲ್ಲಿರೋದರಿಂದ

ನಿನಗೆ ಯಾವ ಲಾಭ ಇದೆ? ನೀನೇನು ಅಪ್ಪ ಅಮ್ಮನ್ನ ಕೂಡ ನೋಡೋಕೆ ಒಪ್ಪಿಕೊಳ್ಳೋದಿಲ್ಲ. ನಿನಗೆ ಯಾವ ಜೈಲಾದರೇನು? ನಡಿ ಇನ್ನು.'

ವಾರ್ಡರ್ ನನ್ನನ್ನು ಹೊರಗೆ ಕರೆದುಕೊಂಡು ಬಂದಳು.

ನಾನು ಬೆಂಗಳೂರಿಗೆ ಹೋಗಲಿರುವ ಸುದ್ದಿ ನನ್ನ ಗೆಳತಿಯರಲ್ಲಿ ಬಹು ಬೇಗ ಹರಡಿತು. ಸೇತುವಂತೂ ಆನಂದದಿಂದ ಕುಣಿಯುತ್ತಾ

' ನೀನೇ ವಾಸಿ ಕಣಕ್ಕ. ನಂಗೆ ಬೆಂಗಳೂರು ಜೇಲೂಂದ್ರೆ ತುಂಬ ಆಸೆ. ಅಲ್ಲಿನ ಪೇಟೆಗೋಳಲ್ಲಿ ಗುಂಪು ಜಾಸ್ತಿ ಇರೋದರಿಂದ ಜೇಬು ಕತ್ತರಿಸೋದು ತುಂಬಾ ಸುಲಭ. ನಾನೂ ಸಾಹೇಬ್ರನ್ನ ಕೇಳಿ ಅಲ್ಲಿಗೇ ಬತ್ತೀನಿ' ಎಂದಳು.

ವಲ್ಲಿಗೆ ಮಾತ್ರ ನಾನು ಬೇರೆ ಹೋಗಲಿರುವ ಸುದ್ದಿ ಅಷ್ಟೊಂದು ಪ್ರಿಯವಾಗಿರಲಿಲ್ಲ. ಅವಳು ನಿಟ್ಟುಸಿರಿನೊಡನೆ

' ಶಿವ ನಿನ್ನ ಅನ್ನ ಎಲ್ಲಿ ಮಡಗಿದಾನೋ ' ಎಂದಳು.

ಒಂದು ವಾರದನಂತರ ನನ್ನನ್ನು ಬೆಂಗಳೂರಿಗೆ ವರ್ಗಾಯಿಸಿದರು. ಪೋಲೀಸ್ ವ್ಯಾನಿನಲ್ಲಿ ವಾರ್ಡರೊಬ್ಬಳೊಡನೆ ನಾನು ಬೆಂಗಳೂರಿಗೆ ಹೊರಟೆ. ಅದೇ ವ್ಯಾನಿನಲ್ಲಿ ಜೀವಾವಧಿ ಶಿಕ್ಷೆ ಅನುಭವಿಸಲಿದ್ದ ಕೈದಿಯೂ ಬೆಂಗಳೂರಿಗೆ ಹೊರಟಿದ್ದ.

ನಾವು ಡ್ರೈವರ್ ಹಿಂಬಾಗದ ಸೀಟಿನಲ್ಲಿ ಕುಳಿತೆವು. ಇಬ್ಬರು ಪೋಲೀಸಿನವರ ನಡುವೆ ಹಿಂದಿನ ಸೀಟಿನಲ್ಲಿ ಆ ಕೈದಿ ಕುಳಿತಿದ್ದ. ಅವನ ಮುಖ ಪೆಚ್ಚಾಗಿತ್ತು. ಅವನು ಆಗಾಗ್ಗೆ ದೀನಸ್ವರದಿಂದ ಪೋಲೀಸಿನವನೊಡನೆ 'ಅಲ್ಲಿಯ ಸಾಯೇಬ್ರು ಎಂಗಣ್ಣಾ? ನಂಗೆ ಭಯವಾಗ್ತೈತೆ' ಎನ್ನುತ್ತಿದ್ದ.

'ಖೂನಿ ಮಾಡಿದವರಿಗೆ ಎಂತ ಭಯವೋ?' ಪೋಲೀಸಿನವನು ಕೈದಿಯನ್ನು ಹಾಸ್ಯ ಮಾಡಿ ನಕ್ಕ.

' ಹಾಸ್ಯ ಮಾಡಬೇಡಣ್ಣಾ. ಆ ಲೌಡಿ ಮಗಳು ನನ್ನ ಹಂಗಿಸಿದಳೂಂತ ಭೋ ಕ್ವಾಪ ಬಂದುಬಿಡ್ತು. ಆ ಕ್ವಾಪದಲ್ಲಿ ಅವಳ ಜುಟ್ಟು ಹಿಡಿದು ಕೈನಾಗಿದ್ದ ಕುಡುಗೋಲಿಂದಲೇ ನಾಲ್ಕು ದಪ ಒಡೆದೆ. ರಕ್ತ ಹರಿದು ಬರೋಗಂಟ ನಂಗೆ ಜ್ಞಾನವೇ ಇರಲಿಲ್ಲ. ಆಮೇಲೆ ನಾನು ಮಾಡಿದ

ತೆಪ್ಪ ತಿಳೀತು. ಸೀದಾ ಪೋಲೀಸು ಟೇಸನ್ನಿಗೆ ಹೋಗಿ 'ನಾನು ಎಂಡ್ತೀನ ಕೂನಿ ಮಾಡಿದೆ' ಅಂತ ಸಮಾಚಾರ ತಿಳಿಸ್ದೆ. ಈಗ ಅಷ್ಟೊಂದು ಕ್ವಾಪ ಮಾಡಬಾರದಿತ್ತೂಂತ ಅನ್ನಿಸತ್ತೆ. ಆವೇಶದಾಗೆ ಉಚ್ಚು ಹಿಡಿದಂಗೆ ಆಗಿತ್ತು.'

ವಾರ್ಡರ್ ಎಲೆ ಅಡಿಕೆ ಮೆಲ್ಲುತ್ತಿದ್ದವಳು ಪಿಚಕ್ಕನೆ ಕಿಟಕಿಯಿಂದಾಚೆ ಉಗುಳಿ 'ಗಾದೆ ಕೇಳಿಲ್ಲವೇನಣ್ಣಾ, ಕೋಪದಲ್ಲಿ ಕೂದ ಮೂಗು ಶಾಂತವಾದ ಮೇಲೆ ಬರೋಕಿಲ್ಲ' ಎಂದಳು.

ಅವಳ ಗಾದೆ ಕೇಳಿ ಕೈದಿಯೊಡನೆ ಕುಳಿತಿದ್ದ ಹನ್ನೆರಡು ವರ್ಷದ ಹುಡುಗನೊಬ್ಬ ಜೋರಾಗಿ ನಕ್ಕು ವಾರ್ಡರಳ ಗಮನವನ್ನು ಸೆಳೆದ.

'ನೀನೆಲ್ಲಿಗೆ ಮೊಗಾ ?' ವಾರ್ಡರ್ ಕೇಳಿದಳು.

'ಬೆಂಗಳೂರಿನ ಸೆಂಟ್ರಲ್ ಜೈಲಿಗೆ.'

'ಯಾಕಪ್ಪಾ ತಮ್ಮಾ, ನೀಯೇನು ಮಾಡಿದೆ ?'

'ನಾನೇನೂ ಮಾಡ್ಲಿಲ್ಲ ಕನಕ್ಕ....'

ಪಕ್ಕದಲ್ಲಿ ಕುಳಿತಿದ್ದ ಪೋಲೀಸಿನವನು ತನ್ನ ಮೊಳಕೈಯಿಂದ ಹುಡುಗನ ತಲೆಯನ್ನು ಕುಟ್ಟಿ

'ಬಾಯಿ ಬಿಡೋ ಅರಗಿಣಿ' ಎಂದ.

'ನಿಜವಾಗೂ ನಾನು ಕದೀಲಿಲ್ಲ ಕಣಣ್ಣ.'

'ಅರಿಶ್ಚಂದ್ರು' ಪೋಲೀಸಿನವನು ಹುಡುಗನನ್ನು ಅಣಕಿಸಿ ಜೋರಾಗಿ ನಕ್ಕ.

ಇವರಿಬ್ಬರ ಜಗಳವನ್ನು ನೋಡುತ್ತಿದ್ದ ಕೊಲೆಗಾರ ಕೈದಿ 'ಅದೇನು ಯಿಚಾರ' ಎಂದು ಕೇಳಿದ.

ಪೋಲೀಸಿನವನೇ ಹೇಳಲು ಮೊದಲು ಮಾಡಿದ. 'ಇವನಂತಾ ಕದೀಮ ಇನ್ನೊಬ್ಬರಿಲ್ಲ. ಜೇಬು ಕತ್ತರಿಸೋದು, ಚೌರಿಗೆ ಕದಿಯೋದು, ತೋಟಗಳಿಂದ ತೆಂಗಿನಕಾಯಿ, ಹಣ್ಣು ಲಪಟಾಯಿಸೋದು, ಹಿತ್ತಲಿನಲ್ಲಿ ಒಣಗಿಹಾಕಿದ ಬಟ್ಟೆ ಹಾರಿಸೋದು ಇವುಗಳಲ್ಲಿ ಇವನದು ಪಳಗಿದ ಕೈ. ಇವನಿಗಿನ್ನೂ ಹನ್ನೆರಡು ವರ್ಷ. ಆಗಲೇ ಎಂಟು ದಪ ಜೇಲಿನ ಮುಖ ಕಂಡಿದಾನೆ. ಈ ಬಾರಿ ಎಂಟು ತಿಂಗಳು ಶಿಕ್ಷೆ ಹಾಕಿದಾರೆ. ಬೆಂಗಳೂರಿನ

ಜೇಲಿನಲ್ಲಿ ಇವನಂಗೇನೇ ಹುಡುಗರು ಹತ್ತು ಹದಿನೈದು ಜನ ಇದಾರೆ. ಅವರಿಗೇನೆ ಒಂದು ಭಾಗ ಬಿಟ್ಟು ಅಲ್ಲಿ ಮೇಷ್ಟರಿಂದ ಪಾಠ ಹೇಳಿಸಿ ವಿದ್ಯೆ ಕಲಿಸ್ತಾರೆ.'

ನಾನು ಅಚ್ಚರಿಯಿಂದ 'ಜೈಲಿನಲ್ಲೂ ಪಾಠ ಹೇಳಿಕೊಡ್ತಾರೇನು ಹುಡುಗರಿಗೆ ?' ಎಂದೆ.

'ಹೂಂ. ಬೆಂಗಳೂರಿನ ಜೇಲಿನಲ್ಲಿ ಹುಡುಗರಿಗೆ ಇಬ್ಬರು ಮೇಷ್ಟ್ರನ್ನಿಟ್ಟಿದ್ದಾರೆ. ಒಬ್ಬರು ಉರ್ದು ಹೇಳಿಕೊಡ್ತಾರೆ. ಇನ್ನೊಬ್ಬರು ಕನ್ನಡ ಕಲಿಸ್ತಾರೆ. ಹುಡುಗರನ್ನು ಸಾಧಾರಣವಾಗಿ ಇತರ ಕೈದಿಗಳೊಡನೆ ಬೆರೆಯೋಕೆ ಬಿಡೋದಿಲ್ಲ. ಅವರಿಗೇ ಬೇರೆ ಆಟ, ಪಾಠ, ಕೆಲಸ ಎಲ್ಲಾ ಇದೆ.......' ಎನ್ನುತ್ತಾ ಹುಡುಗನ ಕಡೆ ತಿರುಗಿ

'ಲೋ, ನಿಂಗೇನು ಬಿಡೋ ಮಜವಾಗಿ ಇರಬಹುದು. ನಿನ್ನ ಜೊತೆ ಆಡೋಕೆ ಹುಡುಗರು ಸಿಕ್ತಾರೆ. ಜೈಲಿಂದ ಹೊರಗೆ ಬರುವಾಗ ಅಕ್ಷರ ಕಲಿತು ದೊಡ್ಡಮನಸಾ ಆಗಿ ಬರ್ತೀಯಾ' ಎಂದ.

ಅವನ ಮಾತು ಕೇಳಿ ಹನುಮ ಮುಖ ಹುಳ್ಳಗೆ ಮಾಡಿಕೊಂಡು

'ರಾಮೇಸ್ವರಕ್ಕೆ ಓದ್ರೂ ಸನಿಕಾಟ ಬುಡ್ಲಿಲ್ಲ. ಹಾಳು ಅಕ್ಸರ ಕಲಿಯೋದು ಯಾರಿಗೆ ಬೇಕಾಗಿದೆ? ಅಕ್ಸರ ಕಲಿಯೋ ಅಂಗಿದ್ರೆ ಜೇಲಿಗೆ ಓಗ್ಬೇಕಾ? ನಮ್ಮಪ್ಪ ಭೋ ಕಸ್ಟಪಟ್ಲು–ಅಂಗಾರೂ ಇಸ್ಕೂಲಿಗೆ ಓಗದವ ನಾನು ಜೇಲಲಿ ಇದ್ದ ಕಲಿತೇನಾ?' ಎಂದ.

ಅವನ ಮಾತಿನಿಂದ ಕೋಪಗೊಂಡ ಪೋಲೀಸಿನವನು ಹನುಮನ ಪಕ್ಕೆ ತಿವಿದು 'ಸುಮ್ನೆ ಕೂತ್ಕೋ. ಮೂದೇವಿ' ಎನ್ನುತ್ತಾ ಬೀಡಿಯನ್ನು ಹೊತ್ತಿಸಿದ.

'ಅಣ್ಣಾ, ನಂಗೊಂದು' ಎಂದು ಹನುಮ ಅಂಗಲಾಚಿದ. ಅವನ ಮೇಲೆ ಕನಿಕರಗೊಂಡ ಪೋಲೀಸಿನವನು ಅವನ ಕೈಗೊಂದು ಬೀಡಿಯ ಚೂರನ್ನಿತ್ತ.

ಸಿಮೆಂಟು ರಸ್ತೆಯ ಮೇಲೆ ಯಾವ ಕುಲುಕಾಟವೂ ಇಲ್ಲದೆ ವ್ಯಾನು ಸರಾಗವಾಗಿ ಸಾಗುತ್ತಿತ್ತು. ಹಿತವಾಗಿ ಬೀಸುತ್ತಿದ್ದ ತಂಗಾಳಿಗೆ ಮುಖವೊಡ್ಡಿ ಸ್ವಾತಂತ್ರ್ಯದ ಗಾಳಿಯನ್ನುಂಡ ನಾನು ತೂಕಡಿಸತೊಡಗಿದೆ.

ಗಕ್ಕನೆ ಬ್ರೇಕು ಹಾಕಿದಾಗ ನನಗೆ ಎಚ್ಚರವಾಯಿತು. ಡ್ರೈವರ್ ವ್ಯಾನಿನಿಂದ ಹೊರಗೆ ತಲೆ ನೀಡಿ, ಚಕ್ರಗಳಿಗೆ ಸಿಕ್ಕಿ ಹಾಕಿಕೊಳ್ಳುವುದನ್ನು ಸ್ವಲ್ಪದರಲ್ಲಿ ತಪ್ಪಿಸಿಕೊಂಡಿದ್ದ ಮುದುಕನಿಗೆ

'ಮನೇಲಿ ಹೇಳಿ ಬಂದಿದ್ದೆಯೇನಣ್ಣಾ?' ಎಂದು ಕೂಗಿದ. ಮುದುಕ ನಕ್ಕು ಜನಗಳ ಗುಂಪಿನಲ್ಲಿ ಮರೆಯಾದ ಬೆಂಗಳೂರು! ಬೆಂಗಳೂರನ್ನು ಹಿಂದೆ ನಾನು ನೋಡಿದ್ದೆ.

ನನ್ನ ಬದುಕಿನ ಆಸೆಗಳೆಲ್ಲವೂ ಬೆಂಗಳೂರಿನಲ್ಲಿಯೇ ಹಿಂದೆ ಭಸ್ಮವಾಗಿ ಹೋಗಿದ್ದವು. ಸುಮಾರು ಒಂದು ವರ್ಷದ ಹಿಂದೆ ಈ ಊರಿನಲ್ಲಿಯೇ ರಹಸ್ಯವಾಗಿ ನಡೆದುಹೋದ ಅಚಾತುರ್ಯ, ದುಡುಕಿನಿಂದಾಗಿ ನಾನು ಮತ್ತೊಮ್ಮೆ ಸರಕಾರದ ಅತಿಥಿಯಾಗಿ ಇಲ್ಲಿಗೇ ಬರುವಂತಾಗಿತ್ತು.

ಬಾಳಿನ ಮೇಲೆ ನನಗೆಂತಹ ವ್ಯಾಮೋಹವಿತ್ತು! ನನ್ನದೇ ಒಂದು ಸಂಸಾರ. ನಾನದರ ಒಡತಿ. ಹೊರಗೆ ದುಡಿದು ಸಂಪಾದಿಸಿ ಬರುವ ಗಂಡ, ಎರಡು ಪುಟ್ಟ ಮಕ್ಕಳು. ಅವರನ್ನು ಸಂತುಷ್ಟಗೊಳಿಸುವುದರಲ್ಲಿ ನಾನು ತೃಪ್ತಳು. ನಾನು ಕಟ್ಟಿದ್ದ ಈ ಸುಂದರ ಕನಸು ಒಡೆದು ಹೋಯಿತು.

ಹೆದರಿಕೆಯಿಂದ ಸುತ್ತಲೂ ನೋಡುತ್ತಾ, ಹಿಂಜರಿಯುತ್ತಾ ಅವನಿಗೆ ನನ್ನನ್ನು ಒಪ್ಪಿಸಿಕೊಂಡು ದಿನ—ಮನೆಯವರನ್ನು ಎದುರಿಸಲು ಹೆದರಿ ಓಡಿ ಹೋದ ದಿನ—ಜನಗಳಿಗೆ ಹೆದರಿ ಕರುಳಿನ ಚೂರನ್ನು ಬಲಿಗೊಟ್ಟ ದಿನ - ಇದೇ ಕೈಗಳಿಂದ............

'ಏನಾಗಿದೆ ಕೈಯಿ?' ವಾರ್ಡರ್ ನನ್ನನ್ನು ತಿವಿದು ಕೇಳಿದಳು.

ನಾನು ಬೆಚ್ಚಿ ಎಚ್ಚರಗೊಂಡು 'ಏನು?' ಎಂದೆ.

'ನಿನ್ನ ಕೈಯನ್ನು ಪರೀಕ್ಷೆಮಾಡಿ ನೋಡಿಕೋತಾ ಇದ್ದೆ. ಅದಕ್ಕೆ ಕೈಗೆ ಏನಾಗಿದೇಂತ ಕೇಳಿದೆ.'

ನಾನು ಉತ್ತರ ಕೊಡಲಿಲ್ಲ.

ಮಣಿ ಇರುವ ಊರು—ಮಣಿಯ ಗಂಡ ಮೂರ್ತಿ, ಅವಳ ಮಗ ಈಗ ಹೇಗಿದ್ದಾರೋ? ಮಣಿಯಂತೂ ಮಗನ ವಿಷಯಕ್ಕೆ ಯಾರನ್ನೂ ನಂಬುತ್ತಿರಲಿಲ್ಲ—ಕೊನೆಗೆ ಸುಬ್ಬಿ ಮಗುವಿಗೆ ಹಾಲು ಕುಡಿಸಿದರೂ

ಅವಳಿಗೆ ಅನುಮಾನ—ಮಗೂಗೆ ಹೊಟ್ಟೆ ತುಂಬಿದೆಯೋ ಇಲ್ಲವ್ರೋಂತ.

ಬೀದಿಯ ಕಡೆ ನೋಡುತ್ತಿದ್ದ ನಾನು ಒಳಗೆ ತಿರುಗಿದೆ—ಆಕಸ್ಮಾತ್ ಮಣಿ, ಮೂರ್ತಿ ಯಾರಾದರೂ ಸಿಕ್ಕಿದರೆ ಅವರು ನನ್ನನ್ನು ಗುರ್ತಿಸ ಬಾರದಷ್ಟೆ.

ದೊಡ್ಡ ಗೋಡೆಗಳನ್ನು ನೋಡಿ ಅದೇ ಜೈಲಿರಬೇಕೆಂದು ನಾನು ಭಾವಿಸಿದೆ. ನನ್ನ ಊಹೆ ನಿಜವಾಗಿತ್ತು. ವ್ಯಾನು ಜೈಲಿನ ಕಾಂಪೌಂಡನ್ನು ಪ್ರವೇಶಿಸಿ ನಿಂತುಕೊಂಡಿತು. ಹದಿನೈದು ನಿಮಿಷದೊಳಗೆ ನಮಗೆ ಒಳಗೆ ಹೋಗಲು ಅನುಮತಿ ಸಿಕ್ಕಿತು.

ಜೈಲರಿನ ಅಪ್ಪಣೆಯ ನಂತರ ಮಹಿಳಾ ಕೈದಿಗಳನ್ನಿರಿಸಿದ್ದ ವಿಭಾಗಕ್ಕೆ ನನ್ನನ್ನು ಕರೆದೊಯ್ದರು. ವಾಚ್ ಟವರಿನ ಮೇಲೆ ಬಂದೂಕ ಹಿಡಿದಿದ್ದ ಪೋಲಿಸಿನವನೊಬ್ಬ ಗಸ್ತು ತಿರುಗುತ್ತಿದ್ದ. ಇಬ್ಬರು ಕೈದಿಗಳು ಬಲವಾದ ಬೊಂಬಿಗೆ ಹಗ್ಗ ಕಟ್ಟಿ, ಬಿಂದಿಗೆಯಲ್ಲಿ ನೀರು ಸಾಗಿಸಿಕೊಂಡು ಹೋಗಿ ಗಿಡಗಳಿಗೆ ಸುರಿಯುತ್ತಿದ್ದರು. ಜೈಲಿನ ಗೋಡೆಯ ಪಕ್ಕದಲ್ಲಿ ಉದ್ದಕ್ಕೂ ಬೀದಿಯ ದೀಪದ ಕಂಬಗಳಂತಹ ವಿದ್ಯುತ್‌ದೀಪದ ಕಂಬಗಳಿದ್ದವು.

ಮುಚ್ಚಿದ್ದ ಬಾಗಿಲನ್ನು ತಟ್ಟಿದ ಕೂಡಲೇ ಒಳಗಿನಿಂದ ಸಣ್ಣ ತಂತಿಯ ಕಿಂಡಿಯ ಮೂಲಕ ಬಾಗಿಲು ತಟ್ಟಿದವರಾರೆಂದು ಪರೀಕ್ಷಿಸಲ್ಪಟ್ಟು, ಅನಂತರ ಬಾಗಿಲು ತೆರೆಯಲ್ಪಟ್ಟಿತು.

ನಾನು ಒಳಗೆ ಹೋದೆ.

ಸುಮಾರು ಐವತ್ತು ಜನ ಮಹಿಳಾ ಕೈದಿಗಳು ಕುತೂಹಲದಿಂದ ನನ್ನಕಡೆ ನೋಡುತ್ತಿದ್ದರು. ಅವರಲ್ಲಿ ಐದು ವರ್ಷದೊಳಗಿನ ಆರು ಹೆಣ್ಣು ಮಕ್ಕಳಿದ್ದವು. ಮಾತು ಕೂಡ ಸರಿಯಾಗಿ ಆಡಲು ಬಾರದ ಆ ಚಿಕ್ಕ ಹುಡುಗಿಯರನ್ನು ನೋಡಿದಾಗ ನನಗೆ ಆಶ್ಚರ್ಯವಾಯಿತು. ನನ್ನೆದುರಿಗೆ ಇದ್ದ ಕೈದಿಯೊಬ್ಬಳನ್ನು ಕೇಳಿದೆ.

'ಇಷ್ಟು ಚಿಕ್ಕಮಕ್ಕಳೂ ಕೈದಿಗಳೇನು?'

'ಇಲ್ಲ. ಪಾಪಾ ದೇವೀರಿ ಮಗಳು ಚೂಡ ಎಲ್ಲಮ್ಮನ ಮಗಳು. ಐದು ವರ್ಷದೊಳಗಿನ ಮಕ್ಕಳು ನಮಗಿದ್ದು, ನಮ್ಮನ್ನು ಬಿಟ್ಟು ಅವು ಗೋಳನ್ನು ನೋಡಿಕೊಳ್ಳೋರು ಯಾರೂ ಇಲ್ಲದಿದ್ದರೆ, ನಾವು ಸಿಕ್ಷೆ ಅನು

ಭವಿಸುವವರೆಗೆ ಅವುಗಳೂ ಇಲ್ಲೇ ಇರಬಹುದು. '

ಏನನ್ಯಾಯ ! ಬೆಳೆಯುವ ಮಕ್ಕಳಿಗೆ ಎಂತಹ ವಾತಾವರಣ ! ಚೂಡ ಅಲ್ಲಿದ್ದ ಮಕ್ಕಳಲ್ಲಿ ಎಲ್ಲರಿಗಿಂತಲೂ ಚಿಕ್ಕವಳು. ಅವಳಿಗೆ ಸರಿಯಾಗಿ ಮಾತನಾಡಲು ಸಹ ಬರುತ್ತಿರಲಿಲ್ಲ. ಕೋಲಾರದ ಬಂಗಾರದ ಗಣಿಯಲ್ಲಿ ಕೆಲಸ ಮಾಡುತ್ತಿದ್ದ ಎಲ್ಲಮ್ಮ ಅಕ್ರಮವಾಗಿ ಹೆಂಡ ಹೊಂದಿದ್ದಳೆಂಬ ಅಪಾದನೆಗೆ ಗುರಿಯಾಗಿ ಶಿಕ್ಷೆಗೆ ಗುರಿಯಾಗಿದ್ದಳು. ಅಲ್ಲಿದ್ದ ಐವತ್ತೆರಡು ಜನ ಕೈದಿಗಳಲ್ಲಿ ಸುಮಾರು ಅರ್ಧಕ್ಕಿಂತಲೂ ಹೆಚ್ಚು ಜನ, ಪಾನನಿರೋಧ ಜಾರಿಯಲ್ಲಿದ್ದ ಪ್ರದೇಶದಲ್ಲಿ ಕಳ್ಳು ಹೊಂದಿದ್ದರೆಂಬ ಆರೋಪಣೆಯಿಂದಾಗಿ ಶಿಕ್ಷೆ ಹೊಂದಿದ್ದರು. ಎಂಟು ಜನ ಶಿಶುಹತ್ಯೆಯಿಂದಾಗಿ ಶಿಕ್ಷೆ ಅನುಭವಿಸುತ್ತಿದ್ದರು. ಒಬ್ಬಳು ಗಂಡನನ್ನು ಕೊಂದ ತಪ್ಪಿಗಾಗಿ ಆಜೀವ ಕಾರಾಗೃಹವಾಸವನ್ನು ಪಡೆದಿದ್ದಳು. ಉಳಿದವರು ಅನೀತಿ ವ್ಯಾಪಾರ, ಕಳ್ಳತನ, ಮೋಸ ಇವುಗಳಿಂದಾಗಿ ಜೈಲಿನ ಹಕ್ಕಿಗಳಾಗಿದ್ದರು.

ಚೂಡಳ ತಾಯಿ ಎಲ್ಲಮ್ಮ ತನ್ನ ಹರಕು ಕನ್ನಡದಲ್ಲಿ ಆಗಾಗ್ಗೆ ನಡೆಯುತ್ತಿದ್ದ ಅನ್ಯಾಯ, ಕಾರ್ಮಿಕರಿಗಿರುತ್ತಿದ್ದ ಕಷ್ಟ, ಅವರು ಅನುಭವಿಸುತ್ತಿದ್ದ ರೋಗಗಳು, ಬಡತನ ಇವುಗಳನ್ನು ನನಗೆ ವರ್ಣಿಸಿ ಹೇಳುತ್ತಿದ್ದಳು. ಚೂಡಳನ್ನು ಕಂಡರೆ ನನಗೆ ತುಂಬಾ ಪ್ರೀತಿಯಿತ್ತು. ತನ್ನ ಮಗಳಲ್ಲಿ ನಾನು ತೋರುತ್ತಿದ್ದ ಅತಿ ಮಮತೆ, ವಿಶ್ವಾಸದಿಂದಾಗಿ ಎಲ್ಲಮ್ಮ ನನ್ನನ್ನು ಸ್ನೇಹಭಾವದಿಂದ ಕಾಣುತ್ತಿದ್ದಳು.

' ಎಲ್ಲಮ್ಮ, ನೀನು ಯಾಕೆ ಅಕ್ರಮವಾಗಿ ಹೆಂಡ ತಯಾರುಮಾಡಿ ಕುಡೀತಿದ್ದೆ ? ಹೆಂಡ ಅಷ್ಟೊಂದು ರುಚಿಯಾಗಿರತ್ತಾ ? ಜೈಲಿಗೆ ಹೋಗ್ತೀನಿ ಎನ್ನೋ ಭಯ ಇದ್ದರೂ ಕದ್ದಾದರೂ........'

' ಹೆಂಡದ ರುಚಿ ನೀನು ಕಾಣೆ. ಅದ್ನ ಕುಡಿದು ಅಮಲೇರಿದಾಗ ಆ ಸುಖ........ಹೆಂಗೆ ಹೇಳಲಿ........' ಎಲ್ಲಮ್ಮನ ಬಾಯಲ್ಲಿ ನೀರೂರಿತು.

' ಹುಳಿಯಾಗಿರತ್ತೆ ಅಂತಾರೆ ಹೌದಾ ?'

' ಬಾಯಲ್ಲಿ ಹೇಳಿ ಪ್ರಯೋಜನವಿಲ್ಲ. ನೀನೇ ಕುಡಿದು ನೋಡು.'

'ಅಲ್ಲಾ ಈ ಸರಕಾರ ಮಾಡೋದು ನ್ಯಾಯವಾ ಹೇಳು ? ನಾನು ಎಂಟಾಣೆ ಹುಳಿ ಹೆಂಡಾನ ಕುಡಿದು ಬರೋದು ತಪ್ಪಂತೆ. ಗಣೀಲಿರೋ

ದೊಡ್ಡ ಆಫೀಸರುಗಳು ರೂಪಾಯಿಗಟ್ಟಲೆ ಖರ್ಚು ಮಾಡಿ ಇಲಾಯಿತಿ ಯೆಂಡಾನ ಕುಡಿದು ಮನಗ್ತಾರಲ್ಲಾ ಅದು ಸರಿಯೋ ? '

ನಮ್ಮ ಮಾತುಗಳನ್ನು ಕೇಳುತ್ತಿದ್ದ ಬಸವಿ ನೆಟಿಕೆ ಮುರಿದಳು.

' ದೊಡ್ಡ ಮನುಸರು ಮಾಡೋದೆಲ್ಲಾ ನ್ಯಾಯ. ಸೂಳೆಗಾರಿಕೆ ಮಾಡೋದು ತೆಪ್ಪಂತೆ ಅನ್ಯಾಯವಂತೆ. ಹೊಟ್ಟೆಪಾಡಿಗೆ ನಾನು ಸೂಳೆ ಗಾರಿಕೆ ಮಾಡ್ತೀನಿ. ನನ್ನ ಕಸುಬೇ ಅದು. ಅವೊತ್ತು ಥೇಟರಿನ ತಾವು ಅದ್ಯಾವೋನೋ ಸಿ.ಐ.ಡಿ. ಅಂತೆ–ನನ್ನ ಗಾಚಾರಕ್ಕೆ ನಾನು ತಿಳೀದೆ ಅವನ್ನೇ ಎಂಟಾಣೆ ಕೊಡಯ್ಯ ಸಾಕು ಎನ್ನಬೇಕಾ ? ಅವನು ನನ್ನ ಇಡಿದು ಸಜಾ ಹಾಕಿಸಿದ. ಈ ಊರಿನಲ್ಲಿ ಎಷ್ಟು ದೊಡ್ಡ ಮನುಷ್ಯರವ್ರೆ. ಅವರ ಎಂಡಿರು, ಮಕ್ಕಳು, ಸೊಸೇರು ಹಾದರ ಮಾಡೋದು ನಾನೇ ನೋ ಡಿದೀನಿ. ನಂದು ಪುಟ್ಟಂಗಡಿ, ಅವರದ್ದು ದೊಡ್ಡಂಗಡಿ. ನಂದು ಎಂಟಾಣೆ ವ್ಯಾಪಾರ. ಅವರದು ಸಾವಿರಗಟ್ಲೆ ವ್ಯಾಪಾರ. ಅಲ್ಲೊಬ್ಬಳು ರಾಣಿ ಇದಾಳೆ. ಮನೆ ಬಾಡಿಗೆ, ಜವಳಿ ವ್ಯಾಪಾರದಿಂದ್ಲೆ ಗಂಡನಿಗೆ ಹತ್ತುಸಾವಿರ ರೂಪಾಯಿ ಬರ್ತದೆ. ಅಂಥಾದ್ರಲ್ಲಿ ಕಾರಿನಲ್ಲಿ ಕೂತ್ಕೊಂಡು, ಬಣ್ಣ ಬಳ್ಕೊಂಡು, ಇಂಗ್ಲೀಸಿನಲ್ಲಿ ಮಾತಾಡಿಕೊಂಡು ' ಹಾದರ ಮಾಡೋದು ತಪ್ಪು ' ಅಂತ ಬಾಸಣ ಮಾಡಿ ಕಾನೂನು ಮಾಡಿದ್ದಾನಲ್ಲಾ ಆ ಹಜಾಮ್ನ ಅವನ ಜೊತೇನೆ ತಿರಗ್ತಾಳೆ. ಅವಳಿಗೇನು ಹೊಟ್ಟೆಗೆ ಕಮ್ಮಿಯಾ ?' ಬಸವಿ ಯ ಭಾಷಣ ಮುಂದುವರಿಯುತ್ತಲೇ ಇತ್ತು.

ನಾನು ನಡುವೆಯೇ ಬಾಯಿ ಹಾಕಿ ಕೇಳಿದೆ ' ಕೋರ್ಟಿನಲ್ಲಿ ನೀನು ಹಾಗೇ ಹೇಳಬೇಕಾಗಿತ್ತು. ಆ ಹಜಾಮ, ಹಾದರಗಿತ್ತಿ ಹೆಸರು ಹೇಳಿ ಅವಮಾನ ಮಾಡಿ ಬಿಡಬೇಕಾಗಿತ್ತು. '

'ನಾನು ಬುಟ್ಟೇನಾ ? ಜಜ್ಜಿಗೋಳನ್ನ ಕೇಳೇಬುಟ್ಟೆ ' ಇದು ನ್ಯಾಯವಾ ಸಾಮಿ— ಅವಳು, ಅವನು ಹಂಗೆ ಕಾರಿನಲ್ಲಿ ತಿರುಗಿ ಮಹಲು ಗಳಲ್ಲಿ ಹಾದರ ಮಾಡೋದು ಸರಿ. ನಂದು ತೆಪ್ಪಾ ಎಂದು ಕೇಳಿದೆ.'

' ಅದಕ್ಕೆ ಏನೆಂದರು ?' ನಾನು ಕುತೂಹಲದಿಂದ ಕೇಳಿದೆ.

' ಎಲ್ಲರೂ ಮುಸಿ ಮುಸಿ ನಕ್ಕರು. ಆದರೆ ಬಾಯಲ್ಲಿ ಮಾತಾಡೋಕೆ ಯಾರಿಗೂ ಧೈರ್ಯವಿಲ್ಲ. ಅವಳಿಗೆ ಹಣವಿದೆ. ಅವನಿಗೆ ಅಧಿಕಾರವಿದೆ.

ನನಗೆ ಯಾವುದೂ ಇಲ್ಲ. ನನಗೆ ಮದುವೆಯೂ ಆಗಿಲ್ಲ, ಗಂಡನೂ ಇಲ್ಲ. ಏನಾದರೂ ಹೆಚ್ಚು ಕಮ್ಮಿ ಆದರೆ ನಾನೇ ಅನುಭವಿಸಬೇಕು. ಅವಳಿಗೆ ಯಾರಿಂದ ಮಗುವಾದರೂ ಕೈ ತೋರಿಸೋಕೆ ಒಬ್ಬ ಗಂಡ ಇದಾನೆ.'

'ಹೆಂಡತಿ ಆಟ ನೋಡಿಯೂ ಅವನು ಸುಮ್ಮನೆ ಇದಾನೆಯೇ ?'

'ಬರೀ ಬಾಯಿ ಮುಚ್ಚಿಕೊಂಡಿರೋದು ಮಾತ್ರವಲ್ಲ. ಕಾರಿನಲ್ಲಿ ಮುಂದುಗಡೆ ಸೀಟಿನಾಗೆ ತಾನು ಕುಳಿತುಕೊಂಡು ಹಿಂದ್ಗಡೆ ಯೆಂಡ್ತೀನೂ ಮಿಂಡನ್ನೂ ಒಟ್ಟಿಗೆ ಕುಂಡ್ರಿಸಿ ಕಾರು ಬುಟ್ಕೊಂಡು, ಥೇಟರಿನ ಶಾವು ಜವಾನನಂಗೆ ತಾನಿಳಿದು ಅವರಿಗೆ ಕಾರಿನ ಬಾಕ್ಲು ತಗೀತಾನೆ. ಯಾರಾದರೂ ಕೇಳಿದರೆ ಇಂಗ್ಲೀಷಿನಲ್ಲಿ ಪ್ರೆಂಡ್ಸು, ಪಾರ್ಟಿ, ಸಂಗೀತ ಕಛೇರಿ ಅಂತಾರೆ. ನಾವು ಮಿಂಡ, ಹಾದರ, ತಾಪೆ ಅನ್ತೀವಿ.'

ಬಸವಿಯ ಮಾತು ಕೇಳಿ ನನಗೆ ನಗು ಬಂತು. ನಿಜವಾಗಿಯೂ ಅವಳು ಸತ್ಯವನ್ನು ನುಡಿದಿದ್ದಳು. ಅವಳು ಹೇಳುತ್ತಿರುವುದು ಸತ್ಯವೆಂದು ಎಲ್ಲರಿಗೂ ತಿಳಿದಿತ್ತು. ಆದರೆ ಆ ರಾಣಿಗೆ ಹಣವಿತ್ತು. ಅವನಿಗೆ ಅಧಿಕಾರವಿತ್ತು. ಅವರನ್ನು ಪ್ರಶ್ನಿಸುವ ಧೈರ್ಯ ಯಾರಿಗೂ ಇರಲಿಲ್ಲ.

ಜೈಲಿನಲ್ಲಿರುವವರೆಲ್ಲಾ ಅಪರಾಧಿಗಳೆಂದು ನಾನು ಮೊದಲು ತಿಳಿದಿದ್ದೆ. ಆದರೆ ಅಲ್ಲಿಯ ಜನರೊಡನೆ ಬೆರೆತು ಅವರ ಜೀವನ, ಅನುಭವಗಳನ್ನು ಆಳವಾಗಿ ಹೊಕ್ಕು ನೋಡಿದ ಮೇಲೆ ನನಗೆ ಅವರು ದುರದೃಷ್ಟಶಾಲಿಗಳೆಂದು ತೋರಿತು.

ಲಂಚ ತೆಗೆದುಕೊಂಡ ಆರೋಪಣೆಯಿಂದಾಗಿ ಹಲವರಿಗೆ ಶಿಕ್ಷೆ. ಸಾಮಾನ್ಯ ದರ್ಜೆಯ ಕಾನ್‌ಸ್ಟೇಬಲನೊಬ್ಬ ದೀಪವಿಲ್ಲದೆ ಸೈಕಲ್ ನಡೆಸುತ್ತಿದ್ದ ವಿದ್ಯಾರ್ಥಿಯೊಬ್ಬನಿಂದ ಎಂಟಾಣೆ ಲಂಚ ಪಡೆದನೆಂದು ನ್ಯಾಯಾಲಯ ಅವನಿಗೆ ಹದಿನೈದು ದಿನ ಸಜಾ ಹಾಕಿತ್ತು. ಆದರೆ ದೇಶದ ದೊಡ್ಡ ಅಧಿಕಾರಿ ಸಾವಿರಾರು ರೂಪಾಯಿ ಲಂಚ ಪಡೆದಾಗ ಅವನನ್ನು ಶಿಕ್ಷಿಸುವವರು ಯಾರೂ ಇಲ್ಲ. ವಿದ್ಯಾರ್ಥಿಯೊಬ್ಬ ಪರೀಕ್ಷೆಯಲ್ಲಿ ಕಾಪಿ ಮಾಡಲೆತ್ನಿಸಿ ಸಿಕ್ಕಿಹಾಕಿಕೊಂಡು ಪರೀಕ್ಷಕರಿಂದ ಬೈಗಳ ಪಡೆದಾಗ, ಕುಪಿತನಾಗಿ ಅವರ ಮೇಲೆ ಕೈಮಾಡಿದನೆಂಬ ತಪ್ಪಿಗಾಗಿ ನ್ಯಾಯಾಧೀಶರು

ಅವನಿಗೆ ಐವತ್ತು ರೂಪಾಯಿ ಜುಲ್ಮಾನೆ ವಿಧಿಸಿ, ಮೂರು ವರ್ಷ ಯಾವ ವಿಶ್ವವಿದ್ಯಾಲಯುಕ್ಕೂ ಸೇರುವ ಹಾಗಿಲ್ಲವೆಂದು ಪ್ರಕಟಿಸಿದ್ದರು. ವಿದ್ಯಾರ್ಥಿಗಳಿಂದ ನಾನೂರು, ಐನೂರು ರೂಪಾಯಿಗಳು ಲಂಚ ಪಡೆದು ಅವರಿಗೆ ಪಾಸಿನ ಅಭಯ ನೀಡುವ ಪ್ರೊಫೆಸರುಗಳನ್ನು ಶಿಕ್ಷಿಸುವವರು ಯಾರೂ ಇರಲಿಲ್ಲ.

ಸಣ್ಣ ಮೀನುಗಳನ್ನು ದೊಡ್ಡ ಮೀನುಗಳು ತಿಂದು ಜೀವಿಸುತ್ತವೆ. ಆದರೆ ದೊಡ್ಡ ಮೀನಿಗೆ ಯಾವ ರೀತಿಯ ಭಯ, ಅಂಕೆಯೂ ಇಲ್ಲ.

ಜೈಲಿನಿಂದ ಹೊರಗೆ ಅಧಿಕಾರದ ಸೋಗಿನಲ್ಲಿ, ಹಣದ ಮುಸುಕಿನಲ್ಲಿ ದ್ರೋಹ, ವಂಚನೆ, ಲಂಚ, ವ್ಯಭಿಚಾರ, ಕೊಲೆ ಎಷ್ಟು ನಡೆಯುತ್ತಿದೆಯೋ ಅದು ಆ ಸರ್ವಾಂತರ್ಯಾಮಿಗೆ ಗೊತ್ತು.

ಸರ್ವವ್ಯಾಪಿ!

ತಿರಸ್ಕಾರದ್ದ ನಗೆಯೊಂದು ನನ್ನಲ್ಲಿ ಮೂಡಿತು.

ಕೈಲಿ ಹಿಡಿದಿದ ಕಾಗದದ ಚೂರೊಂದನ್ನು ಭಗವಂತನೆಂದೇ ಭಾವಿಸಿ ಚಿಂದಿ ಚಿಂದಿ ಮಾಡಿ ಎಸೆದೆ. ಮಹಿಳಾ ಕೈದಿಗಳಿದ್ದ ಆವರಣದಲ್ಲಿ ದೇವಸ್ಥಾನ, ಮಸೀದಿ, ಚರ್ಚಿದ್ದವು. ಆದರೆ ನಾನು ಮಾತ್ರ ಎಂದೂ ಎಲ್ಲಿಗೂ ಹೋಗುತ್ತಿರಲಿಲ್ಲ.

ಎಲ್ಲಮ್ಮನಿಗೂ, ನನಗೂ ದೇವರ ವಿಷಯವಾಗಿ ಆಗಾಗ್ಗೆ ಜಗಳಗಳಾಗುತ್ತಿದ್ದವು. ಚಿಕ್ಕ ವಯಸಿನಲ್ಲಿ ದೇವರಲ್ಲಿ ಅಪಾರ ನಂಬಿಕೆ, ವಿಶ್ವಾಸಗಳಿದ್ದ ನಾನು ಜೀವನದಲ್ಲಿ ದೊರೆತ ಕೆಲವು ಕಟು ಅನುಭವ, ಪೆಟ್ಟುಗಳಿಂದಾಗಿ ಕ್ರಮೇಣ ನಂಬಿಕೆಯನ್ನು ಕಳೆದುಕೊಂಡು ನಾಸ್ತಿಕಳಾಗಿದ್ದೆ. ಅದರಲ್ಲಿಯೂ ಜೈಲಿನಲ್ಲಿ ನನ್ನ ಗೆಳತಿಯರು ಅವರ ಅನುಭವ, ಕಷ್ಟ, ನಷ್ಟಗಳನ್ನು ನನ್ನೆದುರಿಗೆ ತೋಡಿಕೊಂಡಾಗಲಂತೂ ನನಗೆ ದೇವರಲ್ಲಿ ದ್ವೇಷವೇ ಉಂಟಾಗಿತ್ತು.

ಒಂದು ಶುಕ್ರವಾರ ಎಲ್ಲಮ್ಮ ನನ್ನನ್ನು ದೇವಸ್ಥಾನಕ್ಕೆ ಹೋಗಿ ಬರೋಣವೆಂದು ಕರೆದಳು.

‘ ದೇವಸ್ಥಾನ ! ನೀನು ಹೋಗಿ ಬಾ.’

‘ ನೀನು ? ’

' ನಾನು ಬರೋದಿಲ್ಲ. ನಂಗೆ ನಂಬಿಕೆ ಇಲ್ಲ.'

' ಹಾಗೆ ಮಾತಾಡಬೇಡ. ದೇವರು ಮುನಿದಾನು.'

' ಮುನಿದು ನನ್ನ ಏನು ಮಾಡ್ತಾನೆ ? ಈಗ ಆಗಿರೋದಕ್ಕಿಂತಲೂ ಹೆಚ್ಚಿಗೆ ಏನು ತಾನೆ ಅವನು ಮಾಡಬಲ್ಲ ? '

' ನೀನು ತಪ್ಪಮಾಡಿದೆ. ಅದಕ್ಕೆ ಸಿಕ್ಸೆ........'

' ನಾನೇನು ತಪ್ಪು ಮಾಡಿದೆ ? '

' ಮಗೂನ ಕೊಂದಿದ್ದು ತಪ್ಪಲ್ಲವೋ ? '

' ಹೌದು. ಆದರೆ ನನ್ನ ಈ ಸ್ಥಿತಿಗೆ ತಂದವನು ಸುಖವಾಗಿರುವಾಗ ನಾನೊಬ್ಬಳೇ ಈ ಶಿಕ್ಷೆ ಅನುಭವಿಸಬೇಕೆ ? '

ಎಲ್ಲಮ್ಮ ಬಹಳ ಹೊತ್ತು ನನಗೆ ಬುದ್ಧಿವಾದ ಹೇಳಿದಳು.

' ನಂಗೆ ತಲೆ ನೋಯ್ತಿದೆ' ಎಂದು ನಾನು ಆ ಜಾಗದಿಂದ ಎದ್ದು ಹೋದೆ.

ತನ್ನ ಶಿಕ್ಷೆಯ ಅವಧಿ ಮುಗಿದ ಕೂಡಲೇ ಎಲ್ಲಮ್ಮ ಬಿಡುಗಡೆ ಹೊಂದಿ ಚೂಡಳೊಡನೆ ಹೊರಟುಹೋದಳು.

ಯಾವ ಬಗೆಯ ಏರಿಳಿತವೂ ಇಲ್ಲದೆ ನೀರಸವಾದ ಜೈಲು ಜೀವನ ಸಾಗುತ್ತಿತ್ತು. ಹಳಬರಲ್ಲಿ ಕೆಲವರು ಹೊರಟು ಹೋಗಿದ್ದರು. ಹೊಸ ಬರು ಅನೇಕರು ಬಂದು ಸೇರಿದ್ದರು.

ಮೊದಲನೆಯ ವರ್ಷ ನಾನು ನನ್ನ ಸರ್ವನಾಶಕ್ಕೆ ಕಾರಣನಾದವ ನನ್ನು ನೂರಾರು ಬಾರಿ ಶಪಿಸುತ್ತಾ ಕಾಲ ಕಳೆದಿದ್ದೆ. ನಾವಿಬ್ಬರೂ ಅಪ ರಾಧಿಗಳಾಗಿದ್ದರೂ, ನಾನೊಬ್ಬಳೇ ಶಿಕ್ಷೆ ಅನುಭವಿಸುತ್ತಿರುವೆನೆಂಬುದು ನೆನ ಪಿಗೆ ಬಂದಾಗಲೆಲ್ಲಾ ನನ್ನ ಹೃದಯ ಕುದ್ದು ಹೋಗುತ್ತಿತ್ತು. ' ದೇವರಿಗೆ ಕಣ್ಣಿಲ್ಲ. ದೇವರೇ ಇಲ್ಲ' ಎಂದು ಹಲವಾರು ಬಾರಿ ನಾನು ದೇವರನ್ನು ನಿಂದಿಸಿದ್ದೆ.

ಆಗಾಗ್ಗೆ ಮಗುವಿನ ನೆನಪು ನನ್ನನ್ನು ಕಾಡುತ್ತಿತ್ತು. ಕನಸಿನಲ್ಲಿ ಅದರ ಮುಖ ಬಂದು ನನ್ನನ್ನು ಕ್ರೂರದೃಷ್ಟಿಯಿಂದ ನೋಡಿದಂತಾಗಿ ಬೆಚ್ಚಿ ಏಳುತ್ತಿದ್ದೆ. ಕೆಲವು ಬಾರಿ ನಿದ್ದೆಯಲ್ಲಿ ಮಗುವಿನ ಎಳೆಯ ಕೈಗಳು ನನ್ನ ಕೊರಳನ್ನು ಹಿಸುಕುತ್ತಿರುವಂತೆ ಭಾಸವಾಗಿ, ನನಗೆ ಉಸಿರು ಕಟ್ಟಿ

ದಂತಾಗಿ ಎಚ್ಚರವಾಗುತ್ತಿತ್ತು. ನಿದ್ದೆಯಲ್ಲಿ ಕೆಲವು ಬಾರಿ ನಾನು ಅಳುತ್ತಿರುತ್ತೇನೆಂದೂ, ಮತ್ತೆ ಕೆಲವು ಸಲ ಅಸ್ಪಷ್ಟವಾಗಿ, ಅಸಂಬದ್ಧವಾಗಿ ಮಾತನಾಡುತ್ತೇನೆಂತಲೂ ನನ್ನ ಗೆಳತಿಯರು ಹೇಳುತ್ತಿದ್ದರು.

ಎರಡನೆಯ ವರ್ಷವನ್ನು ನಾನು ಸೇಡು ಹೇಗೆ ತೀರಿಸಿಕೊಳ್ಳಬೇಕೆಂದು ಅಂದಾಜು ಹಾಕುವುದರಲ್ಲಿ ಕಳೆದೆ. ಆದರೆ ನನ್ನ ಈ ಸ್ಥಿತಿಗೆ ಕಾರಣನಾದವನನ್ನು ಎಲ್ಲಿ ಹುಡುಕಲಿ ? ಬೆಂಗಳೂರಿನಂತಹ ಮಹಾ ನಗರದಲ್ಲಿ ಅವನಿರುವುದಾದರೂ ಎಲ್ಲಿ ? ನನಗೆ ಬಿಡುಗಡೆಯಾಗುವವರೆಗೆ ಅವನು ಇಲ್ಲಿಯೇ ಇರುವನೆಂಬ ಖಾತ್ರಿಯಾದರೂ ಏನು ?

ಏನಾದರೂ ಸರಿ. ಅವನನ್ನು ಮಾತ್ರ ಸುಮ್ಮನೆ ಬಿಡಬಾರದು. ಕತ್ತಿಯನ್ನೋ, ಚಾಕುವನ್ನೋ ಸಂಪಾದಿಸಿ ಅವನು ಬರುವ ದಾರಿಯಲ್ಲಿ ಅಡಗಿದ್ದು, ಅವನು ಬಂದಾಗ ಛಂಗನೆ ಮುಂದೆ ಹಾರಿ ತಿವಿಯಬೇಕು. ಅವನನ್ನು ನನ್ನ ಮನಸ್ಸಿನಲ್ಲಿಯೇ ನೂರಾರು ಬಾರಿ ಸಾಯಿಸಿ, ಹಿಂಸಿಸಿ, ನೋಯಿಸಿ ನಾನು ಹಿಗ್ಗಿದ್ದೆ. ಅವನು ಸಾಯುತ್ತಾ ಮಲಗಿರುವಂತೆಯೂ, ಕೊನೆಯ ಗಳಿಗೆಯಲ್ಲಿ ನನ್ನ ಕಾಲು ಹಿಡಿದು ಕ್ಷಮಾಪಣೆ ಕೇಳಿದಂತೆಯೂ ಭಾವಿಸಿಕೊಳ್ಳುತ್ತಿದ್ದೆ. ಆಗ ನನಗೆ ಏನೋ ಒಂದು ಬಗೆಯ ತೃಪ್ತಿಯಾಗುತ್ತಿತ್ತು.

ಸೇಡು ತೀರಿಸಿಕೊಳ್ಳುವುದು ಅಸಾಧ್ಯ ಎನಿಸಿದಾಗಲೆಲ್ಲಾ ನನ್ನ ಉತ್ಸಾಹ ಕುಗ್ಗಿ ಹೃದಯ ಭಾರವಾಗುತ್ತಿತ್ತು. ಸೇಡಿನ ನೆನಪು ನನ್ನಲ್ಲಿ ಜಾಗೃತಗೊಂಡಾಗಲೆಲ್ಲಾ ನನಗೆ ಬಿಡುಗಡೆಯಾದರೆ ಸಾಕೆಂದು ಹಂಬಲಿಸುತ್ತಿದ್ದೆ.

ಮೂರನೆಯ ವರ್ಷ ಪ್ರತೀಕಾರದ ಬಿಸಿ ನಿಧಾನವಾಗಿ ಆರತೊಡಗಿತು. ನಾನು ವಿವೇಕ, ಸಂಯಮದಿಂದಿಲ್ಲದೆ ದುಡುಕಿದುದು ನನ್ನ ತಪ್ಪು. ಅದರಲ್ಲಿ ಅವನೂ ಪಾಲುಗಾರ. ನಾನು ಸಹನೆಯಿಂದಿದ್ದಿದ್ದರೆ ಈ ತೊಡಕು ಉಂಟಾಗುತ್ತಿರಲಿಲ್ಲ ಎಂದು ನನಗೆ ತೋರಿತು.

ನನ್ನ ಬದುಕಿಗೊಂದು ರೂಪು ಕೊಡಲು ನನ್ನ ತಾಯಿ ತಂದೆ ಪ್ರಯತ್ನಿಸಿ ವಿಫಲರಾಗಿದ್ದರು. ಮದುವೆಯ ಸಂತೆಯಲ್ಲಿ ಕಪ್ಪು ತೊಗಲಿನ ನನ್ನ ಶರೀರಕ್ಕೆ ಬೆಲೆ ಕಟ್ಟುವವರು ಯಾರೂ ಇರಲಿಲ್ಲ. ನನ್ನ

ಆತುರದ ಕಣ್ಣುಗಳಿಗೆ ಕಾವ್ಯೆಯೇ ಪ್ರೇಮಿಯಾಗಿ ಕಂಡಿದ್ದ. ನನ್ನ ಬಾಳನ್ನು ನಾನೇ ರೂಪಿಸಿಕೊಳ್ಳಲು ಅಳುಕುತ್ತಾ ನಾನೊಂದು ಹೆಜ್ಜೆಯಿಟ್ಟು ತಪ್ಪಿ ಎಡವಿ ಮುಗ್ಗರಿಸಿ ಎಚ್ಚರಗೊಂಡಾಗ, ನನ್ನ ಸುತ್ತಲೂ ಜೈಲಿನ ಬಿಗಿಯಾದ ಗೋಡೆಗಳಿದ್ದವು. ಈ ಗೂಡಿನೊಳಗೆ ನನ್ನನ್ನು ತಳ್ಳಲು ಬಹುಮಟ್ಟಿಗೆ ಕಾರಣನಾದವನು ಕಬ್ಬಿಣದ ಸರಳುಗಳಾಚೆ ಸ್ವತಂತ್ರನಾಗಿ ಓಡಾಡುತ್ತಿದ್ದ.

ನಾಲ್ಕನೆಯ ವರ್ಷ ನಾನೊಂದು ಯಂತ್ರದಂತೆ ಜೀವಿಸುತ್ತಿದ್ದೆ. ಯಾರೊಡನೆಯೂ ಮಾತುಕತೆ ಸಹ ನನಗೆ ಬೇಕಿರಲಿಲ್ಲ. ಹೊಸದಾಗಿ ಜೈಲಿನ ಸುಖ ಅನುಭವಿಸಲು ಬಂದ ಮಹಿಳೆಯರು ನನ್ನನ್ನು ತಮ್ಮ ಹರಟೆ ಗೆಳೆಯಲು ಪ್ರಯತ್ನಿಸಿ ವಿಫಲರಾಗುತ್ತಿದ್ದರು. ಮಾನವ ಜಾತಿಯಲ್ಲೇ ನನಗೊಂದು ಬಗೆಯ ದ್ವೇಷ, ತಿರಸ್ಕಾರವಿತ್ತು.

ಎರಡು ಮೂರು ಬಾರಿ ನನ್ನನ್ನು ನೋಡಲು ಅಪ್ಪ ಬಂದು ಹೋಗಿದ್ದರು. ಆದರೆ ಒಂದು ಸಲವೂ ನಾನವರನ್ನು ನೋಡಲು ಒಪ್ಪಿಕೊಂಡಿರಲಿಲ್ಲ. ಅವರನ್ನು ನೋಡಲು ನನಗೆ ಹೆದರಿಕೆಯಾಗುತ್ತಿತ್ತು. ಅಲ್ಲದೆ ಅವರಿಂದಲೇ ನಾನು ಈ ಸ್ಥಿತಿಗೆ ಬಂದೆ ಎಂಬ ಕ್ರೋಧವೂ ಹೊಗೆಯಾಡುತ್ತಿತ್ತು.

ನನ್ನ ಮದುವೆ ಮಾಡಲು ಅವರು ಸಾಕಷ್ಟು ಶ್ರಮ ವಹಿಸಲಿಲ್ಲ ವೆಂದೇ ನಾನು ಬಗೆದಿದ್ದೆ. ಬಡವನಾದರೂ ಕುಲೀನನೊಬ್ಬನಿಗೆ ನನ್ನನ್ನು ಧಾರೆಯೆರದಿದ್ದರೆ, ಗಂಜಿಯೋ ಅಂಬಲಿಯೋ ಕುಡಿದುಕೊಂಡು ನಾನು ಮಾನವಾಗಿ ಬದುಕುತ್ತಿದ್ದೆ. ಅಪ್ಪ, ಸುಬ್ಬಿ ಇಬ್ಬರೂ ಸೇರಿ ನನ್ನನ್ನು ಅವನ ದವಡೆಗೊಪ್ಪಿಸಿದರು ಎಂಬುದೇ ನನ್ನ ಸಿದ್ಧಾಂತವಾಗಿತ್ತು. ಕೋಪ, ಹೆದರಿಕೆ ನನ್ನ ಕಾಲುಗಳಿಗೆ ಬೇಡಿಯನ್ನು ಹಾಕಿದ್ದವು.

ಐದನೆಯ ವರ್ಷ ನಾನು ಜೀವಶವವಾಗಿದ್ದೆ. ಬಿಡುಗಡೆಯ ದಿನ ಸಮೀಪಿಸಿತೆಂದು ನನಗೆ ಸ್ವಲ್ಪವೂ ಸಂತೋಷವಿರಲಿಲ್ಲ. ಸಂತೋಷಕ್ಕೆ ಬದಲಾಗಿ ಭೀತಿ, ಕಳವಳ ನನ್ನ ಹೃದಯದಲ್ಲಿ ನುಸುಳತೊಡಗಿದ್ದವು. ಹೊರಗಿನ ಪ್ರಪಂಚಕ್ಕಿಂತಲೂ ಒಂದು ವಿಧದಲ್ಲಿ ಸೆರೆಮನೆಯೇ ನನಗೆ ಕ್ಷೇಮಕರವಾಗಿತ್ತು.

ಸೆರೆಮನೆಯಲ್ಲಿ ಹಸಿವಿನ ಭೂತ ಎಂದೂ ನನ್ನನ್ನು ಬೆನ್ನಟ್ಟಿರಲಿಲ್ಲ. ಹೊಟ್ಟೆಯ ಸಮಸ್ಯೆ ನನ್ನ ಮುಂದೆ ಬೃಹದಾಕಾರ ತಾಳಿ ನಿಂತಿರಲಿಲ್ಲ. ಸಮಾಜ, ಜನ ಏನಂದಾರು ಎಂಬ ಹೆದರಿಕೆಯಿರಲಿಲ್ಲ. ಸಿಕ್ಕಬಹುದಾಗಿದ್ದ ಸ್ವಾತಂತ್ರ್ಯಕ್ಕಿಂತಲೂ ಬಂಧನವೇ ನನಗೆ ಈಗ ಹೆಚ್ಚು ಪ್ರಿಯವಾಗಿ ತೋರಿತು.

ಕಬ್ಬಿಣದ ಕಂಬಿಗಳಾಚೆಯಿದ್ದ ಸುಂದರ ಪ್ರಪಂಚ ನನ್ನನ್ನು ಹೆದರಿಸುತ್ತಿತ್ತು. ತಾಯಿಯ ಸೆರಗಿನ ಹಿಂದೆ ಮುಖವಡಗಿಸಿ ಅವಿತುಕೊಂಡಿರುವ ಮಗುವನ್ನು ಗುಮ್ಮನೊಬ್ಬ 'ಈಚೆಗೆ ಬಾ. ನಿನಗೆ ಮಾಡ್ತೀನಿ' ಎಂದು ಹೆದರಿಸುವಂತೆ, ಹೊರಗಿನ ಪ್ರಪಂಚ ನನ್ನನ್ನು ಹೆದರಿಸುತ್ತಿತ್ತು. ಆಗ ನಾನು ಭೀತಿಯಿಂದ ಮುಖ ಮುಚ್ಚಿಕೊಳ್ಳುತ್ತಿದ್ದೆ.

ಜೈಲಿನ ಅಧಿಕಾರಿಗಳ ಕಾಲಿಗೆ ಬಿದ್ದು ನನ್ನನ್ನು ಸಾಯುವವರೆವಿಗೂ ಇಲ್ಲಿಯೇ ಉಳಿಸಿಕೊಳ್ಳಿರಿ ಎಂದು ಕೇಳಿಕೊಳ್ಳಲೇ ? ಆಗ ನಾನು ಏನು ಮಾಡಲೂ ತೋರದೆ, ಆಮೆ ತನ್ನ ಚಿಪ್ಪಿನಲ್ಲಡಗಿಕೊಳ್ಳುವಂತೆ ಕಂಬಳಿಯೊಳಗೆ ಅಡಗುತ್ತಿದ್ದೆ.

ಬಿಡುಗಡೆಯ ದಿನ ಸಮೀಪಿಸಿದಂತೆ ಹೃದಯದ ಅಧೀರತೆ ಹೆಚ್ಚಾಯಿತು. ನನಗೆ ಬಿಡುಗಡೆಯಾದ ಮೇಲೆ ಏನು ಗತಿ ಎಂಬ ಯೋಚನೆ ಹಗಲಿರುಳೂ ಮನಸ್ಸನ್ನು ಕುಕ್ಕಿ ಹಿಂಸೆ ಮಾಡುತ್ತಿತ್ತು. ಶಿಕ್ಷೆಯ ಅವಧಿ ಮುಗಿದ ಮೇಲೆ ಭಿಕ್ಷೆ ಬೇಡಿ ಜೀವನ ಸಾಗಿಸಬೇಕೆ ? ಹೊಟ್ಟೆ ಹೊರೆಯುವುದಾದರೂ ಹೇಗೆ ? ನಾನು ಈ ಪ್ರಶ್ನೆಯನ್ನು ಹಗಲಿನಲ್ಲಿ ಭಿಕ್ಷುಕಿಯಾಗಿ ರಾತ್ರಿ ಕಳ್ಳಿಯಾಗುತ್ತಿದ್ದ ಪಾಪಮ್ಮನನ್ನು ಕೇಳಿದೆ. ಅವಳು ತನ್ನ ಕಪ್ಪು ಹಲ್ಲುಗಳನ್ನು ಪ್ರದರ್ಶಿಸಿ

'ನೀನೊಂದು ಬೆಪ್ಪು. ಬಿಕ್ಸೆ ಬೇಡೋದ್ರ ಸಮ ಇನ್ನೊಂದಿಲ್ಲ. ಸೂಟು ಪಾಟು ಆಕ್ಕೊಂಡು ರೋಪ್ ಮೇಲೆ ಓಗ್ತಿರೋರ ತಾವು ಓಗಿ ಕೈ ನೀಡಿ 'ಸ್ವಾಮೀ, ಮೂರು ದಿನದಿಂದ ಊಟ ಇಲ್ಲಾ'ಂತ ಗೋಗರ್ಕೊಳ್ಳೋದು. ಅವರು ಇಲ್ಲಾಂದ್ರೆ ಒಂದೇ ಏಟಿಗೆ ನಾವು ಒಂಟುಬಿಡಬಾರದು....'

ನನಗೇಕೋ ಅವಳ ಶಿಕ್ಷಣ ಹಿಡಿಸಲಿಲ್ಲ.

ಭಿಕ್ಷೆ ಯಾಕೆ ಬೇಡಬೇಕು? ತೋಳಿನಲ್ಲಿ ಬಲವಿದೆ, ದುಡಿದು ತಿನ್ನಬಾರದೆ ಎಂಬ ಯೋಚನೆಯೂ ನನ್ನ ಮನಸ್ಸಿನಲ್ಲಿ ಇಣುಕಿ ನೋಡಿತು. ಆದರೂ ಹರೆಯ ಅಳಿಯದ ನಾನು ಒಂಟಿ ಜೀವನವನ್ನು ಧೈರ್ಯವಾಗಿ ನಡೆಸಬಲ್ಲೆನೇ? ನನ್ನಲ್ಲೇ ನನಗೆ ಸಾಕಷ್ಟು ವಿಶ್ವಾಸವಾಗಲಿ, ನಂಬಿಕೆಯಾಗಲಿ ಇರಲಿಲ್ಲ.

ಏಳುಸುತ್ತಿನ ಕೋಟೆಯೊಳಗೆ ಸರ್ಪಗಾವಲಿನಲ್ಲಿದ್ದ ಈ ಬಡ ಉಪಾಧ್ಯಾಯರ ಕುಮಾರಿ, ಕೋಟೆಗಳನ್ನು ದಾಟಿ ಕಾವಲುಗಾರರ ಕಣ್ಣು ತಪ್ಪಿಸಿ, ಮೋಸಗಾರನೊಬ್ಬನ ವಶವಾಗಿದ್ದಳು. ಇನ್ನು ಈಗ ಬಟ್ಟೆ ಬಯಲಿನಲ್ಲಿ ಯಾವ ಕಾವಲು ಇಲ್ಲದೆ ಅವಳು ಏಕಾಂಗಿಯಾಗಿ ನಿಲ್ಲಲು ಸಾಧ್ಯವೇ?

ಪಂಜರವೊಂದರಲ್ಲಿ ಬಂಧಿತವಾಗಿದ್ದ ಗಿಣಿಯೇ ಹಾರಿಹೋಗಿ ರೆಕ್ಕೆ ಪುಕ್ಕ ತರಿಸಿಕೊಂಡು, ಎದೆಗೊಂದು ಬಾಣ ನಾಟಿಸಿಕೊಂಡು ಮತ್ತೆ ಬಂಧನಕ್ಕೊಳಗಾಯಿತು. ನಾನೊಬ್ಬಳೇ ಹೇಗಿರಲಿ? ನನ್ನ ಜೀವನೋಪಾಯಕ್ಕೇನು ಮಾಡಲಿ? ಭಿಕ್ಷೆಯೇ? ದುಡಿಯಲೇ? ವ್ಯಭಿಚಾರವೇ? ಓ ನಾನೇನು ಮಾಡಲಿ?

ಸಾವಿರಾರು ಮುಖಗಳು ಅಣಕದ ನಗೆ ಬೀರಿದವು. ಸಾವಿರಾರು ನಾಲಿಗೆಗಳು ಮನಬಂದತ್ತ ಹೊರಳಾಡಿದವು.

ನನ್ನ ಬಿಡುಗಡೆಯ ದಿನ ಬಂದೇ ಬಂದಿತು. ಹಿಂದಿನ ರಾತ್ರಿ ಮಲಗಿದ್ದಾಗ ನಾನು ಮೊರೆಯಿಟ್ಟೆ 'ಬೆಳಗಾಗದಿರಲಿ' ಎಂದು.

ಎಷ್ಟಾಗಲಿ ಪತಿತೆಯ ಮೊರೆಯದು.

ಕತ್ತಲಿನ ತೆರೆಯನ್ನು ಸೀಳಿ ಸೂರ್ಯ ಮುಖ ತೋರಿಸಿಯೇ ತೋರಿಸಿದ. ಆದರೆ ಮೋಡಗಳು ಸೂರ್ಯನ ಮುಖವನ್ನು ಕವಿದು ತುಂತರು ಹನಿಗರೆಯುತ್ತಿದ್ದವು.

ವಾರ್ಡರ್ ನನ್ನನ್ನು ಜೈಲರಿನ ರೂಮಿಗೆ ಕರೆದೊಯ್ಯಲು ಸಿದ್ಧಳಾಗಿದ್ದಳು. ಭವಿಷ್ಯವನ್ನು ಹೇಗೆ ಎದುರಿಸಲಿ ಎಂಬ ಭೀತಿಯಿಂದ ನನ್ನ ಮೈ ತರತರನೆ ನಡುಗುತ್ತಿತ್ತು.

ಗೆಳತಿಯರು ನನ್ನನ್ನು ಬೀಳ್ಕೊಟ್ಟರು. ಜನನಿಂದೆ, ಅಣಕ ಹಲ

ವಾರು ಸಮಸ್ಯೆಗಳಿಂದ ನನ್ನನ್ನು ಕಾಪಾಡಿ ರಕ್ಷಿಸಿದ್ದ ಸೆರೆಮನೆಯ ಮಹಿಳಾ ವಿಭಾಗವನ್ನು ನಾನು ದುಃಖದಿಂದ ನೋಡಿದೆ.

ಜೈಲರಿನ ರೂಮಿನ ಬಳಿಗೆ ನಾವು ಹೊರಟೆವು. ವಾರ್ಡರ್ ಒಳಗೆ ಹೋಗಲು ಕಾಲಿಡುವಷ್ಟರಲ್ಲಿ ಕಾನ್‌ಸ್ಟೇಬಲನೊಬ್ಬ ಅವಳನ್ನು ತಡೆದು ಹೇಳಿದ

'ಸಾಯೇಬ್ರು ಯಾರ ತಾವ್ರೋ ಮಾತಾಡ್ತಿದಾರೆ. ಒಂದು ಗಳಿಗೆ ತಡೆಯಿರಿ.'

'ಯಾರ ಹತ್ತಿರ ಮಾತಾಡ್ತಿದಾರೆ?'

'ಒಸಾ ಕೈದಿಯೊಬ್ಬನ್ನ ಅಡ್ಮಿಟ್ ಮಾಡ್ಕೋತವ್ರೆ.'

ನಾವಿಬ್ಬರೂ ಹೊರಗೆ ಹಾಕಿದ್ದ ಬೆಂಚುಗಳ ಮೇಲೆ ಕುಳಿತೆವು. ಒಳಗೆ ಸಾಹೇಬರು ಕೈದಿಯೊಡನೆ ಮಾತನಾಡುತ್ತಿದ್ದುದು ಸ್ಪಷ್ಟವಾಗಿ ಕೇಳುತ್ತಿತ್ತು. ಪಾಪ! ಮನುಷ್ಯನೊಬ್ಬ ತಪ್ಪು ಮಾಡಿಯೋ ಮಾಡದೆಯೋ ಸಿಕ್ಕಿಕೊಂಡು ಶಿಕ್ಷೆ ಅನುಭವಿಸಲು ಇಲ್ಲಿಗೆ ಬಂದಿದಾನೆ ಎಂದು ನನ್ನ ಮನಸ್ಸು ಮಿಡುಕಿತು.

ಮೊಳಕಾಲಿನ ಮೇಲೆ ತಲೆಯಿಟ್ಟು ನಾನು ಹೊರಗೆ ಹನಿಹನಿಯಾಗಿ ಬೀಳುತ್ತಿದ್ದ ಮಳೆಯನ್ನೇ ದಿಟ್ಟಿಸುತ್ತಿದ್ದೆ. ನನ್ನ ಮನಸ್ಸು ಮಾತ್ರ ಕಲ್ಪನೆಯ ಕುದುರೆಯನ್ನೇರಿ ಎಲ್ಲೆಲ್ಲಿಯೋ ಹಾರುತ್ತಿತ್ತು.

ಪರಿಚಿತ ದನಿಯೊಂದು ನನ್ನನ್ನು ಈ ಪ್ರಪಂಚಕ್ಕೆ ಎಳೆದು ತಂದಿತು. ಮರದ ಪಾರ್ಟಿಷನ್‌ನ ಆ ಕಡೆ ಕೈದಿ, ಸಾಹೇಬರು ಮಾತನಾಡುತ್ತಿದ್ದರು. ಕೈದಿಯ ಧ್ವನಿಯನ್ನು ಹಿಂದೆ-ಬಹಳ ಹಿಂದೆ-ಎಲ್ಲಿಯೋ ಯಾವಾಗಲೋ ಕೇಳಿದಂತಿತ್ತು.

ಈ ಮೋಹಕ ದನಿಯನ್ನು ನಾನು ಕೇಳಿರುವುದಾದರೂ ಎಲ್ಲಿ? ಎಲ್ಲಿ ಕೇಳಿರಬಹುದು? ದನಿ ಯಾರನ್ನಾದರೂ ಮರುಳುಗೊಳಿಸುವಂತಿದೆ. ನನ್ನನ್ನು ಮೋಸಗೊಳಿಸಿ ಭ್ರಮೆ ಹಿಡಿಸಿದುದು ಈ ಧ್ವನಿಯೇ ಇರಬಹುದೇ?

ಸಾಹೇಬರು ಕೇಳುತ್ತಿದ್ದರು 'ನಿನ್ನ ಹೆಸರೇನು?'

'ಶಿವಸ್ವಾಮಿ.'

ನಾನು ತಟ್ಟನೆ ಎದ್ದು ನಿಂತೆ. ನನ್ನ ಸರ್ವಾಂಗವೂ ಗಡಗಡನೆ ನಡುಗುತ್ತಿತ್ತು. ಹೃದಯದ ರಕ್ತ ಮುಖಕ್ಕೆ ಹರಿದು ಬಂತು. ಕೈಯಿನ ಬೆರಳುಗಳು ಮುಷ್ಟಿಯಾದವು. ನಾನು ಉನ್ಮಾದಿನಿಯಂತೆ ಎದ್ದುನಿಂತು ದನ್ನು ನೋಡಿ ವಾರ್ಡರ್ ತಾನೂ ನಿಂತು, ನನ್ನ ಕೈ ಹಿಡಿದು ಜಗ್ಗಿ 'ಕೂತ್ಕೋ' ಎಂದಳು.

ವೇಗವಾಗಿ ಹೊಡೆದುಕೊಳ್ಳುತ್ತಿದ್ದ ಹೃದಯದ ಬಡಿತ ಮತ್ತೆ ನಿಧಾನ ವಾಯಿತು. ಚೈತನ್ಯವೆಲ್ಲಾ ನನ್ನ ದೇಹದಿಂದ ಹರಿದು ಹೋದವಳಂತೆ ನಾನು ನಿರ್ಬಲಳಾಗಿ ಬೆಂಚಿನ ಮೇಲೆ ಕುಸಿದು ಕುಳಿತೆ.

'ನೋಡಿದರೆ ವಿದ್ಯಾವಂತನ ಹಾಗೆ ಕಾಣಿಸ್ತೀಯಲ್ಲಯ್ಯ, ಏನು ಓದಿದೀಯಾ ?'

'ಬಿ. ಎಸ್‌ಸಿ., ಪಾಸಾಗಿದೆ.'

'ನಿನಗೆ ಏಳು ವರ್ಷ ಶಿಕ್ಷೆ ಹಾಕಿದಾರಲ್ಲಾ ನೀನು ಮಾಡಿದ ತಪ್ಪೇನು ?'

ತಕ್ಷಣ ಉತ್ತರ ಬರಲಿಲ್ಲ.

'ಸಾಯೇಬ್ರು ಹೇಳಿದ್ದು ಕೇಳಿಸ್ತೇನೋ?' ಆರ್ಡರ್ಲಿಯ ಗರ್ಜನೆ ಯದು. ಅವನು ಕೊಂಚ ದನಿ ತಗ್ಗಿಸಿ ಹೇಳಿದ

'ಹುಡುಗಿಯೊಬ್ಬಳ ಮೇಲೆ ಅತ್ಯಾಚಾರ........' ಉಳಿದ ಮಾತು ಗಳು ಅವನ ಗಂಟಲಿನಲ್ಲಿಯೇ ಅಡಗಿ ಹೋದವು.

'ಎಷ್ಟು ವರ್ಷದ ಹುಡುಗಿ ?'

'ಹತ್ತು ವರ್ಷದ ಹುಡುಗಿ.'

ಒಂದು ನಿಮಿಷ ಮಳೆಯ ಹನಿಯ ಸದ್ದಿನ ಹೊರತೂ ಬೇರಾವ ಶಬ್ದವೂ ಬರಲಿಲ್ಲ. ನಾನು, ವಾರ್ಡರ್ ಪರಸ್ಪರ ನೋಡಿದೆವು.

'ಇದು ಹೇಗೆ ನಡೆಯಿತು, ಏನು ಕತೆ .... ....'

'.... .... .... ....'

ಆರ್ಡರ್ಲಿ ಮತ್ತೆ ಘರ್ಜಿಸಿದ. 'ಸಾಹೇಬರ ಪ್ರಶ್ನೆಗೆಲ್ಲ ಉತ್ತರ ಹೇಳೋ.'

'ನನಗೆ ಟೆಲಿಫೋನ್ ಫ್ಯಾಕ್ಟರಿಯಲ್ಲಿ ಕೆಲಸವಿದೆ. ಅಲ್ಲಿ ಕೆಲಸಕ್ಕೆ

ಸೇರಿ ಮೂರು ತಿಂಗಳಾಯಿತು .... ....'

'ಅದಕ್ಕೆ ಹಿಂದೆ ಎಲ್ಲಿದ್ದೆ ?

'ನನಗೆ ಬಿ. ಎಸ್.ಸಿ. ಪಾಸಾದಾಗಿನಿಂದ ನಾನು ಯಾವುದೊಂದು ಕೆಲಸವನ್ನೂ ಕಚ್ಚಿ ಹಿಡಿದಿಲ್ಲ. ಎಲ್ಲೆಲ್ಲಿಯೋ ಕೆಲಸಕ್ಕೆ ಸೇರುತ್ತಿದ್ದೆ. ಟೆಲಿಫೋನ್ ಫ್ಯಾಕ್ಟರಿಗೆ ಸೇರಿ ಮೂರು ತಿಂಗಳಾಯಿತು....'

'ನಿನಗೆ ಮದುವೆ ಆಗಿದೆಯೇ ?'

'ಇಲ್ಲ. ನಮ್ಮ ತಾಯಿ, ತಂದೆ ಹೆಣ್ಣು ನೋಡಿದ್ದರು. ಆದರೆ ಮದುವೆಯಾಗಲು ನಾನೇ ಒಪ್ಪಲಿಲ್ಲ.'

'ಹೀಗೆ ಅತ್ಯಾಚಾರ, ಅನಾಚಾರ ಮಾಡುವುದಕ್ಕಿಂತಲೂ ಮದುವೆ ಮಾಡಿಕೊಂಡು ನೆಮ್ಮದಿಯಾಗಿ ಬಾಳಿದ್ದರೆ ಚೆನ್ನಾಗಿತ್ತು.'

'ಮದುವೆಯ ಜವಾಬ್ದಾರಿ ನನಗೆ ಹಿಡಿಸಲಿಲ್ಲ.'

'ಸರಿ. ಮುಂದೆ ?'

'ಟೆಲಿಫೋನ್ ಫ್ಯಾಕ್ಟರಿಯಲ್ಲಿ ನನ್ನ ಜೊತೆ ಮಾಧವ ಅಂತ ಒಬ್ಬ ಕೆಲಸ ಮಾಡುತ್ತಿದ್ದ. ನಾನೂ, ಅವನೂ ಬಹಳ ಬೇಗ ಸ್ನೇಹಿತರಾದೆವು. ಅವನೂ ನನ್ನ ರೂಮಿಗೆ ಬಹಳ ಹತ್ತಿರದಲ್ಲಿಯೇ ಇದ್ದ. ನಾನು ಆಗಾಗ್ಗೆ ಅವನ ಮನೆಗೆ ಹೋಗುತ್ತಿದ್ದೆ. ಅವನೂ ನನ್ನೊಡನೆ ಹರಟೆ ಹೊಡೆಯಲು ನನ್ನ ರೂಮಿಗೆ ಬರುತ್ತಿದ್ದ. ಅವನಿಂದ ಅವನ ಮನೆಯವರೆಲ್ಲರ ಪರಿಚಯ ನನಗಾಯಿತು. ಅವನ ತಂಗಿಯೇ ಚಂಚಲಾ....'

'ಅವಳಿಗೆಷ್ಟು ವರ್ಷ ?'

'ಅವಳಿಗೆ ಸುಮಾರು ಹತ್ತು ವರ್ಷವಿರಬಹುದು. ನಾನು ಆಗಾಗ್ಗೆ ಅವರ ಮನೆಗೆ ಹೋಗುತ್ತಿದ್ದುದರಿಂದ ಚಂಚಲ ನನ್ನೊಡನೆ ಸಲಿಗೆಯಿಂದ ಮಾತುಗಳನ್ನಾಡುತ್ತಿದ್ದಳು.

ಒಂದು ದಿನ ಭಾನುವಾರ ನನಗೆ ಕೆಲಸವಿರಲಿಲ್ಲ. ಆ ದಿನ ಬಹಳ ಬಾಯಾರಿಕೆಯಾಗಿದ್ದುದರಿಂದ ನಾನು ಕಂಟೋನ್‌ಮೆಂಟಿಗೆ ಹೋಗಿ ದಾಹವಡಗುವ ಹಾಗೆ ಕುಡಿದು, ಜೊತೆಯಲ್ಲಿ ಎರಡು ಸೀಸೆಗಳನ್ನು ಸಮಯಕ್ಕೆ ಬೇಕಾಗಬಹುದೆಂದು ಹೇಳಿ ತೆಗೆದುಕೊಂಡು ಬಂದೆ. ಮಿತಿಮೀರಿ ಕುಡಿದಿದ್ದರಿಂದ ನನ್ನ ಕಾಲುಗಳು ಅಸ್ಥಿರವಾಗಿದ್ದವು. ಕಣ್ಣು ಮಂಜಾ

ಗಿತ್ತು, ತಲೆ ತಿರುಗುತ್ತಿತ್ತು. ನನ್ನ ಬುದ್ಧಿಯೇ ಕೆಟ್ಟುಹೋದಂತಿತ್ತು. ರೂಮಿಗೆ ಬಂದೊಡನೆ ಬಾಗಿಲನ್ನು ಹಾಕಿ ಮಲಗಿಕೊಳ್ಳಲೆಂದು ಹಾಸಿಗೆಯನ್ನು ಉರುಳಿಸಿದೆ. ಇನ್ನೇನು ಮಲಗಿಕೊಳ್ಳಬೇಕು ಅಷ್ಟರಲ್ಲಿ ಬಾಗಿಲನ್ನು ತಟ್ಟಿದ ಸದ್ದಾಯಿತು. ನಾನು ಗೊಣಗುತ್ತಾ ಹೋಗಿ ಬಾಗಿಲನ್ನು ತೆಗೆದೆ. ಹೊಸಲಿನಾಚೆ ಮಾಧವನ ತಂಗಿ ಚಂಚಲ ನಿಂತಿದ್ದಳು. ನಾನು ತೊದಲುತ್ತಾ ಕೇಳಿದೆ

'ಏನು ಚಂಚಲ?'

'ಮತ್ತೆ ನಿಮ್ಮ ಹತ್ತಿರ ಎರಡು ರೂಪಾಯಿದ್ದರೆ ಬೇಕಂತೆ—ಅರ್ಜೆಂಟಾಗಿ ಬೇಕಂತೆ....'

'ಮಾಧವ ಇಲ್ಲವೇ ?'

'ಇಲ್ಲ. ಅವನು ಹೊರಗೆ ಹೋಗಿದಾನೆ. ಇನ್ನೂ ಮನೆಗೆ ಬಂದಿಲ್ಲ. ಅವನು ಬಂದಮೇಲೆ ಅಮ್ಮ ಕೊಡಿಸ್ತಾಳಂತೆ. ಈಗ ನಿಮ್ಮ ಹತ್ತಿರ ಎರಡು ರೂಪಾಯಿದ್ದರೆ ಕೊಡಿ. ಅಮ್ಮ ಬೇಗ ಬರೋಕೆ ಹೇಳಿದಾಳೆ....'

ನನ್ನ ವಿವೇಕ ಜಾರಿಹೋಗಿತ್ತು. ಬುದ್ಧಿಯ ಕಡಿವಾಣ ನನ್ನ ಕೈಲಿರಲಿಲ್ಲ. ಮನಸ್ಸು ಹತೋಟಿ ತಪ್ಪಿದ ಹುಚ್ಚು ಕುದುರೆಯಂತೆ ಮನಬಂದತ್ತ ಓಡುತ್ತಿತ್ತು. ನಾನು ಮಾತನಾಡದೆ ಬಾಗಿಲನ್ನು ಹಿಡಿದು ಚಂಚಲೆಯನ್ನೇ ನೋಡುತ್ತಿದ್ದೆ.

'ಕೊಡ್ತೀರಾ ?' ಚಂಚಲೆ ರಾಗ ಎಳೆದಳು.

ನಾನು ಮಾತನಾಡದೆ ನೆಟ್ಟನೋಟದಿಂದ ಚಂಚಲೆಯನ್ನೇ ನೋಡುತ್ತಿದ್ದೆ. ನನ್ನ ಅಮಲೇರಿದ ಕಣ್ಣುಗಳಿಗೆ ಚಂಚಲೆ—ಹತ್ತು ವರ್ಷದ ಚಂಚಲೆ ಕಾಣಿಸಲಿಲ್ಲ ಲಂಗ ಬನೀನು ತೊಟ್ಟಿದ್ದ ಪುಟ್ಟಹುಡುಗಿ ಚಂಚಲೆಯ ಬದಲು ಸೀರೆ, ರವಿಕೆ ತೊಟ್ಟಿದ್ದ ಹದಿನೆಂಟು ವರ್ಷದ ಚೆಲುವೆಯೊಬ್ಬಳು ಕಾಣಿಸಿದಳು. ನಾನು ಕಣ್ಣು ಉಜ್ಜಿಕೊಂಡು ನೋಡಿದೆ. ಚಂಚಲೆ ನವಯುವತಿಯಾಗಿ ನನ್ನೆದುರಿಗೆ ನಿಂತು ನನ್ನನ್ನು ಆಹ್ವಾನಿಸಿದಂತೆ ತೋರಿತು.

ನಾನು ಸಂಪೂರ್ಣ ಹುಚ್ಚನಾದೆ. ಬಾಗಿಲಿನಲ್ಲಿ ನಿಂತಿದ್ದ ಚಂಚಲೆಯ ಕೈ ಹಿಡಿದು ಒರಟಾಗಿ ಒಳಗೆ ಎಳೆದುಕೊಂಡೆ. ನಾನು ಅವಳನ್ನು

ಎಳೆಯಬಹುದು ಎಂದು ಅವಳು ನಿರೀಕ್ಷಿಸಿರಲಿಲ್ಲ. ನಾನು ಎಳೆದ ರಭಸಕ್ಕೆ ಅವಳು ಒಳಗೆ ಬಂದು ಬಿದ್ದಳು. ನಾನು ಬಾಗಿಲನ್ನು ಮುಚ್ಚಿ ಅಗುಳಿ ಹಾಕಿದೆ. ನೆಲದ ಮೇಲೆ ಬಿದ್ದ ಚಂಚಲೆ ಗಾಬರಿಯಿಂದ ಅಳತೊಡಗಿದಳು. ನಾನು ಅವಳ ಬಾಯನ್ನು ಬಿಗಿಯಾಗಿ ಅದುಮಿ ಹಿಡಿದು, ಕಠಿಣ ಧ್ವನಿಯಲ್ಲಿ ಹೇಳಿದೆ.

'ನಾನು ಹೇಳಿದ ಹಾಗೆ ಕೇಳದಿದ್ದರೆ ಕೊಂದುಬಿಡುತ್ತೇನೆ.'

ಚಂಚಲೆ ಮರದ ತುಂಡಿನಂತೆ ಮೌನವಾಗಿದ್ದಳು. ಕುಡಿದು ಮತ್ತನಾಗಿದ್ದ ನಾನು ಪಶುವಾಗಿದ್ದೆ.

ನನಗೆ ಎಚ್ಚರವಾದಾಗ ಚಂಚಲೆಯ ಬಿಸಿ ದೇಹ ಮಂಜಿನಂತೆ ಕೊರೆಯುತ್ತಿತ್ತು. ಆಗ ನನ್ನ ಅಮಲೆಲ್ಲ ಒಂದೇ ಬಾರಿಗೆ ಇಳಿದುಹೋಯಿತು. ನಾನು ಚಕಿತನಾಗಿ ಅವಳ ಎದೆಯ ಬಳಿ ಕಿವಿಯಿಟ್ಟೆ. ಅವಳ ಎದೆಯ ಬಡಿತ ನಿಂತುಹೋಗಿತ್ತು. ನಾನು ಗಾಬರಿಯಾಗಿ ಎದ್ದು ಕನ್ನಡಿಯೊಂದನ್ನು ತಂದು ಅವಳ ಮೂಗಿಗೆ ಹಿಡಿದೆ. ಚಂಚಲೆ ನಿಜವಾಗಿಯೂ ಸತ್ತುಹೋಗಿದ್ದಳು.

ನಾನು ಏನು ಮಾಡಲೂ ತೋಚದೆ ಎರಡು ಮೂರು ನಿಮಿಷ ಶಿಲೆಯಂತೆ ನಿಂತುಬಿಟ್ಟೆ. ಆಗ ಮುಚ್ಚಿದ ಬಾಗಿಲನ್ನು ಮತ್ತೆ ತಟ್ಟುವ ಸದ್ದು ಕೇಳಿಸಿತು. ನಾನು ತಟ್ಟುತ್ತಿದ್ದ ಬಾಗಿಲನ್ನು ದೈನ್ಯದಿಂದ ನೋಡಿದೆ. ಬಾಗಿಲು ತೆಗೆಯಲೋ ಬೇಡವೋ ಎಂಬ ಜಿಜ್ಞಾಸೆಯಲ್ಲಿ ಮನಸ್ಸು ಸಿಕ್ಕಿಕೊಂಡಿತು. ಬಾಗಿಲಿನ ಬಡಿತ ಜೋರಾಯಿತು. ನಾನು ಬೇರೆ ದಾರಿ ಇಲ್ಲದೆ ಬಾಗಿಲನ್ನು ತೆಗೆದೆ. ಆ ರೂಮಿಗಿದ್ದುದು ಅದೊಂದೆ ಬಾಗಿಲಾದುದರಿಂದ ನಾನು ಬೇರೆ ದಾರಿಯಿಂದ ಓಡಿಹೋಗುವಂತೆಯೂ ಇರಲಿಲ್ಲ. ಬಾಗಿಲಿನ ಆಚೆ ಚಂಚಲೆಯ ಅಣ್ಣ ಮಾಧವ ನಿಂತಿದ್ದ. ನಾನು ಬಾಗಿಲಿಗೆ ಮರೆಯಾಗಿ ನಿಂತೆ.

'ಚಂಚಲ ಇಲ್ಲಿಗೆ ಬರಲಿಲ್ಲವೇನು ?'

'ಆಗಲೇ ಹೊರಟು ಹೋದಳು. ಮನೆಗೆ ಬರಲಿಲ್ಲವೇ ?'

'ಇಲ್ಲ. ಅಮ್ಮ ನಿನ್ನ ಹತ್ತಿರ ರೂಪಾಯಿ ತೆಗೆದುಕೊಂಡು ಬಾಂತ ಕಳಿಸಿದ್ದಳಂತೆ. ಇನ್ನೂ ಯಾಕೋ ಬರಲಿಲ್ಲ. ನೋಡಿಕೊಂಡು ಬಾಂತ

ನನ್ನ ಕಳಿಸಿದಳು....' ಎನ್ನುತ್ತಾ ಮಾಧವ ನನ್ನನ್ನು ಸರಿಸಿ ರೂಮಿನೊಳಗೆ ಬಂದುಬಿಟ್ಟ. ಒಳಗೆ ಬಂದವನೇ ದಿಗ್ಭ್ರಮೆ ಹಿಡಿದು ಒಂದು ಕ್ಷಣ ನಿಂತು ಬಿಟ್ಟ. ಅವನ ಕಣ್ಣುಗಳು ನೀರವವಾಗಿ ಮಲಗಿದ್ದ ತಂಗಿಯ ಕಡೆಗೂ, ನಂತರ ನನ್ನ ಕಡೆಗೂ ಪ್ರಶ್ನಾರ್ಥಕವಾಗಿ ನೋಡಿದವು. ನನ್ನ ಕೆದರಿದ ತಲೆ, ಕೆಂಪು ಕಣ್ಣು, ಚಂಚಲೆಯ ಸ್ಥಿತಿ ನಡೆದ ಕತೆಯನ್ನು ಅವನಿಗೆ ಹೇಳಿದವು.

ಪೋಲೀಸಿನವರು ನನ್ನನ್ನು ಕೈದು ಮಾಡಿದರು. ಚಂಚಲೆಯ ದೇಹವನ್ನು ಪೋಸ್ಟ್‌ಮಾರ್ಟಂಗಾಗಿ ತೆಗೆದುಕೊಂಡು ಹೋದರು. ವೈದ್ಯರು ತೀರ್ಪಿತ್ತರು. 'ಷಾಕಿನಿಂದಾಗಿ ಹುಡುಗಿಯ ಪ್ರಾಣ ಹೋಗಿದೆ.' ನನ್ನ ಮೇಲೆ ಕೇಸು ನಡೆಯಿತು. ಜೀವಾವಧಿ ಶಿಕ್ಷೆಯಾಗಬೇಕಾಗಿತ್ತು. ಆದರೆ ಅತ್ಯಾಚಾರ, ಕೊಲೆ ನಡೆದಾಗ ನಾನು ಕುಡಿದಿದ್ದೆನೆಂಬ ಕಾರಣದಿಂದ ಹಾಗೂ ನನ್ನ ತಂದೆಯವರ ಪ್ರಭಾವದಿಂದಾಗಿ ಇಪ್ಪತ್ತು ವರ್ಷಕ್ಕೆ ಬದ ಲಾಗಿ ಏಳು ವರ್ಷ ಕಠಿಣ ಶಿಕ್ಷೆಯಾಗಿದೆ.'

ನನ್ನ ಮುಖದಿಂದ ಬೆವರು ಹರಿಯುತ್ತಿತ್ತು. ಇದಕ್ಕಿಂತಲೂ ಭಯಂಕರವಾದ ಕತೆಯನ್ನು ನಾನು ಎಲ್ಲಿಯೂ ಕೇಳಿರಲಿಲ್ಲ. ಹಿಂದೆ ಯಾವಾಗಲೋ ಪತ್ರಿಕೆಯಲ್ಲಿ ಓದಿದ್ದೆ—ಐದಾರು ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಮಾಡಿದ ಯುವಕನೊಬ್ಬನ ಪಶುವೃತ್ತಿಯ ಕತೆಯನ್ನು. ನಾನು ಓದಿದ್ದರೂ ಅದನ್ನು ನಂಬಿರಲಿಲ್ಲ. ಹೀಗೆ ನಡೆಯಲು ಸಾಧ್ಯವೇ? ಗಂಡಸು ಪಶುವಾದಾಗಲೂ ಮೊಗ್ಗುಗಳನ್ನು ಚಿವುಟಿ ಹಾಕಲಾರ ಎಂದು ಭಾವಿಸಿದ್ದೆ. ಆದರೆ ಹಸಿದ ತೋಳನಿಗೆ ಬಲಿತ ಕುರಿಯಾದರೇನು, ಎಳೆಯ ಮರಿಯಾದರೇನು ? ಮನುಷ್ಯ ಇಷ್ಟೊಂದು ಕೀಳು ಮಟ್ಟಕ್ಕಿಳಿಯಬಹು ದೆಂಬ ಕಲ್ಪನೆ ಸಹ ನನಗಿರಲಿಲ್ಲ.

ಚಂಚಲೆಯನ್ನು ನೆನೆದು ನನ್ನ ಹೃದಯ 'ಅಯ್ಯೋ' ಎಂದು ನರ ಳಿತು. ಹತ್ತು ವರ್ಷದ ಕಿಶೋರಿಯವಳು. ಕುಡಿದು ಮತ್ತನಾಗಿದ್ದ ಈ ರಕ್ಕಸ ಅವಳ ಕೈ ಹಿಡಿದು ಒಳಗೆ ಎಳೆದುಕೊಂಡಾಗ, ಅವಳ ಪುಟ್ಟ ಹೃದಯ ಎಷ್ಟು ನಡುಗಿರಬಹುದು ! ಮಾನವ ದಾನವನಾಗಿ ತನ್ನ ಕಾಮ ಲಾಲಸೆಗೆ ಅವಳ ದೇಹವನ್ನು ಬಲಿಗೊಟ್ಟಾಗಲೇ ಅವಳಿಗೆ ಪ್ರಾಣ ಹೋಗಿ ರಬೇಕು.

ನಾಳು ಕಾಣದ, ನೋಡದ ಚಂಚಲೆಗಾಗಿ ಕಣ್ಣಿನಿಂದ ಎರಡು ಹನಿ ನೀರು ಉದುರಿತು. ನಿಸರ್ಗವೂ ನನ್ನ ದುಃಖದೊಡನೆ ಒಂದಾಗಿ ಅಳಿದ ಚಂಚಲೆಗಾಗಿ ಕಣ್ಣೀರುಗರೆಯುತ್ತಿತ್ತು.

' ಇನ್ನು ನೀನು ಹೋಗಬಹುದು.'

ಅವನನ್ನು ನೋಡಲು ಸಹ ನನ್ನ ಮನಸ್ಸು ಹೇಸಿತು. ಇವನಿಗೆ ಒಂದಾನೊಂದು ಕಾಲದಲ್ಲಿ ನಾನು ನನ್ನ ದೇಹವನ್ನು ಒಪ್ಪಿಸಿದ್ದೆ ಎಂಬ ಭಾವನೆಯಿಂದಲೇ ಹೃದಯ ಅಸಹ್ಯ, ತಿರಸ್ಕಾರದಿಂದ ಉರಿದುಹೋಯಿತು.

ಹೆಜ್ಜೆಯ ಸದ್ದಾಯಿತು. ಅವನನ್ನು ನೋಡಬಾರದೆಂದು ನಾನು ಗೋಡೆಯ ಕಡೆ ಮುಖ ತಿರುಗಿಸಿ ನಿಂತೆ. ಪೋಲೀಸಿನವರ ರಕ್ಷಣೆಯಲ್ಲಿ ಅವನು ಈಚೆಗೆ ಬಂದ. ಅವನ ಹೆಜ್ಜೆಯ ಸದ್ದು ಕ್ರಮೇಣ ಕ್ಷೀಣವಾಗಿ ನಶಿಸಿಹೋಯಿತು.

ಆರ್ಡರ್ಲಿ ನಮ್ಮನ್ನು ಒಳಗೆ ಬರುವಂತೆ ಕೂಗಿದ. ನಾನು ಒಳಗೆ ಹೋಗಿ ಕೈ ಮುಗಿದು ನಿಂತೆ. ಸಾಹೇಬರು

' ಇನ್ನು ಮೇಲಾದರೂ ಸರಿಯಾಗಿರುತ್ತೀಯಾ ?' ಎಂದರು.

ನಾನು ಕುಗ್ಗಿದ ದನಿಯಲ್ಲಿ 'ಹೂಂ' ಎಂದೆ. ಆದರೆ ನನ್ನ ಪತನಕ್ಕೆ ನಾನೊಬ್ಬಳೇ ಕಾರಣಳೇನು ?

' ನೀನು ಬಂದಾಗ ಕಾಸು, ಗೀಸು ಏನೂ ಇರಲಿಲ್ಲವೋ ? '

' ಇಲ್ಲ.'

' ಮುಂದೆ ಏನು ಮಾಡ್ತೀಯಾ ? '

ನನಗೆ ತಟ್ಟನೆ ಉತ್ತರ ಹೇಳಲಾಗಲಿಲ್ಲ. ಇದೇ ಪ್ರಶ್ನೆ ನನ್ನನ್ನು ಬಹಳ ದಿನಗಳಿಂದಲೂ ಪೀಡಿಸುತ್ತಿತ್ತು.

' ನಿಮ್ಮೋರು ಯಾರೂ ಇಲ್ಲವೇನು ? ನಿಮ್ಮಪ್ಪ ಇದಾರಲ್ಲಾ.... ಅಲ್ಲಿಗೆ ಯಾಕೆ ಹೋಗಬಾರದು ? '

ನಾನು ಅವಮಾನದಿಂದ ನಾಲಿಗೆ ಕಚ್ಚಿ ಹೇಳಿದೆ ' ಅವರು ನನ್ನ ಮನೆಗೆ ಸೇರಿಸೋಲ್ಲ.'

'ಯಾಕೆ ?'

'ನಾನು ಅವರ ವಂಶಕ್ಕೆ ಮಸಿ ಬಳಿದಿದೀನಿಂತ ಅವರೆಲ್ಲರ ಭಾವನೆ. ಅವರು ನನ್ನ ತಿರುಗಿ ಅವರ ಹತ್ತಿರ ಸೇರಿಸೋದಿಲ್ಲ. ನನಗೆ ಚೆನ್ನಾಗಿ ಗೊತ್ತು. ನಾನೊಬ್ಬಳೇ ಜಗತ್ತನ್ನು ಎದುರಿಸಿ ಹೋರಾಡಬೇಕು.'

'ಯಾರಾದರೂ ಮರ್ಯ್ಯಾದಸ್ಥರ ಮನೇಲಿ ಕೆಲಸ ಗಿಲಸ ಮಾಡಿ ಕೊಂಡಿರು.'

'ಆಗಲಿ. ನಾನಿನ್ನು ಬರ್‍ತೀನಿ.'

ನಾನು ಹೊರಗೆ ಹೊರಟೆ. ಜೈಲಿನ ದೊಡ್ಡ ಕಬ್ಬಿಣದ ಬಾಗಿ ಗಳೆಷ್ಟು ತೆರೆದುಕೊಂಡವು. ನಾನು ಹೊರಗೆ ಹೋದ ಕೂಡಲೇ ಬಾಗಿ ಗಳೆರಡೂ ಮುಚ್ಚಿಕೊಂಡವು.

ಮಳೆಯಿನ್ನೂ ನಿಂತಿರಲಿಲ್ಲ. ಹನಿಹನಿಯಾಗಿ ಬೀಳುತ್ತಲೇ ಇತ್ತು. ನಾನು ನಿಧಾನವಾಗಿ ಕಾಲೆಳೆದುಕೊಂಡು ಜೈಲಿನ ಕಾಂಪೌಂಡನ್ನು ದಾಟಿ ರಸ್ತೆಗೆ ಬಂದೆ. ಹೆಬ್ಬಾಗಿಲ ಪಕ್ಕದಲ್ಲಿದ್ದ ಮರವೊಂದರ ಆಶ್ರಯದಲ್ಲಿ ಮುದುಕನೊಬ್ಬ ನಿಂತಿದ್ದ. ಮುಪ್ಪು ಅವನ ಮುಖದ ಮೇಲೆ, ದೇಹದ ಮೇಲೆ ತನ್ನ ಧಾಳಿ ನಡೆಸಿತ್ತು. ಮುಖದ ತೊಗಲು ಸುಕ್ಕುಗಟ್ಟಿತ್ತು. ಕಣ್ಣುಗಳು ಹೂತುಹೋಗಿ ಮಂಕಾಗಿದ್ದವು. ಅರಿಸಿ ಹುಡುಕಿದರೂ ತಲೆ ಯಲ್ಲಿ ಒಂದು ಕಪ್ಪು ಕೂದಲೂ ಇರಲಿಲ್ಲ. ಮಳೆಯಲ್ಲಿ ನೆನೆಯುತ್ತಾ ನಿಂತಿರುವ ಮುದುಕನನ್ನು ನೋಡಿ ನನಗೆ ಮರುಕವುಂಟಾಯಿತು. ನಾನು ಕುತೂಹಲದಿಂದ ಅವನ ಕಡೆ ನೋಡಿದೆ.

'ಇನ್ನು ಹದಿನೈದಿಪ್ಪತ್ತು ವರ್ಷ ಕಳೆದರೆ ನಮ್ಮ ತಂದೇನೂ ಹೀಗೇ ಕಾಣಬಹುದು' ಎಂದು ಮನಸ್ಸಿನಲ್ಲಿಯೇ ನಾನು ಹೇಳಿಕೊಂಡೆ.

ಮಳೆಯಲ್ಲಿ ನಡುಗುತ್ತ ನಿಂತಿದ್ದ ಮುದುಕನೂ ನನ್ನ ಕಡೆ ನೋಡಿದ. ಭಾವಾವೇಶದಿಂದ ಅವನ ತುಟಿಯಲುಗಿತು. ಕಾಂತಿಹೀನವಾಗಿದ್ದ ಕಣ್ಣುಗಳಲ್ಲಿ ಬೆಳಕು ಚಿಮ್ಮಿ ಬಂತು. ನಿರ್ಜೀವ ಪ್ರತಿಮೆಯಂತೆ ನಿಂತಿ ಅವನ ಕಾಲುಗಳು ಚಲಿಸಿದವು.

ಯಾವುದೋ ಮೋಡಿಗೆ ಒಳಗಾದವಳಂತೆ ನಾನು ನಿಂತಲ್ಲಿಂದ ಅಲುಗದೆ, ರೆಪ್ಪೆ ಮಿಟುಕಿಸದೆ ಮುದುಕನನ್ನೇ ನೋಡಿದೆ. ಆ ಮುದುಕ ನಿಧಾನವಾಗಿ ನನ್ನ ಹತ್ತಿರ ಬಂದು ನನ್ನ ತೋಳು ಹಿಡಿದು, ಅತ್ಯಂತ ಮೃದುವಾದ ದನಿಯಲ್ಲಿ

'ಬಾಮ್ಮ ಮನೆಗೆ ಹೋಗೋಣ' ಎಂದ

ಶ್ರೀ ಸೀತಾರಾಘವ ಪ್ರೆಸ್, ರಾಮಸ್ವಾಮಿ ಸರ್ಕಲ್, ಮೈಸೂರು.